
ಪುಸ್ತಕ ಪ್ರಪಂಚ

ಸುವರ್ಣ ಸಂಚಿಕೆ ಸೆಪ್ಟೆಂಬರ್-ಅಕ್ಟೋಬರ್ ೨೦೦೦











ಪುಸ್ತಕ ಪ್ರಪಂಚ
ಮಾಸಿಕ

ಪರಿವಿಡಿ

ರಕ್ಷಾಪುಟ ವಿನ್ಯಾಸ: ಎಚ್.ಎಸ್.ವಿನಯ್ , ಕಾವಾ, ಮೈಸೂರು

PUSTAKA PRAPANCHA: Monthly

Published and printed by Karnataka State Adult Education Council,Myso

Price : Rupees Ten

ಬಿಡಿಪ್ರತಿ : ರೂ.೧೦

ವಾರ್ಷಿಕ ಚಂದಾ : ರೂ, ೧೦೦

ಅಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೬೦೦

ಸಂಸ್ಥೆಗೆ : ರೂ. ೯೦೦

ಪ್ರಕಟಣೆ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಸುವರ್ಣ ಪುಸ್ತಕ ಪ್ರಪಂಚ

ವಯಸ್ಕರ ಶಿಕ್ಷಣದೊಡನೆಯ ನನ್ನ ಸಂಬಂಧ ಅರುವತ್ತು ವರ್ಷದಷ್ಟು ಹಳೆಯದು . ಪುಸ್ತಕ ಪ್ರಪಂಚದ ಎರಡನೆಯ ಸಂಪುಟದಿಂದ ನಾನದರೊಡನೆ ತೊಡಗಿಕೊಂಡಿದ್ದೇನೆ. ಸುಮಾರು ಇಪ್ಪತ್ತನಾಲ್ಕು ವರ್ಷ ಅದರ ಪ್ರಧಾನ ಸಂಪಾದಕನಾಗಿ ಹಲವು ಮಿತ್ರರೊಡನೆ ಅದನ್ನು ಉಳಿಸುವ ಮತ್ತು ಬೆಳೆಸುವ ಭಾಗ್ಯ ನನ್ನದಾಗಿದೆ. ಸದ್ಯದಲ್ಲಿ ಅದರ ಪ್ರಕಟಣೆ ವಯಸ್ಕರ ಶಿಕ್ಷಣ ಸಮಿತಿಯ ಪ್ರಧಾನ ಕಾರ್ಯಕ್ರಮಗಳಲ್ಲೊಂದಾಗಿದೆ. ಸಾಮಾನ್ಯರಿಗೆ ವರವಾಗಿರುವ, ಹೊಸ ಸಾಹಿತಿಗಳನ್ನು ಸೃಷ್ಟಿಸಿ, ಅವರಿಗೆ ಸದಾ ಸ್ಫೂರ್ತಿಶಕ್ತಿಯಾಗಿರುವ , ಅಧಿಕಾರೀಷಾಹಿಯ ಚಿತ್ತ ವಿಭ್ರಮದಿಂದಾಗಿ ಅನೇಕ ಏರಿಳಿತಗಳ ಮಧ್ಯೆಯೂ ಅದು ಐವತ್ತು ವರ್ಷಗಳನ್ನು ಕಂಡದ್ದು ಪುಣ್ಯವೆಂದೇ ಹೇಳಬೇಕು. ಅಧ್ಯಕ್ಷರೂ, ಪ್ರಧಾನಕಾರ್ಯದರ್ಶಿಗಳೂ ಇತರ ಪದಾಧಿಕಾರೀ ಮಿತ್ರರೂ ಸೇರಿದಂತೆ ಸಮಿತಿ ನೀಡುತ್ತಿರುವ ಪ್ರೋತ್ಸಾಹದಿಂದಾಗಿ ಅದರ ಪ್ರವರ್ಧಮಾನ ಸ್ಥಿತಿಗತಿ ಸ್ಥಾನಮಾನಗಳು ಸುಭದ್ರವಾಗಿವೆ.

ಅದನ್ನು ಹುಟ್ಟು ಹಾಕಿ , ನೀರು ಗೊಬ್ಬರವುಣಿಸಿ, ಬೆಳೆಸಿ, ಅದರ ಅಭ್ಯುದಯವನ್ನು ಸಾಧಿಸಿದವರು ಹಲವರು. ಸಮಿತಿಯ ಅಂದಿನ ಅಧ್ಯಕ್ಷರಾದ ಟಿ. ಮಾದಯ್ಯಗೌಡರ ದೂರದೃಷ್ಟಿಯ ಪರಿಣಾಮವಾಗಿ, ಕಾರ್ಯದರ್ಶಿಗಳಾದ ನ. ಭದ್ರಯ್ಯನವರ ಕಲ್ಪನೆಯ ಕೂಸಾಗಿ, ಎಸ್.ವಿ. ಶ್ರೀನಿವಾಸರಾವ್ ಮತ್ತು ಜಿ. ಹನುಮಂತರಾಯರ ಸತತ ಶ್ರಮದ ಫಲವಾಗಿ ಅದು ಸುಭದ್ರವಾಗಿ ನೆಲಯೂರಿತೆಂಬುದು ಅಭಿನಂದನೀಯ ಸಂಗತಿ. ಶಾಸಕರಾಗಿ ಹಾಗೂ ಸಂಸತ್ಸದಸ್ಯರಾಗಿ ಮಾದಯ್ಯಗೌಡರು ಅದಕ್ಕೊಂದು ವಿಶಿಷ್ಟಸ್ಥಾನವನ್ನು ತಂದುಕೊಟ್ಟರೆ, ವಯಸ್ಕರ ಶಿಕ್ಷಣವೇ ತಮ್ಮ ಬದುಕಾದ, ಗಾಂಧಿಮಾರ್ಗದಲ್ಲಿ ನಡೆದ ಸಾಹಿತಿ ನಭ ಅವರು ಅದರ ರೂವಾರಿಯಾದರೆ, ಬಹುಮುಖ ಪ್ರತಿಭೆಯ ಹನುಮಂತರಾವ್ ತಮ್ಮ ಮೇಧಾಶಕ್ತಿಯನ್ನದಕ್ಕೆ ಧಾರೆಯೆರೆದು ಅದನ್ನು ಪೋಷಿಸುತ್ತಾರೆ. ಹನುಮಂತರಾಯರ ನೇತೃತ್ವದಲ್ಲಿ ಮೊದಮೊದಲು ಶ್ರೀನಿವಾಸರಾಯರು, ಅನಂತರ ದೀರ್ಘಕಾಲ ಸಾಹಿತಿ ರಾ. ವೆಂ. ಶ್ರೀನಿವಾಸರು ಅದರ ಕ್ಷೇಮವನ್ನು ನೋಡಿಕೊಳ್ಳುತ್ತಾರೆ. ಮೊದಲಿಂದ ಈ ತನಕ ಅದರೊಡನೆ ಒಂದಲ್ಲ ಒಂದು ರೀತಿಯಲ್ಲಿ ತೊಡಗಿಸಿಕೊಂಡ ಅನುಭವ ಸಂಪನ್ನರೆಂದರೆ ರಾವೆಂಶ್ರೀ ಅವರು.

ಪ್ರಾರಂಭದ ವರ್ಷಗಳಲ್ಲಿ ಪ್ರಧಾನ ಸಂಪಾದಕರಾಗಿ ಪುಸ್ತಕ ಪ್ರಪಂಚಕ್ಕೆ ರೂಪ ಚೈತನ್ಯ ವೈವಿಧ್ಯ ಸೌಂದರ್ಯಗಳನ್ನೊದಗಿಸಿದ ಪ್ರಾತಃಸ್ಮರಣೀಯರಾದ ಜಿ. ಹನುಮಂತರಾಯರ ಜ್ಞಾಪಕ ಈ ಸುಸಂದರ್ಭದಲ್ಲಿ ಅತ್ಯವಶ್ಯ. ಅವರು ಪ್ರಸಿದ್ಧ ತತ್ವ ಶಾಸ್ತ್ರಜ್ಞರಾಗಿ, ಪ್ರಾಧ್ಯಾಪಕರಾಗಿ , ಇಂಗ್ಲಿಷ್ ಕನ್ನಡಗಳಲ್ಲಿ ಲೇಖನ ಗ್ರಂಥಗಳನ್ನು ಬರೆದು ತಮ್ಮ ವೈದುಷ್ಯವನ್ನೂ ಚಿಂತನ ಸ್ವಾತಂತ್ರ್ಯವನ್ನೂ ಮೆರೆದಿದ್ದಾರೆ. ಅವರ ವ್ಯವಹಾರ ಕೌಶಲ ಮತ್ತು ಸಂಘಟನ ಸಾಮರ್ಥ್ಯ ಅನ್ಯಾದೃಶವಾದುವು. ಕಂತ್ರಾಟುದಾರರಂತೆ ದುಡಿದು ತಮ್ಮ ಪ್ರಾಧ್ಯಾಪಕ ಮಿತ್ರರಿಗೆ ಉಚಿತ ಸೇವೆಯನ್ನು ಸಲ್ಲಿಸಿ ಮನೆಕಟ್ಟಿಸಿ ಕೊಟ್ಟಿದ್ದಾರೆ. ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕ ಸಂಘವನ್ನು ಸ್ಥಾಪಿಸಿ, ಅದರ ಆಶ್ರಯದಲ್ಲಿ ಪ್ರಚಾರೋಪನ್ಯಾಸ ಮಾಲೆಯನ್ನು ಪ್ರಾರಂಭಿಸಿ, ಹಳ್ಳಿಹಳ್ಳಿಗೆ ಜ್ಞಾನಜ್ಯೋತಿಯನ್ನು ಕೊಂಡೊಯ್ದು, ಮೈಸೂರು ಪ್ರಯೋಗವೆಂದೇ ಕೀರ್ತಿಗಳಿಸಿದ ಆ ವ್ಯವಸ್ಥೆಗೆ ಹನುಮಂತರಾಯರ ದೂರದೃಷ್ಟಿ ಮತ್ತು ಕರ್ತೃತ್ವ ಸಾಮರ್ಥ್ಯಗಳೇ ಕಾರಣ. ಸುಮಾರು ಇಪ್ಪತ್ತಮೂರು ವರ್ಷ ಪುಸ್ತಕ ಪ್ರಪಂಚದ ಪ್ರಧಾನಸಂಪಾದಕರಾಗಿದ್ದುಕೊಂಡು, ಅದನ್ನು ಜನಪ್ರಿಯ ಹಾಗೂ ಜನೋಪಯೋಗಿ ಪತ್ರಿಕೆಯನ್ನಾಗಿ ಬೆಳೆಸಿ, ಪತ್ರಿಕಾಪ್ರಪಂಚಕ್ಕೊಂದು ವಿನೂತನ ವಿಶಿಷ್ಟ

ಕೊಡುಗೆಯನ್ನು ಕೊಟ್ಟರೆಂದೇ ಹೇಳಬೇಕು. ಕೆಲವು ವರ್ಷ ವಿಶ್ವವಿದ್ಯಾನಿಲಯದ ಗ್ರಂಥಪಾಲಕರಾಗಿ ತಮ್ಮ ದಕ್ಷತೆಯನ್ನು ಮೆರೆದದ್ದೂ ಉಂಟು ಅವರಿಗೇನೇ ಕೆಲಸವಹಿಸಿದರೂ ಪ್ರಾಮಾಣಿಕವಾಗಿ , ಅಚ್ಚುಕಟ್ಟಾಗಿ, ಶಿಸ್ತಿನಿಂದ ನಿರ್ವಹಿಸುತ್ತಿದ್ದರೆನ್ನುವುದು ವಿದ್ವಲ್ಲೋಕದಲ್ಲಿ ಜನಜನಿತವಾಗಿತ್ತು. ತಮ್ಮ ಮಕ್ಕಳ ಉದ್ಯೋಗಕ್ಕಾಗಿ ಅಚ್ಚುಕೂಟವೊಂದನ್ನು ಸ್ಥಾಪಿಸಿ, ಮಾದರಿ ರೀತಿಯಲ್ಲಿ ನಡಸಿದರೆಂಬುದನ್ನು ಮರೆಯಲಾಗದು.

ಸರ್ಕಾರದ ಅನುಮತಿ ತಡವಾಗಿ ದೊರೆಯಲಾಗಿ, 'ಬೆಳಕು' ಪತ್ರಿಕೆಯ ವಿಶೇಷ ಸಂಚಿಕೆಯಾಗಿ, ಪ್ರಥಮ ಸಂಪುಟದ ಪ್ರಥಮ ಸಂಚಿಕೆಯನ್ನು ೧೯೪೬ರ ಮೇ ತಿಂಗಳಲ್ಲಿ ಪ್ರಕಟಿಸಲಾಯಿತು. 'ಸ್ವವಿಷಯ'ವೆಂಬ ಹೆಸರಿನ ಪ್ರಥಮ ಲೇಖನದಲ್ಲಿ ಪ್ರಧಾನ ಸಂಪಾದಕರು ಮಾಸಪತ್ರಿಕೆಯ ಧ್ಯೇಯೋದ್ದೇಶಗಳನ್ನು ವಿವರಿಸಿದ್ದಾರೆ. ಆ ಲೇಖನದಿಂದ ಕೆಲವು ಪಂಕ್ತಿಗಳನ್ನಿಲ್ಲಿ ಉದ್ಧರಿಸಲಾಗಿದೆ:' ಕನ್ನಡದಲ್ಲಿ ಹೊರಬಿದ್ದ ಪುಸ್ತಕಗಳ ಪರಿಚಯ ಕನ್ನಡಪತ್ರಿಕೆಗಳ ಮೂಲಕ ನಡೆಯುತ್ತಿದೆ. ಆದರೆ ಆ ಕೆಲಸಕ್ಕಾಗಿಯೇ ಮೀಸಲಾಗಿ ಒಂದು ಪತ್ರಿಕೆಯಿಲ್ಲದಿರುವುದು ಒಂದು ಕೊರತೆ. ಇದಕ್ಕಿಂತ ದೊಡ್ಡ ಕೊರತೆ ಇತರ ಭಾಷೆಗಳಲ್ಲಿ ಬರೆದ ಪುಸ್ತಕಗಳ ಪರಿಚಯ ಕನ್ನಡದ ಮೂಲಕ ಆಗಲು ಅವಕಾಶವಿಲ್ಲದಿರುವುದು.' ಈ ಪತ್ರಿಕೆಯ ಹಿನ್ನೆಲೆಯನ್ನು ವಿವರಿಸಿದನಂತರ, ಈ ಆಶಯಗಳನ್ನು ಐದು ಬಗೆಯಾಗಿ ಕಾರ್ಯರೂಪಕ್ಕೆ ತರುವುದೆಂದು ಹೇಳುತ್ತಾರೆ.

'ಕನ್ನಡದಲ್ಲಿ ಬರಹಗಾರರೇ ಕಡಮೆ.... ನಮ್ಮ ಮುಖ್ಯೋದ್ದೇಶ ಸಾಹಿತ್ಯ ಸೃಷ್ಟಿಯಲ್ಲ, ಸೃಷ್ಟಿಯಾದ ಸಾಹಿತ್ಯವನ್ನು ಪರಿಚಯ ಮಾಡಿಕೊಡುವುದು. ನಮಗೆ ನೆರವಾಗುವ ಕನ್ನಡಿಗರು ತಿಂಗಳು ತಿಂಗಳಿಗೂ ಹೆಚ್ಚಿ ಬರಲೆಂದು ನಮ್ಮ ಹಾರೈಕೆ' ಎನ್ನುವಾಗ ಹೊಸ ಸಾಹಿತಿಗಳ ಸೃಷ್ಟಿಯೂ ಈ ಪತ್ರಿಕೆಯ ಉದ್ದೇಶವೆಂದು ಸೂಚಿಸಲಾಗಿದೆ. ಮುಂದೆ ಲೇಖನಗಳು ಹೇಗಿರಬೇಕೆಂಬುದನ್ನು ವಿವರಿಸಲಾಗಿದೆ. ಅಚ್ಚಾದ ಲೇಖನದ ಒಂದು ಪುಟಕ್ಕೆ ಎರಡು ರೂಪಾಯಿ ಸಂಭಾವನೆ ಕೊಡಲಾಗುವುದೆಂದು ಸಹ ಪ್ರಕಟಿಸಲಾಗಿತ್ತು. ಒಟ್ಟಿನಲ್ಲಿ ಪುಸ್ತಕ ಪ್ರಪಂಚವು ಪ್ರಕಟನಕಾರರು, ಸಂಪಾದಕರು, ಲೇಖಕರು, ವಾಚಕರು, ವಾಚನಾಲಯ ಮತ್ತು ಪುಸ್ತಕ ಭಂಡಾರಗಳ ಸಂಚಾಲಕರು ಇವರೆಲ್ಲರ ಸಂಸಾರ-' ಎಂಬುದಾಗಿ ಸಂಪಾದಕೀಯ ಲೇಖನ ಮುಕ್ತಾಯ ಗೊಳ್ಳುತ್ತದೆ.

ಪ್ರಥಮ ಸಂಚಿಕೆಯ ಲೇಖನಗಳ ಪಟ್ಟಿಯನ್ನು ನೋಡಿದಾಗ ಅದರ ಸ್ವರೂಪ ವ್ಯಾಪ್ತಿಗಳು ಮನವರಿಕೆಯಾಗುತ್ತವೆ. ೧. ಸ್ವವಿಷಯ; ೨. ಎವೆರಿಬಡೀಸ್ ಪೊಲಿಟಿಕಲ್ ವಾಟ್ ಈಸ್ ವಾಟ್, ಜಿ. ಹನುಮಂತರಾವ್; ೩. ಗೌತಮಬುದ್ಧ, ಎಂ. ಯಾಮುನಾಚಾರ್ಯ; ೪. ಬೋಸ್ತಾನ, ಎಂ. ವಾಸುದೇವಮೂರ್ತಿ; ೫. ಮನಸ್ಸಿನ ಪ್ರೌಢಭಾವ, ಎಚ್. ಕೆ. ರಾಜಾರಾವ್. ೬. ಉದ್ಯೋಗ ಮತ್ತು ನಿರುದ್ಯೋಗ ಸಮಸ್ಯೆ, ಜಿಎನ್‌ಕೆ. ೭. ಮಹಿಳೆಯರು ಮತ್ತು ಅವರ ದುಡಿಮೆ, ಎಂ. ಆರ್. ಲಕ್ಷಮ್ಮ; ೮. ವಿಮರ್ಶೆ; i ಅಶ್ವತ್ಥಾಮನ್, ಕೆ. ವೆಂಕಟರಾಮಪ್ಪ ii ಮುಗುದೆಯರ ಪತ್ರಗಳು, ಕೆ. ಎಸ್. ನರಸಿಂಹಸ್ವಾಮಿ; iii ಹಿಂದೂಧರ್ಮ, iv ಚಂದ್ರಗುಪ್ತ ವಿಜಯ, ಕೆ. ಜಿ. ನಂಬಿಯಣ್ಣನ ರಗಳೆ, ಮೇಲ್ಕಂಡ ಲೇಖನಗಳೆಲ್ಲವೂ ಅನ್ಯಭಾಷಾಗ್ರಂಥ/ ಲೇಖನಗಳ ಸಾರಸಂಗ್ರಹವೆಂಬುದನ್ನು ಮರೆಯಲಾಗದು.

ಪುಸ್ತಕಪ್ರಪಂಚ ಪ್ರಾರಂಭದಲ್ಲಿ ಕ್ರೌನ್ ಅಷ್ಟದಳಾಕಾರದ ೬೪ ಪುಟಗಳನ್ನೊಳಗೊಂಡಿರುತ್ತಿತ್ತು. ಕಾಲಾನಂತರದಲ್ಲಿ, ಶಿಕ್ಷಣ ಸಮಿತಿಯ ಔದಾರ್ಯದಿಂದಾಗಿ ಸಂಪಾದಕ ಮಂಡಲಿಯ ಅಂತಶ್ಚೈತನ್ಯದಿಂದಾಗಿ, ಅದರಲ್ಲಿಯೂ ಜಿ. ಟಿ. ನಾರಾಯಣರಾವ್ ಮತ್ತು

ಆಲನಹಳ್ಳಿಕೃಷ್ಣರಂಥ ಮೇಧಾವಿಗಳ ಅಕ್ಷಯ ಉತ್ಸಾಹದಿಂದಾಗಿ ಅದರ ವಸ್ತುಗಾತ್ರಗುಣ ರೀತಿಗಳಲ್ಲಿ ಉತ್ತಮತೆಯ ಕಡೆಗೆ ಬದಲಾವಣೆಯಾಗಿದೆಯೆಂಬುದೇ ನನ್ನ ಅನಿಸಿಕೆ. ಪುಸ್ತಕ ಪ್ರಪಂಚದ ಲೇಖಕರ ಬಳಗದಲ್ಲಿ ಸುಮಾರು ೨೫೦ಮಂದಿ ಮಿತ್ರರಿದ್ದಾರೆ. ಜಿ.ಟಿ.ನಾರಾಯಣರಾಯರಂತು ಹಲವು ಹೊಸಬರಲ್ಲಿ ಹುದುಗಿದ್ದ ಲೇಖನ ಸಾಮರ್ಥ್ಯವನ್ನು ಗುರುತಿಸಿ, ಅದರ ಅಭಿವ್ಯಕ್ತಿಗೆ ಪ್ರೇರಣೆಯೊದಗಿಸಿ, ಬರೆಯಿಸಿ, ಬೇಸರವಿಲ್ಲದೆ ತಿದ್ದಿತೀಡಿ, ಅವರಿಗೆ ಮಾರ್ಗದರ್ಶಿಯಾಗಿ, ಪುಸ್ತಕ ಪ್ರಪಂಚಕ್ಕೆ ಮಾತ್ರವಲ್ಲ ಕನ್ನಡಕ್ಕೆ ವ್ಯಾಪಕ ವೈವಿಧ್ಯಮಯ ಸಮೃದ್ಧಿಯನ್ನು ಒದಗಿಸಿದ್ದಾರೆ. ಅವರು ಸೃಷ್ಟಿಸಿರುವ ನೂರಾರು ಹೊಸ ಲೇಖಕರ ಪೈಕಿ ನನಗೆ ತಟ್ಟನೆ ಹೊಳೆಯುವ ಹೆಸರು ಕೆಲವೇ ಕೆಲವು: ಸರ್ವಶ್ರೀ. ಡಾ.ಸ.ಜ.ನಾಗಲೋಟಿ ಮಠ, ಅಚ್ಯುತರಾವ್, ಎಂ.ಕೆ.ಗೋಪಾಲ ಆಶ್ರಿತ, ಎ.ಪಿ.ಚಂದ್ರಶೇಖರ, ನೀರಜ ಎನ್.ನಾಗರಾಜರಾವ್, ಭಾರತಿ ಎಸ್.ಭಟ್, ಮಾಧವರಾವ್ ಮುಧೋಳ್, ಮುಳಿಯ ಸರಸ್ವತಿ, ಲಲಿತ ಟಿ.ಎಸ್. ವೈದೇಹಿ ಜಿ. ಸರಸ್ವತಿ ಬಡೆಕ್ಕಿಲ, ಸುಕನ್ಯ ಭಟ್.ಕೆ ಇತ್ಯಾದಿ,ಇತ್ಯಾದಿ. ಇದೇ ಸಂದರ್ಭದಲ್ಲಿ ಸಂಪಾದಕ ಮಂಡಲಿಯ ಇತರ ಸದಸ್ಯರ ಸಹಕಾರವನ್ನು, ಸಂಪಾದಕರಾದ ರಾವೆಂಶ್ರೀ, ಆರ್.ಬೋರಯ್ಯ, ಚಂದ್ರಶೇಖರ ಆರಾಧ್ಯರ ಸ್ನೇಹಶೀಲವನ್ನೂ ಕ್ರಿಯಾ ಶಕ್ತಿಯನ್ನೂ ನೆನೆಸಿಕೊಳ್ಳಬೇಕಾದ್ದು ನನ್ನ ಕರ್ತವ್ಯ. ಆರಾಧ್ಯರ ಸೌಜನ್ಯ ಸುಮನಸ್ಕತೆ ಮೌನಗಾಂಭೀರ್ಯ ಮತ್ತು ಕ್ರಿಯಾ ಸಾಮರ್ಥ್ಯವನ್ನು ನಾನು ಮರೆಯಲಾರೆ. ಸಮಿತಿಯ ಅಚ್ಚುಕೂಟದ ಸಿಬ್ಬಂದಿವರ್ಗದ ಸಹಾಯ ಸಹಕಾರಗಳು ಯಾರಾದರೂ ಮೆಚ್ಚುವಂಥವು.ಶ್ರೀ ಆರ್.ಬೋರಯ್ಯನವರ ಕರ್ತೃತ್ವ ಸಾಮರ್ಥ್ಯ,ವಿಚಕ್ಷಣೆ, ಸಮಯ ಪಾಲನಾನಿಷ್ಠೆ, ವ್ಯವಸ್ಥಾಪನಾ ಕೌಶಲ್ಯ ಮರೆಯಲಾರದುವು. ಇವರಿಂದಾಗಿ ನನ್ನ ಮತ್ತು ಸಮಿತಿಯ ಕೆಲಸ ತುಂಬ ಹಗುರವಾದದ್ದುಂಟು.

ನನ್ನ ಪ್ರಧಾನ ಸಂಪಾದಕತ್ವದ ಅವಧಿಯಲ್ಲಿ ಅಧ್ಯಕ್ಷರಾಗಿದ್ದ ಸರ್ವಶ್ರೀ ಪಿ.ಎನ್.ಜವರಪ್ಪಗೌಡ, ಕರಿಯಪ್ಪಗೌಡ, ಟಿ.ವಿ.ಶ್ರೀನಿವಾಸರಾವ್, ದೇವನೂರು ಶಿವಮಲ್ಲು, ಕೋಣಂದೂರು ಲಿಂಗಪ್ಪ; ಪ್ರಧಾನಕಾರ್ಯದರ್ಶಿಗಳಾಗಿದ್ದ ಸರ್ವಶ್ರೀ ಕೆ.ಶಿವರಾಂ, ಆರ್.ಶಾಂತರಾಜು, ಡಾ॥ಎಚ್.ಎಂ.ನಾಗರಾಜು, ಆರ್.ಎಲ್.ಮಂಗಳೂರು, ಶ್ರೀರಂಗರಾಜು ಮತ್ತು ಸಮಿತಿಯ ಸದಸ್ಯರು ಸಜ್ಜನರು. ಅವರೆಂದೂ ಸಂಪಾದಕ ಮಂಡಲಿಯ ಕಾರ್ಯನಿರ್ವಹಣೆಯಲ್ಲಿ ತಲೆ ಹಾಕಲಿಲ್ಲ. ಮಂಡಲಿಗೆ ಸಂಪೂರ್ಣ ಸ್ವಾತಂತ್ರ್ಯನೀಡಿದ್ದರಲ್ಲದೆ, ಅದು ಸೂಚಿಸಿದ ಎಲ್ಲ ಸಲಹೆಗಳಿಗೆ ಅಂಗೀಕಾರ ಮುದ್ರೆ ಒತ್ತಿದ್ದುಂಟು. ಈ ಎಲ್ಲರನ್ನು ನಾನು ವೈಯಕ್ತಿಕವಾಗಿ ಮತ್ತು ಮಂಡಲಿಯ ಪರವಾಗಿ ವಂದಿಸುತ್ತೇನೆ.

ಹಿಂದೆಂತೋ ಅಂತೆಯೇ ಮುಂದೆಯೂ ವರ್ತಮಾನ ಕಾಲಕ್ಕಿಂತಲೂ ಅಧಿಕವಾಗಿ ಭವಿಷ್ಯತ್ ಕಾಲದಲ್ಲಿ ಪುಸ್ತಕ ಪ್ರಪಂಚದ ಅಗತ್ಯ ಅಧಿಕ ಪ್ರಮಾಣದಲ್ಲಿರುತ್ತದೆ. ಅದು ಸಾಮಾನ್ಯ ಜ್ಞಾನದ ವಿಕಾಸಕ್ಕೆ ಹತ್ತು ಹಲವು ಆಯಾಮುಗಳನ್ನು ಜೋಡಿಸಬೇಕಾಗಿದೆ; ಜನಸಾಮಾನ್ಯರ ಜ್ಞಾನಕೋಶವನ್ನು ವಿಸ್ತರಿಸಬೇಕಾಗಿದೆ, ಕನ್ನಡಕ್ಕೆ ವ್ಯಾಪಕವಾದ ಸತ್ವವನ್ನು ತಂದುಕೊಡಬೇಕಾಗಿದೆ; ಪತ್ರಿಕಾ ಪ್ರಪಂಚದಲ್ಲಿ ವೈವಿಧ್ಯವನ್ನೂ ವೈಶಿಷ್ಟ್ಯವನ್ನೂ ಮೆರೆಸಬೇಕಾಗಿದೆ; ಮಾನವಿಕ ವೈಜ್ಞಾನಿಕ ವೈಚಾರಿಕ ಕ್ಷೇತ್ರಗಳಲ್ಲಿ ಹೊಸ ಹೊಸಲೇಖಕರನ್ನು ಸೃಷ್ಟಿಸಬೇಕಾಗಿದೆ. ಮಿಗಿಲಾಗಿ ಜಾಗತಿಕ ಭಾಷೆಗಳಲ್ಲಿ ನಿರ್ಮಾಣಗೊಳ್ಳುತ್ತಿರುವ ಉಪಯುಕ್ತ ಗ್ರಂಥಗಳ ಸಾರಾಂಶವನ್ನು ಕನ್ನಡಿಗರಿಗೆ ಪರಿಚಯಿಸಿಕೊಡಬೇಕಾಗಿದೆ. ಹೇಗೂ ಕನ್ನಡ ಗ್ರಂಥಗಳ ಪರಿಚಯ ಕಾರ್ಯಕ್ಕೆ ಸಾಕಾದಷ್ಟು

ಪತ್ರಿಕೆಗಳು ಈಗ ಕನ್ನಡದಲ್ಲಿವೆ. ಅನ್ಯ ಭಾಷಾ ಗ್ರಂಥಗಳ ಪರಿಚಯ ಇದೀಗ ಜಗತ್ತು ಒಂದು ವಠಾರವಾಗುತ್ತಿರುವಾಗ ಆದ್ಯತೆಯ ಮೇಲೆ ನಡೆಯಬೇಕಾಗಿದೆ. ಎರಡು ಶತಮಾನಗಳ ಈ ಸಂಧಿ ಕಾಲದಲ್ಲಿ, ಹೊಸ ಸಹಸ್ರಮಾನಕ್ಕೆ ಜಗತ್ತು ಜಿಗಿಯಲಿರುವ ಈ ಸಂದರ್ಭದಲ್ಲಿ ಪುಸ್ತಕ ಪ್ರಪಂಚದಂಥ ಜ್ಞಾನ ಮಾಧ್ಯಮಗಳ ಆವಶ್ಯಕತೆ ತೀವ್ರವಾಗಿದೆಯೆಂದೇ ನನ್ನ ಅಭಿಪ್ರಾಯ. ಜೀವಂತ ನ್ಯಾಯಪರ ಜನಪರ ಕನ್ನಡಪರಜ್ಞಾನ ನಿಷ್ಠ ಸರ್ಕಾರವಾಗಲಿ ಸಮಿತಿಯಾಗಲಿ ಇದಕ್ಕೆ ಶಾಶ್ವತ ಸ್ವಾಯತ್ತ ಸ್ಥಾನವನ್ನು ನೀಡಿ, ಬೆಳೆಸುತ್ತವೆಂದು ಹಾರೈಸುತ್ತೇನೆ.

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಒಂದಾನೊಂದು ಕಾಲದಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಖ್ಯಾತಿಯನ್ನು ಪಡೆದಿತ್ತು. ಈ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ ತಜ್ಞರು ವಿಶ್ವಸಂಸ್ಥೆಯ ಹುದ್ದೆಗಳನ್ನು ಪಡೆದು, ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ವಯಸ್ಕರ ಶಿಕ್ಷಣದ ಅಭಿವೃದ್ಧಿಗೆ ದುಡಿದದ್ದುಂಟು. ಅಂಥ ಮಹಾಸಂಸ್ಥೆಯ ಇಂದಿನ ದುಸ್ಥಿತಿಗೆ ಏನು, ಯಾರು ಕಾರಣರೆಂಬುದನ್ನು ಸರ್ಕಾರ ಪರಾಮರ್ಶಿಸಬೇಕಾಗಿದೆ. ವೇತನದ ಆಮಿಷವಿಲ್ಲದೆ, ಗೌರವಸೇವೆ ಸಲ್ಲಿಸುತ್ತಿದ್ದ ಅಧ್ಯಕ್ಷರ ಕಾಲದಲ್ಲಿ ವ್ಯಾಪಕವಾಗಿ, ವ್ಯವಸ್ಥಿತವಾಗಿ, ಪರಿಣಾಮಕಾರಿಯಾಗಿ ನಡೆಯುತ್ತಿದ್ದ ಕೆಲಸ ಈಚೆಗೆ ನಡೆಯುತ್ತಿಲ್ಲವೇಕೆ? ಇತ್ತೀಚೆಗೆ ಕೇಂದ್ರ ಸರ್ಕಾರ ನಡೆಸಿದ ವಯಸ್ಕರ ಶಿಕ್ಷಣಾಂದೋಲನ ಕಾರ್ಯಕ್ರಮ ನಿರೀಕ್ಷಿತ ಪ್ರಮಾಣದಲ್ಲಿ ಜಯಪ್ರದವಾಗಲಿಲ್ಲವೆಂದೇ ಹೇಳಬಹುದು.

ರಾಷ್ಟ್ರದ ಎಲ್ಲ ಮಕ್ಕಳಿಗೆ ಕನಿಷ್ಠಪಕ್ಷ ಹತ್ತು ವರ್ಷದ ಶಿಕ್ಷಣ ಸಿಗುವ ತನಕ ವಯಸ್ಕರ ಶಿಕ್ಷಣ ಅವ್ಯಾಹತವಾಗಿ ಜರುಗಬೇಕು. ಆಮೇಲೂ ಸಹ ಸಾಕ್ಷರರಿಗೆ ಮುಂದುವರಿಕೆಯ ಶಿಕ್ಷಣ ಅನಿವಾರ್ಯ. ವಿದ್ಯಾಪೀಠಗಳ ಸ್ಥಿತಿಗತಿಯೂ ಸಮರ್ಪಕವಾಗಿಲ್ಲ. ಅವುಗಳ ಪ್ರಯೋಜನವನ್ನು ಪಡೆದುಕೊಳ್ಳುವ ಯೋಗ್ಯತೆ ನಮ್ಮ ಜನಕ್ಕಿಲ್ಲ. ರಾಷ್ಟ್ರೀಯತೆಯ ವಿಕಾಸಕ್ಕೆ ಅವು ಡೆನ್ಮಾರ್ಕಿನಲ್ಲಿ ಎಂಥ ಮಹತ್ವದ ಸೇವೆ ಸಲ್ಲಿಸಿವೆಯೆಂಬುದು ನಮ್ಮ ಅಧಿಕಾರಿಷಾಹಿಗೆ ಗೊತ್ತಿಲ್ಲ. ಪಂಚಾಯತಿ ರಾಜ್ಯಾಡಳಿತಕ್ಕೆ ಬೇಕಾದ ಶಿಕ್ಷಣವನ್ನವು ನೀಡಬಲ್ಲುವು. ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದೊಂದು ವಿದ್ಯಾಪೀಠವಿದ್ದು ,ಅವು ಆ ಜಿಲ್ಲೆಯ ಸಾಂಸ್ಕೃತಿಕ ಶೈಕ್ಷಣಿಕ ಕೇಂದ್ರಗಳಾಗಬೇಕಾಗಿದೆ. ಸರ್ಕಾರ ಭ್ರಮಾತ್ಮಕವಾದ ಅಶೈಕ್ಷಣಿಕ ಯೋಜನೆಗಳಿಗೆ ಹಣ ಪೋಲುಮಾಡದೆ, ವಿದ್ಯಾಪೀಠಗಳ ಬೆಳೆವಣಿಗೆಗೆ ಗಮನ ಹರಿಸುವುದು ಮೇಲೆಂದು ತೋರುತ್ತದೆ.

ವ್ಯಕ್ತಿಯ ಹಾಗೂ ಸಂಸ್ಥೆಯ ಜೀವನದಲ್ಲಿ ಸುವರ್ಣಮಹೋತ್ಸವವೊಂದು ಮಹತ್ವದ ಘಟನೆ. ಸಂಪಾದಕ ಮಂಡಲಿ ಪುಸ್ತಕ ಪ್ರಪಂಚದ ಸುವರ್ಣ ಮಹೋತ್ಸವವನ್ನು ನಡಸಬೇಕೆಂದು ಸಲಹೆ ನೀಡಿದ ಕೂಡಲೇ , ಅದು ಸೂಚಿಸಿದ ಕಾರ್ಯಯೋಜನೆಯನ್ನು ಸಹ ಒಪ್ಪಿಕೊಂಡು, ಅಧ್ಯಕ್ಷರೂ ವಿಭಾಗೀಯ ಕಮಿಷನ್ನರೂ ಆದ ಸನ್ಮಾನ್ಯ ಶ್ರೀ ಲೋಖರೆಯವರು, ಪ್ರಧಾನಕಾರ್ಯದರ್ಶಿಗಳಾದ ಶ್ರೀ ಶ್ರೀರಂಗರಾಜು ಅವರು , ಉಪಾಧ್ಯಕ್ಷರಾದ ಧರ್ಮರಾಜ ಲಿಂಗಪ್ಪ ರಿತ್ತಿ ಮರಿಯಣ್ಣನವರ ಅವರು, ಖಜಾಂಚಿಯರಾದ ಶ್ರೀ ಶಂಕರೇಗೌಡರು ಹಾಗೂ ಎಲ್ಲ ಕಾರ್ಯಕಾರಿ ಸಮಿತಿಯ ಮಾನ್ಯಸದಸ್ಯರು, ಸಮಾರಂಭವನ್ನು ಯಶಸ್ವಿಯಾಗಿ ನೆರವೇರಿಸಲೊಪ್ಪಿ, ಸಂಪಾದಕಮಂಡಲಿಯ, ಲೇಖಕ ವೃಂದದ ಹಾಗೂ ವಾಚಕ ಸಮುದಾಯದ ಕೃತಜ್ಞತೆಗೆ ಪಾತ್ರರಾಗಿದ್ದಾರೆ; ಅವರೆಲ್ಲರಿಗೂ ಸಂಪಾದಕ ಮಂಡಲಿಯ ಪರವಾಗಿ ಹಾರ್ದಿಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಭಾರತ ಸಂಯುಕ್ತ ರಾಷ್ಟ್ರ:

ಇಂಡಿಯಾವೊಂದು ಉಪಖಂಡ : ಬಾಹುಳ್ಯದೇಶ. ಜಗತ್ತಿನ ಎಲ್ಲ ಮತಗಳೂ ಇಲ್ಲಿ ತಳವೂರಿವೆ. ಹಲವು ಪ್ರಾಚೀನ ಸಮೃದ್ಧ ಶಿಷ್ಟ ಭಾಷೆಗಳು ಇಲ್ಲಿ ಚಾಲ್ತಿಯಲ್ಲಿವೆ. ಈ ಕಾರಣಗಳಿಂದಾಗಿ ಈ ಉಪಖಂಡ ಹಲವು ಸ್ವಾಯತ್ತತಾ ರಾಜ್ಯಗಳ ಸಂಯುಕ್ತ ರಾಷ್ಟ್ರವಾಗಿ ರೂಪಗೊಳ್ಳಬೇಕಾದ್ದು ಸಹಜ. ರಾಜ್ಯವಿಂಗಡಣೆಗಿದ್ದಂಥ ಏಕಮಾತ್ರ ಆಧಾರವೆಂದರೆ ಭಾಷೆ ವಿಂಗಡಣೆ ಕೈಗೊಂಡಿತು. ನಿಜ. ಆದರೆ ರಾಜ್ಯಗಳು ಕೇಂದ್ರಸರ್ಕಾರದ ಬಾಲಂಗೋಚಿಗಳಾಗುಳಿದಿವೆ; ಆಂಗ್ಲರ ಕಾಲದ ಸಾಮಂತ ರಾಜರಂತಿವೆ. ಎಲ್ಲ ಅಧಿಕಾರ ದೆಹಲಿಯಲ್ಲಿ ಕೇಂದ್ರೀಕೃತವಾಗಿದೆ. ಕೇಂದ್ರಸರ್ಕಾರ ರಾಜ್ಯಗಳಲ್ಲಿ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಪರ್ಯಾಯ ಆಡಳಿತವನ್ನು ನಡಸುತ್ತ, ಸಾಮ್ರಾಜ್ಯಷಾಹಿಯ ರೀತಿಯಲ್ಲಿ ವರ್ತಿಸುತ್ತಿದೆ. ಕೇಂದ್ರ ಮಂತ್ರಿಗಳು ಯಾವಾಗಲೂ ರಾಜ್ಯರಾಜಧಾನಿಗಳಲ್ಲಿರುತ್ತ ರಾಜ್ಯಸರ್ಕಾರಗಳ ಚಲನವಲನಗಳ ಮೇಲೆ ಕಣ್ಣಿಟ್ಟಿರುವಂತೆ ತೋರುತ್ತಿದೆ. ದೆಹಲಿಯಲ್ಲಿ ಅವರಿಗೇನೂ ಕೆಲಸವಿಲ್ಲವೇನೊ ಎಂಬಂತೆ ತೋರುತ್ತಿದೆ. ನೆಹ್ರೂಕಾಲದಲ್ಲಿ ಸಚಿವರ ಮೇಲಿದ್ದ ನಿಯಂತ್ರಣ ಈಗಿದ್ದಂತೆ ಕಾಣದು. ದಿನ ಬೆಳಗಾದರೆ ರಾಜ್ಯಸಚಿವರೋ ಅಧಿಕಾರಿಗಳೊ ದೆಹಲಿಯಲ್ಲಿರುತ್ತಾರೆ, ಕೇಂದ್ರಸರ್ಕಾರದ ಅಧಿಕಾರಿಗಳ ಕೃಪಾಭಿಕ್ಷೆಯ ಯಾಚನೆಗಾಗಿ. ಹೀಗಾಗಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಅಧಿಕಾರಿಗಳಿಗೆ ಮತ್ತು ಸಚಿವರ ಪ್ರಯಾಣ ದಿನಭತ್ಯಾದಿಗಳಿಗೆ ಕೋಟ್ಯಂತರ ರೂಪಾಯಿ ವೆಚ್ಚವಾಗುತ್ತಿದೆ. ಅಷ್ಟೇ ಅಲ್ಲ, ರಾಜ್ಯಗಳು ಆತ್ಮಗೌರವವನ್ನುಳಿಸಿಕೊಳ್ಳುವುದೂ ಕಷ್ಟವಾಗಿದೆ. ರಾಷ್ಟ್ರೀಯ ಪಕ್ಷಗಳಿಂದ ರಾಜ್ಯಶಾಖೆಗಳಿಗೆ ಸರಿಯಾದ ಮನ್ನಣೆಯೂ ದೊರೆಯುತ್ತಿಲ್ಲ. ನೂರೊಂದು ಪಕ್ಷಗಳ ಸಮ್ಮಿಶ್ರ ಸರ್ಕಾರ ದೇಶಕ್ಕೆ ಏಕತೆಯನ್ನು ಭದ್ರತೆಯನ್ನು ನೀಡಬಲ್ಲುದೆ? ಪರಿಣಾಮಕಾರಿಯಾದ ಆಡಳಿತವನ್ನು ಚಲಾಯಿಸಲು ಸಾಧ್ಯವೆ?

ಈ ಎಲ್ಲ ಮುಜುಗರ, ಗಜಿಬಿಜಿ, ಕೇಂದ್ರೀಕರಣ, ಪ್ರತಿಷ್ಠೆ, ಅಧಿಕಾರದರ್ಪ, ಪಕ್ಷಪಾತ, ತಾರತಮ್ಯ, ಧನದ ಅಪವ್ಯಯದಿಂದಾಗಿ ಪ್ರಾದೇಶಿಕ ಪಕ್ಷಗಳು ತಲೆಯೆತ್ತಿ ರಾಷ್ಟ್ರೀಯ ಪಕ್ಷಗಳನ್ನು ಮೂಲೆಗುಂಪು ಮಾಡಿದ್ದಾಗಿದೆ. ರಾಷ್ಟ್ರೀಯ ಪಕ್ಷಗಳು ಪ್ರಾದೇಶಿಕ ಹಾಗೂ ಪುಡಿಪಕ್ಷಗಳ ಕೃಪಾಶ್ರಯವನ್ನು ಯಾಚಿಸುವ ಕನಿಕರನೀಯಾವಸ್ಥೆಯಲ್ಲಿವೆ. ಜಾಗತೀಕರಣ, ಉದಾರೀಕರಣ ಹಾಗೂ ಕೇಂದ್ರೀಕರಣ ಅಧಿಕವಾದಂತೆಲ್ಲ ಪ್ರಾದೇಶಿಕ ಪಕ್ಷಗಳ ಪ್ರಾಬಲ್ಯ ಅದಮ್ಯಸ್ಥಿತಿಯನ್ನು ಮೀರಿ ಅಪಾಯದ ಅಂಚನ್ನು ಮುಟ್ಟುವುದರಲ್ಲಿ ಸಂದೇಹವಿಲ್ಲ. ಸ್ವಾತಂತ್ರ್ಯೋದಯದ ಮತ್ತಿನಲ್ಲಿದ್ದಾಗ ಜನ ದೆಹಲಿಯ ದರ್ಬಾರಿನ ಕಡೆಗೆ ಗಂಭೀರ ಗಮನವನ್ನು ಹರಿಸಲಿಲ್ಲ. ಆ ಮತ್ತಿನಿಂದ, ಆ ಭ್ರಮೆಯಿಂದ, ಆ ನಿಶೆಯಿಂದ ಹೊರಗೆ ಬಂದು, ವಾಸ್ತವ ಸತ್ಯ ಎದುರಾದಾಗ, ಸ್ವಾತಂತ್ರ್ಯವೆಂಬುದು ಗಾಳಿಗೋಪುರ, ಅದು ಕೆಲವರಿಗೆ ಮಾತ್ರ ಉಂಟು, ಹಲವರು ಅದರಿಂದ ವಂಚಿತರಾಗಿದ್ದಾರೆ ಎಂಬ ಭಾವನೆ ತಲೆದೋರಿದಾಗ, ರಾಜ್ಯಗಳ ಜನ ಜಾಗೃತರಾಗುತ್ತಿದ್ದಾರೆ. ಸೋವಿಯಟ್ ರಷ್ಯಾ, ಪಾಕಿಸ್ತಾನ ಮತ್ತು ಜೆಕೊಸ್ಲವಾಕಿಯಾಗಳಲ್ಲಿ ಸಂಭವಿಸಿದ ವಿಚ್ಛಿದ್ರಕಾರಕ ಪರಿಸ್ಥಿತಿ ಇಂಡಿಯಾದಂಥ ಬಾಹುಳ್ಯ ದೇಶದಲ್ಲಿಯೂ ಪುನರಾವರ್ತನೆಯಾಗಬಹುದೆಂಬ ವಿಚಾರದ ಕಡೆಗೆ ನಮ್ಮ ರಾಜನೀತಿಜ್ಞರ ಮತ್ತು ಮುತ್ಸದ್ದಿಗಳ ಲಕ್ಷ್ಯ ಹರಿಯಬೇಕಾಗಿದೆ.

ಜನರ ಆಶೆ ಅಪೇಕ್ಷೆ ಆಕಾಂಕ್ಷೆಗಳನ್ನರಿತು ಹೊಸ ರಾಜ್ಯಗಳ ನಿರ್ಮಾಣಕ್ಕೆ ಆತುರವಾಗಿರುವ ಕೇಂದ್ರ ಸರ್ಕಾರ ರಾಜ್ಯಗಳ ಸ್ವಾಯತ್ತತೆಯ ಕಡೆಗೂ ಗಮನ ಹರಿಸಬೇಕಾಗಿದೆ. ಆತ್ಮಗೌರವವುಳ್ಳ

ಯಾವ ರಾಜ್ಯವೂ ಇಂದಿನ ಉಸಿರು ಕಟ್ಟಿಸುವ ಪರಿಸ್ಥಿತಿಯಲ್ಲಿ ಅಭಿವೃದ್ಧಿ ಹೊಂದಿ, ರಾಷ್ಟ್ರದ ಭದ್ರತೆಯನ್ನು ರಕ್ಷಿಸಲಾರವು. ಅಂಗಗಳಿಂದ ಅಂಗಿ; ಅಂಗಗಳ ಆರೋಗ್ಯದಿಂದ ಮಾತ್ರ ಅಂಗಿಯ ಆರೋಗ್ಯ ಮತ್ತು ಶಕ್ತಿಯೆಂಬುದು ರಾಜಕಾರಣಿಗಳಿಗೆ ಅರ್ಥವಾಗಿದೆಯೆ? ಪರಿಸ್ಥಿತಿ ಅಪಾಯದ ಗೆರೆಯನ್ನು ದಾಟುವ ಮುನ್ನವೆ ಚಂಡಿತನವನ್ನು ಬಿಟ್ಟು ಸೌಮನಸ್ಯದಿಂದ ಸ್ನೇಹದಿಂದ ರಾಜ್ಯಗಳಿಗೆ ಪ್ರಮುಖ ಅಧಿಕಾರಗಳನ್ನು ಹಸ್ತಾಂತರ ಮಾಡುವ ಮೂಲಕ ಸೀಮಿತ ಸ್ವಾಯತ್ತತೆಯನ್ನು ನೀಡುವುದಾದರೆ ಮಾತ್ರ ರಾಷ್ಟ್ರ ಬಾಹ್ಯ ಶತ್ರುಗಳನ್ನು ಮಾತ್ರವಲ್ಲ, ಅಂತಶ್ಶತ್ರುಗಳನ್ನೆದುರಿಸಲು ಸಾಧ್ಯವಾಗುತ್ತದೆ. ದೇಶೀಯ ಸಾರ್ವಭೌಮರ ದಾಸ್ಯದಲ್ಲಿರುವ ಅತೃಪ್ತ ಪ್ರಜೆಗಳ ಮತ್ತು ರಾಜ್ಯಗಳ ನಿಗೂಢ ಅಸಹಕಾರದಿಂದ ಕೇಂದ್ರಸರ್ಕಾರ ಏನನ್ನೂ ಸಾಧಿಸಲಾರದು. ಬಾಹುಳ್ಯ ಸಮಾಜದ ಈ ರಾಷ್ಟ್ರದಲ್ಲಿ ಸೀಮಿತ ಸ್ವಾಯತ್ತತೆಯ ರಾಜ್ಯಗಳುಳ್ಳ ಸಂಯುಕ್ತ ಸರ್ಕಾರದ ವ್ಯವಸ್ಥೆಯೊಂದೇ ಪರಿಣಾಮಕಾರಿಯಾದ ಯಶಸ್ಸನ್ನು ಸಾಧಿಸಿ, ಏಕತೆಭದ್ರತೆಗಳನ್ನು ರಕ್ಷಿಸಬಲ್ಲುದೆಂದು, ಜಾತೀಯ ಮತೀಯಾದಿ ಕುಟಿಲ ಕಾರಸ್ಥಾನಗಳನ್ನು ನಿಯಂತ್ರಿಸಬಹುದೆಂದು ತಿಳಿಯಬಹುದಾಗಿದೆ.

ಇಂಥ ಚಿಂತನೆಯ ಹಿನ್ನೆಲೆಯಲ್ಲಿ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಶಾಸನಸಭೆಯ ಸ್ವಾಯತ್ತತಾ ನಿರ್ಣಯವನ್ನು ಪೂರ್ವಗ್ರಹಮುಕ್ತ ವಿವೇಕಯುಕ್ತ ಮುತ್ಸದ್ದಿತನದಿಂದ ನಿರ್ಮಮತೆಯಿಂದ ರಾಷ್ಟ್ರೈಕ್ಯದ ದೃಷ್ಟಿಯಿಂದ ಭವಿಷ್ಯದ ಉದ್ಧಾರವನ್ನು ಗಮನದಲ್ಲಿಟ್ಟುಕೊಂಡು ಪರಾಮರ್ಶಿಸಬೇಕಾಗಿದೆ. ಹೀಗೆ ಪರಾಮರ್ಶಿಸುವಾಗ ಇಂಡಿಯಾದ ಐತಿಹಾಸಿಕ ಹಿನ್ನೆಲೆಯನ್ನು, ಬಾಹುಳ್ಯ ಸಮಾಜವನ್ನು ಅಮೆರಿಕಾ ಆಸ್ಟ್ರೇಲಿಯಾಗಳ ಸಂಯುಕ್ತ ರಾಜ್ಯ ವ್ಯವಸ್ಥೆಯನ್ನು ಹಾಗೂ ಪ್ರಜಾಪ್ರಭುತ್ವ ಸಿದ್ಧಾಂತಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಇಂಡಿಯಾ ಬಹುರಾಷ್ಟ್ರಗಳ ಸಂಯುಕ್ತ ರಾಷ್ಟ್ರವೆಂಬುದರಲ್ಲಿ ಲವಲವೇಶವೂ ಅನುಮಾನವಿಲ್ಲ. ಅನುಮಾನವುಳ್ಳವರಿಗೆ ರಾಷ್ಟ್ರದ ಕಲ್ಪನೆಯಾಗಲಿ, ಪ್ರಜಾಪ್ರಭುತ್ವದ ಸಿದ್ಧಾಂತಗಳಾಗಲಿ, ಜಗತ್ತಿನ ಇತಿಹಾಸದ ಪ್ರಜ್ಞೆಯಾಗಲಿ ಇಲ್ಲವೆಂದೇ ಹೇಳಬೇಕಾಗುತ್ತದೆ. ಈ ದೃಷ್ಟಿಯಿಂದ ಕೇಂದ್ರಸರ್ಕಾರ ಜಮ್ಮು ಮತ್ತು ಕಾಶ್ಮೀರ ರಾಜ್ಯ ಶಾಸನ ಸಭೆಯ ಸ್ವಾಯತ್ತತಾ ನಿರ್ಣಯವನ್ನು ಅವಸರವಾಗಿ ತಿರಸ್ಕರಿಸಿದ್ದಾಗಲಿ, ಅನಂತರ ಅಲ್ಲಿಯ ಮುಖ್ಯಮಂತ್ರಿಯನ್ನು ಚರ್ಚೆಗೆ ಆಹ್ವಾನಿಸಿದ್ದಾಗಲಿ ತಿಳಿವಳಿಕೆಯಿಂದ ಕೂಡಿದ್ದಲ್ಲ. ಕವಿಹೃದಯದ ವಾಜಪೇಯಿಯವರಂಥ ಮೇಧಾವಿ ಅನುಭವಶಾಲಿ ಹಿರಿಯ ಹೆಮ್ಮೆಯ ನಾಯಕರಿರುವಾಗ ಹೀಗಾಗಬಾರದಿತ್ತು. ರಾಜಮನ್ನಾರ್ ಆಯೋಗ ಮತ್ತು ಸರ್ಕಾರಿ ಆಯೋಗದ ವರದಿಗಳ ಹಿನ್ನೆಲೆಯಲ್ಲಿ, ಜಗತ್ತಿನ ಇತ್ತೀಚಿನ ಆಗುಹೋಗುಗಳನ್ನೂ, ನಾಡಿನ ಇತ್ತೀಚಿನ ರಾಜಕೀಯ ಪರಿಸ್ಥಿತಿಯನ್ನೂ ಮುಖ್ಯವಾಗಿ ಪ್ರಾದೇಶಿಕ ಪಕ್ಷಗಳ ಬೆಳವಣಿಗೆಯನ್ನೂ ದೃಷ್ಟಿಯಲ್ಲಿಟ್ಟುಕೊಂಡು ಆ ನಿರ್ಣಯದ ಬಗ್ಗೆ ಚರ್ಚೆ ನಡೆಸಬೇಕಾಗಿತ್ತು. ರಾಷ್ಟ್ರದ ಏಕತೆ ಭದ್ರತೆಗಳನ್ನು ಆದ್ಯತೆಯ ಮೇಲೆ ಗಮನದಲ್ಲಿರಿಸಿಕೊಂಡು ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿತ್ತು. ರಾಜಕೀಯವೊಂದು ಜೀವಂತ ಸಂಗತಿ, ಬೆಳವಣಿಗೆಯೇ ಅದರ ಸಹಜಯೋಗವೆಂಬುದನ್ನು ನಾಯಕರು ಗ್ರಹಿಸಬೇಕಾಗಿತ್ತು. ಪ್ರಾಯಶಃ ಕೆಲವು ನಾಯಕರಲ್ಲಿ ದೂರದೃಷ್ಟಿಯಿಲ್ಲವೇನೋ ಎಂಬ ಸಂದೇಹ ಅವರ ಅವಸರದ ನಿರ್ಣಯದಿಂದ ವ್ಯಕ್ತವಾಗುತ್ತದೆ. ಅಥವಾ ಅಂಥ ನಿರ್ಣಯಕ್ಕೆ ಬೇರೇನಾದರೂ ಪ್ರಬಲ ಕಾರಣವಿರಬಹುದೆ?

ಸ್ವಾಯತ್ತತೆಯ ವಿಷಯ ಕೇವಲ ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ್ದಲ್ಲ. ಮುಖ್ಯಮಂತ್ರಿಗಳ ಸಭೆಯಲ್ಲಿ, ರಾಜ್ಯಗಳ ಶಾಸನಸಭೆಗಳಲ್ಲಿ, ಮೇಲ್ಮನೆಗಳೂ ಸೇರಿದಂತೆ ಪಾರ್ಲಿಮೆಂಟಿನಲ್ಲಿ ಚರ್ಚಿತವಾಗಬೇಕಿತ್ತು. ರಾಷ್ಟ್ರೀಯ ಮಟ್ಟದ ಬುದ್ಧಿ ಜೀವಿಗಳ ಅಭಿಪ್ರಾಯವನ್ನು ಸಂಗ್ರಹಿಸಬೇಕಾಗಿತ್ತು. ಅಸ್ಸಾಂ, ಪೂರ್ವರಾಜ್ಯಗಳು ಮತ್ತು ತಮಿಳುನಾಡು ಸಹ ಸ್ವಾಯತ್ತತೆಯ ಪರವಾಗಿವೆಯೆಂಬುದನ್ನು ವಿವೇಕಿಗಳು ಮರೆಯಲಾಗದು. ಅಂತರ್ಯುದ್ಧದ ಮೂಲಕವೇ ಈ ಸಮಸ್ಯೆ ಇತ್ಯರ್ಥವಾಗಬೇಕೇನು ?

ಜಮ್ಮು ಮತ್ತು ಕಾಶ್ಮೀರ ರಾಜ್ಯ ರೂಪಿಸಿಕೊಂಡಿರುವ ಸ್ವಾಯತ್ತತೆಯ ಕಲ್ಪನೆಯನ್ನು ಮೂರ್ಖಶಿಖಾಮಣಿಗಳೂ ಒಪ್ಪಿಕೊಳ್ಳಲಾರರು, ನಿಜ. ಯಾವ ರಾಜ್ಯವೂ ಭಾರತದಿಂದ ಸಿಡಿದು ಹೋಗಬಾರದೆಂಬ ಒಪ್ಪಂದಕ್ಕೆ ಎಲ್ಲ ರಾಜ್ಯಗಳೂ ಸಹಿ ಹಾಕಿದನಂತರ ಸ್ವಾಯತ್ತತೆಯ ಶರತ್ತುಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಸೈನ್ಯ, ವಿದೇಶೀ ವ್ಯವಹಾರ, ರೈಲು, ನೌಕಾಪಡೆ, ಅಂಚೆ, ನಾಣ್ಯ, ವರಿಷ್ಠ ನ್ಯಾಯಾಲಯ, ಆಡಿಟರ್ ಜನರಲ್ ಇಲಾಖೆ, ಅಂತರ ರಾಜ್ಯ ಸಮಸ್ಯೆಗಳು, ಚುನಾವಣಾ ಇಲಾಖೆ, ಇವೆಲ್ಲವೂ ಕೇಂದ್ರದ ಆಡಳಿತ ವ್ಯವಸ್ಥೆಗೊಳಪಡಬೇಕೆಂಬುದರಲ್ಲಿ ಯಾರಿಗೂ ಸಂದೇಹವಿರಬಾರದು. ಯಾವುದಾದರೂ ರಾಜ್ಯ ಭಾರತದಿಂದ ಸಿಡಿದುಹೋಗುವ ಪ್ರಯತ್ನ ನಡಸಿದಾಗ, ಅದರ ಮೇಲೆ ಕೇಂದ್ರ ಸೈನಿಕ ಕಾರ್ಯಾಚರಣೆ ನಡಸಬೇಕಾದ ಅಧಿಕಾರ ಹೊಂದಿರಬೇಕು. ಉಳಿದ ವಿಷಯಗಳ ಜವಾಬ್ದಾರಿ ಸಂಪೂರ್ಣವಾಗಿ ರಾಜ್ಯಗಳಿಗಿರಬೇಕು ರಾಜ್ಯಾಂಗವನ್ನು ರೂಪಿಸಿಕೊಳ್ಳುವ ಅಧಿಕಾರ ರಾಜ್ಯಗಳಿಗಿರಬೇಕು. ಆದರೆ ಅದರ ವಿಧಿನಿಯಮಗಳು ಕೇಂದ್ರ ರಾಜ್ಯಾಂಗಕ್ಕೆ ವಿರುದ್ಧವಾಗಿರಬಾರದು. ಸಾಧ್ಯವಾದರೆ, ಅಮೆರಿಕಾದ ರಾಜ್ಯಗಳ **ರಾಜ್ಯಾಂ**ಗಗಳ ಆಧಾರದ ಮೇಲೆ ಇಲ್ಲಿಯ ರಾಜ್ಯಾಂಗಗಳನ್ನು ರೂಪಿಸಿಕೊಳ್ಳಬಹುದು. ರಾಷ್ಟ್ರಧ್ವಜ ಮತ್ತು ಗೀತೆ ಎಲ್ಲ ರಾಜ್ಯಗಳಿಗೂ ಕಡ್ಡಾಯ. ಅವಶ್ಯವಾದರೆ, ಇವುಗಳ ಜತೆಗೆ ರಾಜ್ಯ ಗೀತೆ ರಾಜ್ಯ ಧ್ವಜಗಳನ್ನು ಬಳಸಬಹುದು. ಈ ವಿಷಯಗಳನ್ನೆಲ್ಲ ರಾಜ್ಯಾಂಗ ತಿದ್ದುಪಡಿ ಆಯೋಗ ಕೂಲಂಕಷವಾಗಿ ಚರ್ಚಿಸಬಹುದು.

ರಾಜ್ಯಾಂಗದಲ್ಲಿ ಎರಡು ಬಗೆಯ ರಾಜ್ಯಗಳಿಗೆ ಅವಕಾಶ ಕಲ್ಪಿಸಬಹುದು. ಒಂದು, ಕೇಂದ್ರದ ಮಹತ್ವವನ್ನೊಪ್ಪಿಕೊಂಡ ರಾಜ್ಯಗಳು : ಇವುಗಳಿಗೆ ಕೇಂದ್ರ ವಿಶೇಷ ಸವಲತ್ತುಗಳನ್ನು ನೀಡಬಹುದು; ಈಗಿರುವ ಅಧಿಕಾರಕ್ಕಷ್ಟೆ ಅವು ಬದ್ಧ; ಎರಡು, ಸ್ವಾಯತ್ತತಾ ರಾಜ್ಯಗಳು. ಇಂಥ ವಿಭಿನ್ನ ರಾಜ್ಯಗಳು ಒಂದೇ ರಾಜಕೀಯ ವ್ಯವಸ್ಥೆಯಲ್ಲಿ ಅಪರೂಪವೇನಲ್ಲ, ಆಂಗ್ಲರ ಕಾಲದಲ್ಲಿ ಬ್ರಿಟಿಷ್ ಇಂಡಿಯಾ ಪ್ರಾಂತ್ಯಗಳು, ಸಾಮಂತರಾಜ್ಯಗಳು ಇರಲಿಲ್ಲವೆ? ಈಗಲೂ ಕೆಲವು ರಾಷ್ಟ್ರಗಳು ಆಶ್ರಿತ ಅಥವಾ ರಕ್ಷಿತ ಪ್ರಾಂತ್ಯಗಳನ್ನು ಹೊಂದಿಲ್ಲವೆ? ರಾಜ್ಯಾಂಗ ಕಾನೂನು ಚತುರರು ಈ ವಿಷಯಗಳನ್ನು ಗಮನಿಸಬಹುದು. ಆದರೆ, ಯಾವ ವಿಧದ ರಾಜ್ಯವೇ ಆಗಲಿ - ಸ್ವಾಯತ್ತ ಅಥವಾ ಅಸ್ವಾಯತ್ತ - ಅವು ರಾಷ್ಟ್ರದಿಂದ ಸಿಡಿದುಹೋಗುವುದಿಲ್ಲವೆಂಬ ಪೂರ್ವಶರತ್ತಿಗೆ ಬದ್ಧವಾಗಿರಬೇಕು.

ಕಣ್ಮರೆಯಾದ ನಿಜತಾರೆ :

ಸ್ವಾತಂತ್ರ್ಯ ಸಮರದಲ್ಲಿ ಗಾಂಧೀಜಿಯ ನೆಚ್ಚಿನ ಶಿಷ್ಯರಲ್ಲೊಬ್ಬರಾಗಿ ತ್ರಿಕರಣ ಶುದ್ಧಿಯಾಗಿ ಭಾಗವಹಿಸಿ ಇಪ್ಪತ್ತನೆಯ ಶತಮಾನದ ಪೂರ್ತ ಭರತಖಂಡದ ಗಗನದಲ್ಲಿ ಪ್ರಜ್ವಲಿಸಿ, ಕರ್ನಾಟಕದ ಇತಿಹಾಸವನ್ನೆಲ್ಲ ಬಹುಭಾಗ ಆವರಿಸಿಕೊಂಡು ಮೆರೆದ ಮಹಾಭಾಗ್ಯತಾರೆ ಶ್ರೀಸಿದ್ಧವ್ವನ ಹಳ್ಳಿನಿಜಲಿಂಗಪ್ಪನವರು ತಮ್ಮ ತೊಂಬತ್ತೆಂಟನೆಯ ವಯಸ್ಸಿನಲ್ಲಿ

(೮.೮.೨೦೦೦ರಂದು) ಸ್ವಸ್ಥಾನವನ್ನು ಸೇರಿದರೂ, ಮುಂದೆಯೂ ನಾಡಿನ ಆಶಾಕಿರಣವಾಗಿ ಬೆಳಗಲಿದ್ದಾರೆ. ಗಾಂಧೀ ಸಿದ್ಧಾಂತಗಳ ಅನುಷ್ಠಾನದಲ್ಲಿ, ಪಾರದರ್ಶಕವಾದ ಕಾಲುಷ್ಯರಹಿತ ತ್ಯಾಗಮಯ ಸ್ವಚ್ಛ ಜೀವನದಲ್ಲಿ ಸುಸಂಸ್ಕೃತವೂ, ವೈಚಾರಿಕ ಹಾಗೂ ವೈಜ್ಞಾನಿಕ ಮನೋಧರ್ಮ ಸಮೃದ್ಧವೂ , ನಿಷ್ಕಳಂಕವೂ ನೈತಿಕವೂ ಆದ ಚಾರಿತ್ರ್ಯದಲ್ಲಿ ಅವರಿಗೆ ಸರಿಗಟ್ಟುವವರು ಇಡೀ ರಾಷ್ಟ್ರದಲ್ಲಿಯೇ ವಿರಳ. ಧ್ಯೇಯ ಸಾಧನೆಗಾಗಿ ರಾಜ್ಯಪಾಲ, ರಾಷ್ಟ್ರಪತಿ ಸ್ಥಾನಾದಿಗಳನ್ನೊಳಗೊಂಡಂತೆ ಸರ್ವತ್ಯಾಗಗಳಿಗೂ ಸಿದ್ಧರಾಗಿ, ಕೇಂದ್ರ ನಾಯಕತ್ವದ ಉಪೇಕ್ಷೆಗೂ ಗುರಿಯಾಗಿ, ಭಾಷಾವಾರು ರಾಜ್ಯ ವಿಂಗಡಣೆಗೆ ಕಾರಣರಾಗಿ, ಕರ್ನಾಟಕ ಏಕೀಕರಣವನ್ನು ಸಾಧಿಸಿ, ಭರತಖಂಡದ ಇತಿಹಾಸದಲ್ಲಿ ಸ್ವರ್ಣೋಜ್ವಲ ಸಂಪುಟದ ರಚನೆಗೆ ನಿಮಿತ್ತರಾದ ಸಾತ್ವಿಕ ಛಲವಂತರವರು, ಕೃತಸಂಕಲ್ಪರು. ಲಾಭದಾಯಕವಾದ ವಕೀಲಿಯ ಮೂಲಕ ಅದ್ದೂರಿಯ ಜೀವನವನ್ನು ನಡೆಸಬಹುದಾಗಿದ್ದರೂ, ಸಂಸಾರವನ್ನು ನಿರ್ಲಕ್ಷಿಸಿ ಮಕ್ಕಳ ಶಿಕ್ಷಣ ಪೋಷಣೆ ಭವಿಷ್ಯಗಳನ್ನು ನಿರ್ಲಕ್ಷಿಸಿ, ದೇಶದ ಹಿತಕ್ಕಾಗಿ ಸೆರೆಮನೆವಾಸದಲ್ಲಿ ಜೀವನದ ಬಹುಭಾಗವನ್ನು ಕಳೆದು, ತಾಯಿಮಡದಿಯರ ಅಪೇಕ್ಷೆಯಂತೆ ಗಾಂಧಿಪರೀಕ್ಷೆಯಲ್ಲಿ ಸರ್ವಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದ ಮಹಾನುಭಾವರವರು.

ಸಹಜವಾಗಿ ನ್ಯಾಯವಾಗಿ ದೊರೆತ ಮುಖ್ಯಮಂತ್ರಿಪದವಿಯನ್ನು ಸಂಸಾರದ ಬಂಧುಗಳ ಏಳ್ಗೆಗಾಗಿ, ಸ್ವಸುಖಕ್ಕಾಗಿ, ಶೋಕಿಯ ಬದುಕಿಗಾಗಿ ಬಳಸಿಕೊಳ್ಳದೆ, ಮಕ್ಕಳನ್ನು ಬೀದಿಗೆ ಬಿಸಾಡಿದ, ಸುಲಭಲಭ್ಯ ಲಾಂಪಟ್ಯವಿಲಾಸಗಳನ್ನು ದೂರೀಕರಿಸಿ, ಲೌಕಿಕ ವೈಭವದ ಮಧ್ಯೆಯೂ ಸಂಸಾರದನಡುವೆಯೂ ಸನ್ಯಾಸಿಯಂತೆ, ಸಾಧುಸಂತರಂತೆ ಬದುಕು ನಡೆಸಿದ ಮಹಾಶರಣರವರು. ಬಯ್ದವರನ್ನು ಬಂಧುಗಳೆಂದು, ಹೊಡೆದವರನ್ನು ಹೊರೆದವರೆಂದು ತಿಳಿದು, ತಮಗೆ ನ್ಯಾಯವಾಗಿ ದೊರೆಯಬೇಕಾಗಿದ್ದ ಅಧಿಕಾರ ಜಾರಿಹೋದಾಗಲೂ ಮಾನವದ್ವೇಷಿಯಾಗದೆ, ಹತಾಶರಾಗದೆ, ತಾನಾಗಿ ಬಂದದ್ದೇ ಪರಮಪ್ರಸಾದವೆಂದು ಸ್ವೀಕರಿಸಿ, ಜಗತ್ತನ್ನು ಜೀವನವನ್ನು ಗಾಢವಾಗಿ ಪ್ರೀತಿಸುತ್ತ, ಕೊನೆಯತನಕ ಲೋಕಹಿತೈಷಿಯಾಗಿ, ಸುಂದರ ಜೀವನವನ್ನು ನಡಸಿದ ಸ್ಥಿತಪ್ರಜ್ಞರವರು, ಬಸವಪ್ರಣೀತ ಶರಣಮಾರ್ಗ ನಿಷ್ಠ ಮಹಾ ಮಾನವರವರು. ಶ್ರೀಮಂತರನ್ನು ಪೇಕ್ಷಿಸದೆ, ನಾಗರಿಕರನ್ನು ತೆಗಳದೆ, ಭರತಖಂಡದ ಅಭ್ಯುದಯ ಹಳ್ಳಿಗಳನ್ನು ರೈತರ ಏಳ್ಗೆಯನ್ನವಲಂಬಿಸಿದೆಯೆಂದು, ರಾಷ್ಟ್ರ ಸಂಪತ್ತಿನ ಆಧಿಕ್ಯಕ್ಕೆ ಬೃಹತ್ ಕೈಗಾರಿಕೆಗಳಿಗಿಂತ ಮಿಗಿಲಾಗಿ ನೀರಾವರಿ ಯೋಜನೆಗಳೇ ಕಾರಣವೆಂದು , ಕೃಷಿ ಮತ್ತು ಕೃಷಿ ಕೈಗಾರಿಕೆಗಳ ಪೋಷಣೆಯೇ ನಿರುದ್ಯೋಗ ಸಮಸ್ಯೆಗೆ ಪರಿಹಾರವೆಂದು ನಂಬಿದ, ಅದಕ್ಕಾಗಿ ಶ್ರಮಿಸಿದ ಮಹಾಮಾನವತಾವಾದಿಯವರು.

ಎಸ್ಸೆನ್‌ರೆಂದೇ ಪ್ರಸಿದ್ಧರಾದ ಸಿದ್ದವ್ವನ ಹಳ್ಳಿ ನಿಜಲಿಂಗಪ್ಪನವರ ಸುದೀರ್ಘಜೀವನದ ಯಶಸ್ಸಿನ ಗುಟ್ಟೆಂದರೆ ನಿತ್ಯಸತ್ಯಶುದ್ಧಕಾಯಕ. ಅವರ ಮುಪ್ಪಿನ ದೇಹದೊಳಗಣಮನಸ್ಸು ಸದಾಕ್ರಿಯಾಮುಖವಾದದ್ದು. ಅದಕ್ಕೆ ಮುಪ್ಪಿಲ್ಲ, ಆಲಸ್ಯವಿಲ್ಲ. ಎಚ್ಚರವಿದ್ದಾಗಲೆಲ್ಲ ಅದು ದೇಶದ ಸಮಸ್ಯೆಗಳ ಚಿಂತನೆಯಲ್ಲಿ ತಲ್ಲೀನವಾಗಿರುತ್ತದೆ. ರಾಷ್ಟ್ರದ ಯಾವ ಮೂಲೆಯಲ್ಲಿ ಏನು ಪ್ರಮಾದ ನಡೆದರೂ ಕೂಡಲೇ ಅದರ ಬಗೆಗದು ಪ್ರತಿಕ್ರಿಯಿಸುತ್ತದೆ; ಭಾಷಣ ಸಮೂಹಮಾಧ್ಯಮಗಳ ಮೂಲಕ ಸಿಡಿಲಾಗಿ ಎರಗುತ್ತದೆ. ಭ್ರಷ್ಟಾಚಾರದ ಬಗೆಗೆ ಅವರಿಗೆ ರೋಷವುಂಟು, ಹೇಸಿಕೆಯುಂಟು ; ಪರಶುರಾಮನ ಪರಶುವಾಗಿ ಎರಗುವುದುಂಟು. ಅನೈತಿಕ ವ್ಯವಹಾರದಲ್ಲಿ ತೊಡಗಿರುವ ಪಕ್ಷವಾಗಲಿ, ವ್ಯಕ್ತಿಯಾಗಲಿ, ಅವರಿಗೆ ಲೆಕ್ಕಕ್ಕಿಲ್ಲ , ತರಾಟೆಗೆ ತೆಗೆದುಕೊಳ್ಳುತ್ತಾರೆ. ನೈತಿಕ

ಧರ್ಮರಾಯರಾಗಿ, ಶೌಚಭೀಷ್ಮರಾಗಿ, ಚಿತ್ರ ಸದೃಶರಾಗಿ ದುಷ್ಟ ನಾಯಕರನ್ನು ಛೀಮಾರಿ ಮಾಡುವ, ಕೋದಂಡಕ್ಕೆತ್ತುವ ಅಧಿಕಾರ ಎಸ್ಸೆನ್‌ರಿಗಲ್ಲದೆ ಮತ್ತಾರಿಗಿದೆ? ಅಂಥವ್ಯಕ್ತಿ ಭರತಖಂಡದಲ್ಲಿ ಮತ್ತೊಮ್ಮೆ ಉದಯಿಸಲೆಂಬುದೇ ಎಲ್ಲ ಸಜ್ಜನರ ಬಯಕೆ.

ಕೊನೆ ಕೊನೆಯತನಕ ನಿಜಲಿಂಗಪ್ಪನವರು ಅಕ್ಷರಶಃ ದುಡಿಯುತ್ತಾರೆ. ನೆಹರೂ ಕುಟುಂಬವೊಂದೇ ದೇಶವನ್ನು ರಕ್ಷಿಸಿದ್ದೆಂದು ಏಮ್ಮುಖದ ಪ್ರಚಾರ ನಡೆಸುತ್ತ, ದೇಶದ ಉದ್ದಗಲಗಳಲ್ಲಿ ಆ ಕುಟುಂಬದ ಪ್ರತಿಷ್ಠೆಯನ್ನು ಸಂಸ್ಥಾಪಿಸುವ ಸಲುವಾಗಿ ಕೆಲವೇ ಕೆಲವರು ಅಧಿಕಾರವನ್ನು ದುರುಪಯೋಗಿಸಿಕೊಂಡು, ಮಾತ್ಸರ್ಯಪ್ರೇರಿತರಾಗಿ ವಲ್ಲಭಬಾಯಿ ಪಟೇಲರಂಥ ಮಹಾನೈಜ ದೇಶಪ್ರೇಮಿಗಳನ್ನು ತೆರೆಯ ಮರೆಗೆ ತಳ್ಳುತ್ತಿದ್ದಾಗ, ಎಸ್ಸೆನ್‌ರವರು ಅಂಥ ತಿರಸ್ಕೃತ ಮಹಾನಾಯಕರ ಪುನರ್ಪ್ರತಿಷ್ಠಾಪನೆಗಾಗಿ ತುಂಬ ಪ್ರಯತ್ನಿಸುತ್ತಾರೆ; ಅವರ ಸಂಬಂಧವಾದ ಹಲವು ಸಾಹಿತ್ಯಕೃತಿಗಳನ್ನು ಪ್ರಕಟಿಸಿದ್ದಲ್ಲದೆ, ಸ್ಮಾರಕಗಳನ್ನು ನಿರ್ಮಿಸುತ್ತಾರೆ. ಮಹಾತ್ಮಗಾಂಧೀಜಿಗೆ ಮಾತ್ರ ದ್ವಿತೀಯರಾದ ಸುಭಾಷ್‌ಚಂದ್ರಬೋಸರಂಥ ಹುತಾತ್ಮರಿಗೆ ಸ್ಮಾರಕಗಳನ್ನು ನಿರ್ಮಿಸುವ ಸಲುವಾಗಿ ನಾನಾಮಾರ್ಗಗಳನ್ನು ಹುಡುಕುತ್ತಾರೆ. ತಮ್ಮ ಕೊಟ್ಟಕೊನೆಯ ದಿನಗಳಲ್ಲಿ, ೯೭ನೆಯ ವಯಸ್ಸಿನಲ್ಲಿ ಭ್ರಷ್ಟಾಚಾರ ನಿರ್ಮೂಲನೆಗಾಗಿ, ದೆಹಲಿಯಲ್ಲಿ ಮಹಾತ್ಮಾಗಾಂಧಿಯವರ ಹೆಸರಿನಲ್ಲಿ ಸಂಸ್ಥೆಯೊಂದನ್ನು ಸ್ಥಾಪಿಸುತ್ತಾರೆ.

ಎಸ್ಸೆನ್ ಅಪ್ಪಟಕನ್ನಡಿಗರಾಗಿಯೂ ಚಿನ್ನದಂಥ ಭಾರತೀಯರು; ಉತ್ತಮ ಭಾರತೀಯರಾಗಿಯೂ ವಿಶ್ವಮಾನವರು, ಅಂತರರಾಷ್ಟ್ರೀಯ ವ್ಯಕ್ತಿಗಳು, ಅಂಥವರಿಗೆ ಭಾರತರತ್ನ ದೊರೆಯಲಿಲ್ಲವೆಂದರೆ ಅದು ಕೇಂದ್ರಸರ್ಕಾರದ ಕೃಪಣತನವನ್ನು ತೋರಿಸುತ್ತದೆ. ಎಸ್ಸೆನ್‌ರೆಂದೂ ಪ್ರಶಸ್ತಿ ಪದವಿಗಳಿಗಾಗಿ ಹಾತೊರೆದವರಲ್ಲ; ಆದರೆ ನಾಯಕರ ಕರ್ತವ್ಯಲೋಪಕ್ಕೆ ಇದೊಂದು ಸಾಕ್ಷಿಯಾಗಿದೆ. ಭೌತಿಕ ದೇಹದಿಂದ ಕಣ್ಮರೆಯಾದ ನಂತರವಾದರೂ ಜನ ಅವರ ಜೀವನ ಸಂದೇಶವನ್ನು ನೆನೆದು, ಸಾಧ್ಯವಾದ ಮಟ್ಟಿಗಾದರೂ ಅನುಷ್ಠಾನಕ್ಕೆ ತಂದದ್ದಾದರೆ, ಅವರಿಗೆ ದೇಶ ಮಾಡಿರುವ ಅನ್ಯಾಯವನ್ನು ಸರಿಪಡಿಸಿದಂತಾಗುತ್ತದೆ; ಅವರ ಆತ್ಮಕ್ಕೆ ಶಾಂತಿ ದೊರೆಯಬಹುದಾಗಿದೆ!

ಚಿತ್ರದುರ್ಗ ಪ್ರದೇಶದ ನೀರಾವರಿ ಯೋಜನೆಗಳಿಗೆ ಅವರ ಹೆಸರಿಡುವ ಮುಖ್ಯಮಂತ್ರಿಗಳ ಘೋಷಣೆ ಸಮಂಜಸವಾಗಿದೆ. ಎಸ್ಸೆನ್‌ರವರಿಗೆ ಅದೊಂದು ಅಮೂಲ್ಯ ಸ್ಮಾರಕವಾಗುತ್ತದೆ. ನಿಜಲಿಂಗಪ್ಪನವರು ಮಾದರಿಯ ದಿನಚರಿ ಲೇಖಕರು. ಭರತಖಂಡದ ಇತಿಹಾಸ ರಚಿಸುವವರಿಗೆ ಅವರ ದಿನಚರಿಯೊಂದು ಆಕರ ಗ್ರಂಥವಾಗಿದೆ; ಅದು ಎಸ್ಸೆನ್‌ರವರ ಜೀವನಚರಿತ್ರೆಯ ತವನಿಧಿಯಾಗಿದೆ; ಅನೇಕ ಐತಿಹಾಸಿಕ ಘಟನೆಗಳ ಅಧಿಕೃತ ದಾಖಲಾತಿಯಾಗಿದೆ. ಅದನ್ನು ಸಂಪಾದಿಸಿ, ಪ್ರಕಟಿಸುವ, ಕನ್ನಡಕ್ಕೂ ಅದನ್ನು (ಇಂಗ್ಲಿಷಿನಲ್ಲಿದೆ) ಅನುವಾದಿಸುವ ಜವಾಬ್ದಾರಿ ನಾಗರಿಕ ಸರ್ಕಾರದ ಆದ್ಯಕರ್ತವ್ಯವೆಂದು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಬಹುದಾಗಿದೆ. ಸರ್ಕಾರದ ಮತ್ತು ಜನತೆಯ ಕೃತಜ್ಞತೆಯನ್ನು ಪರೀಕ್ಷಿಸುವ ಸಮಯವಿದೆಂದು ಸಜ್ಜನರು ಕಾಯಬಹುದಲ್ಲವೆ?

ಅಯ್ಯೋ, ಮೃತ್ಯು ನಿರ್ದಯಿಯಲ್ತೆ!

ಕೊಲೆ ಕೊಲೆ! ಸಂಸ್ಕೃತಿಯ ಕಗ್ಗೊಲೆ! ನಿಷ್ಕರುಣಿ ಮೃತ್ಯುವಿನಿಂದ ತಾಯಿ ಭಾರತಿಗಾದ ತವುದಲೆ! ಅಯ್ಯೋ, ಸಾಂಸ್ಕೃತಿಕ ಕರ್ನಾಟಕದ ಮತ್ತೊಂದು ಉಜ್ವಲ ತಾರೆ ಅಸ್ತಂಗತವಾಯಿತು! ಭವ್ಯ

ಕರ್ಣಾಟಕದ ಸ್ವರ್ಣಮಂದಿರದ ಕಳಶವೊಂದು ಕಳಚಿಹೋಯಿತು!

೨೫.೮.೨೦೦೦ನೆಯ ದಿನದಂದು ಅಪರಾಹ್ನ ೩. ಗಂಟೆ. ಆ ಹೊತ್ತಿಗೆ ನಾನು ಗೋಪಾಲಗೌಡ ಶಾಂತವೇರಿ ಆಸ್ಪತ್ರೆ ಸೇರಿ ೧೫ ದಿನಗಳಾಗಿವೆ. ನನ್ನನ್ನು ನೋಡಲು ಬಂದಿದ್ದ ಪ್ರಿನ್ಸಿಪಾಲ್ ಸೂರ್ಯನಾರಣಪ್ಪನವರು ಯಾವುಯಾವುದೋ ವಿಷಯ ಮಾತಾಡುತ್ತ, ಪ್ರಾಯಶಃ ತಮಗೆ ಅರಿವಿಲ್ಲದಂತೆ ೨೦.೮.೨೦೦೦ನೆಯ ದಿನದಂದು ಕುಶಿ ಹರಿದಾಸಭಟ್ಟರು ತೀರಿಕೊಂಡರು ಎಂದರು. ನನಗೆ ಆಘಾತದ ಮೇಲೆ ಆಘಾತ. ನಾನವರ ಮಾತನ್ನು ನಂಬಲಿಲ್ಲ. ಕುಶಿಯವರು ತೀರಿಕೊಂಡರೆ ? ಎಂದು ಮೂರ್‍ನಾಲ್ಕು ಬಾರಿ ಕೇಳಿದೆ. ಸೂರ್ಯನಾರಣಪ್ಪನವರ ಕಣ್ಣಲ್ಲಿ ನೀರು ತುಳುಕಿತು. ನನ್ನ ಕಣ್ಣು ಕತ್ತಲಿಸಿದಂತಾಯಿತು. ಹತ್ತಿರಿದ್ದವರಿಗೆ ಗಾಬರಿಯಾಯಿತು. ಎಲ್ಲರೂ ನನ್ನನ್ನು ಸಮಾಧಾನ ಪಡಿಸಲು ಪ್ರಯತ್ನಿಸುತ್ತಾರೆ. ಅತ್ತೆ,ಗೋಳ್ಗರೆದೆ. ನನಗೆ ಉಡುಪಿ ಪ್ರಿಯವಾದದ್ದು ಕೃಷ್ಣನಿಂದಲ್ಲ, ಕುಶಿ ಹರಿದಾಸಭಟ್ಟರಿಂದ . ಇನ್ನೆಲ್ಲಿಯ ಕುಶಿ? ಇನ್ನೆಲ್ಲಿಯ ಉಡುಪಿ? ಇಡೀ ದಿನ ರಾತ್ರಿ ಹರಿದಾಸ ಭಟ್ಟರು ನನ್ನ ತನುಮನಗಳನ್ನೆಲ್ಲ ಆಕ್ರಮಿಸಿಕೊಂಡರು.

ಕುಶಿಯವರ ಮರಣವಾರ್ತೆ ಮನೆಯವರಿಗೆ ಗೊತ್ತಿದ್ದರೂ , ನನಗೆ ತಿಳಿಸಲು ಧೈರ್ಯಮಾಡಲಿಲ್ಲ.೨೧.೮.೨೦೦೦ರಂದು ಸಂಜೆ ಮಾಜಿಮುಖ್ಯಮಂತ್ರಿ ಶ್ರೀ ವೀರಪ್ಪಮೊಯಿಲಿಯವರು ನನ್ನನ್ನು ನೋಡಲು ಬಂದಿದ್ದರು. ಮಂಗಳೂರಿಗೆ ಹೋಗಿದ್ದೆ , ಹರಿದಾಸಭಟ್ಟರನ್ನು ನೋಡಲು ಎಂದರು. ನೀವು ಪತ್ರಿಕೆಯನ್ನು ಓದುವುದಿಲ್ಲವೆ ಎಂದರು. ಮರುಕ್ಷಣವೇ ಪರಿಸ್ಥಿತಿಯನ್ನು ಗ್ರಹಿಸಿದ ಅವರು ಭಟ್ಟರು ಖಾಯಿಲೆಯಿದ್ದರು ಎಂದು ಮಾತು ಮುಗಿಸುವಷ್ಟರಲ್ಲಿ ನಾನು ಕಾತರತೆಯಿಂದ 'ಹೇಗಿದ್ದಾರೆ'? ಎಂದೆ. 'ಮನೆಗೆ ಹೋದರು' ಎಂದರು. ನಾನು ಆ ಮಾತಿನ ವಾಚ್ಯಾರ್ಥವನ್ನು ಮಾತ್ರ ಗ್ರಹಿಸಿದೆ. ನಿಜದ ಅರ್ಥವನ್ನು ಗ್ರಹಿಸಲಿಷ್ಟಪಡಲಿಲ್ಲ. ಆದರೂ ಏನೋ ಕಳವಳ, ಏನೋ ಗಾಬರಿ. ಕೆಲವು ನಿಮಿಷ ನಾಡಿ ಹೊಡೆದುಕೊಂಡದ್ದೂ ಉಂಟು.

ಬಹುಮುಖ ಪ್ರತಿಭೆಯ, ವಿಶಿಷ್ಟ ಅಕ್ಷಯ ಶಕ್ತಿಯ , ಜಗತ್ತಿನ ಮೈತ್ರಿಯನ್ನೆಲ್ಲ ಒಂದೆಡೆ ಕಂಡರಿಸಿದಂತಿದ್ದ, ನೈತಿಕೋನ್ನತಿಯ ಜೀವ ಭ್ರಷ್ಟಾಚಾರದ ಜಗತ್ತಿಗಲ್ಲವೆಂದು ಕರುಣಿ ಭಗವಂತನೇ ತನ್ನೆಡೆಗೆ ಕರೆದುಕೊಂಡನಲ್ಲವೆ ? ಕುಶಿಯವರನ್ನು ಮಹಾ ಶಿಕ್ಷಣ ತಜ್ಞನೆನ್ನಲೆ? ಶ್ರೇಷ್ಠ ಸಾಹಿತಿಯೆನ್ನಲೆ? ಉತ್ತಮ ಆಡಳಿತಗಾರನೆನ್ನಲೆ? ಅದ್ವಿತೀಯ ಸಂಘಟಕನೆನ್ನಲೆ? ಸರಸರಸಿಕ ಆತಿಥೇಯರೆನ್ನಲೆ? ಸುಜ್ಞಾನಿಯೆನ್ನಲೆ? ಯಕ್ಷಗಾನಕ್ಕೆ ವಿಶ್ವಮಾನ್ಯತೆಯನ್ನು ತಂದುಕೊಟ್ಟ ಜಾನಪದ ತಜ್ಞನೆನ್ನಲೆ ? ಕುಶಲವಾಗ್ಮಿಯೆನ್ನಲೆ? ವಿಶ್ವ ಕುಟುಂಬಿಯೆನ್ನಲೆ? ಸಂಸ್ಕೃತಿಯ ತವನಿಧಿಯೆನ್ನಲೆ;- ಅಹುದಹುದು, ಅವರು ಬಿಡಿಯಲ್ಲ, ಇಡಿಯಾಗಿದ್ದರು ; ಎಲ್ಲದರ ಮೊತ್ತವಾಗಿದ್ದರು; ಎಲ್ಲವೂ ಆಗಿದ್ದರು.

ಪರಮಾತ್ಮನ ಕರೆ ಅವರಿಗೆ ಗೊತ್ತಾಗಿರಬೇಕೆಂದು ತೋರುತ್ತದೆ, ಭಗವದಾಜ್ಞೆಯನ್ನು ಸಂಪೂರ್ಣವಾಗಿ ಈಡೇರಿಸಿದ ಕರ್ತವ್ಯನಿಷ್ಠರಂತೆ , ಜೀವನದ ಗುರಿಯನ್ನು ಇನಿತೂ ಊನವಿಲ್ಲದಂತೆ ಸಾಧಿಸಿದ ಸಂತೃಪ್ತಾತ್ಮರಂತೆ ಕುಶಿಯವರು ತಮ್ಮ ೭೬ನೆಯ ವಯಸ್ಸಿನಲ್ಲಿ ಇಹಲೋಕದ ಜವಾಬ್ದಾರಿಯನ್ನು ಯೋಗ್ಯರಿಗೆ ವಹಿಸಿ, ನಿಶ್ಚಿಂತರಾಗಿ, ದೈವಾಭಿಮುಖವಾಗಿ ನಡೆದೇ ಬಿಟ್ಟರು. ಧನ್ಯ ಧನ್ಯ ಸರ್ವಮಾನ್ಯ ಶಿವಹರಿದಾಸರೆ ! ನನ್ನ ಪುನರ್ಜನ್ಮ ಸಂಪ್ರಾಪ್ತಿ ಸಮಯದಲ್ಲಿ ನಿಮಗಿದೋ ವಂದನೆ ! ಓ ವಿಶ್ವಮಾನವರೆ, ಮಿತ್ರನೊಬ್ಬನ ಅಶ್ರುಜಲ ತರ್ಪಣವನ್ನು ಸ್ವೀಕರಿಸಿ! ಪುಸ್ತಕ ಪ್ರಪಂಚದ ನಮನಗಳನ್ನು ಒಪ್ಪಿಸಿಕೊಳ್ಳಿ!

ದೇಜಗೌ.

ವಯಸ್ಕರ ಶಿಕ್ಷಣ

ಸಿ. ಹನುಮೇಗೌಡ,
ನಿವೃತ್ತ ನಿರ್ದೇಶಕರು ನಂ. ೨೪೨೩,
೧ನೇ ಮುಖ್ಯರಸ್ತೆ ಆರ್. ಪಿ. ಸಿ.
ಲೇಔಟ್, ವಿಜಯನಗರ, ೨ನೇ ಹಂತ
ಬೆಂಗಳೂರು. ೫೬೦೦೪೦

ಶಾಲಾ ಶಿಕ್ಷಣದಿಂದ ವಿದ್ಯೆ ಕೊನೆಗಾಣುವುದಿಲ್ಲ, ಜೀವನಪರ್ಯಂತ ನಿರಂತರವಾಗಿ ಮನುಷ್ಯನಲ್ಲಿ ವಿದ್ಯೆಯಿಂದ ಬದಲಾವಣೆಯಾಗುತ್ತಿರುತ್ತದೆ. ಪ್ರತಿ ಕ್ಷಣವೂ ಪರಿವರ್ತನೆಯಾಗುತ್ತಿರುವ ಪ್ರಪಂಚವನ್ನು ಹಾಗೂ ಸಮಾಜದ ಜಟಿಲತೆಯನ್ನು ವಯಸ್ಕರು ಅರಿಯಬೇಕಾಗುತ್ತದೆ. ಆಧುನಿಕ ಉನ್ನತ ಶಿಕ್ಷಣವನ್ನು ಪಡೆದವರೂ ತಮ್ಮ ಶಿಕ್ಷಣವನ್ನು ಮುಂದುವರೆಸಲೇಬೇಕು. ಇಲ್ಲದಿದ್ದರೆ ಅದು ನಿರುಪಯುಕ್ತವಾಗುತ್ತದೆ. ಆರ್ಥಿಕ ಬೆಳೆವಣಿಗೆಯನ್ನು, ಸಾಮಾಜಿಕ ಪರಿವರ್ತನೆಯನ್ನು ಹಾಗೂ ರಾಷ್ಟ್ರದ ಸುಭದ್ರತೆಯನ್ನು ಬಯಸುವ ದೇಶಾಭಿಮಾನಿಗಳು, ರಾಷ್ಟ್ರ ಕೈಗೆತ್ತಿಕೊಂಡಿರುವ ಯೋಜನೆಗಳಲ್ಲಿ ಸಕ್ರಿಯವಾಗಿ, ಸತ್ವಯುತವಾಗಿ, ಶ್ರದ್ಧಾಪೂರ್ವಕವಾಗಿ ತಮ್ಮ ರಾಷ್ಟ್ರದ ನಾಗರೀಕರು ಭಾಗವಹಿಸುವಂತೆ ಮಾಡಬೇಕು. ಶಾಲಾ ಶಿಕ್ಷಣದಿಂದ ವಂಚಿತರಾಗಿರುವ ಅವಿದ್ಯಾವಂತ ಜನರ ಹಾಗೂ ನಿರ್ದಿಷ್ಟವಾದ ಗುರಿಯಿಲ್ಲದ ಶಿಕ್ಷಣವನ್ನು ಪಡೆದಿರುವ ಅರೆ ಅಕ್ಷರಸ್ಥರ ಸಮಾಜದಲ್ಲಿರುವ ಅವಿದ್ಯಾವಂತ ವಯಸ್ಕರಿಗೆ ಅತಿ ಜರೂರಾಗಿ ಶಿಕ್ಷಣವನ್ನು ಕೊಡಬೇಕಾಗಿದೆ. ಹೊಲದಲ್ಲಿ ಕೆಲಸ ಮಾಡುವ ರೈತರಿಗೆ, ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಹಾಗೂ ಇತರೆ ಉತ್ಪಾದನಾ ಕಾರ್ಯಗಳಲ್ಲಿ ನಿರತರಾಗಿರುವ ವಯಸ್ಕರಿಗೆ, ವೈಜ್ಞಾನಿಕವಾಗಿ ತಮ್ಮ ವೃತ್ತಿಯಲ್ಲಿ ಪರಿಪಕ್ವತೆಯನ್ನು ಪಡೆಯಲು ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ಶಿಕ್ಷಣ ಪಡೆಯುವುದು ಅತ್ಯಾವಶ್ಯಕ.

ರಾಷ್ಟ್ರಾಭ್ಯುದಯಕ್ಕೆ ಅವಶ್ಯಕವಾದ ಕಾರ್ಯಕ್ರಮಗಳಲ್ಲೂ ವಯಸ್ಕರು ಉತ್ಸಾಹಶಾಲಿಗಳಾಗಿ ಭಾಗವಹಿಸಬೇಕು. ದೇಶದ ಪ್ರಗತಿಗೆ ಆತಂಕಕಾರಿಯಾಗಿರುವ, ಮಿತಿಮೀರಿ ಹೆಚ್ಚುತ್ತಿರುವ ಜನಸಂಖ್ಯೆಯ ನಿಯಂತ್ರಣವನ್ನು ಬಲವಂತವಾಗಿಯಾಗಲಿ ಅಥವ ಪ್ರಬೋಧನೆಯಿಂದಾಗಲಿ ಮಾಡಲು ಸಾಧ್ಯವಾಗುವುದಿಲ್ಲ. ಅಡೆತಡೆಯಿಲ್ಲದೆ ಬೆಳೆಯುತ್ತಿರುವ ಜನಸಂಖ್ಯೆಯ ದುಷ್ಪರಿಣಾಮವನ್ನು ಜನತೆ ಅರಿಯಬೇಕು. ಜೀವನದ ತತ್ವವನ್ನರಿತು ವಯಕ್ತಿಕವಾಗಿ ಅದನ್ನು ಅನುಷ್ಠಾನಕ್ಕೆ ತಂದು ಮಿತ ಕುಟುಂಬ ಯೋಜನೆಯನ್ನು ಪ್ರತಿಯೊಬ್ಬರೂ ಸ್ವಇಚ್ಛೆಯಿಂದ ಜಾರಿಗೆ ತರಬೇಕು.

ಹಾಗೆಯೇ ದೇಶದ ರಕ್ಷಣೆಯನ್ನು ಯಾವ ರಾಷ್ಟ್ರವೂ ಪೊಲೀಸ್ ಅಥವ ಸೈನಿಕರಿಗೇ ಬಿಟ್ಟು ಕೈಕಟ್ಟಿಕೊಂಡು ಕೂಡುವಂತಿಲ್ಲ. ಜನರಿಗೆ ನಾವು ಕೊಟ್ಟಿರುವ ಶಿಕ್ಷಣ ಅವರು ಹೊಂದಿರುವ ಪರಿಸರದ ಪರಿಚಯ, ಅವರ ದೇಶಾಭಿಮಾನ, ಶಿಸ್ತು ಹಾಗೂ ರಕ್ಷಣಾ ಕಾರ್ಯದಲ್ಲಿ ಅವರ ಪಾತ್ರ, ಇವುಗಳು ದೇಶ ರಕ್ಷಣೆಗೆ ಅಡಿಗಲ್ಲು. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ನಾಗರೀಕನೂ, ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಯಶಸ್ವಿಯಾಗಿ ಭಾಗವಹಿಸಬೇಕಾದರೆ, ತನ್ನ ವೃತ್ತಿಯಲ್ಲಿ ನೈಪುಣ್ಯತೆಯನ್ನು ಬೆಳೆಸಿಕೊಳ್ಳಬೇಕಾದರೆ, ಹಾಗೂ ತನಗೆ ಬೇಕಾದ ಶಿಕ್ಷಣ ಜ್ಞಾನವನ್ನು ಪಡೆಯಬೇಕಾದರೆ ವಯಸ್ಕರ ಶಿಕ್ಷಣ ಅನಿವಾರ್ಯ. ಸಾಮಾನ್ಯ ಪರಿಸ್ಥಿತಿಯಲ್ಲಿ ವಯಸ್ಕರ ಶಿಕ್ಷಣದಲ್ಲಿ ಸಾರ್ವತ್ರಿಕ

ಸಾಕ್ಷರತೆಯೇ ಪ್ರಧಾನವಾಗಿರುತ್ತದೆ. ಬಹುತೇಕ ಅನಕ್ಷರಸ್ಥರಿರುವ ಸಮಾಜಕ್ಕೆ ಸಾಕ್ಷರತೆಯೂ ಅನಿವಾರ್ಯ. ವಯಸ್ಕರ ಶಿಕ್ಷಣದ ಅರ್ಥ ಸಾಕ್ಷರತೆಗೆ ಮಾತ್ರ ಸೀಮಿತ ವಾಗಿಲ್ಲ. ಆ ಶಿಕ್ಷಣದ ವ್ಯಾಪ್ತಿ ವಿಶಾಲವಾಗಿದೆ: ಜೀವನದಷ್ಟೇ ಆಳವಾಗಿದೆ.

ಸಾಮಾನ್ಯ ಶಾಲಾ ಶಿಕ್ಷಣಕ್ಕಿಂತ ವಯಸ್ಕರ ಶಿಕ್ಷಣ ವಿಭಿನ್ನವಾಗಿದೆ. ಇದರ ಪ್ರಗತಿಯ ಕಾರ್ಯಭಾರವನ್ನು ವಿಶ್ವವಿದ್ಯಾನಿಲಯಗಳು, ಸಾರ್ವಜನಿಕ ಸಂಸ್ಥೆಗಳು ಪುಸ್ತಕ ಭಂಡಾರ ಗಳು, ಶಾಲಾಕಾಲೇಜುಗಳು, ಸಾರ್ವ ಜನಿಕರು, ವಿದ್ಯಾವಂತ ಬಂಧು ಭಗಿನಿಯರು, ಅಧಿಕಾರಿಗಳು ಎಲ್ಲಕ್ಕಿಂತಲೂ ಹೆಚ್ಚಿನದಾಗಿ ಸರ್ಕಾರ ಹೊರಬೇಕಾಗುತ್ತದೆ. ಆಡಳಿತ ಗಾರರು ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಇದರ ಯಶಸ್ಸಿಗೆ ಶ್ರಮಿಸಬೇಕಾಗುತ್ತದೆ. ತಮ್ಮ ಕಾರ್ಯಕ್ಷೇತ್ರದಲ್ಲಿ ಸಂಬಂಧಿಸಿದ ಅಧಿಕಾರ ವರ್ಗ, ನಿರಕ್ಷರತೆಯನ್ನು ನಿರ್ಮೂಲ ಮಾಡಿ, ಮುಂದುವರೆದ ಶಿಕ್ಷಣಕ್ಕೆ ಆದ್ಯತೆ ಯನ್ನು ನೀಡಿ ಅಂಚೆ ಶಿಕ್ಷಣ ಪದ್ಧತಿಯನ್ನು ಅಳವಡಿಸಿ ಪುಸ್ತಕ ಭಂಡಾರಗಳ ವ್ಯವಸ್ಥೆ ಮಾಡಬೇಕು. ವಿಶ್ವವಿದ್ಯಾನಿಲಯಗಳು ಸಾಕಷ್ಟು ಸಾಹಿತ್ಯವನ್ನು ತಯಾರಿಸಿ ಸಾಕ್ಷರತಾ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಬೇಕು.

ಪ್ರಾಚೀನ ಸಾಕ್ಷರತಾ ಪದ್ಧತಿಯನ್ನೇ ಅನುಸರಿಸಿದಲ್ಲಿ ಪ್ರಗತಿ ನಿರೀಕ್ಷಿಸಿದ ಮಟ್ಟಕ್ಕೆ ಏರಲು ಸಾಧ್ಯವಿಲ್ಲ. ವೈಜ್ಞಾನಿಕ ರೀತಿಯಲ್ಲಿ ಸಾಕ್ಷರತೆಯನ್ನು ಸಾಧಿಸಬೇಕು. ಈಗಾಗಲೇ ರಾಷ್ಟ್ರ ಸಾರ್ವತ್ರಿಕ ಸಾಕ್ಷರತೆಯನ್ನು ಸಾಧಿಸದೆ ಸಾಕಷ್ಟು ತೆರಿಗೆಯನ್ನು ತೆತ್ತಿದೆ. ಅನಕ್ಷರಸ್ಥರಿಗೆ ತಮ್ಮ ಅಜ್ಞಾನದಿಂದ ಆದ ನಷ್ಟ ಅರಿವಾಗದೆ ಇದ್ದರೂ, ಅವರೂ ಹಾಗೂ ರಾಷ್ಟ್ರ ಸಾಕಷ್ಟು ಉಪದ್ರವವನ್ನು ಅನುಭವಿಸಿದ್ದಾರೆ. ಆಧುನಿಕ ಸನ್ನಿವೇಶಗಳು ಅನಕ್ಷರಸ್ಥರನ್ನು ತಿರಸ್ಕರಿಸು ತ್ತಿವೆ. ಅಲ್ಪ ಆದಾಯದಲ್ಲೇ ತೃಪ್ತನಾಗ ಬೇಕಾಗಿರುವ ಅನಕ್ಷರಸ್ಥ, ಆಧುನಿಕ ಸೌಲಭ್ಯ ಗಳಿಂದ ಆರ್ಥಿಕವಾಗಿ ವಂಚಿತನಾಗಿದ್ದಾನೆ; ಸಾಮಾಜಿಕವಾಗಿ ಕಲಿತವರ ಕೂಟದಿಂದ ಬಹಿಷ್ಕೃತ ನಾಗಿದ್ದಾನೆ; ರಾಜಕೀಯವಾಗಿ ಶೋಷಿತ ನಾಗಿದ್ದಾನೆ; ವೈಜ್ಞಾನಿಕವಾಗಿ ಮೂಕ ನಾಗಿದ್ದಾನೆ; ಅಂಧ ಸಂಪ್ರದಾಯಕ್ಕೆ ಶರಣಾ ಗಿದ್ದಾನೆ; ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ವ್ಯವಹಾರಗಳಲ್ಲಿ ಕುರುಡನಾಗಿ ದ್ದಾನೆ; ಅನಕ್ಷರಸ್ಥ ವಾಸ್ತವಿಕವಾಗಿ ಶತಮಾನ ಗಳಷ್ಟು ಹಿಂದೆ ಬಿದ್ದಿದ್ದಾನೆ. ಅನಕ್ಷರತೆ ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿಗೆ ಆತಂಕವನ್ನು ತಂದೊಡ್ಡುತ್ತಿರುವುದು ಕಣ್ಣಿಗೆ ಕಾಣುವ ವಿಷಯವಾಗಿದೆ. ಆರ್ಥಿಕಾಭಿವೃದ್ಧಿ, ಸಾಮಾಜಿಕ ಸುಧಾರಣೆ, ಜನಸಂಖ್ಯಾ ನಿಯಂತ್ರಣ, ರಾಷ್ಟ್ರೀಯ ಭಾವೈಕ್ಯತೆ, ರಾಷ್ಟ್ರ ರಕ್ಷಣೆ, ಆರೋಗ್ಯ ರಕ್ಷಣೆ, ಇವುಗಳ ಸಾಧನೆ ಅನಕ್ಷರಸ್ಥ ಸಮಾಜದಲ್ಲಿ, ಮರಳು ಕಾಡಿನಲ್ಲಿ ಕಾಣುವ ಮರೀಚಿಕೆಯಂತೆ ಇವೆ. ವಿದ್ಯಾವಂತ ರಾಷ್ಟ್ರ ಹಾಗೂ ಸಮಾಜ ಇವುಗಳನ್ನು ಸಾಧಿಸುವ ವೇಗದಲ್ಲಾಗಲಿ, ಮೌಲ್ಯದಲ್ಲಾಗಲಿ ಅಥವಾ ಸತ್ವದಲ್ಲಾಗಲಿ ; ಅನಕ್ಷರಸ್ಥ ರಾಷ್ಟ್ರ ಹಾಗೂ ಸಮಾಜ ಸಾಧಿಸಲಾರವು. ಆದ್ದರಿಂದ ವಯಸ್ಕರ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ಕೊಡಬೇಕು.

೬ನೇ ವಯಸ್ಸಿನಿಂದ ೧೪ನೇ ವಯಸ್ಸಿನ ಅಂತರದಲ್ಲಿರುವ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಬೇಕು. ಶಿಕ್ಷಣವನ್ನು ಪ್ರಾಥಮಿಕ ಶಾಲೆಗಳಲ್ಲಿ ಕಡ್ಡಾಯ ಮಾಡಿದರೆ ಅನಕ್ಷರ ತೆಯ ಸಮಸ್ಯೆ ಸುಲಭವಾಗಿ ಪರಿಹಾರವಾಗು ತ್ತದೆ. ಪ್ರಾಥಮಿಕ ಶಿಕ್ಷಣಕ್ಕೆ, ವಯಸ್ಕರ ಶಿಕ್ಷಣ ಪೂರಕವಾಗಿರಬೇಕು. ಆದರೆ ಇಂದಿನ ಪ್ರಾಥಮಿಕ ಶಿಕ್ಷಣ ಸತ್ವರಹಿತವಾಗಿದೆ. ಮಕ್ಕಳು ತಾವು ಕಲಿತ ಅಲ್ಪಸ್ವಲ್ಪ ವಿದ್ಯೆಯನ್ನು ಮುಂದುವರೆದ ಶಿಕ್ಷಣವಿಲ್ಲದೆ, ಮರೆತು ಮತ್ತೆ ಅನಕ್ಷರಸ್ಥರಾಗುತ್ತಿದ್ದಾರೆ. ರಾಷ್ಟ್ರಕವಿ ರವೀಂದ್ರ

ನಾಥ ಠಾಕೂರರ ಪ್ರಕಾರ, "ಒಂದು ಚಲಿಸುತ್ತಿರುವ ಹೊಗೆಯ ಬಂಡಿಯ ಪ್ರಜ್ವಲವಾದ ಬೆಳಕಿನಿಂದ ಗಾಢಾಂಧತೆಯಿಂದ ಕೂಡಿರುವ ಪ್ರದೇಶವು ಜ್ಯೋತಿರ್ಮಯವಾಗಿ ಹೊಗೆಯ ಬಂಡಿ, ಆ ಪ್ರದೇಶದಿಂದ ಮುಂದೆ ಹೋದಂತೆ, ಬೆಳಕಿನಿಂದ ಕೂಡಿದ್ದ ಆ ಕತ್ತಲೆಯ ಪ್ರದೇಶವು ಮತ್ತೆ ಗಾಢಾಂಧತೆಯಲ್ಲಿ ತುಂಬಿ ಮಕ್ಕಳು ಕಾಲೇಜಿನಲ್ಲಿರುವವರೆವಿಗೂ ವಿದ್ಯಾವಂತರಂತೆ ಕಂಡರೂ ಕಾಲೇಜಿನಿಂದ ಹೊರಬಂದ ನಂತರ ಮುಂದುವರೆದ ಶಿಕ್ಷಣದ ಅಭಾವದಿಂದ ಹಾಗೂ ಸತ್ವರಹಿತ ಶಿಕ್ಷಣದಿಂದ ಅಜ್ಞಾನ ಅವರನ್ನು ಆವರಿಸುತ್ತದೆ. ಮಕ್ಕಳು ಪಡೆಯುವ ಶಿಕ್ಷಣದ ಸತ್ವವೂ ಹೆಚ್ಚಬೇಕು. ಅಷ್ಟೇ ಅಲ್ಲದೆ ಶಾಲೆಯನ್ನು ಬಿಟ್ಟ ಮಕ್ಕಳಿಗೆ, ಅಸಂಪ್ರದಾಯ ಶಿಕ್ಷಣವನ್ನು, ಅವರ ಬಿಡುವಿನ ವೇಳೆಯಲ್ಲಿ ಕೊಡಬೇಕು. ಕ್ರಿಯಾತ್ಮಕ ಸಾಕ್ಷರತೆಯನ್ನು ವಯಸ್ಕರಿಗೆ ಕೊಡುವ ವ್ಯವಸ್ಥೆಯಾಗಬೇಕು. ಕ್ರಿ.ಶ.೨೦೦೦ ವರ್ಷ ಮುಟ್ಟುವುದರೊಳಗಾಗಿ ದ್ವಿಗುಣ ಶಕ್ತಿಯಿಂದ ಸಾಮೂಹಿಕ ಸಾಕ್ಷರತಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಪ್ರಗತಿಯನ್ನು ಸಾಧಿಸಬೇಕು. ಇದರರ್ಥ ಇದುವರೆವಿಗೂ ಇಂತಹ ಕಾರ್ಯಕ್ರಮಗಳನ್ನು ಕೈಗೊಂಡಿಲ್ಲವೆಂದಲ್ಲ. ಪ್ರಾಂತೀಯವಾಗಿ ಹಾಗೂ ಸ್ಥಳೀಯವಾಗಿ ಸಾಕ್ಷರತಾ ಯೋಜನೆಗಳನ್ನು ಕೈಗೊಳ್ಳಲಾಗಿತ್ತು. ಆದರೂ ಅವು ಅಷ್ಟು ಯಶಸ್ವಿಯಾಗಿಲ್ಲ. ಕಾರಣವೇನೆಂದರೆ, ಸಾಕ್ಷರತಾ ತರಗತಿಗಳನ್ನು ನಿಗದಿತ ಸಂಖ್ಯೆಗಳಲ್ಲಿ ತೆಗೆದುಕೊಳ್ಳಲಾಗಿತ್ತು. ಅವು ಒಂದೇ ಸ್ಥಳದಲ್ಲಿರದೆ ಚದುರಿದ್ದವು. ಹೊಂದಾಣಿಕೆ ಹಾಗೂ ಸಹಕಾರವಿಲ್ಲದೆ ಯಶಸ್ವಿಯಾಗಲಿಲ್ಲ. ಸ್ಥಳೀಯ ಸಂಸ್ಥೆಗಳು, ಸರ್ಕಾರಿ ಕೇಂದ್ರಗಳು, ತಮ್ಮ ತಮ್ಮ ಇಚ್ಛೆಯಂತೆ ಕೆಲಸ ಮಾಡುತ್ತಿದ್ದವು. ಆತುರವಾಗಿ ಪ್ರಾರಂಭಿಸಿದ ಆ ವಯಸ್ಕರ ಶಿಕ್ಷಣ ಕೇಂದ್ರಗಳಲ್ಲಿ ಉತ್ತಮ ಕಲಿಕೆಯ ಅಭಾವವಿತ್ತು ಹಾಗೂ ವಯಸ್ಕರ ಆವಶ್ಯಕತೆಗನುಗುಣವಾಗಿ ಶಿಕ್ಷಣ ದೊರಕುತ್ತಿರಲಿಲ್ಲ ಹಾಗೂ ಸತ್ವವನ್ನು ಪರೀಕ್ಷಿಸುತ್ತಿರಲಿಲ್ಲ.

ಸತತವಾಗಿ ದೊರಕುವ ಬೆಂಬಲ ಹಾಗೂ ಉಪಯುಕ್ತ ಪುನಶ್ಚೇತನ ಕಾರ್ಯಕ್ರಮಗಳನ್ನು ಶ್ರದ್ಧಾಪೂರ್ವಕವಾಗಿ ಕೈಗೊಂಡಾಗ ಯೋಜನೆಗಳು ಯಶಸ್ವಿಯಾಗುತ್ತವೆ. ರಾಷ್ಟ್ರಾಭ್ಯುದಯವನ್ನು ನಿರೀಕ್ಷಿಸುವ ಪ್ರತಿ ನಾಗರೀಕನೂ, ಕಾರ್ಖಾನೆಗಳಲ್ಲಿ ನವೀಕರಣ, ವ್ಯವಸಾಯದಲ್ಲಿ ಆಧುನೀಕರಣ ಹಾಗೂ ರಾಷ್ಟ್ರಾಭ್ಯುದಯ ಚಟುವಟಿಕೆಗಳು ೧೫ ವರ್ಷದಿಂದ ೩೫ ವರ್ಷದ ವಯೋಮಿತಿಯಲ್ಲಿರುವ ಅನಕ್ಷರಸ್ಥ ಕಾರ್ಯಪಡೆಯ ("ವರ್ಕ್‌ಫೋರ್ಸ್") ವಶದಲ್ಲಿರುವುದನ್ನರಿತಾಗ ಅನಕ್ಷರತೆಯಿಂದಾಗುವ ಅನಾಹುತ ಎಷ್ಟು ಭೀಕರವಾಗಿದೆ ಎಂಬುದು ಅರ್ಥವಾಗುತ್ತದೆ. ಅಷ್ಟೇ ಅಲ್ಲದೆ ಅನಕ್ಷರಸ್ಥ ಜನತೆ ಯಾವುದೇ ವೈಜ್ಞಾನಿಕ ಬದಲಾವಣೆಯನ್ನು ಸ್ವಾಗತಿಸದೆ, ಅನಾದಿಕಾಲದಿಂದ ಬಂದಿರುವ ಹಳೆಯ ಪದ್ಧತಿಯನ್ನೇ ಅನುಸರಿಸುತ್ತದೆ. ವೈಜ್ಞಾನಿಕ ಪದ್ಧತಿಯನ್ನು ಅನುಸರಿಸಲು ಸಿದ್ಧವಿರದ ಮನಸ್ಸಿನ ಮೇಲೆ ಹೊಸ ಪದ್ಧತಿಯನ್ನು ಹೇರಿದರೂ ಅದನ್ನು ಗ್ರಹಿಸಲು ಅದು ಸಿದ್ಧವಿರುವುದಿಲ್ಲ. ಅದನ್ನು ತಿರಸ್ಕರಿಸುತ್ತದೆ. ತರಬೇತಿಯಿಲ್ಲದೆ ಆಧುನಿಕ ಪದ್ಧತಿಯನ್ನು ರಕ್ತಗತ ಮಾಡಿಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲ. ಅನಕ್ಷರಸ್ಥರು ಪ್ರಜಾಪ್ರಭುತ್ವದ ತತ್ವವನ್ನರಿತು ಯಶಸ್ವಿಯಾಗಿ ರಾಷ್ಟ್ರದ ಆಡಳಿತದ ಹೊರೆಯನ್ನು ಹೊರಲು ಅಸಮರ್ಥರಾಗಿರುತ್ತಾರೆ. ಯಾವ ಜ್ವಲಂತ ಸಮಸ್ಯೆಗಳನ್ನು ಅರಿಯಲು ಅಶಕ್ತರಾಗಿರುತ್ತಾರೆ. ಆದ್ದರಿಂದ ಪ್ರಜಾಪ್ರಭುತ್ವ ತತ್ವಗಳನ್ನು ಯಶಸ್ವಿಗೊಳಿಸಲು ಸಮರ್ಥರಾಗುತ್ತಾರೆ. ಪ್ರತಿಯೊಬ್ಬನೂ, ಮಕ್ಕಳಾಗಲಿ ಅಥವ

ವಯಸ್ಕರಾಗಲಿ, ಶಿಕ್ಷಣವನ್ನು ಪಡೆಯುವುದು ಅವರ ಹಕ್ಕು. ಅಂಥ ಪದ್ಧತಿಯನ್ನನುಸರಿಸಲು ನೆರವಾಗಿರುವ ಅನಕ್ಷರತೆ ಭಾರತದ ಕಳಂಕ ಹಾಗೂ ಪ್ರಜಾಪ್ರಭುತ್ವದ ತೇಜೋವಧೆ, ಅನಿಷ್ಟ, ಅನಕ್ಷರತೆಯಿಂದು ರಾಷ್ಟ್ರೀಯ ಜೀವನದ ಮೇಲೆ, ಆರ್ಥಿಕಾಭಿವೃದ್ಧಿಯಿಲ್ಲದೆ ಹಾಗೂ ಸಾಮಾಜಿಕ ಸುಧಾರಣೆಯಿಲ್ಲದೆ, ಭೀಕರ ಪರಿಣಾಮ ಉಂಟಾಗುತ್ತದೆ. ಇದನ್ನು ರಾಷ್ಟ್ರದ ನಾಯಕತ್ವ ಅರಿಯಬೇಕು. ಈ ಪರಿಸ್ಥಿತಿಯನ್ನು ತಡೆಗಟ್ಟಲು ರಾಷ್ಟ್ರಾದ್ಯಂತ ವ್ಯಾಪಕವಾದ ಹಾಗೂ ಹೊಂದಾಣಿಕೆಯಿಂದ ಕೂಡಿದ ಸಮಗ್ರ ಆಂದೋಳನವನ್ನು ಪ್ರಾರಂಭಿಸಿ ಸತತ ಪ್ರಯತ್ನ ನಡೆಸಿದಲ್ಲಿ ಅನಕ್ಷರತೆಯನ್ನು ತೊಡೆದು ಹಾಕಬಹುದು. ಇದರಿಂದ ರಾಷ್ಟ್ರೀಯ ಜೀವನವನ್ನು ಉತ್ತಮಪಡಿಸಲು ರಾಜಕೀಯ ಹಾಗೂ ಸಾಮಾಜಿಕ ಸುಧಾರಕರು, ಸರ್ಕಾರದ ಪ್ರತಿನಿಧಿಗಳು, ಸ್ವಯಂ ಸೇವಕರು, ವ್ಯವಸ್ಥಾಪಕ ಮಂಡಲಿಯವರು, ವಿದ್ಯಾವಂತ ಬಂಧು ಭಗಿನಿಯರು, ಶಿಕ್ಷಣ ಹಾಗೂ ಇತರೆ ಇಲಾಖೆಗಳು ಒಂದೇ ನಿಟ್ಟಿನ ಅಚಲ ಮನಸ್ಸಿನಿಂದ ಸಾಕ್ಷರತಾ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು. ಇಷ್ಟೆಲ್ಲಾ ಆದರೂ ಕಲಿಯಲಿಚ್ಛಿಸುವ ಅನಕ್ಷರಸ್ಥರು ಪ್ರೇರೇಪಿತರಾಗದಿದ್ದಲ್ಲಿ ಉಳಿದ ಪ್ರಯತ್ನಗಳೆಲ್ಲಾ ನಿರರ್ಥಕವಾಗುತ್ತವೆ. ಇದನ್ನು ಸಾಧಿಸಲು ಹೊರಟಿರುವ ಮಾರ್ಗ ದುರ್ಗಮವಾಗಿದೆ. ಅಂಧಕಾರದಿಂದ ಕೂಡಿದೆ. ಉತ್ಸಾಹಕ್ಕೆ ಭಂಗ ತರುವ ಪ್ರತಿಕೂಲ ಪ್ರಯತ್ನಗಳು ಹೇರಳವಾಗಿವೆ. ಇವುಗಳನ್ನು ಭೇದಿಸಿಕೊಂಡು ಹೋದಾಗ ಮಾತ್ರ ನಾವು ನಮ್ಮ ಗುರಿಯನ್ನು ಮುಟ್ಟಬಹುದು. ಆದಕ್ಕೆ ತಮ್ಮನ್ನು ತಾವೇ ಸಮರ್ಪಿಸಿಕೊಂಡಿರುವ ಉತ್ಸಾಹಿ ಕಾರ್ಯಕರ್ತರು ಬೇಕಾಗಿದ್ದಾರೆ. ರಷ್ಯಾದಲ್ಲಿ ಕ್ರಾಂತಿಯ ನಂತರ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವ ಕಾರ್ಯಕ್ರಮ ಪ್ರಾರಂಭವಾಯಿತು. ಕುಗ್ಗದ ರಷ್ಯಾದ ನಾಯಕರ ದೃಢ ಸಂಕಲ್ಪ ರಾಷ್ಟ್ರೀಯ ಸಾಕ್ಷರತೆಯನ್ನು ಸಾಧಿಸಿದುದಕ್ಕಿಂತ ಮಿಗಿಲಾದ ಫಲವನ್ನು ರಾಷ್ಟ್ರಕ್ಕೆ ದೊರಕಿಸಿತು. ಇದರಿಂದ ಸಾಮಾಜಿಕ ಸುಧಾರಣೆ, ಆರ್ಥಿಕ ಪದ್ಧತಿಯ ಪರಿವರ್ತನೆ ಹಾಗೂ ರಾಷ್ಟ್ರೀಯ ಘನತೆ ಹೆಚ್ಚಿತು. ಭಾರತದಲ್ಲೂ ರಷ್ಯಾದ ನಾಯಕತ್ವ ತೆಗೆದುಕೊಂಡ ಕ್ರಮದಷ್ಟೇ ಕಾರ್ಯಕ್ರಮವನ್ನು ತೆಗೆದುಕೊಂಡು ಅಷ್ಟೇ ದೃಢತೆಯಿಂದ, ವಿಚಲರಾಗದೆ, ಸಾಗಿದಲ್ಲಿ ಫಲ ದೊರಕುವುದು ಖಚಿತ.

ಯೋಜನೆ ಯಶಸ್ವಿಯಾಗಬೇಕಾದರೆ ಪೂರ್ವಸಿದ್ಧತೆ ಅನಿವಾರ್ಯ. ಸಾಮಾಜಿಕ ಕಾರ್ಯಕ್ರಮ, ಸಾಹಿತ್ಯ ರಚನೆ, ಅನಕ್ಷರಸ್ಥರ ನೊಂದಣಿ, ಕಾರ್ಯಕರ್ತರಿಗೆ ತರಬೇತಿ ಕಾರ್ಯಕ್ರಮ, ಬೋಧನಾ ಸಾಮಗ್ರಿಗಳ ಸರಬರಾಜು, ತರಗತಿ ನಡೆಸುವ ಸ್ಥಳಗಳ ವ್ಯವಸ್ಥೆ, ಸೂಕ್ತ ಅನುಕೂಲಕರ ಸನ್ನಿವೇಶ, ಪಠ್ಯ ಪುಸ್ತಕಗಳನ್ನು ಒದಗಿಸುವುದು, ಬೆಳಕಿನ ವ್ಯವಸ್ಥೆ, ಬೋಧನಾ ಸಲಕರಣೆಗಳನ್ನು ಪೂರ್ವಭಾವಿಯಾಗಿ ಸಿದ್ಧಪಡಿಸಿಕೊಳ್ಳುವುದು ಹಾಗೂ ಸಾರ್ವಜನಿಕರಿಂದ ಪ್ರೋತ್ಸಾಹ ಮತ್ತು ಬೆಂಬಲ, ಬಹುಮುಖ್ಯವಾದುವುಗಳು. ನಿಗದಿತ ಕಾಲದಲ್ಲಿ ಯೋಜನೆ ಪೂರ್ಣಗೊಳ್ಳಬೇಕು. ಸುಮಾರು ಹತ್ತು ಹದಿನೈದು ವರ್ಷಗಳೊಳಗಾಗಿ ಸಂಪೂರ್ಣ ವಾಗಿ ಸಾಕ್ಷರತೆಯನ್ನು ಸಾಧಿಸಬೇಕು. ಬಹಳ ಹಿಂದುಳಿದ ಪ್ರದೇಶವಾದರೂ ೨೦ ವರ್ಷಗಳಿಗಿಂತ ಹೆಚ್ಚು ಅವಧಿಯನ್ನು ತೆಗೆದುಕೊಳ್ಳಬಾರದು.

ಸಾಕ್ಷರತೆಯ ಕಾರ್ಯಕ್ರಮವನ್ನು ಕೇವಲ ಓದುವುದು ಬರೆಯುವುದಕ್ಕೆ ಸೀಮಿತಗೊಳಿಸುವಂತಿಲ್ಲ. ಸಾಕ್ಷರತೆ ಕ್ರಿಯಾತ್ಮಕವಾಗಿರಬೇಕು. ಸಾಕಷ್ಟು ವಿಷಯಗಳನ್ನು ತಿಳಿದುಕೊಂಡು ತನ್ನ ಉದ್ಧಾರವನ್ನು ತಾನೇ ಮಾಡಿಕೊಳ್ಳುವಂತಿರಬೇಕು. ಅನಕ್ಷರಸ್ಥರ ಮನೋಭಾವನೆ ಹಾಗೂ ಉತ್ಸಾಹವನ್ನು

ಕೆರಳಿಸುವಂತಿರಬೇಕು. ಕಾರ್ಯಕೌಶಲ್ಯವನ್ನು ವೃದ್ಧಿಗೊಳಿಸುವಂತಿರಬೇಕು, ಕ್ರಿಯಾತ್ಮಕ ಕಾರ್ಯಕ್ರಮವನ್ನು ಕೈಗೊಳ್ಳಬೇಕು, ಅವರ ದಿನನಿತ್ಯದ ಕೆಲಸಕ್ಕೆ ಕಲಿಕೆ ನೆರವಾಗುವಂತಿರಬೇಕು. ಜಟಿಲವಾದ ಜ್ವಲಂತ ರಾಷ್ಟ್ರೀಯ ಸಮಸ್ಯೆಗಳನ್ನು ಅರಿಯುವಂತೆ ಹಾಗೆ ತಮ್ಮ ತಮ್ಮ ಮಟ್ಟದಲ್ಲಿ ಸಮಸ್ಯೆಯ ಪರಿಹಾರಕ್ಕೆ ಸಾಧ್ಯವಾದ ನೆರವು ನೀಡುವಂತಿರಬೇಕು. ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಯಶಸ್ವಿಯಾಗಿ ಭಾಗವಹಿಸುವಂತಿರಬೇಕು. ಅನಕ್ಷರಸ್ಥರ ಕಲಿಕೆ ಅವರು ಮುಂದಿನ ಶಿಕ್ಷಣವನ್ನು ಮುಂದುವರೆಸುವಂತಿರಬೇಕು.

ಸಾಕ್ಷರತಾ ಕಾರ್ಯಕ್ರಮ ಪ್ರಾರಂಭದಲ್ಲಿ ಓದುವುದು, ಬರೆಯುವುದು, ಸ್ವಲ್ಪಮಟ್ಟಿಗೆ ಗಣಿತವನ್ನು ಮಾಡುವಂತಿರಬೇಕು ಹಾಗೂ ರಾಷ್ಟ್ರೀಯ ಮತ್ತೆ ಸಾಮಾಜಿಕ ಸಮಸ್ಯೆಗಳನ್ನು ಅರಿಯುವಂತಿರಬೇಕು. ಎರಡನೇಯ ಹಂತದಲ್ಲಿ ಆಳವಾದ ಜ್ಞಾನವನ್ನು ಪಡೆದು, ಕಾರ್ಯಕೌಶಲ್ಯ ಬೆಳೆಸಿಕೊಳ್ಳುವಂತಿರಬೇಕು ಹಾಗೂ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವಂತಿರಬೇಕು. ಮೂರನೆಯ ಹಂತದಲ್ಲಿ ಉನ್ನತ ಶಿಕ್ಷಣವನ್ನು ಪಡೆಯುವಂತಿರಬೇಕು.

ಸಾಕ್ಷರತಾ ಕಾರ್ಯಕ್ರಮ ನೀರಿಕ್ಷಿಸಿದ ಫಲ ಕೊಡಬೇಕಾದರೆ ಅನಕ್ಷರಸ್ಥರ ಸಂಖ್ಯೆ ಬೆಳೆಯದಂತೆ ನೋಡಿಕೊಳ್ಳಬೇಕು. ಪ್ರಾಥಮಿಕ ಶಾಲೆಗಳಲ್ಲಿ ೬ ರಿಂದ ೧೪ವರ್ಷ ವಯೋಮಿತಿಯಲ್ಲಿರುವ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಬೇಕು. ಶಾಲೆಯನ್ನು ಬಿಟ್ಟು ಮನೆ ಕೆಲಸಗಳಲ್ಲಿ ಭಾಗವಹಿಸುವ ಮಕ್ಕಳಿಗೆ ಅರೆಕಾಲಿಕ ಶಿಕ್ಷಣವನ್ನು ಕೊಟ್ಟು, ಅವರು ಕಲಿತುದುದನ್ನು ಮರೆಯದಂತೆ ನೋಡಿಕೊಳ್ಳಬೇಕು. ೧೫ ವರ್ಷದಿಂದ ೩೫ ವರ್ಷದ ವಯೋಮಿತಿಯ ತರುಣರಿಗೆ ಅರೆಕಾಲಿಕ ಕ್ರಿಯಾತ್ಮಕ ಸಾಕ್ಷರತಾ ಕಾರ್ಯಕ್ರಮವನ್ನು ಮುಂದುವರಿಸಬೇಕು.

ಭೌಗೋಳಿಕ ಹಾಗೂ ಸಾಮಾಜಿಕ ಪರಿಸ್ಥಿತಿಯ ಬದಲಾವಣೆಗನುಗುಣವಾಗಿ, ಸಾಕ್ಷರತಾ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಈ ಕಾರ್ಯಕ್ರಮವನ್ನು ಎರಡು ಹಂತಗಳಲ್ಲಿ ಕೈಗೊಳ್ಳಬಹುದು. ಒಂದನೆಯದಾಗಿ ಆಯ್ಕೆ ಕ್ರಮ ಹಾಗೂ ಎರಡನೆಯದಾಗಿ ಜನಸಮೂಹ ಕ್ರಮ.

ಆಯ್ಕೆಯ ಕ್ರಮದಲ್ಲಿ ಸಾಕ್ಷರರಾಗಲು ಇಚ್ಛಿಸುವವರನ್ನು ಗುರ್ತಿಸಿ ಅವರನ್ನು ಪ್ರೇರೇಪಿಸಿ ಅವರಿಗೆ ಶಿಕ್ಷಣವನ್ನು ಕೊಡಬೇಕು. ಅವರಲ್ಲಾಗುವ ಪ್ರಗತಿಯನ್ನು ಸುಲಭವಾಗಿ ಗುರ್ತಿಸಬಹುದು. ವೃತ್ತಿಗೆ ಸಂಬಂಧಿಸಿದ ತರಬೇತಿಯನ್ನು ಕೊಡಬಹುದು. ಕೈಗಾರಿಕೆ ಹಾಗೂ ವ್ಯಾಪಾರಕ್ಕೆ ಸಂಬಂಧಿಸಿದ ಕ್ಷೇತ್ರಗಳಲ್ಲಿ ಶೇಕಡ ೪೦ರಷ್ಟು ಅವಿದ್ಯಾವಂತರಿದ್ದಾರೆ. ಇದೊಂದು ಬೃಹತ್ತರವಾದ ಜಟಿಲ ಸಮಸ್ಯೆಯಾಗಿದೆ. ಈ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಒಂದು ಕಾಲಮಿತಿಯಲ್ಲಿ ಮಾಡುವುದು ಆ ಸಂಸ್ಥೆಯ ವ್ಯವಸ್ಥಾಪಕರ ಪೂರ್ಣ ಜವಾಬ್ದಾರಿಯೆಂದು ಅವರಿಗೆ ತಿಳಿಸಬೇಕು. ಅನಕ್ಷರಸ್ಥರಿಗೆ ಪ್ರೋತ್ಸಾಹದಾಯಕ ಆರ್ಥಿಕ ನೆರವನ್ನೂ ನೀಡಬಹುದು. ಬೋಧನಾ ಹಾಗೂ ಕಲಿಕೆಯ ಸಾಮಗ್ರಿಗಳನ್ನು ಸರ್ಕಾರವೇ ತನ್ನ ಸ್ವಂತ ಖರ್ಚಿನಲ್ಲಿಯೇ ಅವರಿಗೆ ಒದಗಿಸಬೇಕು. ಇದರಿಂದ ವಯುಕ್ತಿಕವಾಗಿ ಅನಕ್ಷರಸ್ಥರಿಗೆ ಸಹಾಯವಾಗುವುದಲ್ಲದೆ ಸಂಬಂಧಿಸಿದ ಕಾರ್ಖಾನೆಯ ವ್ಯಾಪಾರದ ಮಾಲೀಕರಿಗೂ, ಉತ್ಪಾದನೆ ಹೆಚ್ಚಿ, ಲಾಭದಾಯಕವಾಗುತ್ತದೆ. ಬೃಹತ್ ಕೈಗಾರಿಕೆಗಳಲ್ಲಿ ಈ ಕಾರ್ಯಕ್ರಮಗಳನ್ನು ಜರೂರಾಗಿ ಕೈಗೆತ್ತಿಕೊಳ್ಳಬೇಕು. ಹಾಗೆಯೇ ಕಾರ್ಖಾನೆ, ವ್ಯವಸಾಯ, ವ್ಯಾಪಾರ, ಆರೋಗ್ಯ, ಶಿಕ್ಷಣ ಇತರೆ ಇಲಾಖೆಗಳಲ್ಲಿ ಇದೇ ವ್ಯವಸ್ಥೆಯಾಗಬೇಕಾಗಿದೆ. ಖಾದಿ ಇಲಾಖೆ, ಗ್ರಾಮೀಣ ಗೃಹ ಕೈಗಾರಿಕೆ, ಶಿಸು ಸಂರಕ್ಷಣಾ ಇಲಾಖೆ, ಸಾಮಾಜಿಕ

ಅಭಿವೃದ್ಧಿ ಇಲಾಖೆ, ಇವುಗಳಲ್ಲಿ ಸಹಸ್ರಾರು ಹೆಣ್ಣು ಮಕ್ಕಳು ಕೆಲಸ ಮಾಡುತ್ತಿರುವುದರಿಂದ ಅಲ್ಲಿರುವ ಅನಕ್ಷರಸ್ಥರಿಗೆ ಸಾಕ್ಷರತಾ ಕಾರ್ಯ ಕ್ರಮವನ್ನು ಕೈಗೆತ್ತಿಕೊಳ್ಳಬೇಕು.

ಜನಸಮೂಹಕ್ಕೂ ಸಾಕ್ಷರತಾ ಯೋಜನೆಯನ್ನು ಅಳವಡಿಸಬೇಕು. ರಾಷ್ಟ್ರದಲ್ಲಿರುವ ವಿದ್ಯಾವಂತ ಜನತೆ ಒಂದು ಕಾರ್ಯ ಪಡೆಯನ್ನು ನಿರ್ಮಿಸಿಕೊಂಡು ಯಶಸ್ವಿಯಾಗಿ ಆಂದೋಳನ ಚಳುವಳಿಯ ಮೂಲಕ ಜನತೆಯನ್ನು ಜಾಗೃತಗೊಳಿಸಿ ಅನಕ್ಷರತೆಯನ್ನು ನಿರ್ಮೂಲ ಮಾಡಬೇಕು. ಸಾಮೂಹಿಕ ಅನಕ್ಷರತೆ ನಿರ್ಮೂಲನಾ ಪದ್ಧತಿಯನ್ನು ರಷ್ಯಾದಲ್ಲಿ ಅನುಸರಿಸಿ ಅದ್ಭುತವಾದ ವಿಜಯವನ್ನು ಸಾಧಿಸಿದರು. ಸಾಮೂಹಿಕ ಸಾಕ್ಷರತಾ ಯೋಜನೆ ಯಶಸ್ವಿಯಾಗಬೇಕಾದರೆ, ಆಡಳಿತಾತ್ಮಕ ನಾಯಕತ್ವದ ಜೊತೆಗೆ ರಾಜಕೀಯ ಹಾಗೂ ಸಾಮಾಜಿಕ ನಾಯಕತ್ವಗಳ ಶ್ರದ್ಧೆ, ನಿಷ್ಕಳಂಕ ಪ್ರಯತ್ನ ಹಾಗೂ ಕಲಿಯಲಿಕ್ಕೆ ಅನಕ್ಷರಸ್ಥ ಅಚಲ ನಿರ್ಧಾರ ಬಹು ಮುಖ್ಯ. ಅನಕ್ಷರತೆಯ ದುಷ್ಪರಿಣಾಮವನ್ನು ಅರಿತವರು ಮಾತ್ರ ಇದರ ಬಗ್ಗೆ ಶ್ರದ್ಧೆ ತೋರಿಸುತ್ತಾರೆ. ಆಗ ಮಾತ್ರ ಭಾರತವನ್ನು ಸಾಕ್ಷರತಾ ರಾಷ್ಟ್ರವನ್ನಾಗಿ ಮಾಡವುದರಲ್ಲಿ ಸಂಶಯವೇನೂ ಇಲ್ಲ. ಪ್ರೇರಣೆಯಿಂದ ಕೆಲಸ ಮಾಡುವ ಸರ್ಕಾರಿ ಅಧಿಕಾರಿಗಳು, ಖಾಸಗೀ ವ್ಯವಸ್ಥಾಪಕ ಮಂಡಲಿಯವರ, ನಾಯಕರುಗಳ ದೃಢಸಂಕಲ್ಪದಿಂದ ಈ ಯೋಜನೆ ಯಶಸ್ವಿಯಾಗಬೇಕಾಗಿದೆ. ವಿಶೇಷವಾಗಿ ಶಾಲಾ ಉಪಾಧ್ಯಾಯ ಹಾಗೂ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಂದ ಸಾಕ್ಷರತಾ ಕಾರ್ಯ ಕ್ರಮ ಯಶಸ್ವಿಯಾಗಬೇಕಾಗಿದೆ. ಅವರ ಶ್ರದ್ಧೆ, ದೇಶಭಕ್ತಿ ಇವುಗಳ ಆಧಾರದ ಮೇಲೆ ಇದರ ಯಶಸ್ಸು ನಿರ್ಧರಿತವಾಗುತ್ತದೆ. ಪ್ರಾಥಮಿಕ ಶಾಲೆಗಳ, ಪ್ರೌಢಶಾಲೆಗಳ , ಪದವೀ ಪೂರ್ವ ಹಾಗೂ ಪದವೀ ಕಾಲೇಜುಗಳ, ತರಬೇತಿ ಕೇಂದ್ರಗಳ, ಶಿಕ್ಷಕ ಶಿಕ್ಷಕಿಯರು, ವಿದ್ಯಾರ್ಥಿ/ವಿದ್ಯಾರ್ಥಿನಿಯರು ದೃಢ ಸಂಕಲ್ಪಮಾಡಿ, ಈ ಕಾರ್ಯ ಕ್ಷೇತ್ರಕ್ಕೆ ಇಳಿಯಬೇಕು. ಅನಕ್ಷರಸ್ಥರ ಮನಒಲಿಸಿ ಈ ಯೋಜನೆಯನ್ನು ಯಶಸ್ವಿಗೊಳಿಸಬೇಕು. ವಯಸ್ಕರ ತರಗತಿಗಳಲ್ಲಿ ಬೋಧಿಸುವುದು ಅವರ ವಿಧಿಬದ್ಧವಾದ ಜವಾಬ್ದಾರಿಕೆಯಾಗಬೇಕು. ಒಂದು ಹಳ್ಳಿಯ ಅಥವಾ ಒಂದು ಪ್ರದೇಶದ ಜವಾಬ್ದಾರಿಕೆಯನ್ನು ಒಂದು ಶಾಲೆಯ ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಅವರ ಸಂಖ್ಯೆಗನುಗುಣವಾಗಿ ವಹಿಸಿಕೊಟ್ಟು, ಒಂದು ನಿರ್ದಿಷ್ಟವಾದ ಕಾಲದಲ್ಲಿ ಆ ಪ್ರದೇಶದ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡಬೇಕೆಂದು ಆದೇಶಿಸಬೇಕು.

ಹೀಗೆ ಮಾಡಿದಲ್ಲಿ ಶಾಲೆಯ ಕಾರ್ಯಕ್ರಮಗಳಿಗೆ ಒಂದು ಹೊಸ ತಿರುವು ದೊರಕುತ್ತದೆ. ಕೇವಲ ಮಕ್ಕಳನ್ನು ಸಾಕ್ಷರರನ್ನಾಗಿ ಮಾಡುವುದರ ಜೊತೆಗೆ ಇಡೀ ಪ್ರದೇಶವನ್ನೇ ವಿದ್ಯಾವಂತ ಪ್ರದೇಶವನ್ನಾಗಿ ಮಾಡಿದಂತಾಗುತ್ತದೆ. ಹೆಚ್ಚು ಹೆಚ್ಚು ಮಕ್ಕಳನ್ನು ಜನತೆ ಆಗ ಶಾಲೆಗೆ ಕಳುಹಿಸುತ್ತಾರೆ. ಒಂದು ಪ್ರದೇಶದ ಜನತೆಯ ಸಾಕ್ಷರತೆಯ ಕೇಂದ್ರವಾಗಿ ಶಾಲೆ ಪರಿವರ್ತನೆಗೊಳ್ಳುತ್ತದೆ. ಆಗ ಅದು ಮಕ್ಕಳ ಶಾಲೆಯಾಗಿರದೆ ಜನತೆಯ ಶಾಲೆಯಾಗುತ್ತದೆ. ವ್ಯಾಪಕ ಸೇವಾ ಕಾರ್ಯಗಳನ್ನು ಕೈಗೊಳ್ಳಲು ಅನುಕೂಲವಾಗುತ್ತದೆ. ಆ ಶಾಲೆ ಅನಕ್ಷರಸ್ಥರಿಗೆ ಪುಸ್ತಕಗಳನ್ನು , ರೇಡಿಯೋ, ಟಿ.ವಿ., ಪುಸ್ತಕ ಭಂಡಾರ, ಭಿತ್ತಿ-ಪತ್ರಿಕೆ , ಬೋಧನಾ ಹಾಗೂ ಕಲಿಕೆಯ ವಸ್ತುಗಳನ್ನು ಒದಗಿಸಬೇಕಾಗುತ್ತದೆ.

ಪೂರ್ವ ಯೋಜನೆ ಹಾಗೂ ಸಿದ್ಧತೆಗಳಿಲ್ಲದೆ, ಸಾಕ್ಷರತಾ ಆಂದೋಳನವನ್ನು ಪ್ರಾರಂಭಿಸಬಾರದು. ಪೂರ್ವಭಾವಿಯಾಗಿ ಅನಕ್ಷರಸ್ಥರ ಮೋಜಣಿಯಾಗಬೇಕು. ರಾಜಕೀಯ, ಸಾಮಾಜಿಕ, ನಾಯಕರುಗಳ ಒಲವು, ಸರ್ಕಾರಿ ಹಾಗೂ ಖಾಸಗೀ ಇಲಾಖೆಗಳ ಸಹಕಾರ ಬಹಳ ಮುಖ್ಯ. ಅನಕ್ಷರಸ್ಥರ ಪಟ್ಟಿಯ ಪ್ರಕಾರ ಅವನ್ನು ವಯಸ್ಕರ ಶಿಕ್ಷಣ ಶಾಲೆಗೆ ಸೇರಿಸಿಕೊಳ್ಳಬೇಕು.

ಸಾರ್ವಜನಿಕ ನಾಯಕರುಗಳ ಹಾಗೂ ಸಿಬ್ಬಂದಿ ವರ್ಗದವರ ತ್ಯಾಗದ ಆಧಾರದ ಮೇಲೆ ಈ ಯೋಜನೆಯ ಯಶಸ್ಸನ್ನು ಅಳೆಯಬಹುದು. ಜನತೆಯನ್ನು ಪ್ರೇರೇಪಿಸಲು, ರೇಡಿಯೋ, ದೂರದರ್ಶನ, ಪತ್ರಿಕೆಗಳು, ಸಾಕಷ್ಟು ಪ್ರಧಾನ ಪಾತ್ರ ವಹಿಸಬೇಕು. ಆಂದೋಳನವನ್ನು ಪ್ರಾರಂಭಿಸುವ ಮೊದಲೇ ಬೋಧನಾ ಹಾಗೂ ಕಲಿಕೆಯ ಸಾಮಗ್ರಿಗಳನ್ನು ತಯಾರಿಸಿರಬೇಕು. ಸಾಕ್ಷರತಾ ಕಾರ್ಯಕ್ರಮ ಆ ಪ್ರದೇಶದ ಅವಶ್ಯಕತೆಗನುಗುಣವಾಗಿರಬೇಕು. ಅನಕ್ಷರಸ್ಥರ ಕೌಶಲ್ಯ ಹಾಗೂ ಬುದ್ಧಿ ಚಾತುರ್ಯವನ್ನು ಕೆರಳಿಸುವಂತಿರಬೇಕು. ಸ್ಥಳೀಯ, ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಸಮಸ್ಯೆಗಳನ್ನವರು ಅರಿತು ಅವುಗಳನ್ನು ಸಾಧ್ಯವಾದ ಮಟ್ಟಿಗೆ ಪರಿಹರಿಸಲು ಅವರು ಸ್ಪಂದಿಸುವಂತಿರಬೇಕು. ಸಾಕ್ಷರತಾ ಕಾರ್ಯಕ್ರಮ, ನವಸಾಕ್ಷರರಿಗೆ ತಮ್ಮ ಶಿಕ್ಷಣವನ್ನು ಮುಂದುವರಿಸುವಂತಿರಬೇಕು ಹಾಗೂ ತಮ್ಮ ಸಮಸ್ಯೆಗಳನ್ನು ತಾವೇ ತಾವು ಪಡೆದ ಜ್ಞಾನದಿಂದ, ಬಗೆಹರಿಸಿಕೊಳ್ಳಲು ಸಮರ್ಥರಾಗಬೇಕು. ಉತ್ತಮವಾಗಿ ರೂಪಿಸ ಲಾದ ಹಿಂಬಾಲನಾ (ಫಾಲೋ ಅಫ್) ಕಾರ್ಯಕ್ರಮ ಅತಿಮುಖ್ಯ. ಕೇವಲ ಶಿಕ್ಷಕರಿಗೆ ಮಾತ್ರ ಈ ಜವಾಬ್ದಾರಿಕೆ ಹೊರಿಸಿದರೆ ಸಾಲದು, ಅವರಿಗೆ ವಿಸ್ತರಣಾಧಿಕಾರಿಗಳು ಸರ್ಕಾರಿ ಇಲಾಖೆಗಳ ಎಲ್ಲಾ ಅಧಿಕಾರಿಗಳು, ಖಾಸಗೀ ವ್ಯವಸ್ಥಾಪಕ ಮಂಡಲಿಯವರು, ಸಾರ್ವಜನಿಕರು, ರಾಜಕೀಯ ಹಾಗೂ ಸಾಮಾಜಿಕ ನಾಯಕರು, ಪುಸ್ತಕದ ವ್ಯವಸ್ಥಾಪಕರು, ಪುಸ್ತಕಗಳನ್ನು ನಿರಂತರವಾಗಿ ಒದಗಿಸಿ ಸಂಪೂರ್ಣವಾಗಿ ಸಹಕರಿಸಬೇಕು ಹಾಗೂ ಬೆಂಬಲಿಸಬೇಕು. ವ್ಯವಸ್ಥಿತವಾದ ತರಬೇತಿ ಕಾರ್ಯಕ್ರಮ ಇರಲೇಬೇಕು. ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ವಿದ್ಯಾರ್ಥಿ ಹಾಗೂ ಇತರೆ ವಿದ್ಯಾವಂತರಿಗೆ ಸೂಕ್ತ ಕಿರು ತರಬೇತಿ ಕೊಡಲು ಕಾರ್ಯಕ್ರಮವನ್ನು ಹಾಗೂ ಮೌಲ್ಯಮಾಪನವನ್ನು ಸಂಶೋಧನಾ ಇಲಾಖೆ ಕೈಗೆತ್ತಿಕೊಳ್ಳಬೇಕು. ಸಾಕ್ಷರತಾ ಕಾರ್ಯಕ್ರಮ ಮುಗಿದ ನಂತರ ಮುಂದುವರೆದ ಶಿಕ್ಷಣದ ಬಗ್ಗೆ ದೂರದೃಷ್ಟಿಯ ಆಲೋಚನೆಬೇಕಾಗುತ್ತದೆ. ಅಧ್ಯಯನ ತಂಡಗಳು, ಸಂಘಗಳು, ಕಾರ್ಯನಿರತವಾಗಿ ಸಾಕ್ಷರತೆಗೆ ಬೆಂಬಲ ಕೊಡಬೇಕು. ಸಾರ್ವಜನಿಕರು ಸಕ್ರಿಯವಾಗಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು.

ಹೆಣ್ಣು ಮಕ್ಕಳ ಶಿಕ್ಷಣ ನಿರಾಶಾದಾಯಕವಾಗಿದೆ. ಸಾರ್ವತ್ರಿಕಾಭಿಪ್ರಾಯದ ಪ್ರಕಾರ ಹೆಣ್ಣು ಮಕ್ಕಳು ವಿದ್ಯಾವಂತರಾಗದೆ ಸಾಕ್ಷರತಾ ಕಾರ್ಯಕ್ರಮ ಯಶಸ್ವಿಯಾಗಲಾರದು ಹಾಗೂ ಸಾಮಾಜಿಕ ಸುಧಾರಣೆಯಂತೂ ಅರಣ್ಯರೋಧನವಾಗಿಯೇ ಉಳಿಯುತ್ತದೆ. ಅನಕ್ಷರಸ್ಥ ಗೃಹಣಿಯರಿಗೆ ಸಾಕ್ಷರತಾ ಕಾರ್ಯಕ್ರಮವನ್ನು ತೆಗೆದುಕೊಂಡಿರುವುದು ಬಹಳ ಕಡಿಮೆ. ಹಳ್ಳಿಗಳಲ್ಲಿ ಗೃಹಣಿಯರು ಹೆಚ್ಚು ವಿದ್ಯಾವಂತರಾಗಿಲ್ಲ. ಹೆಂಗಸರಿಗೆ ಕಲಿಯಲು ಕಾಲಾವಕಾಶ ವಿಲ್ಲ ಹಾಗೂ ಇವರಿಗೆ ಪಾಠ ಬೋಧಿಸಲು ಶಿಕ್ಷಕಿಯರ ಅಭಾವವೂ ಇದೆ. ಶಾಲಾ ಮಕ್ಕಳ ಗೃಹಿಣಿಯರಿಗೆ ವಿರಾಮದ ವೇಳೆಯಲ್ಲಿ ಪಾಠ ಬೋಧಿಸಲು ಶಕ್ತರು. ಶಾಲಾ ಮಕ್ಕಳು ಪಾಠ ಬೋಧಿಸಲು ಯಾರಿಂದಲೂ ಆಕ್ಷೇಪಣೆಯಿರುವುದಿಲ್ಲ. ಶಾಲೆಗಳಿಗೆ ಹೆಣ್ಣು ಮಕ್ಕಳನ್ನೇ ಶಿಕ್ಷಕಿಯರನ್ನಾಗಿ ನೇಮಕ ಮಾಡಿ ಕೊಂಡರೆ, ಊರಿನಲ್ಲಿರುವ ಗೃಹಸ್ಥ ಅನಕ್ಷರಸ್ಥ ಹೆಂಗಸರಿಗೂ ಪಾಠ ಹೇಳಬಹುದು. ಅರೆಕಾಲಿಕ ಶಿಕ್ಷಣವನ್ನು ಪಡೆದ ಹೆಂಗಸರಿಗೆ ಸಂಕ್ಷಿಪ್ತ ಶಿಕ್ಷಣವನ್ನು ಕೊಡಬೇಕಾಗುತ್ತದೆ. ಶಿಕ್ಷಕಿಯು ಸ್ಥಳೀಯಳಾಗಿರಬೇಕು. ಆಕೆಗೆ ತರಬೇತಿಕೊಟ್ಟು ನವೀನ ಬೋಧನಾ ವಿಧಾನವನ್ನು ತಿಳಿಸಬೇಕು. ನಿವೃತ್ತ ಶಿಕ್ಷಕಿಯರನ್ನು

ಅರಿಸಿಕೊಳ್ಳಬಹುದು. ಅನಕ್ಷರಸ್ಥ ಸ್ತ್ರೀಯರು ಓದುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು. ಅವರ ಆರ್ಥಿಕ ಮಟ್ಟವನ್ನು ಸುಧಾರಿಸಲು ಸಾಕ್ಷರತೆ ಸಹಕಾರಿಯಾಗುತ್ತದೆ. ರೇಡಿಯೋ ಮತ್ತು ದೂರದರ್ಶನಗಳು ಸಾಕ್ಷರತಾ ಪ್ರಸಾರದ ಮೂಲಕ ನೆರವನ್ನು ನೀಡಬೇಕು. ಸಾಕ್ಷರತಾ ಚಳುವಳಿ ಒಂದಲ್ಲ ಒಂದು ರೀತಿಯಲ್ಲಿ ಸದಾಕಾಲ ಮುಂದುವರೆಯಲೇಬೇಕು. ನವ ಸಾಕ್ಷರರು ಮತ್ತೆ ಅನಕ್ಷರಸ್ಥರಾಗದಂತೆ ನೋಡಿ ಕೊಳ್ಳಬೇಕು. ಸಾರ್ವಜನಿಕ ಪ್ರಸಾರ ಮಾಧ್ಯಮಗಳು ಅಂದರೆ ಆಕಾಶವಾಣಿ, ದೂರದರ್ಶನ, ವರ್ತಮಾನ ಪತ್ರಿಕೆಗಳು ಸಾಕ್ಷರತಾ ಪ್ರಚಾರ ನಡೆಯುತ್ತಿರಬೇಕು. ಸಾಕ್ಷರತೆಯಿಂದ ಸಂತೋಷ ಹಾಗೂ ಸೌಲಭ್ಯ ಎರಡು ದೊರಕಬೇಕು. ನವಸಾಕ್ಷರರಿಗೆ ಉಪಯುಕ್ತವಾಗಿರುವ ಉದ್ಯೋಗಗಳ ಬಗ್ಗೆ ಅಂದರೆ ವ್ಯವಸಾಯ, ಗೃಹಕೈಗಾರಿಕೆ, ಹೈನು ಗಾರಿಕೆ, ಕೋಳಿ ಸಾಕಣೆ ಇತ್ಯಾದಿಗಳ ಬಗ್ಗೆ ಹಸ್ತ ಪ್ರತಿಗಳು, ದೈನಿಕ ಹಾಗೂ ಮಾಸಿಕ ಪತ್ರಿಕೆಗಳ ಮೂಲಕ ಪ್ರಚಾರವಾಗಬೇಕು. ಮಾರ್ಗಸೂಚಿ, ಸಾಹಿತ್ಯರಚನೆ, ಭೂಪಟಗಳ, ಚಾರ್ಟ್‌ಗಳ, ಮಾದರಿ ನಮೂನೆಗಳ, ಫಿಲ್ಮ್, ಫಿಲಂಸ್ಟ್ರಿಪ್ಸ್‌ಗಳ ಹಾಗೂ ದೃಕ್ ಶ್ರವಣ ಕ್ಯಾಸೆಟ್‌ಗಳ ರಚನೆ ಯಾಗಬೇಕು. ಈ ಸಾಮಗ್ರಿಗಳನ್ನು ತಯಾರಿಸ ದಿದ್ದಲ್ಲಿ ಸಾಕ್ಷರತಾ ಕಾರ್ಯಕ್ರಮಕ್ಕೆ ಧಕ್ಕೆ ಯುಂಟಾಗುತ್ತದೆ. ಕಲಿಯುವವರ ಭಾಷೆ ಭಿನ್ನವಾದ ಹಾಗೆ ಅವರವರ ಭಾಷೆಗಳಲ್ಲಿ ಸಾಹಿತ್ಯ ರಚನೆಯಾಗಬೇಕು. ಪ್ರತಿ ಪ್ರಾಂತ್ಯ ದಲ್ಲೂ ಅಲ್ಲಿಯ ಭಾಷೆಗೆ ಸಂಬಂಧಿಸಿದ ಹಾಗೆ ಸಾಹಿತ್ಯ ರಚನೆಗೆ ಒಂದೊಂದು ಕೇಂದ್ರವನ್ನು ಪ್ರಾರಂಭಿಸಬೇಕು. ಸ್ಥಳೀಯ ಹಾಗೂ ಜ್ವಲಂತ ಸಮಸ್ಯೆಗಳ ಬಗ್ಗೆ ಆ ಸಾಹಿತ್ಯ ರಚನೆ ಇರಬೇಕು. ಪುಸ್ತಕಗಳ ಬೆಲೆಯು ಕಡಿಮೆಯಾಗಿರಬೇಕು.

ಅನಕ್ಷರತೆಯನ್ನು ನಿರ್ಮೂಲ ಮಾಡಲು ಸಹಾಯಕವಾಗುವಂತೆ ಶಾಲಾ ಪದ್ಧತಿಯಲ್ಲಿ ವ್ಯವಸ್ಥೆ ಇರಬೇಕು. ಅತಿ ವೇಗದಲ್ಲಿ ಬದಲಾ ಗುತ್ತಿರುವ ಪರಿಸ್ಥಿತಿಗೆ ಹೊಂದಿಕೊಂಡು ತಾನು ಉತ್ತಮ ಜೀವನ ನಡೆಸಲು ಅನುಕೂಲ ವಾಗುವ ಸಾಹಿತ್ಯಬೇಕು.

ಹೊಸ ಪದ್ಧತಿಯ ಮುಂದುವರಿಕೆಯ ಶಿಕ್ಷಣ ಕೇವಲ ವಿಶಾಲವಾದ ಪೂರ್ಣಾವಧಿ ಶಿಕ್ಷಣವನ್ನು ಕೊಡುವುದರ ಜೊತೆಗೆ ವೃತ್ತಿಪರ, ಸಾಮಾಜಿಕ ಹಾಗೂ ಉಪಯುಕ್ತ ವಿಷಯಗಳ ಬಗ್ಗೆಯೂ ಮಾಹಿತಿಯನ್ನು ಕೊಡಬೇಕು. ಮುಂದುವರೆದ ರಾಷ್ಟ್ರಗಳಲ್ಲಿ ವಯಸ್ಕರ ಶಿಕ್ಷಣ ಅತಿಉಪಯುಕ್ತವಾದ ಹಾಗೂ ವೇಗದಲ್ಲಿ ವ್ಯಾಪಕವಾದ ಶಿಕ್ಷಣ ವಾಗಿದೆ. ಎರಡು ಪದ್ಧತಿಗಳ ಮೂಲಕ ಮುಂದುವರೆದ ಶಿಕ್ಷಣವನ್ನು ಕೊಡಬೇಕಾಗುತ್ತದೆ.

ವಿಶ್ವವಿದ್ಯಾನಿಲಯಗಳು , ಪ್ರಗತಿಪರ ಇಲಾಖೆಗಳು, ತಾಂತ್ರಿಕ, ವೃತ್ತಿಪರ, ಖಾಸಗೀ ಸಂಸ್ಥೆಗಳು ಹಾಗೂ ಪ್ರಾಜ್ಞ ಸಂಸ್ಥೆಗಳು ಕೊಡುವ ಅರೆಕಾಲಿಕ ಶಿಕ್ಷಣವನ್ನು ಕೊಡುತ್ತಿರು ವುವು ಮೊದಲನೆಯ ಪದ್ಧತಿಗೆ ಸೇರುತ್ತವೆ. ಮತ್ತೊಂದು ಪದ್ಧತಿಯೆಂದರೆ, ಮನೆಯಲ್ಲಿ ಕುಳಿತು ತಾವು ಕಲಿತುದುದನ್ನು ವಿರಾಮ ಕಾಲದಲ್ಲಿ ಮುಂದುವರೆಸಿಕೊಂಡು ಹೋಗು ವುದು, ಇದಕ್ಕೆ ಶಿಕ್ಷಕರ ಸಹಾಯ ಅವಶ್ಯಕ. ಹೀಗೆ ಮನೆಯಲ್ಲಿ ಕುಳಿತು ಕಲಿತವರೂ ವಿಶ್ವವಿದ್ಯಾನಿಲಯಗಳಲ್ಲಿ ಹೋಗಿ ಕಲಿಯ ಬಹುದು ಹಾಗೂ ವಿಜ್ಞಾನ ತಂತ್ರಜ್ಞಾನವನ್ನು ವ್ಯವಸಾಯ, ಕಾರ್ಖಾನೆ, ವ್ಯಾಪಾರ ಇತ್ಯಾದಿ ಕ್ಷೇತ್ರಗಳಲ್ಲಿ ಅಳವಡಿಸಿಕೊಳ್ಳಬಹುದು. ಹೆಚ್ಚು ವ್ಯಾಸಂಗ ಮಾಡಿ ವೃತ್ತಿಯಲ್ಲಿರುವವರೂ ತಮ್ಮ ಜ್ಞಾನವನ್ನು ತಮ್ಮ ಕ್ಷೇತ್ರದಲ್ಲಿ ವಿಸ್ತಾರಗೊಳಿಸಿ ಕೊಳ್ಳಬೇಕು. ಉದ್ದೇಶಿತ ಶಿಕ್ಷಣ, ಶ್ರೇಣಿ

ನಿಗಾಗಿ ತಯಾರಾದ ಪುಸ್ತಕದ ಸಾಹಿತ್ಯವನ್ನು ಸಕ್ರಿಯಿಂದ ನವಸಾಕ್ಷರರು ಓದುತ್ತಾರೆ. ಸಾಂಪ್ರದಾಯಕ ಶಿಕ್ಷಣವನ್ನು ಕೊಡುವ ಎಲ್ಲಾ ಶಾಲಾ ಕಾಲೇಜುಗಳು ಬಾಗಿಲನ್ನು ತೆರೆದು, ತಮ್ಮ ಶಾಲಾ ಅವಧಿಯ ನಂತರ ನವಸಾಕ್ಷರರಿಗೆ ಈ ಶಿಕ್ಷಣ ಕೊಡಬೇಕು. ಪ್ರಪಂಚದ ಎಲ್ಲಾ ರಾಷ್ಟ್ರಗಳಲ್ಲೂ ಈ ವಿಧಾನವನ್ನು ಅನುಸರಿಸ ಲಾಗುತ್ತದೆ. ನಮ್ಮ ರಾಷ್ಟ್ರದಲ್ಲಿ ವಿಶೇಷವಾಗಿ ಈ ಪದ್ಧತಿಯನ್ನು ಅನುಸರಿಸಲೇಬೇಕು. ಕಾರಣ ವೇನೆಂದರೆ ನಮ್ಮ ಜನ ಅಂಥ ವಿಶ್ವಾಸದಿಂದ ಕೂಡಿರುವ ತಮ್ಮ ಜೀವನವನ್ನು ಪರಿಪಕ್ವ ಮಾಡಿಕೊಳ್ಳಲು ಸಾಧ್ಯವಾಗಿಲ್ಲ. ರಾತ್ರಿ ಕಾಲೇಜುಗಳೂ ಈ ದಿಕ್ಕಿನಲ್ಲಿ ಕೆಲಸ ಮಾಡುತ್ತಾ, ಉತ್ತಮ ಫಲವನ್ನು ಪಡೆದಿವೆ. ಅದೇ ಪದ್ಧತಿ ಇಲ್ಲೂ ಅನ್ವಯವಾಗಬೇಕಾಗು ತ್ತದೆ. ಮಣ್ಣಿನ ಪರೀಕ್ಷೆ, ಬಿತ್ತನೆ ಬೀಜಗಳು ಮಕ್ಕಳ ಕ್ಷೇಮಾಭ್ಯುದಯ, ಪುಷ್ಟಿಕರವಾದ ಆಹಾರ ತಯಾರಿಕೆ, ಸಸ್ಯ ತಯಾರಿಕೆ ಇತ್ಯಾದಿ ಗಳಲ್ಲಿ ತರಬೇತಿಯನ್ನು ಕಡಿಮೆ ಕಾಲದಲ್ಲಿ ಕೊಡಬೇಕು. ನವಸಾಕ್ಷರ ರನ್ನು ಮನ ಒಲಿಸಿ ಅವರಲ್ಲಿ ಸ್ಫೂರ್ತಿ ತುಂಬಿ ಈ ಶಿಕ್ಷಣವನ್ನು ಪಡೆಯುವಂತೆ ಮಾಡಬೇಕು.

ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಯಕರ್ತರಿಗೂ ಹೆಚ್ಚು ಜ್ಞಾನವನ್ನು ತಮ್ಮ ಕಾರ್ಯಕ್ಷೇತ್ರದಲ್ಲಿ ಪಡೆದು ಕಾರ್ಯಕೌಶಲ್ಯ ವನ್ನು ಬೆಳೆಸಿಕೊಳ್ಳಲು ವ್ಯವಸ್ಥೆಯಾಗಬೇಕು. ಉತ್ಪಾದನಾ ಕ್ಷೇತ್ರದಲ್ಲಿರುವ ಇವರ ತಾಂತ್ರಿಕ ಜ್ಞಾನ ವಿಶಾಲವಾಗಲೇಬೇಕು. ಕಾರ್ಮಿಕರಿಗೂ ಅರೆಕಾಲಿಕ ಹಾಗೂ ಅಂಚೆ ಶಿಕ್ಷಣ ಕೊಡಲೇ ಬೇಕು. ಸರ್ಕಾರದ ಸಂಬಂಧಿಸಿದ ಇಲಾಖೆ ಗಳೂ ಈ ಕಾರ್ಯಕ್ರಮಗಳನ್ನು ಯಶಸ್ವಿ ಗೊಳಿಸಲು ಆರ್ಥಿಕ ನೆರವನ್ನು ನೀಡಿ ಸಹಕರಿಸ ಬೇಕು. ಮುಂದುವರೆದ ಶಿಕ್ಷಣವನ್ನು ಕಲಿಯ ಲಿಚ್ಛಿಸುವ ನವಸಾಕ್ಷರರಿಗೂ ಕೊಡಬೇಕು. ಶಿಕ್ಷಣ ಖಾತೆ, ಪಠ್ಯ ಪುಸ್ತಕಗಳನ್ನು, , ಶಿಕ್ಷಕರನ್ನೂ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸ ಬೇಕು. ಕಾರ್ಖಾನೆ ಕೆಲಸಗಾರರಿಗೆ ಎಚ್ಚರಿಕೆ ಯಿಂದ ಅಗತ್ಯವಾದ ಪಠ್ಯವಸ್ತುಗಳನ್ನೊಳಗೊಂಡ ಪಠ್ಯ ಪುಸ್ತಕಗಳನ್ನು ರಚಿಸಬೇಕು. ಕಾರ್ಮಿಕರ ಸಂಘ, ಉದ್ಯೋಗ ನಿಗಮಗಳ ಹಾಗೂ ವ್ಯವಸ್ಥಾಪಕ ಮಂಡಲಿಗಳ ಬಗ್ಗೆ ಹೇಳುವಾಗ ಎಚ್ಚರವಹಿಸ ಬೇಕಾಗುತ್ತದೆ. ಕಾರ್ಮಿಕರಿಗೆ ಕೊಡುವ ಶಿಕ್ಷಣ, ತಾಂತ್ರಿಕ ಹಾಗೂ ವೃತ್ತಿಪರ ಶಿಕ್ಷಣಕ್ಕಿಂತ ಭಿನ್ನವಾಗಿರ ಬಾರದು. ಅವರನ್ನು ಪ್ರತ್ಯೇಕವಾಗಿ ಪರಿಗಣಿಸ ಬಾರದು.

ಡೆನ್‌ಮಾರ್ಕಿನ ಫೋಕ್ ಶಾಲೆಗಳಂತೆ ಕರ್ನಾಟಕದ ವಯಸ್ಕರ ಶಿಕ್ಷಣ ಸಮಿತಿ ಆಶ್ರಯದಲ್ಲಿ ನಡೆಯುವ ವಿದ್ಯಾಪೀಠಗಳು ಮುಂದುವರೆದ ಶಿಕ್ಷಣವನ್ನು ಹಾಗೂ ವೃತ್ತಿ ಶಿಕ್ಷಣವನ್ನು ಗ್ರಾಮಾಂತರ ಪ್ರದೇಶದಿಂದ ಬರುವ ವಿದ್ಯಾರ್ಥಿಗಳಿಗೆ ಕೊಡುತ್ತಿವೆ. ಇದೇ ಮಾದರಿಯಲ್ಲಿ ಅನೇಕ ಶಾಲೆಗಳನ್ನು ಪ್ರಾರಂಭಿಸಬೇಕು. ವ್ಯವಸಾಯ ಹಾಗೂ ವೃತ್ತಿಯನ್ನು ಈ ವಿದ್ಯಾಪೀಠಗಳಲ್ಲಿ ಅಳವಡಿಸಿ ಕೊಳ್ಳಲಾಗಿದೆ. ಈ ವಿದ್ಯಾಪೀಠಗಳ ಕಾರ್ಯ ಕ್ರಮಗಳನ್ನು ಆಗಾಗ್ಗೆ ಪರಿಶೀಲಿಸಿ ಆಧುನಿಕ ರೀತಿಯಲ್ಲಿ ಮಾರ್ಪಾಟುಗಳನ್ನು ಮಾಡಲು ವ್ಯವಸ್ಥೆಯಾಗಬೇಕು. ಇಲ್ಲಿಯ ಶಿಕ್ಷಕ ವೃಂದಕ್ಕೆ ಸಾಕಷ್ಟು ತರಬೇತಿ ಕೊಟ್ಟು ಉತ್ತಮ ಮಟ್ಟಕ್ಕೆ ತರಬೇಕು.

ಅಂಚೆ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಇದರಲ್ಲಿ ಸ್ಫೂರ್ತಿಕೊಡುವ ಶಿಕ್ಷಕರ ಸಂಪರ್ಕವಿರುವುದಿಲ್ಲ . ಸ್ಫೂರ್ತಿಕೊಡುವ ಶಿಕ್ಷಕರು ಈಗ ಬಹಳ ಕಡಿಮೆ. ಕಲಿಯಲು ಉತ್ಸಾಹವಿದ್ದರೆ, ಮನೆಯಲ್ಲಿಯೇ ಕುಳಿತು ಉತ್ತಮ ಶಿಕ್ಷಣವನ್ನು ಅಂಚೆ ಮೂಲಕ ಪಡೆಯಬಹುದು. ಇದು ನವಸಾಕ್ಷರರಿಗೆ ಅನುಕೂಲವಾಗಿರುತ್ತದೆ. ಆದರೂ ಅಂಚೆ ಮೂಲಕ ಶಿಕ್ಷಣ ಪಡೆಯುವವರು ಆಗಾಗ್ಗೆ ಶಿಕ್ಷಕರ ಸಂಪರ್ಕವನ್ನು ಇಟ್ಟು ಕೊಳ್ಳಬೇಕು ಹಾಗೂ ರೇಡಿಯೊ ಮತ್ತು ದೂರದರ್ಶನ ಗಳ ಮೂಲಕವೂ ಶಿಕ್ಷಣ ಇಲಾಖೆ, ಈ ಶಿಕ್ಷಣ

ವನ್ನು ಪ್ರಸಾರ ಮಾಡಬೇಕು. ಎಲ್ಲಾ ಪಬ್ಲಿಕ್ ಪರೀಕ್ಷೆಗಳಿಗೆ ನವಸಾಕ್ಷರರು ಕುಳಿತುಕೊಳ್ಳು ವಂತೆ ವ್ಯವಸ್ಥೆ ಮಾಡಬೇಕು.

ಪುಸ್ತಕ ಭಂಡಾರ ಸಾಕ್ಷರತಾ ಕಾರ್ಯಕ್ರಮದ ಬೆನ್ನೆಲಬು. ಪುಸ್ತಕಗಳನ್ನು ಒದಗಿಸಿ ಓದುವಂತೆ ವ್ಯವಸ್ಥೆಯನ್ನು ಮಾಡದಿದ್ದಲ್ಲಿ, ಅದೂ ಹಳ್ಳಿಗಳಲ್ಲಿ, ನವಸಾಕ್ಷರರು ಮತ್ತೆ ಅನಕ್ಷರರಾಗುವುದರಲ್ಲಿ ಸಂಶಯವಿಲ್ಲ. ಶಾಲಾ ಪುಸ್ತಕ ಭಂಡಾರಗಳನ್ನು ಸಾರ್ವಜನಿಕ ಪುಸ್ತಕ ಭಂಡಾರವನ್ನಾಗಿ ಪರಿವರ್ತಿಸಬೇಕು. ಶಾಲೆಗಳೇ ಸಾಕ್ಷರತಾ ವಿಸ್ತರಣಾ ಯೋಜನೆಯ ಕೇಂದ್ರವಾಗಬೇಕು ಹಾಗೂ ಈಗಿನ ಪುಸ್ತಕ ಭಂಡಾರವನ್ನು ಆಧುನೀಕರಿಸಬೇಕು. ಎಲ್ಲಾ ಪ್ರೈಮರಿ ಶಾಲೆಗಳಲ್ಲೂ ಗ್ರಂಥಾಲಯ ವ್ಯವಸ್ಥೆ ಇರಬೇಕು ಹಾಗೂ ಅವುಗಳನ್ನು ಪುನಶ್ಚೇತಗೊಳಿಸಬೇಕು. ಟೇಪ್‌ರಿಕಾರ್ಡ್, ಗ್ರಾಮಫೋನ್ ರಿಕಾರ್ಡ್‌ಗಳನ್ನು ಹಾಗೂ ಫಿಲಮ್‌ಶೋಗಳನ್ನು ಬೋಧನಾ ಉಪಕರಣಗಳನ್ನಾಗಿ ಉಪಯೋಗಿಸಬೇಕು. ಅರೆಕಾಲಿಕ ಶಿಕ್ಷಣವನ್ನು ಪಡೆಯುವವರೂ ಪುಸ್ತಕ ಭಂಡಾರವನ್ನು ಉಪಯೋಗಿಸಬಹುದು. ಸ್ವಇಚ್ಛೆಯಿಂದಾಗಿ ಓದುವವರಿಗೂ ಅಂಚಿ ಮೂಲಕ ಪಾಠ ಕಲಿಯುವವರಿಗೂ ಪುಸ್ತಕ ಭಂಡಾರಬೇಕು. ಪುಸ್ತಕ ಭಂಡಾರ ಪುಸ್ತಕಗಳ ಮಳಿಗೆಗಳಾಗಬಾರದು. ಅವು ಚೇತನಕಾರಿಗಳಾಗಬೇಕು. ಶಾಲೆಗಳು ವಯಸ್ಕರನ್ನು ಆಕರ್ಷಿಸಬೇಕು. ಹಾಡುಗಳನ್ನು ಹಾಡುವ ವ್ಯಾಖ್ಯಾನಗಳನ್ನು ಕೊಡುವ, ಚರ್ಚಾತಂಡಗಳ, ಪುಸ್ತಕಗಳ ಕೇಂದ್ರ ಸ್ಥಾನವಾಗಬೇಕು, ಜನಾಂಗದ ಜ್ಞಾನ ಮಂದಿರವಾಗಬೇಕು. ಸಾಂಸ್ಕೃತಿಕ ಕಾರ್ಯಗಳ ಕಾರ್ಯಾಗಾರವಾಗಬೇಕು.

ವಿಶ್ವವಿದ್ಯಾನಿಲಯಗಳು ಸಾಕ್ಷರತಾ ಕಾರ್ಯಕ್ರಮಗಳ ಹೊರೆಯನ್ನು ಹೊರಬೇಕು. ಅಂಚೆ ಶಿಕ್ಷಣ, ವ್ಯಾಖ್ಯಾನ, ಶೈಕ್ಷಣಿಕ ಸಮಾವೇಶಗಳನ್ನು ವಿದ್ಯಾರ್ಥಿಗಳಿಗಾಗಿ ಪ್ರಾರಂಭಿಸಬೇಕು. ಸಾಮಾಜಿಕ ಆರ್ಥಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಪ್ರಗತಿಯನ್ನು ಜನಾಂಗ ಸಾಧಿಸಬೇಕು. ಪ್ರಮುಖ ಶಿಕ್ಷಣ ಪ್ರಚಾರಕರಿಗೆ ತರಬೇತಿ ಕಾರ್ಯಕ್ರಮವನ್ನು ಪ್ರಾರಂಭಿಸಬೇಕು. ಸಾಮಾಜಿಕ ಹಾಗೂ ಆರ್ಥಿಕ ಮತ್ತು ಸಾಂಸ್ಕೃತಿಕ ಬದಲಾವಣೆ ಬಗ್ಗೆ ಬೆಳಕನ್ನು ಚಲ್ಲಬೇಕು. ಸಾರ್ವಜನಿಕರ ಆರೋಗ್ಯ, ನೈರ್ಮಲ್ಯ, ಜನಸಂಖ್ಯಾ ನಿಯಂತ್ರಣ, ರಾಷ್ಟ್ರೀಯ ಸಂಘಟನೆ ಮೊದಲಾದವುಗಳ ಅಭಾವ, ರಾಷ್ಟ್ರೀಯ ಸುಭದ್ರತೆಗೆ ಸವಾಲಾಗಿವೆ. ಇವುಗಳ ಬಗ್ಗೆ ವಿಶ್ವವಿದ್ಯಾನಿಲಯಗಳು ರಾಷ್ಟ್ರೀಯ ಪ್ರಜ್ಞೆಯನ್ನು ಜನತೆಯಲ್ಲಿ ಮೂಡಿಸಬೇಕು. ಹಳ್ಳಿಗಳನ್ನು ದತ್ತು ತೆಗೆದು ಕೊಂಡು ಅವುಗಳನ್ನು ಸಂಪೂರ್ಣವಾಗಿ ಸಾಕ್ಷರಸ್ಥರ ಹಳ್ಳಿಗಳನ್ನಾಗಿ ಮಾಡಬೇಕು ಹಾಗೂ ತಾವು ತೆಗೆದುಕೊಂಡ ಸಾಕ್ಷರತೆಯ ಯಶಸ್ಸಿನ ಮೌಲ್ಯಮಾಪನವೂ ಅತ್ಯಾವಶ್ಯಕ. ಈ ಕಾರ್ಯವನ್ನು ಹಮ್ಮಿಕೊಳ್ಳಲು ಸಾಕಷ್ಟು ಧನ ಸಹಾಯವನ್ನು ಸರ್ಕಾರ ವಿಶ್ವವಿದ್ಯಾನಿಲಯಗಳಿಗೆ ಒದಗಿಸಬೇಕು, ಹಾಗೆಯೇ ವಿಶೇಷ ಶಿಕ್ಷಕರ ತಂಡ ಹಾಗೂ ಪುಸ್ತಕ ಭಂಡಾರವನ್ನು ವಿಶ್ವವಿದ್ಯಾನಿಲಯ ಹೊಂದಿರಬೇಕು. ರಾಷ್ಟ್ರೀಯ ವಯಸ್ಕರ ಶಿಕ್ಷಣ ಮಂಡಳಿಯ ಸಲಹೆಗಳನ್ನು ಸರ್ಕಾರ ಹಾಗೂ ವಿಶ್ವವಿದ್ಯಾನಿಲಯಗಳು ಅನುಷ್ಠಾನಕ್ಕೆ ತರಬೇಕು. ಬೋಧನಾವಸ್ತುಗಳ ಸಾಹಿತ್ಯ ಹಾಗೂ ಪಠ್ಯ ಪುಸ್ತಕಗಳ ರಚನೆಯಾಗಬೇಕು. ಸಲಹೆ, ಅಧಿಕಾರಿಗಳ ಮಧ್ಯೆ ಬೇರೆ ಬೇರೆ ಇಲಾಖೆಗಳ ಮಧ್ಯೆ ಸಾಮರಸ್ಯ, ಸಂಶೋಧನೆ, ವಿಚಾರಣೆ ಹಾಗೂ ಮೌಲ್ಯಮಾಪನಗಳಾಗುವಂತೆ ಮಾಡುವುದು ಸಲಹಾ ಮಂಡಲಿಯ ಕೆಲವು ಕರ್ತವ್ಯಗಳು. ಇಂತಹ ಮಂಡಲಿಗಳನ್ನು, ರಾಜ್ಯಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ರಚಿಸಬೇಕು.

ವಯಸ್ಕರ ಶಿಕ್ಷಣ ಕಾರ್ಯಕ್ರಮಗಳ ಹೊರೆಯನ್ನು ಶಿಕ್ಷಣ ಸಚಿವರೇ ಹೊರಬೇಕು. ಖಾಸಗೀ ಸಂಸ್ಥೆಗಳಿಗೂ ಧನಸಹಾಯ ಮಾಡಿ ವಯಸ್ಕರ ಶಿಕ್ಷಣ ಯೋಜನೆಯನ್ನು ಯಶಸ್ವಿಗೊಳಿಸಬೇಕು.

ವಯಸ್ಕರ ಶಿಕ್ಷಣ ಸಮಿತಿಯ ಇತಿಹಾಸ-ಸಾಕ್ಷರತಾ ಕಾರ್ಯಕ್ರಮದಲ್ಲಿ ಅದರ ಪಾತ್ರ

ಕೆ. ಸಚ್ಚಿದಾನಂದಯ್ಯ
೧೩೧೬, ಇಂದ್ರಶ್ರೀ, ಪಡುವಣ ರಸ್ತೆ
ಕುವೆಂಪುನಗರ, ಮೈಸೂರು-೨೩.

ವಯಸ್ಕರ ಶಿಕ್ಷಣ ಸಮಿತಿಯ ಇತಿಹಾಸ ಮತ್ತು ಮೈಸೂರು (ಕರ್ನಾಟಕ) ರಾಜ್ಯ ವಯಸ್ಕರ ಶಿಕ್ಷಣ ಇತಿಹಾಸ-ಇವೆರಡರಲ್ಲಿ ಭೇದವಿದ್ದಂತೆ ಕಾಣುವುದಿಲ್ಲ. ಇಂದಿನ ಮಾದರಿಯ ವಯಸ್ಕರ ಶಿಕ್ಷಣ ರೂಪುಗೊಳ್ಳುತ್ತಿದ್ದಂತೆ ವಯಸ್ಕರ ಶಿಕ್ಷಣ ಸಮಿತಿಯೂ ಅಸ್ತಿತ್ವ ಪಡೆಯಿತು. ಆದರೆ ಅದು ಒಮ್ಮೆಗೇ ಈ ಸ್ವರೂಪವನ್ನು ಪಡೆಯಲಿಲ್ಲ. ಪ್ರಕೃತಿ ಸಹಜವಾದ ಪ್ರಾರಂಭ-ಬೆಳವಣಿಗೆ ಈ ಸಮಿತಿಯಲ್ಲೂ ಕಾಣಿಸಿಕೊಂಡಿರುವುದನ್ನು ಕಾಣಬಹುದು.

ಭಾರತದ ಶಿಕ್ಷಣ ಕ್ರಮದಲ್ಲಿ ಹಲವು ಬದಲಾವಣೆಗಳು ಕಂಡು ಬಂದಿವೆ. ಆಡಳಿತಕ್ಕೆ ತಕ್ಕಂತೆ ಶಿಕ್ಷಣವೂ ಮಾರ್ಪಾಡು ಹೊಂದುತ್ತ ಬಂದಿದೆ. ವಯಸ್ಕರ ಶಿಕ್ಷಣವೆಂಬ ಈ ಶಿಕ್ಷಣ ಪದ್ಧತಿ ಭಾರತದಲ್ಲಿ ಗೋಚರಿಸಿದ್ದು ಈ ಶತಮಾನದ ಪ್ರಾರಂಭದಲ್ಲಿ ಎನ್ನಬಹುದು. ವಯಸ್ಕರ ಶಿಕ್ಷಣ ಎಂದರೆ ಯಾರಿಗೆ ದೊರೆಯಲಿರುವ ಶಿಕ್ಷಣ? ಬಾಲ್ಯ-ತಾರುಣ್ಯಗಳನ್ನು ದಾಟದವರೆಲ್ಲಾ ವಯಸ್ಕರೇ ತಾನೆ ? ಅವರಿಗೆ ಸಿಗಬೇಕಾದ ಶಿಕ್ಷಣವೆಂದರೆ ಯಾವುದು? ಇದು ವಿವೇಚನೆಗೆ ಯೋಗ್ಯವಾದುದೇ ಅಲ್ಲವೇ? ಹಿಂದೆಯೂ ನಮ್ಮಲ್ಲಿ ಪುರಾಣವಾಚನ, ಹರಿಕಥೆ ಮುಂತಾದವುಗಳಿಂದ ಜನ , ವಯಸ್ಕ ಜನಗಳಿಗೂ ಒಂದು ಬಗೆಯ ಶಿಕ್ಷಣ ದೊರೆಯುತ್ತಲೇ ಇತ್ತು. ಆದರೆ ಇದು ನಿರ್ದಿಷ್ಟವಾದ ಗುರಿಯನ್ನು ಹೊಂದಿತ್ತೇ ಎಂಬುದು ಸಂಶಯಾಸ್ಪದ. ಆದುದರಿಂದ ಇಂದಿನ ರೀತಿಯ 'ವಯಸ್ಕರ ಶಿಕ್ಷಣ ಕ್ರಮ' ೨೦ನೇ ಶತಮಾನದಲ್ಲಿ ರೂಪುಗೊಂಡ ಹೊಸ ಪದ್ಧತಿ ಎನ್ನುವುದರಲ್ಲಿ ಸಂಶಯವಿಲ್ಲ.

ಇಂದು ನಮ್ಮಲ್ಲಿ ಪಾಶ್ಚಾತ್ಯ ರೀತಿಯ ಶಿಕ್ಷಣ ಜಾರಿಯಲ್ಲಿದೆ. ಶ್ರೇಣೀಕೃತ ಶಿಕ್ಷಣ ಮಕ್ಕಳಿಗೆ ದೊರೆಯುತದೆ. ಅದಕ್ಕೆ ನಿಗದಿತ ಸಮಯವಿದೆ-ನಿಗದಿತ ಕ್ರಮವಿದೆ-ಆದರೆ ಇದು ಎಲ್ಲರಿಗೂ ಸಿಗುವ ಅನುಕೂಲ್ಯ ಸದ್ಯ ನಮ್ಮಲ್ಲಿಲ್ಲ. ಶಾಲೆಗೆ ಹೋಗಬೇಕಾದವರು ಹೋಗಿ ನಿಶ್ಚಿತ ವರ್ಷಗಳವರೆಗೆ ಶಿಕ್ಷಣ ಪಡೆಯುತ್ತಾರೆ. ಉಳಿದವರು? ಭಾರತದಲ್ಲಿ ಇಂಥವರ ಸಂಖ್ಯೆಯೇ ಹೆಚ್ಚು. ೨೦ನೇ ಶತಮಾನದ ಆದಿಯಲ್ಲಿ ಭಾರತದ ಸಾಕ್ಷರರ ಸಂಖ್ಯೆ ಪ್ರತಿಶತ ೨೦ನ್ನು ದಾಟಿರಲಿಲ್ಲ. ಅಂದರೆ ಅಕ್ಷರ ಕಲಿತ-ವಿದ್ಯಾವಂತರೆನಿಸಿಕೊಂಡವರಿಗಿಂತ ಮೂರೋ-ನಾಲ್ಕೋ ಪಟ್ಟು ಅಕ್ಷರ ಬಾರದವರು, ಅವಿದ್ಯಾವಂತರು. ಇಂತಹ ಅನಕ್ಷರ ವಯಸ್ಕರಿಗೆ ಶಿಕ್ಷಣ ನೀಡುವ ಒಂದು 'ಕ್ರಮ'ವನ್ನೇ ವಯಸ್ಕರ ಶಿಕ್ಷಣ ಎಂದು ಹೆಸರಿಸಿದ್ದಾರೆ. ಅಂದರೆ-ಅದರಲ್ಲೂ ಹದಿನೈದು ವಯಸ್ಸಿನ ಮೇಲ್ಪಟ್ಟು ಮೂವತ್ತೈದು ವಯಸ್ಸಿನೊಳಗಿನವರು ಈ ಶಿಕ್ಷಣ ಪಡೆಯಬೇಕಾದವರು (ಇದಕ್ಕಿಂತ ಹೆಚ್ಚು ವಯಸ್ಸಿನವರು ಪಡೆಯಬಾರದೆಂದಲ್ಲ. ಉದ್ದೇಶಿತ ವ್ಯಕ್ತಿಗಳು ಇವರು ಅಷ್ಟೆ)

ಮೈಸೂರಿನ ಮಹಾರಾಜ ಕಾಲೇಜಿನ ವಿದ್ಯಾರ್ಥಿಗಳಿಗೆ- ಅಧ್ಯಾಪಕರಿಗೆ ಮೂಡಿ

ಬಂದ ಒಂದು ಯೋಚನೆಯೆಂದರೆ 'ತಾವು ಪಡೆಯುತ್ತಿರುವ ಶಿಕ್ಷಣ ತಮ್ಮಂತಹವರೇ ಆದ ಹಲವು ಜನರಿಗೆ ದೊರೆಯುತ್ತಲಿಲ್ಲವಲ್ಲ. ಅವರಿಗೂ ಅಕ್ಷರ ಕಲಿಸುವ ಸೇವಾ ಕಾರ್ಯವನ್ನು ನಾವೇಕೆ ಮಾಡಬಾರದು' ಎಂದು. (ಅವರ ಮನಸ್ಸಿನಲ್ಲಿ 'ವಯಸ್ಕರ ಶಿಕ್ಷಣ' ಎಂಬ ಕಲ್ಪನೆಯೇನೂ ಇದ್ದಿರಲಿಕ್ಕಿಲ್ಲ. ಮುಂದದು ಈ ರೂಪವನ್ನು ಪಡೆಯಿತು, ಕಾಲಾನಂತರ). ಅವರು ರಾತ್ರಿಯ ಹೊತ್ತು ಹಳ್ಳಿಗಳಿಗೆ ಹೋಗಿ ನಿರಕ್ಷರ ಕುಕ್ಷಿಗಳಿಗೆ ಅಕ್ಷರ ಕಲಿಸುವ ಕಾಯಕ ಮಾಡಲೆಳಸಿದರು. ಆದಕ್ಕೆ ಅಧ್ಯಾಪಕರ-ಪ್ರಾಧ್ಯಾಪಕರ ಬೆಂಬಲ ದೊರೆಯಿತು. ಮೊದಲು ವಯಸ್ಕರಿಗೆ ಕಲಿಯುವ ಶಕ್ತಿಯಿಲ್ಲ ಎಂಬ ಭಾವನೆಯಿದ್ದುದು ಇವರ ಪ್ರಯತ್ನದಿಂದ ದೂರವಾಯಿತು. ಕಾಲೇಜಿನ ವಿದ್ಯಾರ್ಥಿ ಸಂಘವು ತನ್ನ ಸಮಾಜ ಸೇವಾ ಉಪಸಮಿತಿಯ ಮೂಲಕ ಅಕ್ಷರ ಪ್ರಚಾರ ಕಾರ್ಯಕ್ರಮವನ್ನು ರೂಪಿಸಿಕೊಂಡಿತು. ಆದಕ್ಕೆ ವಿದ್ಯಾರ್ಥಿ ಸಂಘವೇ ಹಣದ ನೆರವನ್ನು ನೀಡಿತು. ಸುಮಾರು ಆರುನೂರು ವಿದ್ಯಾರ್ಥಿಗಳು ಈ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡರೆಂದೂ-ಅವರಿಗೆ ತಕ್ಕ ತರಬೇತಿಯನ್ನು ನೀಡಲಾಯಿತೆಂದೂ- ಪುರಸಭೆಯೂ ಸಹಕಾರ ನೀಡಿತೆಂದೂ ತಿಳಿದು ಬರುತ್ತದೆ. ಇದು ನಡೆದದ್ದು ೧೯೪೦ರಲ್ಲಿ. ಅಲ್ಲಿಂದಲೇ ಪ್ರಾರಂಭ ವಯಸ್ಕರ ಶಿಕ್ಷಣ (ಮೈಸೂರು ರಾಜ್ಯದಲ್ಲಿ)ದ ಇತಿಹಾಸದ ಮೊದಲ ಅಧ್ಯಾಯ, ಮೈಸೂರು ರಾಜ್ಯದ ವಯಸ್ಕರ ಶಿಕ್ಷಣದ ಬೀಜಾರೋಪಣ ಕೂಡ.

೧೯೪೧ರ ಪ್ರಾರಂಭದಲ್ಲಿ 'ಮೈಸೂರು ಅಕ್ಷರ ಪ್ರಚಾರ ಸಮಿತಿ' ಯೆಂಬುದು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳ ಅಧ್ಯಕ್ಷತೆಯಲ್ಲಿ ಅಸ್ತಿತ್ವಕ್ಕೆ ಬಂದು ಸಮಗ್ರ ಮೈಸೂರು ಸಂಸ್ಥಾನಕ್ಕೆ ಅನ್ವಯವಾಗುವಂತಹ ಅಕ್ಷರ ಪ್ರಚಾರ ಯೋಜನೆಯನ್ನು ಸಿದ್ಧಪಡಿಸಿ ಸರಕಾರದ ಅಂಗೀಕಾರವನ್ನೂ ಗಳಿಸಿಕೊಂಡಿತು. ಪರಿಣಾಮವಾಗಿ ಪ್ರೊ. ಬಿ.ಎಂ. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ 'ಅಕ್ಷರ ಪ್ರಚಾರ ಸಮಿತಿ' ಅಸ್ತಿತ್ವಕ್ಕೆ ಬಂತು. ಶ್ರೀ ಈಗಲ್‌ಟನ್ ಉಪಾಧ್ಯಕ್ಷರಾಗಿ, ಶ್ರೀ ಟಿ.ಕೃಷ್ಣಮೂರ್ತಿಯವರು ಗೌರವ ಕಾರ್ಯದರ್ಶಿಯಾಗಿ, ಶ್ರೀ ಎಸ್.ವಿ. ಶ್ರೀನಿವಾಸರಾಯರು ವ್ಯವಸ್ಥಾಪಕ ಕಾರ್ಯದರ್ಶಿಯಾಗಿ ಸಮಿತಿಯ ಅಧಿಕಾರ ವಹಿಸಿಕೊಂಡರು. ಸರಕಾರ ಮೊದಲ ಸಾರಿಗೆ ರೂ ೫೦೦೦ ಮಂಜೂರು ಮಾಡಿತಂತೆ.

ಅಕ್ಷರ ಪ್ರಚಾರದ ಜತೆಗೆ ಇತರ ಕಾರ್ಯಕ್ರಮಗಳನ್ನು ಹಮ್ಮಿಕೊಂಡ ಸಮಿತಿಯನ್ನು ೧೯೪೫ರಲ್ಲಿ 'ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ' ಎಂದು ಹೆಸರಿಸಲಾಯಿತು. ಮೈಸೂರು ಸಂಸ್ಥಾನದ ಎಂಟು ಜಿಲ್ಲೆಗಳಲ್ಲೂ ಇದು ತನ್ನ ಕಾರ್ಯಕ್ರಮಗಳನ್ನು ವಿಸ್ತರಿಸಿತು. ಎಲ್ಲ ಜಿಲ್ಲೆಗಳಲ್ಲೂ ಜಿಲ್ಲಾ ಸಮಿತಿಗಳು ಪ್ರಾರಂಭವಾದುವು. ಮೈಸೂರು ಹಾಗೂ ಬೆಂಗಳೂರು ನಗರಗಳಲ್ಲಿ ಏಕೈಕ ಸಮಿತಿಗಳೂ ಅಸ್ತಿತ್ವಕ್ಕೆ ಬಂದುವು. ಮೈಸೂರು-ವಿಶಾಲ ಮೈಸೂರಾಗಿ-ಕರ್ನಾಟಕ ರಾಜ್ಯ ಎಂಬ ಹೆಸರು ಪಡೆವಾಗ ವಯಸ್ಕರ ಶಿಕ್ಷಣ ಸಮಿತಿಯೂ 'ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ' ಎಂಬ ನಾಮಕರಣಗೊಂಡಿತು. ಹಿಂದಿನ ಮೈಸೂರು ರಾಜ್ಯದಲ್ಲಿದ್ದ ಇದರ ಕಾರ್ಯ ವ್ಯಾಪ್ತಿ ಗಾಂಧಿ ಶತಾಬ್ದಿ ವರ್ಷದಲ್ಲಿ (೧೯೬೯) ಕರ್ನಾಟಕದ ಇತರ ಜಿಲ್ಲೆಗಳಿಗೂ ವ್ಯಾಪಿಸಿತು.

ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯಕ್ರಮಗಳು:-೧. ಸಾಕ್ಷರತಾ ತರಗತಿಗಳ ವ್ಯವಸ್ಥೆ.

೨. ಪುಸ್ತಕ ಭಂಡಾರಗಳ ಸ್ಥಾಪನೆ (ಗ್ರಾಮಾಂತರ ಪ್ರದೇಶಗಳಲ್ಲಿ) ೩.ಪುಸ್ತಕ ಪ್ರಕಟಣೆ ಹಾಗೂ ಮುದ್ರಣ ಶಾಖೆಯ ಪ್ರಾರಂಭ ೪. ವಿದ್ಯಾಪೀಠಗಳ ಸ್ಥಾಪನೆ ೫. ಗ್ರಾಮ ಕಲೆಗಳ ಪುನರುಜ್ಜೀವನ ಕಾರ್ಯಕ್ರಮ ೬. ಚಲನಚಿತ್ರ ಇತ್ಯಾದಿ ದೃಕ್ ಶ್ರವಣ ಘಟಕಗಳ ವ್ಯವಸ್ಥೆ ೭. ವಯಸ್ಕರ ಶಿಕ್ಷಣದಲ್ಲಿ ತೊಡಗಿಸಿಕೊಂಡ ಕಾಯಕರ್ತರಿಗೆ ತರಬೇತಿ ಕಾರ್ಯಕ್ರಮ ೮. ಸಂಶೋಧನಾ ಶಾಖೆಯ ನಿರ್ವಹಣೆ ೯. ಸಾಹಿತ್ಯರಚನಾಲಯಗಳ ಏರ್ಪಾಡು ೧೦. ಜನತಾ ಶಿಕ್ಷಣ ಕೇಂದ್ರಗಳ ವ್ಯವಸ್ಥೆ.

ವಯಸ್ಕರ ಶಿಕ್ಷಣ ಸಮಿತಿಯು ಈ ವಿವಿಧ ವಿಭಾಗಗಳಲ್ಲಿ ದಾಪುಗಾಲನ್ನಿಟ್ಟು ಸಾಗಿತೆಂದೇ ಹೇಳಬೇಕು.

ಹಳ್ಳಿಗಳಲ್ಲಿ ನಿರಕ್ಷರರನ್ನು ಗುರುತಿಸಿ, ಅವರಿಗೆ ಅನುಕೂಲವಾಗುವಂತೆ 'ವಯಸ್ಕರ ಶಿಕ್ಷಣ ಕೇಂದ್ರಗಳನ್ನು ವ್ಯವಸ್ಥೆಗೊಳಿಸಿ ಅಕ್ಷರದ ಬೆಳಕನ್ನು ಮೂಡಿಸಿತು. ವಯಸ್ಕರ ಮನಶ್ಶಾಸ್ತ್ರಕ್ಕೆಗಮನಹರಿಸಿ-ಅಕ್ಷರದೊಡನೆ ಅರಿವೂ ಮೂಡುವಂತೆ ಹಾಗೂ ಅದನ್ನು ತಮ್ಮದಾಗಿಸಿಕೊಳ್ಳುವಂತೆ ಮಾಡಲು ಉಪ ಯುಕ್ತವಾದ ಪಠ್ಯಪುಸ್ತಕಗಳ ನಿರ್ಮಾಣ ಮಾಡಿತು. ಔಪಚಾರಿಕ ಶಿಕ್ಷಣದಿಂದ ವಿಭಿನ್ನವಾದ-ವಯಸ್ಕರಿಗೆ ಸೀಮಿತವಾದ ಪಠ್ಯಪುಸ್ತಕಗಳು-ಓದು ಕಲಿತವರಿಗೆ ಅದನ್ನು ಮುಂದುವರಿಸಲು ಬೇಕಾದ ಪೂರಕ ಪುಸ್ತಕಗಳು ರಚಿತವಾದುವು 'ಬಾ ಅಣ್ಣ ಓದು ಕಲಿ' 'ಇದನ್ನು ಓದಣ್ಣ',ಇದು ಕನ್ನಡದ ವಯಸ್ಕರಿಗೆ ಸಮಿತಿ ನೀಡಿದ ಮೊದಲ ಪಠ್ಯಪುಸ್ತಕಗಳು. ಮುಂದೆ ಪರಿಷ್ಕೃತಗೊಂಡ ಪಠ್ಯಗಳು 'ಕಲಿಯೋಣ ಬಾರ' 'ಬಾ ತಾಯಿ ಕಲಿಯೋಣ' (ಹೆಂಗಸರಿಗಾಗಿ) ಗಳೂ ಸಮಿತಿಯ ಶಿಕ್ಷಣ ಪರಿಣಿತರಿಂದ ಸಂಶೋಧಿಸಲ್ಪಟ್ಟು, ಚರ್ಚಿಸಲ್ಪಟ್ಟು ಪ್ರಯೋಗಿಸಲ್ಪಟ್ಟು ಬಳಸಲ್ಪಟ್ಟವು. ಇಂತಹ ವಯಸ್ಕರ ಪಠ್ಯಪುಸ್ತಕಗಳು ಈ ಶಿಕ್ಷಣಕ್ಕೆ ವಯಸ್ಕರ ಶಿಕ್ಷಣ ಸಮಿತಿಯು ಅಪೂರ್ವ ಕೊಡುಗೆಯೆಂದೇ ಭಾವಿಸಬಹುದು.

ಲಾಂಧ್ರದ ಬೆಳಕಿನಲ್ಲಿ, ಹಗಲು ದುಡಿದು ದಣಿದಿದ್ದರೂ ಉತ್ಸಾಹದಿಂದ ಅಕ್ಷರ ಕಲಿತು ಓದುವ ಬರೆಯುವ ವಯಸ್ಕರ ಗುಂಪಿನಿಂದ ಕೂಡಿದ ವಯಸ್ಕರ ಶಿಕ್ಷಣ ಕೇಂದ್ರಗಳನ್ನು ಹಳ್ಳಿಗಳಲ್ಲಿ ಕಾಣಬಹುದಿತ್ತು. ರಾತ್ರಿ ಶಾಲೆಗಳೆಂದೇ ಕರೆಯಿಸಿಕೊಳ್ಳುತ್ತಿದ್ದ ಈ ಕೇಂದ್ರಗಳು ವಯಸ್ಕರ ಶಿಕ್ಷಣ ಸಮಿತಿಯ ಹೆಸರಿಗೆ ಪ್ರಸಿದ್ಧಿ ಕಂಡವು .ಸಮಿತಿಯು ತನ್ನದೇ ಆದ ವಿಧಾನದಲ್ಲಿ ಜಾರಿಗೊಳಿಸಿಕೊಂಡು ಬಂದ ಸಾಕ್ಷರತಾ ಕಾರ್ಯಕ್ರಮದಲ್ಲಿ ಅತಿ ಪ್ರಮುಖ ಸ್ಥಾನವನ್ನು ಪಡೆದ ಈ ಶಿಕ್ಷಣ ಕೇಂದ್ರಗಳ ಶಿಕ್ಷಣಾವಧಿ ಐದು ತಿಂಗಳು. ಒಂದು ಕೇಂದ್ರದಲ್ಲಿ ಶಿಕ್ಷಣ ಪಡೆಯುವ ನಿರಕ್ಷರರು ಸುಮಾರು ಮೂವತ್ತು. ಶಿಕ್ಷಣದಲ್ಲಿ ಓದು-ಬರಹ-ಲೆಕ್ಕಾಚಾರ ಸಾಧನೀಯ ಮುಖ್ಯ ಉದ್ದೇಶಗಳು. ರಾತ್ರಿ ಶಾಲೆಗಳು ಎಂದರೆ ಅಥವಾ ಅದಕ್ಕೆ ಸಂಬಂಧಿಸಿದ ಯಾವ ಕಾರ್ಯಕ್ರಮವೇ ಬರಲಿ ಸಮಿತಿಯ ಹೆಸರು ಮೊಳಗುತ್ತಿತ್ತೆಂದೇ ಹೇಳಬೇಕು. ೧೯೭೭-೭೮ರವರೆಗೆ (ಪ್ರಾರಂಭದಿಂದ) ಸಮಿತಿಯ ಈ ಕೇಂದ್ರಗಳಿಂದ ೯,೪೫,೨೫೪ ವಯಸ್ಕರು ಸಾಕ್ಷರರಾದರು ಎಂಬುದಾಗಿ ದಾಖಲೆಯೊಂದು ಸಾರುತ್ತದೆ.

೧೯೭೭-೭೮ರಲ್ಲಿ ಕೇಂದ್ರ ಸರಕಾರದ ಮಹತ್ವಾಕಾಂಕ್ಷೆಯ ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆ ರೂಪಿತವಾಯಿತು. ಆರು ವರ್ಷಗಳಲ್ಲಿ ೧೫-೩೫ವಯೋಮಿತಿಯಲ್ಲಿರುವ ಹತ್ತು ಕೋಟಿ ವಯಸ್ಕ ಅನಕ್ಷರರನ್ನು ಸಾಕ್ಷರರನ್ನಾಗಿ ಮಾಡಿ ಅವರಲ್ಲಿ ಅರಿವು

ಕ್ರಿಯಾಶೀಲತೆ ಮೂಡುವಂತೆ ಮಾಡುವ ಗುರಿ ಹೊಂದಿದ ಯೋಜನೆ ಎಂದೂ ಕರ್ನಾಟಕದಲ್ಲಿ ಈ ಯೋಜನೆಯ ವ್ಯಾಪ್ತಿಗೆ ಬರುವವರು ೭೬.೫೬ಲಕ್ಷವೆಂದೂ ನಿರ್ಧರಿಸಲಾಯಿತು. ೧೦ ತಿಂಗಳ ಅವಧಿಯ ವಯಸ್ಕರ ಶಿಕ್ಷಣ ಕೇಂದ್ರಗಳು. ಇಂತಹ ೩೦೦ ಕೇಂದ್ರಗಳ ಘಟಕ. ಅದನ್ನು ಗ್ರಾಮೀಣ ಕ್ರಿಯಾತ್ಮಕ ಸಾಕ್ಷರತಾ ಯೋಜನೆಯೆಂದೂ ೧೦೦ ಕೇಂದ್ರಗಳಿರುವ ಘಟಕಕ್ಕೆ ರಾಜ್ಯಯೋಜನೆಯೆಂದೂ ಹೆಸರಿಸಲಾಯಿತು. ಮೊದಲನೆಯದಕ್ಕೆ ಕೇಂದ್ರ ಸರಕಾರದ ಹಣ ಸಹಾಯ. ಎರಡನೆಯದು ರಾಜ್ಯ ಸರಕಾರದ ಹೊಣೆಗೆ- ಈ ಸಮಯದಲ್ಲಿ ಕರ್ನಾಟಕದಲ್ಲಿ ವಯಸ್ಕರ ಶಿಕ್ಷಣ ನಿರ್ದೇಶನಾಲಯ ಅಸ್ತಿತ್ವಕ್ಕೆ ಬಂದು ಈ ಶಿಕ್ಷಣದ ಹೊಣೆಯನ್ನು ಹೊರುವಂತಾಯಿತು .ಆದರೆ ಶಿಕ್ಷಣ ಕಾರ್ಯಕ್ರಮಕ್ಕೆ ಸ್ವಯಂಸೇವಾ ಸಂಸ್ಥೆಗಳಿಗೂ ಅವಕಾಶವಿತ್ತು. ವಯಸ್ಕರ ಶಿಕ್ಷಣ ಸಮಿತಿಯೂ ಈ ಯೋಜನೆಯ ಅನುಷ್ಠಾನದಲ್ಲಿ ತೊಡಗಿಸಿಕೊಂಡಿತು. ೪ಗ್ರಾಮೀಣ ಕ್ರಿಯಾತ್ಮಕಾ ಸಾಕ್ಷರತಾ ಯೋಜನಾ ಘಟಕಗಳನ್ನೂ, ೨೫ ರಾಜ್ಯ ಯೋಜನಾ ಘಟಕಗಳನ್ನೂ ವಹಿಸಿಕೊಂಡು ತನ್ನ ಅನುಭವದ ಹಿನ್ನೆಲೆಯಲ್ಲಿ ಉತ್ತಮವಾಗಿ ನಿರ್ವಹಿಸಿತು. ಸಮಿತಿಯ ಧ್ಯೇಯ ಪೂರೈಕೆಗೆ ಹೊಸ ಆಯಾಮ ದೊರೆತಂತಾಯಿತು ಯಶಸ್ಸನ್ನೂ ಪಡೆಯಿತು. ಈ ಅವಧಿಯಲ್ಲಿ(೧೯೭೮) ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ಕೇಂದ್ರ ಹಾಗೂ ರಾಜ್ಯಗಳ ಧನಸಹಾಯದೊಂದಿಗೆ ರಾಜ್ಯ ಸಂಪನ್ಮೂಲ ಕೇಂದ್ರ ಪ್ರಾರಂಭಗೊಂಡಿತು. ರಾಜ್ಯದ ವಯಸ್ಕರ ಶಿಕ್ಷಣ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ -ತರಬೇತಿ-ಸಾಹಿತ್ಯರಚನೆ ಸಂಶೋಧನೆ ಮತ್ತು ಮೌಲ್ಯಮಾಪನ ಮುಂತಾದ ಕೆಲಸಗಳನ್ನದು ನಿರ್ವಹಿಸುತ್ತಿದೆ.

೧೯೮೯ರವರೆಗೂ ನಡೆದ ಈ ಯೋಜನೆಯಡಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಮುನ್ನಡೆದ ಸಮಿತಿಯ ಕಾರ್ಯ-ಯೋಜನೆಗಳಿಗೆ೧೯೮೯ರಲ್ಲಿ ಮತ್ತೊಂದು ತಿರುವುಂಟಾಯಿತು. ಸದ್ಯದ ರೀತಿಯಲ್ಲಿ ಶಿಕ್ಷಣ ಸಾಗುವುದರಿಂದ ಅನಕ್ಷರರ ಸಂಖ್ಯೆಯನ್ನು ಪೂರ್ಣ ಇಳಿಸಲು ಸಾಧ್ಯವಿಲ್ಲ ಎಂದು ಕಂಡುಕೊಂಡ ಕೇಂದ್ರ ಸರಕಾರ ಸಾಕ್ಷರತಾ ಮಿಶನ್ ಹುಟ್ಟುಹಾಕಿ ಅದರ ಮಾರ್ಗದರ್ಶನ ದಲ್ಲಿ ದೇಶದೆಲ್ಲೆಡೆ ಸಂಪೂರ್ಣ ಸಾಕ್ಷರತಾ ಆಂದೋಲನ ಹಮ್ಮಿಕೊಳ್ಳುವಂತೆ ಮಾಡಿತು. ಕರ್ನಾಟಕ ರಾಜ್ಯದಲ್ಲಿಯೂ ಈಆಂದೋಲನ ಪ್ರಾರಂಭವಾಯಿತು. ಇದರ ಹೊಣೆ ಸರಕಾರದ್ದೆ. ಪ್ರತಿ ಜಿಲ್ಲೆಯ ಜಿಲ್ಲಾಧಿಕಾರಿಗಳು -ಜಿಲ್ಲಾ ಪಂಚಾಯಿತಿ ಕಾರ್ಯದರ್ಶಿಗಳು ಮುಖ್ಯರಾಗಿರುವ ಸಂಸ್ಥೆಯ ಮೂಲಕ ಸಂಪೂರ್ಣ ಸಾಕ್ಷರತಾ ಆಂದೋಲನ ನಡೆಯುವುದೆಂದಾಯಿತು. ಇದರಲ್ಲಿ 'ಕೇಂದ್ರ' ಪದ್ಧತಿಯಿಲ್ಲ. ಹತ್ತು ಜನ ಅನಕ್ಷರರಿಗೆ ಒಬ್ಬ ಕಲಿಸುವ ಸ್ವಯಂಸೇವಕ ಇಡೀ ಜಿಲ್ಲೆಯಲ್ಲಿರುವ ಅನಕ್ಷರರ ಗಣತಿ ಮಾಡಿ ಅದಕ್ಕೆ ತಕ್ಕಷ್ಟು ಸ್ವಯಂಸೇವಕರನ್ನು ಆಯ್ಕೆ ಮಾಡಿ ಒಂದೇ ಸಲಕ್ಕೆ (ನಿಯಮಿತ ಅವಧಿಯಲ್ಲಿ) ಸಾಕ್ಷರರನ್ನಾಗಿ ಮಾಡುವ ಈ ಯೋಜನೆ ಜಾರಿಗೆ ಬಂದಾಗ ವ.ಶಿ. ಸಮಿತಿಯು ಅದಕ್ಕೆ ಸಹಕಾರ ಕೊಡುವಷ್ಟೇ ಜವಾಬ್ದಾರವಾಯಿತು. ಪ್ರತ್ಯೇಕ ಕಾರ್ಯಕ್ರಮಕ್ಕೆ ಅವಕಾಶವಿಲ್ಲದಂತಾಯಿತು.

ಈ ಪರಿಸ್ಥಿತಿಯಲ್ಲಿ ಸಮಿತಿಯು ಶಿಕ್ಷಣದ ಮತ್ತೊಂದು ದಿಕ್ಕಿನೆಡೆಗೆ ಮುಖ ಮಾಡಿತು. ಮೈಸೂರು ಜಿಲ್ಲೆಯಲ್ಲಿ ೧೦೦೦ ಅನೌಪಚಾರಿಕ ಶಿಕ್ಷಣ ಕೇಂದ್ರಗಳನ್ನು ತೆರೆಯಲು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಅನುಮತಿ ದೊರೆಯಿತು. ೬-೧೪ ವಯೋಮಿತಿಯ ಶಾಲೆಗೆ ಹೋಗದ ಮಾ

ಶಾಲೆ ಬಿಟ್ಟ ಮಕ್ಕಳಿಗೆ ಶಿಕ್ಷಣ ನೀಡಿ ಶಿಕ್ಷಣದ ಮುಖ್ಯವಾಹಿನಿಯಲ್ಲಿ ಅವರು ಸೇರಿಕೊಳ್ಳಲು ಅನುವು ಮಾಡಿಕೊಡುವುದು ಈ ಅನೌಪಚಾರಿಕ ಶಿಕ್ಷಣದ ಉದ್ದೇಶ. ಸಮಿತಿಯು ಈ ಯೋಜನೆಯನ್ನು ಕಾರ್ಯಗತಗೊಳಿಸಲು ಮುಂದಾಯಿತು. ಮಕ್ಕಳ ಆಯ್ಕೆ, ಕೇಂದ್ರದ ಸಂಘಟನೆ, ಬೋಧಕರಿಗೆ ತರಬೇತಿ ಮೊದಲಾದ ಅವಶ್ಯ ಕಾರ್ಯಗಳನ್ನು ಬಹಳ ಯಶಸ್ವಿಯಾಗಿ ನೆರವೇರಿಸಿತು. ಸಮಿತಿಯು ತನ್ನ ಸಾಕ್ಷರತಾ ಪ್ರಚಾರದ ಮೂಲೋದ್ದೇಶವನ್ನು ನಿರಂತರ ಸಾಧಿಸುತ್ತ ಬಂತು.

ವಯಸ್ಕರ ಶಿಕ್ಷಣ ಸಮಿತಿಯ ಮಹತ್ವದ ಸಾಧನೆಗಳಲ್ಲೊಂದೆಂದರೆ ವಯಸ್ಕರಿಗೆ, ಕಲಿಯುವುದಕ್ಕೆ ಮಾತ್ರವಲ್ಲ ಅದನ್ನು' ಮುಂದುವರಿಸಿಕೊಂಡು ಹೋಗಲು ತಕ್ಕುದಾದ ಸಾಹಿತ್ಯ ಸೃಷ್ಟಿ. ಅದಕ್ಕಾಗಿ ಸಾಹಿತ್ಯ ರಚನಾಲಯಗಳ ಏರ್ಪಾಡು. ಸಮಿತಿಯ ಕಾರ್ಯಕರ್ತರು ಮಾತ್ರವಲ್ಲದೆ-ಸಾಹಿತಿಗಳು -ಶಿಕ್ಷಣತಜ್ಞರೂ ಭಾಗವಹಿಸಿದ ಹಲವು ರಚನಾಲಯಗಳು. ವ್ಯವಸ್ಥಿತವಾಗಿ ಪಠ್ಯಪುಸ್ತಕವಲ್ಲದೆ ಇತರ ಪೂರಕ ಸಾಹಿತ್ಯ ಕೃತಿಗಳು ನಿರ್ಮಾಣಗೊಂಡದ್ದು ವಯಸ್ಕರ ಶಿಕ್ಷಣಕ್ಕೆ ಅಮೂಲ್ಯ ಸೇವೆಯನ್ನು ಮಾಡಿದಂತಾಯಿತು. ಈ ಸಾಹಿತ್ಯ ರಚನಾಲಯಗಳಲ್ಲಿ ರಚಿಸಲ್ಪಟ್ಟ ಕೆಲವು ಪುಸ್ತಕಗಳಿಗೆ ಕೇಂದ್ರ ಸರಕಾರದ ಪ್ರಶಸ್ತಿಗಳೂ ಬಂದದ್ದು ರಚನಾಲಯಗಳ ಸಾರ್ಥಕತೆಗೆ ಉದಾಹರಣೆ.

ನವಸಾಕ್ಷರರಿಗಾಗಿ ಪ್ರಸಿದ್ಧ ಲೇಖಕರೂ ಪುಸ್ತಕಗಳನ್ನು ರಚಿಸಿದ್ದಾರೆ. ಅವನ್ನು ಮುದ್ರಿಸುವ ಹೊಣೆ ನಿರ್ವಹಿಸಿದೆ ಸಮಿತಿ, ಹೀಗೆ ಇದುವರೆಗೆ ಸಮಿತಿಯಿಂದ ಪ್ರಕಟಣೆಗೊಂಡ ನವಸಾಕ್ಷರ ಸಾಹಿತ್ಯ ಕೃತಿಗಳು ಸುಮಾರು ೨೫೦ಕ್ಕೂ ಮೀರಿದೆ.

ಸಮಿತಿಯ ಪ್ರಕಟಣ ವಿಭಾಗದಿಂದ ಹಿರಿಯ ಸಾಹಿತಿಗಳಿಂದ ರಚಿತವಾದ ಜನಸಾಮಾನ್ಯರಿಗೆ ಉಪಯುಕ್ತವಾದ ಗ್ರಂಥಗಳು ಹೊರಬಂದಿವೆ. ಶ್ರೀ ಕುವೆಂಪುರವರ ಜನಪ್ರಿಯ ರಾಮಾಯಣ, ಕಾವ್ಯಾನಂದರ ಶರಣ ಚರಿತಾಮೃತ, ದೇಜಗೌರವರ ಯುದ್ಧ ಮತ್ತು ಶಾಂತಿ ಮುಂತಾದ ಹಲವು ಸಂಗ್ರಾಹ್ಯ ಗ್ರಂಥಗಳು ಈ ಪ್ರಕಟಣೆಯಲ್ಲಿ ಸೇರಿವೆ. ವಯಸ್ಕರ ಶಿಕ್ಷಣವೆಂದರೆ ಅನಕ್ಷರರನ್ನು ಸಾಕ್ಷರರನ್ನಾಗಿ ಮಾಡಿ ಅವರ ಮುಂದೋದಿಗೆ ಅನುಕೂಲ ಕಲ್ಪಿಸುವ ಹೊತ್ತಗೆಗಳನ್ನು ನೀಡುವುದು ಮಾತ್ರವಲ್ಲ. ಕನ್ನಡದ ಸಾಮಾನ್ಯ ವಯಸ್ಕರಿಗೂ ಜ್ಞಾನ ಸಂಪಾದನೆಗೆ ಯೋಗ್ಯ ವಾದ ಗ್ರಂಥಗಳನ್ನೂ ಒದಗಿಸುವುದು ಅಗತ್ಯವಲ್ಲವೆ? (ವಯಸ್ಕರಿಗೆ ನೀಡುವ ಯಾವುದೇ ಶೈಕ್ಷಣಿಕ ಸೌಲಭ್ಯಗಳೂ ವಯಸ್ಕರ ಶಿಕ್ಷಣಕ್ಕೇ ಸೇರಿದ್ದು) ಪ್ರಕಟಣ ಶಾಖೆಯಲ್ಲಿ ಪಠ್ಯಪುಸ್ತಕಗಳು, ವಯಸ್ಕರ ಶಿಕ್ಷಣಮಾಲೆ, ಪುಸ್ತಕಭಂಡಾರಮಾಲೆ ಪೌರಾಣಿಕ ಸಾಹಿತ್ಯಮಾಲೆ, ಸಾಹಿತ್ಯ ರಚನಾಲಯ ಮಾಲೆ ಮೊದಲಾದ ವಿವಿಧ ವರ್ಗಕ್ಕೆ ಸೇರಿದಂತೆ ಸುಮಾರು ೪೦೦ಕ್ಕೂ ಹೆಚ್ಚು ಉಪಯುಕ್ತ ಕೃತಿಗಳು ಪ್ರಕಟಗೊಂಡಿವೆ. ನವಸಾಕ್ಷರ (ಆಗತಾನೆ ಅಕ್ಷರ ಕಲಿತು ಓದುವ ಸಾಮರ್ಥ್ಯವನ್ನು ಪಡೆದವ)ನಿಂದ ಪ್ರಾರಂಭಗೊಂಡು ಪ್ರೌಢ ಸಾಹಿತ್ಯಾಭ್ಯಾಸಿಗಳಿಗೂ ಬೇಕಾದಂತಹ ಹೊತ್ತಗೆಗಳಿವು.

ಸಮಿತಿಯು ಎರಡು ಪತ್ರಿಕೆಗಳನ್ನು ಪ್ರಾರಂಭಿಸಿತು-ಪ್ರಕಟಿಸುತ್ತ ಬಂತು. ಒಂದು ಸಾಪ್ತಾಹಿಕ 'ಬೆಳಕು'. ಇದು ನವಸಾಕ್ಷರರಿಗೆ ಓದುವ ಸಾಮಗ್ರಿಯಾದುದು. ಹಳ್ಳಿಯ ಸಾಮಾನ್ಯ ವಿದ್ಯಾವಂತರಿಗೂ ಅನುಕೂಲವಾಗುವಂತಹುದು. ಇನ್ನೊಂದು ಮಾಸಿಕ ಪತ್ರಿಕೆ -'ಪುಸ್ತಕ ಪ್ರಪಂಚ'. ಇಂದು ಸ್ವರ್ಣ ಮಹೋತ್ಸವವನ್ನು ಆಚರಿಸುತ್ತಿರುವ ಈ ಪತ್ರಿಕೆ ಪ್ರೌಢರಿಗೆ ಗ್ರಾಸವನ್ನೊದಗಿಸುವಂತಹದು.

ಮೊದಲು ಬೇರೆ ಭಾಷಾ ಪತ್ರಿಕೆಗಳಿಂದ ಅನುವಾದಿಸಿದ ಲೇಖನಗಳೇ ಇದರಲ್ಲಿದ್ದು ದಾದರೂ ಕ್ರಮೇಣ ಸ್ವತಂತ್ರ ಲೇಖನಗಳಿಂದ ತುಂಬತೊಡಗಿತು. ವಿಶ್ವವಿದ್ಯಾಲಯದ ತ್ರೈಮಾಸಿಕದಂತೆ .ಇಂಗ್ಲಿಷಿನ ರೀಡರ್ಸ್ ಡೈಜೆಸ್ಟಿನಂತೆ ಇದೊಂದು ಪರಿಣಾಮಕಾರಿ ಪತ್ರಿಕೆಯಾಗಿ ಹೊರಹೊಮ್ಮುತ್ತಿದೆ.ಈ ಎರಡು ಪತ್ರಿಕೆಗಳೂ ವಯಸ್ಕರ ಶಿಕ್ಷಣ ಸಮಿತಿಯ ಸಾಧನೆಯ ಮೈಲಿಗಲ್ಲುಗಳಾಗಿದೆ. (ಪುಸ್ತಕ ಪ್ರಪಂಚದ ಚಂದಾದಾರರ ಸಂಖ್ಯೆ ೩೦೦೦ವನ್ನೂ ಮೀರಿದೆ).

ವಯಸ್ಕರ ಶಿಕ್ಷಣ ಸಮಿತಿಯ ಉಪಕ್ರಮಗಳ ಉಲ್ಲೇಖನೀಯ ಅಂಶಗಳಲ್ಲಿ 'ವಿದ್ಯಾಪೀಠಗಳ ಸ್ಥಾಪನೆ' ಯೂ ಒಂದು. ಇದು ಡೆನ್ಮಾರ್ಕಿನ 'ಫೋಕ್ ಹೈಸ್ಕೂಲು' ಅಥವಾ ವಿದ್ಯಾಪೀಠವನ್ನು ಮಾದರಿಯಾಗಿಟ್ಟುಕೊಂಡು ರಚಿತವಾದ ಶಾಲೆಗಳು. (ಇಲ್ಲಿಯೂ 'ವಿದ್ಯಾಪೀಠ' ಎಂಬುದಾಗಿಯೆ ಕರೆಯಲ್ಪಟ್ಟವು) ಡೆನ್ಮಾರ್ಕಿನ ವಿದ್ಯಾಪೀಠಗಳ ಜನಕ ಎಂದು. ಪ್ರಸಿದ್ಧನಾದ ಎನ್.ಎಫ್,ಎಸ್.ಗ್ರಂಟ್ ವಿಗ್ಗನು ವಿದ್ಯಾಪೀಠಗಳಿಂದ ಆಗುವ ಆಗಬೇಕಾದ ಪ್ರಯೋಜನವೇನು ಎಂಬುದನ್ನು ಹೀಗೆ ಹೇಳಿದ್ದಾನೆ 'ಇಲ್ಲಿ ಗಳಿಸುವ ಜ್ಞಾನ, ಹಣ ಸಂಪಾದನೆಗೆ ಮತ್ತು ಜೀವನಯಾಪನೆಗೆ ಸಹಕಾರಿಯಾಗದಿದ್ದರೂ ಒಳ್ಳೆಯ ಬಾಳನ್ನು ಬಾಳಲು ಮತ್ತು ದೇಶದ ಉತ್ತಮ ಪೌರನಾಗಲು ಸಹಾಯ ಮಾಡುತ್ತದೆ, ಇದೇ ಉದ್ದೇಶದ ಬೆಳಕಿನಲ್ಲಿಯೇ ವಯಸ್ಕರ ಶಿಕ್ಷಣ ಸಮಿತಿಯ ವಿದ್ಯಾಪೀಠವೂ ಸ್ಥಾಪಿತವಾಯಿತು ಎನ್ನಬೇಕು.ಗ್ರಾಮೀಣ ಯುವಕರಲ್ಲಿ ಮುಂದಾಳತನವನ್ನು(ನಾಯಕತ್ವ) ಬೆಳೆಸುವುದು ಇದರ ಧ್ಯೇಯವೆಂದು ಯೋಜಿಸಲಾಯಿತು . ಅದಕ್ಕೆ ತಕ್ಕಂತೆ ಸಾಮಾಜಿಕ, ಆರ್ಥಿಕ, ನೈತಿಕ ಮುಂತಾದ ವಿಷಯಗಳ ಬೋಧನೆಯೊಂದಿಗೆ ಕೃಷಿ, ಕೈಗಾರಿಕೆ ಮುಂತಾದ ಹಳ್ಳಿಯ ಉದ್ಯೋಗಗಳಲ್ಲಿ ಅನುಭವ ಪಡೆಯುವಂತೆ ಮಾಡುವುದು ವಿದ್ಯಾಪೀಠಗಳ ಗುರಿಯೆನಿಸಿತು.

ಸಮಿತಿಯ ವಿದ್ಯಾಪೀಠಗಳಲ್ಲಿ ಮೊತ್ತ ಮೊದಲು ಸ್ಥಾಪಿತವಾದದ್ದು- ನಂಜನಗೂಡು ವಿದ್ಯಾಪೀಠ ೧೯೪೭ರಲ್ಲಿ. ನಗರದಿಂದ ದೂರದಲ್ಲಿ ವಿಶಾಲ ಕೃಷಿಯೋಗ್ಯ ಕ್ಷೇತ್ರದಲ್ಲಿ ಸ್ಥಾಪಿತವಾದ ಈ ವಿದ್ಯಾಪೀಠ ಯುನೆಸ್ಕೊ-ವಯಸ್ಕರ ಶಿಕ್ಷಣ ತಜ್ಞ ನ. ಭದ್ರಯ್ಯನವರ ಪರಿಶ್ರಮದ ಫಲ.ಈ ವಿದ್ಯಾಪೀಠದ ಪ್ರಗತಿ. ಆದರಿಂದ ಪಡೆದ ಅನುಭವದ ಹಿನ್ನೆಲೆ ಮತ್ತು ಜನತೆಯ ಪ್ರತಿಕ್ರಿಯೆಯನ್ನಾಧರಿಸಿ ೧೯೫೦ರಲ್ಲಿ ಹಾಸನದ ಬಳಿ ಎರಡನೆಯ ವಿದ್ಯಾಪೀಠ 'ಯಗಚಿ ವಿದ್ಯಾಪೀಠ' ಪ್ರಾರಂಭಗೊಂಡಿತು.

ಭಾರತದಲ್ಲೇ ಮೊತ್ತ ಮೊದಲನೆಯದಾಗಿ ಸ್ಥಾಪಿತವಾದ ಈ ಎರಡು ವಿದ್ಯಾಪೀಠಗಳು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಶಿಕ್ಷಣ ತಜ್ಞರನ್ನು ಆಕರ್ಷಿಸಿದುವು.ಪರಿಣಾಮವಾಗಿ ಅಮೆರಿಕದೇಶದ ಫೋರ್ಡ್ ಫೌಂಡೇಶನ್ ಸಂಸ್ಥೆಯು ಹಳೆ ಮೈಸೂರು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಒಂದೊಂದು ವಿದ್ಯಾಪೀಠ ಸ್ಥಾಪಿಸಲು ಅಗತ್ಯವಾದ ಧನಸಹಾಯ ಮಾಡಿತು . ಆದರಿಂದಾಗಿ ಪ್ರಾರಂಭಗೊಂಡ ಮೊದಲ ವಿದ್ಯಾಪೀಠ (ಸಮಿತಿಯ ಐದನೇ ವಿದ್ಯಾಪೀಠ). ೧೯೫೭ರಲ್ಲಿ ಮಂಡ್ಯ ಜಿಲ್ಲೆಯ ಶಿವಾರಗುಡ್ಡದಲ್ಲಿ ಪ್ರಾರಂಭವಾಯಿತು. ಈಗ ಸಮಿತಿಯು ನಡೆಸುತ್ತಿರುವ ವಿದ್ಯಾಪೀಠಗಳು ೧೬. ಇವುಗಳಲ್ಲಿ ೪ ಮಹಿಳೆಯರಿಗಾಗಿ ಮೀಸಲಾಗಿವೆ . ನಂಜನಗೂಡು (೧೯೪೭), ಯಗಚಿ(೧೯೫೩), ತುಂಗಾ(೧೯೫೬), ಕೆಂಗೇರಿ(೧೯೫೭), ಶಿವಾರಗುಡ್ಡ(೧೯೫೭), ಪಸಿಗದೆಲೆ(೧೯೬೦), ಪಂಪಾ(೧೯೬೦), ಬಂಥನಾಳ(೧೯೬೩), ಕಾತ್ರಾಳ್ (೧೯೬೬),

ನವಿಲಗಿರಿ(೧೯೬೬), ನೆಗಳೂರು(೧೯೬೬), ಬಸವಕಲ್ಯಾಣ(೧೯೬೬), ಚಾರಾ(೧೯೮೨), ಕಾವೇರಿ(೧೯೮೫), ಹೊಯ್ಸಳ(೧೯೯೩), ಶಿವಗಂಗಾ(೧೯೯೩) ಇವು ಈಗಿರುವ ವಿದ್ಯಾಪೀಠಗಳು. ಎಲ್ಲ ವಿದ್ಯಾಪೀಠಗಳಲ್ಲಿಯೂ ಈಗ ಒಂದೊಂದು ತಾಂತ್ರಿಕ ಶಿಕ್ಷಣವನ್ನು ನೀಡುವ ವ್ಯವಸ್ಥೆಯಿದೆ. ಉಚಿತ ಊಟ, ವಸತಿ ಒಳಗೊಂಡಂತೆ ಆರು ತಿಂಗಳ ತರಬೇತಿ ಇವುಗಳಲ್ಲಿ ನೀಡಲಾಗುತ್ತಿದೆ. ಇದರಿಂದ ಲಾಭ ಪಡೆಯುತ್ತಿರುವ ಗ್ರಾಮೀಣ ಯುವಕರು ನೂರಾರು. ತರಬೇತಿ ಪಡೆದು 'ನಾಯಕತ್ವ'ವನ್ನು ಬೆಳೆಸಿಕೊಂಡ ಈ ಯುವಕ ಯುವತಿಯರು ಸಮಿತಿಯ ಮಾನವ ಸಂಪತ್ತಾದರೆ ಈ ವಿದ್ಯಾಪೀಠಗಳು ಹೊಂದಿರುವ ಒಟ್ಟು ೭೦೦ಕ್ಕಿಂತಲೂ ಹೆಚ್ಚು ಎಕರೆ ಜಮೀನು ಅದರ ಭೌತಿಕ ಸಂಪತ್ತು. ತೆಂಗು, ಸಪೋಟ ಮೊದಲಾದವು ಅದರ ಫಲಸಂಪತ್ತು.

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯು ತನ್ನ ಈ ಎಲ್ಲ ವಿಶಿಷ್ಟ ಕಾರ್ಯಕ್ರಮಗಳಿಂದಾಗಿ ದೇಶ ವಿದೇಶಗಳ ಗಮನ ಸೆಳೆಯಿತು. ಇದರ ಕಾರ್ಯಕರ್ತರಾದ ಪ್ರೊ|ಡಬ್ಲ್ಯು.ಜಿ.ಈಗಲ್‌ಟನ್ ದಿಸರ್ವಶ್ರೀ ಎಸ್.ವಿ. ಶ್ರೀನಿವಾಸರಾವ್, ಟಿ.ಕೃಷ್ಣಮೂರ್ತಿ, ನ. ಭದ್ರಯ್ಯ ಮೊದಲಾದವರು ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಯುನೆಸ್ಕೋ ಪರಿಣತರೆಂಬ ಕೀರ್ತಿಗೆ ಭಾಜನರಾದರು.

೧೯೭೦ರಲ್ಲಿ ನೆಹರು ಸಾಕ್ಷರತಾ ಪ್ರಶಸ್ತಿ ೧೯೭೩ರಲ್ಲಿ ಮಹಮದ್ ರೆಜಾ ಪಹಲ್ವಿ ಪ್ರಶಸ್ತಿಯನ್ನು ಸಮಿತಿಯು ಗಳಿಸಿಕೊಂಡು ತನ್ನ ಖ್ಯಾತಿಯನ್ನು ಹೆಚ್ಚಿಸಿಕೊಂಡಿತು. ಕರ್ನಾಟಕದಲ್ಲಿ ಮಾತ್ರವಲ್ಲ ಭಾರತದಲ್ಲೇ ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಅಗ್ರಮಾನ್ಯತೆಯನ್ನು ಪಡೆದ ಸ್ವಯಂ ಸಂವಾ ಸಂಸ್ಥೆಯೆನಿಸಿತು.

ವಯಸ್ಕರ ಶಿಕ್ಷಣ ಸಮಿತಿ 'ಸೊಸೈಟಿ ರಿಜಿಸ್ಟ್ರೇಷನ್' ಕಾಯಿದೆಗನುಸಾರವಾಗಿ ನೋಂದಾಯಿಸಲ್ಪಟ್ಟಿದೆ. ಅಂಗರಚನೆಯಿದೆ-ನಿಯಮ ನಿಬಂಧನೆಗಳಿವೆ.

೧೯೬೫ರವರೆಗೂ(೧೯೪೧)ರಿಂದ ಇದರ ಸದಸ್ಯರೇ ಕಾರ್ಯಕಾರಿಸಮಿತಿಯನ್ನು ಚುನಾವಣೆ ಮೂಲಕ ಆರಿಸುತ್ತಿದ್ದರು. ಅಧ್ಯಕ್ಷ, ಪ್ರಧಾನಕಾರ್ಯದರ್ಶಿ, ಖಜಾಂಚಿ ಈ ಹುದ್ದೆಗೆ ಕಾರ್ಯಕಾರಿ ಸಮಿತಿ ಆಯ್ಕೆ ಮಾಡಿಕೊಳ್ಳುತ್ತಿತ್ತು. ಶಿಕ್ಷಣ ತಜ್ಞರು ಸೇವಾ ಮನೋಭಾವವುಳ್ಳವರು ಆಯ್ಕೆಗೊಳ್ಳುತ್ತಿದ್ದರು. ಬಿ.ಯಂ.ಶ್ರೀಯಂತಹ ಉದ್ದಾಮ ಸಾಹಿತಿಗಳು, ನ.ಭದ್ರಯ್ಯನಂತಹ ಅಂತರರಾಷ್ಟ್ರೀಯ ಖ್ಯಾತವೆತ್ತವರೂ ಇದರ ಅಧ್ಯಕ್ಷ ಪದವಿಯನ್ನಲಂಕರಿಸಿದ್ದರು.

೧೯೬೬ರಲ್ಲಿ ಅಧಿಕಾರೇತರರನ್ನು ಈ ಗಾದಿಗೆ ನೇಮಕಮಾಡುವ ಮೂಲಕ ಸರಕಾರ ಹೊಸ ಪದ್ಧತಿಯನ್ನು ಸೃಷ್ಟಿಸಿದೆ. ಶ್ರೀ.ಎಂ. ಮಲ್ಲಿಕಾರ್ಜುನಸ್ವಾಮಿಯವರು ಹೀಗೆ ನಾಮಕರಣಗೊಂಡ ಮೊದಲ ಅಧ್ಯಕ್ಷರು. ಮುಂದೆ ಈಗಲೂ ಅದೇ ಕ್ರಮವನ್ನು ಅನುಸರಿಸಲಾಗುತ್ತಿದೆ. ಕಾರ್ಯದರ್ಶಿ ಹುದ್ದೆಯನ್ನು ಇದೇ ರೀತಿ ನಾಮಕರಣ ಮೂಲಕ ತುಂಬಲಾಗುತ್ತಿದೆ. ೧೯೬೬ರಿಂದಲೇ. ಕಾರ್ಯದರ್ಶಿಯಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳು ಹೆಚ್ಚಾಗಿ ನೇಮಕಗೊಳ್ಳುತ್ತಾರೆ-ಕೆಎಎಸ್., ಐಎಎಸ್ ಅಧಿಕಾರಿಗಳೂ ಈ ಹುದ್ದೆಗೆ ನೇಮಿಸಲ್ಪಡುವುದಿದೆ, ಶಿಕ್ಷಣ ತಜ್ಞರು, ಧೀಮಂತರೇ ಈ ಹುದ್ದೆಗಳಿಗೆ ನೇಮಕಗೊಳ್ಳುವರು ಎಂದೇ ಆಶಿಸೋಣ.

ಸಮಿತಿಯು ಸರ್ಕಾರದಿಂದ ಪಡೆಯಬೇಕಾದ ಮಂಜೂರಾತಿ, ಅನುದಾನ ಬಿಡುಗಡೆ ಮುಂತಾದ ವ್ಯವಹಾರಗಳು ಈಗ ಲೋಕಶಿಕ್ಷಣ ನಿರ್ದೇಶನಾಲಯದ ಮೂಲಕ ನಡೆಯುತ್ತಿವೆ.

ವಯಸ್ಕರ ಶಿಕ್ಷಣ ಸಮಿತಿಯು ತನ್ನ ಉದ್ದೇಶಗಳನ್ನು ಈಡೇರಿಸುತ್ತಾ ಬಂದಿದೆ.

ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಅಪೂರ್ವ ಸಾಧನೆಯನ್ನೇ ಮಾಡಿದೆಯೆಂದರೆ ಅತಿಶಯೋಕ್ತಿಯ ಮಾತಾಗದು. ಈ ಕ್ಷೇತ್ರದಲ್ಲಿ ಕರ್ನಾಟಕದಲ್ಲಿ ತನ್ನ ವಿಶಿಷ್ಟ ಸಾಧನೆಯಿಂದ ಏಕೈಕ ಬೃಹತ್ ಸಂಸ್ಥೆಯಾಗಿ ಬೆಳೆದುನಿಂತಿದೆ. ಭಾರತದಲ್ಲಿಯೂ-ವಿದೇಶಗಳಲ್ಲಿಯೂ ಹೆಸರು ಪಡೆದಿದೆ. ಇದು ರಾಜ್ಯಕ್ಕೆ ಅಭಿಮಾನದ ಸಂಗತಿಯಾಗಿದೆ.

'ವಯಸ್ಕರ ಶಿಕ್ಷಣ'ಕ್ಕೆ ಅಂತಿಮ ತೆರೆಯಿದೆಯೆಂದೂ ಹೇಳಲು ಸಾಧ್ಯವೇ ಇಲ್ಲ. ಅದೊಂದು ನಿರಂತರ ಪ್ರಕ್ರಿಯೆ. ಸ್ವರೂಪದಲ್ಲಿ ಬದಲಾವಣೆಯಾಗಬಹುದು. ದಾರಿಬೇರೆ ಬೇರಾಗಬಹುದು. ಆದರೂ 'ವಯಸ್ಕರ ಶಿಕ್ಷಣ' ಕೊನೆ ಮುಟ್ಟದು. ಸಾಕ್ಷರತೆಯಿಂದ ಮೊದಲ್ಗೊಂಡು 'ಪರಿಣತಿ' ಯವರೆಗೂ ಅನೌಪಚಾರಿಕವಾಗಿ ಸಾಗುತ್ತಿರಲೇಬೇಕಾದ ಈ 'ಶಿಕ್ಷಣ' ಮುಗಿಯಿತು ಎನ್ನುವುದಾದರೂ ಹೇಗೆ? ಅಂತೆಯೇ 'ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯಕಲಾಪಗಳೂ ನಿರಂತರ ನಡೆಯಬೇಕಾದದ್ದೆ. ಆದ್ದರಿಂದ ಇವರ ಇತಿಹಾಸ-'ಗತೇತಿಹಾಸ' ಎನ್ನಿಸಿಕೊಳ್ಳದು -ನಿಶ್ಚಯ.

ವಿಶಾಲವಾದ ಆಯಕಟ್ಟಿನ ನಿವೇಶನದಲ್ಲಿ ತನ್ನದೇ ಆದ, ಆಫ್‌ಸೆಟ್ ಮುದ್ರಣವೇ ಮೊದಲಾದ ಸಕಲ ಸೌಲಭ್ಯಗಳಿಂದಲೂ ಕೂಡಿದ ಕಟ್ಟಡದಲ್ಲಿ ಆರೂಢವಾಗಿರುವ ಈ ಸಮಿತಿಯು ವಯಸ್ಕರ ಶಿಕ್ಷಣದ (ಅನೌಪಚಾರಿಕ ಶಿಕ್ಷಣದ) ವಿಶ್ವವಿದ್ಯಾಲಯ ಸಮ (Deemed University) ಆಗಿ ಶಿಕ್ಷಣ ಕ್ಷೇತ್ರಕ್ಕೆ ಅನನ್ಯ ಸೇವೆಯನ್ನು ಒದಗಿಸಲಿ ಎಂಬುದೇ ಸದ್ಯದ ಹಾರೈಕೆ.



ವಯಸ್ಕರ ಶಿಕ್ಷಣದಲ್ಲಿ ದೃಕ್ ಶ್ರವಣ ಸಾಧನಗಳು

ಸಾ. ಮಂಚಯ್ಯ
ನಿವೃತ್ತ ನಿರ್ದೇಶಕರು
ಮನೆ ನಂ.೧೯೯೨, ೩.೫ ಬಿ ಕ್ರಾಸ್
೨೮ನೇ ಮೆಯಿನ್, ೪ನೇ ಬ್ಲಾಕ್
ಜಯನಗರ, ಬೆಂಗಳೂರು.

ವಯಸ್ಕರ ಶಿಕ್ಷಣ :

ವಯಸ್ಕರ ಶಿಕ್ಷಣ ಅನೇಕ ರೂಪಗಳನ್ನು ಮತ್ತು ವ್ಯಾಖ್ಯೆಯನ್ನು ಹೊಂದಿದೆ. ಅತ್ಯಂತ ಮುಂದುವರಿದ ರಾಷ್ಟ್ರಗಳಲ್ಲೂ ವಯಸ್ಕರ ಶಿಕ್ಷಣ ವ್ಯವಸ್ಥೆ ಇವೆ. ಅದು ಆ ದೇಶಗಳಲ್ಲಿ ಮುಂದುವರಿದ ಶಿಕ್ಷಣ ಎನಿಸಿಕೊಂಡಿದೆ. ಕಡ್ಡಾಯ ಶಾಲಾ ಅವಧಿಯ ನಂತರ ಮಕ್ಕಳು-ಅವರು ಮಕ್ಕಳಲ್ಲ ಹದಿವಯಸ್ಸಿನವರು, ಅಂದರೆ ಕೌಮಾರ್ಯಾವಸ್ಥೆಯನ್ನು ದಾಟಿ ಯೌವನಕ್ಕೆ ಕಾಲಿಡುತ್ತಿರುವ ವಯೋಮಾನದವರು-ನೇರವಾಗಿ ಜೀವನ ರಂಗ ಪ್ರವೇಶಿಸುವರು. ಅವರು ತಮಗೆ ಸೂಕ್ತವಾದ ವೃತ್ತಿಯನ್ನು ಆಯ್ದುಕೊಳ್ಳಲು, ಹಾಗೆ ಆಯ್ದುಕೊಂಡ ಉದ್ಯೋಗಕ್ಕೆ ಅಗತ್ಯವಾದ ಕೌಶಲಗಳನ್ನು ಬೆಳೆಸಿಕೊಳ್ಳಲು ಮತ್ತು ಆ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇನ್ನೂ ಹೆಚ್ಚಿನ ಜ್ಞಾನಗಳಿಸಿಕೊಂಡು ತಮ್ಮ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಸಹಕಾರಿಯಾದಂತಹ ವಯಸ್ಕರ ಶಿಕ್ಷಣ ಅಥವಾ ಮುಂದುವರಿದ ಶಿಕ್ಷಣ ವ್ಯವಸ್ಥೆ ಮಾಡಿದ್ದಾರೆ. ಈ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿ ಸಂಜೆ ಕಾಲೇಜುಗಳು, ಶಿಕ್ಷಣ ಸಂಸ್ಥೆಗಳು, ಅಂಚೆ ತೆರಪಿನ ಶಿಕ್ಷಣ ವ್ಯವಸ್ಥೆ, ಜನತಾ ಶಿಕ್ಷಣ ಕಾಲೇಜುಗಳು ಮತ್ತು ಯುವ ಜನಕ್ಷೇಮಾಭಿವೃದ್ಧಿ ಕೇಂದ್ರಗಳು ಇವೆ. ಆ ದೇಶಗಳಲ್ಲಿ ಅನಕ್ಷರತೆ ಸಮಸ್ಯೆ ಇಲ್ಲ.

ಆದರೆ ಇಪ್ಪತ್ತನೆಯ ಶತಮಾನದ ಪ್ರಥಮಾರ್ಧದ ಕೊನೆಯಲ್ಲಿ ಮತ್ತು ಆನಂತರ ಸ್ವಾತಂತ್ರ್ಯ ಪಡೆದುಕೊಂಡ ಅನೇಕ ರಾಷ್ಟ್ರಗಳಲ್ಲಿ ಈ ಸಮಸ್ಯೆ ಆಡಳಿತಕ್ಕೆ ಒಂದು ಸವಾಲೆಂಬಂತೆ ಉಳಿದಿದೆ. ಅವುಗಳಲ್ಲಿ ಭಾರತವೂ ಒಂದು. ಅಷ್ಟೇ ಅಲ್ಲ, ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಈ ಶತಮಾನದ ಅಂತ್ಯದ ವೇಳೆಗೆ ವಿಶ್ವದ ಸಾಕ್ಷರತಾ ಭೂಪಟದಲ್ಲಿ ಭಾರತವೊಂದೇ ಅತ್ಯಂತ ಅಧಿಕ ಸಂಖ್ಯೆಯ ಅನಕ್ಷರಸ್ಥರನ್ನು ಹೊಂದಿರುವ ದೇಶವಾಗಿ ಉಳಿಯುವುದು. ಈ ಪರಿಸ್ಥಿತಿಯಿಂದ ಬಿಡುಗಡೆ ಹೊಂದುವ ಪ್ರಯತ್ನಗಳು ಸಾಗಿದ್ದು ಆ ಉದ್ದೇಶಕ್ಕಾಗಿ ೧೯೭೮ರಲ್ಲಿ ಸಾಕ್ಷರತಾ ಆಂದೋಲನ ಯೋಜನೆ ಪ್ರಾರಂಭವಾಗಿದ್ದರೂ ಕೇಂದ್ರ ಮತ್ತು ರಾಜ್ಯಗಳಲ್ಲಿ ಜನ ಶಿಕ್ಷಣ ನಿಲಯಗಳು ಪ್ರಾರಂಭವಾಗಿ ಕಾರ್ಯೋನ್ಮುಖವಾಗಿದ್ದರೂ, ಪ್ರತಿ ಜಿಲ್ಲೆಯಲ್ಲೂ ಜಿಲ್ಲಾ ಸಾಕ್ಷರತಾ ಪ್ರಚಾರ ಯೋಜನೆ ರೂಪುಗೊಂಡು ಅನುಷ್ಠಾನಕ್ಕೆ ಬಂದಿದ್ದರೂ ಆ ಯೋಜನೆಗಳು ಅನುಸರಿಸುತ್ತಿರುವ ಮಾರ್ಗಗಳನ್ನು ಒರೆ ಹಚ್ಚಿ ನೋಡಿದಾಗ ಅವುಗಳು ತಮ್ಮ ಉದ್ದೇಶ ಸಾಧಿಸಲಾರವು ಎಂಬ ಕಟು ಸತ್ಯದ ಅರಿವಾಗುವುದು.

ಹೊಸ ಯೋಜನೆಗಳು :

ಅನಕ್ಷರಸ್ಥರೊಡನೆ ವೈಯಕ್ತಿಕ ಸಂಪರ್ಕವಿಲ್ಲದೆ, ರಾಜಕೀಯವನ್ನು ಬೆರಸದೆ ಸರ್ವರಿಗೂ ಅಗತ್ಯವಾದ ಕಾರ್ಯಕ್ರಮ ಇದೆಂದು ತಿಳಿದು ಎಲ್ಲ ರಾಜಕೀಯ ಪಕ್ಷಗಳನ್ನೂ ತೊಡಗಿಸದೆ ಮತ್ತು ಸಮೂಹಮಾಧ್ಯಮಗಳ ಸಹಾಯ ಸಹಕಾರಗಳನ್ನು ಪಡೆಯದೆ ಈ ಯೋಜನೆಯ ಅನುಷ್ಠಾನದಲ್ಲಿ ಯಶಸ್ಸುಗಳಿಸುವುದು ಸಾಧ್ಯವಿಲ್ಲ. ೧೯೭೮ರಲ್ಲಿ ಪ್ರಾರಂಭವಾದ ಕಾರ್ಯಕ್ರಮ ಪ್ರಾರಂಭ ಕಾಲದಲ್ಲಿ ಇದ್ದ ಭರಾಟೆಯನ್ನಾಗಲಿ, ಉತ್ಸಾಹವನ್ನಾಗಲಿ ಕೊನೆಯವರೆಗೂ ಉಳಿಸಿಕೊಳ್ಳಲಾಗದೆ ರಾಜಕೀಯ ಬದಲಾವಣೆಯಿಂದ ಕಾರ್ಯಕ್ರಮ ಕುಂಠಿತವಾಯಿತು.

ಕಳೆದ೬-೭ವರ್ಷಗಳಿಂದ ಈ ಆಂದೋಲನವು ಪುನಶ್ಚೇತನಗೊಂಡು ಪ್ರಾರಂಭವಾಗಿದೆ. ಕೇವಲ ಸರ್ಕಾರದ ಇಲಾಖೆಗಳೇ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತಂದು ಗುರಿ ಸಾಧಿಸಲಾರವು ಎಂಬ ಸತ್ಯವನ್ನು ಮನಗಂಡ ಸರ್ಕಾರ ತಾಲ್ಲೂಕು ಮತ್ತು ಜಿಲ್ಲಾ ಹಂತದಲ್ಲಿ ವಿಸ್ತೃತ ವೇದಿಕೆಯನ್ನು ನಿರ್ಮಾಣ ಮಾಡಿ ಈ ಕಾರ್ಯಕ್ರಮ ಒಂದು ಜನಾಂದೋಲನ ಆಗುವಂತೆ ಮಾಡಲು ಸಮಿತಿಗಳನ್ನು ರಚಿಸಿ ಅವುಗಳಿಗೆ ಧನ ಸಹಾಯ ಮಾಡಿ ಅವುಗಳು ಕಾರ್ಯಕ್ರಮದ ಜವಾಬ್ದಾರಿ ಹೊತ್ತು ಆಸಕ್ತಿ ವಹಿಸಿ ಕೆಲಸಮಾಡಿ ಯೋಜನೆಯು ಗುರಿ ಸಾಧಿಸುವಂತೆ ಮಾಡಬೇಕೆಂದು ಆಶಿಸಿದ್ದೇವೆ. ಜಿಲ್ಲಾ ಹಂತದಲ್ಲಿ ಜಿಲ್ಲಾಧಿಕಾರಿಗಳೂ , ತಾಲ್ಲೂಕು ಹಂತದಲ್ಲಿ ತಹಸಿಲ್ದಾರ್ ಅವರೂ ಅಧ್ಯಕ್ಷರು. ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯದರ್ಶಿಗಳು ಕಾರ್ಯಾಧ್ಯಕ್ಷರು. ಇದೊಂದು ಸ್ವಾಯತ್ತ ಸಂಸ್ಥೆಯಾಗಿದ್ದು ಎಲ್ಲ ರಾಜಕೀಯ ಪಕ್ಷಗಳ, ಸ್ವಯಂಸೇವಾ ಸಂಸ್ಥೆಗಳನ್ನಲ್ಲದೆ ಶಿಕ್ಷಣ ತಜ್ಞರನ್ನೊಳಗೊಂಡಿರಬೇಕೆಂಬುದು ಯೋಜನೆಯನ್ನು ರೂಪಿಸಿದವರ ಆಶಯವಾಗಿತ್ತು. ಈ ರಾಷ್ಟ್ರದ ದುರದೃಷ್ಟ; ಜಿಲ್ಲೆಯ ಆಡಳಿತ ಈ ಮೂಲ ಉದ್ದೇಶವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಲೇ ಇಲ್ಲ. ಅಧಿಕಾರದಲ್ಲಿದ್ದ ಪಕ್ಷದ ರಾಜಕಾರಣಿಗಳಿಗೇ ಪ್ರಾಧಾನ್ಯತೆ ಕೊಟ್ಟು ಉಳಿದವರನ್ನು ಅಲಕ್ಷಿಸಿದುದರಿಂದ ಇದು ಜನಾಂದೋಲನ ಆಗಲೇ ಇಲ್ಲ. ಸಮಾಜದ ಎಲ್ಲ ವರ್ಗದ ಮುಖಂಡರನ್ನೂ ಈ ಕಾರ್ಯಕ್ರಮದಲ್ಲಿ ತೊಡಗಿಸಲು ಸಾಧ್ಯವಾಗಲೇ ಇಲ್ಲ. ಒಂದು ರಾಜಕೀಯ ಪಕ್ಷ ಈ ಕಾರ್ಯಕ್ರಮವನ್ನು ಪಕ್ಷದ ಪ್ರಚಾರಕ್ಕಾಗಿ ಉಪಯೋಗಿಸಿಕೊಳ್ಳುತ್ತಿದೆ ಎಂಬ ಭಾವನೆ ಮೂಡಿ ಸಾರ್ವಜನಿಕರಿಂದ ಅಗತ್ಯ ಸಹಕಾರ ದೊರಕದೆ ಕಾರ್ಯಕ್ರಮ ನಿರೀಕ್ಷಿತ ಯಶಸ್ಸು ಸಾಧಿಸಲು ವಿಫಲವಾಯಿತು.

ವಾತಾವರಣ ನಿರ್ಮಾಣಕ್ಕೆ ಅಂದರೆ ಅನಕ್ಷರಸ್ಥರನ್ನು ಓದುಬರಹ ಕಲಿಯಲು ಮಾನಸಿಕವಾಗಿ ಸಿದ್ಧಪಡಿಸಲು ರೂಪಿಸಿಕೊಂಡ ಕಾರ್ಯಕ್ರಮಗಳಿಗೆ ಹೆಚ್ಚು ಪ್ರಾಶಸ್ತ್ಯಕೊಟ್ಟು ಅನಕ್ಷರಸ್ಥರೊಡನೆ ವೈಯಕ್ತಿಕ ಸಂಪರ್ಕ ಬೆಳೆಸಿಕೊಂಡು ಅವರು ಕೇಳಬಹುದಾದ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರ ಕೊಟ್ಟು ಅವರ ಮನವೊಲಿಸುವ ಪ್ರಯತ್ನ ನಡೆಯಲೇ ಇಲ್ಲ. ಇದೂ ಈ ಯೋಜನೆಯ ವೈಫಲ್ಯಕ್ಕೆ ಕಾರಣವಾಗಿದೆ. ಈ ಯೋಜನೆಯ ಅನುಷ್ಠಾನದಲ್ಲಿ ದೃಕ್‌ಶ್ರವಣ ಸಾಧನಗಳನ್ನು ಮತ್ತು ಸಮೂಹ ಮಾಧ್ಯಮಗಳನ್ನು ಉಪಯೋಗಿಸಿಕೊಳ್ಳುವ ಪ್ರಯತ್ನ ಮಾಡಲೇ ಇಲ್ಲ.

ವಯಸ್ಕರ ಶಿಕ್ಷಣದಲ್ಲಿ ದೃಕ್‌ಶ್ರವಣ ಸಾಧನಗಳು:

ವಯಸ್ಕರ ಶಿಕ್ಷಣದಲ್ಲಿ ದೃಕ್‌ಶ್ರವಣ ಸಾಧನಗಳಪ್ರಾಮುಖ್ಯವನ್ನು ನಾವಿನ್ನೂ ಅರ್ಥಮಾಡಿಕೊಂಡಿಲ್ಲ; ಮಾಡಿಕೊಂಡಿದ್ದರೂ ಅವುಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸುತ್ತಿಲ್ಲ. ಅನಕ್ಷರಸ್ಥ ವಯಸ್ಕರು ಮತ್ತು ನವಸಾಕ್ಷರರು, ಅಷ್ಟೇಕೆ ವಿದ್ಯಾವಂತರೂ ಕೂಡ ಯಾವುದೇ ವಿಷಯವನ್ನು ಸುಲಭವಾಗಿ ಗ್ರಹಿಸಲು ಈ ಸಾಧನಗಳು ನೆರವಾಗುವುವು. ಕೃಷಿ, ಹೈನುಗಾರಿಕೆ, ಗೃಹ ಕೈಗಾರಿಕೆ, ಕುಟುಂಬ ಯೋಜನೆ, ಆರೋಗ್ಯ ಮತ್ತಿತರ ವಿಷಯಗಳಿಗೆ ಸಂಬಂಧಿಸಿದಂತೆ ರಚಿಸಿರುವ ಹಲವು ಚಿತ್ರಪಟಗಳು ಮತ್ತು ಬರಹಗಳನ್ನು ಕಟ್ಟಡಗಳ ಗೋಡೆಗಳ ಮೇಲೆ, ಬಸ್ಸುಗಳ ಮೇಲೆ, ರಸ್ತೆ ಬದಿ ಆ ಉದ್ದೇಶಕ್ಕಾಗಿಯೇ ನಿರ್ಮಿಸಿರುವ ಪ್ರಚಾರ ಫಲಕಗಳ ಮೇಲೆ ಅಂಟಿಸಿರುವುದನ್ನು ನೋಡುತ್ತೇವೆ. ಆಕಾಶವಾಣಿ ಮತ್ತು ದೂರದರ್ಶನಗಳಲ್ಲೂ ಇದಕ್ಕೆ ಸಂಬಂಧಿಸಿದಂತೆ

ಜಾಹಿರಾತುಗಳನ್ನು ಕೇಳುತ್ತೇವೆ ಮತ್ತು ನೋಡುತ್ತೇವೆ. ಹಾಗೆಯೇ ರಾಷ್ಟ್ರೀಯ ಹೆದ್ದಾರಿಗಳಲ್ಲಿ, ರಾಜ್ಯದ ಹೆದ್ದಾರಿಗಳಲ್ಲಿ ಮತ್ತು ರಸ್ತೆಗಳ ಕೂಡುಗಳಲ್ಲಿಯೂ ಈ ವಿಷಯುಗಳಿಗೆ ಸಂಬಂಧಿಸಿದ ಬೃಹತ್ ಫಲಕಗಳನ್ನು ನೋಡುತ್ತೇವೆ. ಇವುಗಳು ಅನಕ್ಷರಸ್ಥರನ್ನಷ್ಟೇ ಅಲ್ಲ ಅಕ್ಷರಸ್ಥರನ್ನೂ ಆಕರ್ಷಿಸುತ್ತವೆ; ಅವರ ಆಸಕ್ತಿಯನ್ನು ಕೆರಳಿಸುತ್ತವೆ. ಅವರು ಆ ವಿಷಯುಗಳಿಗೆ ಸಂಬಂಧಿಸಿದಂತೆ ತಿಳಿದವರಿಂದ ಮತ್ತು ಸಂಬಂಧಪಟ್ಟವರಿಂದ ಹೆಚ್ಚಿನ ವಿವರಗಳನ್ನು ತಿಳಿದುಕೊಳ್ಳಲು ಉತ್ತೇಜಿಸುತ್ತವೆ. ಅಕ್ಷರಸ್ಥರಾದರೆ ಆ ವಿಷಯಕ್ಕೆ ಸಂಬಂಧಿಸಿದಂತೆ ಪ್ರಕಟವಾಗಿರುವ ಪುಸ್ತಕಗಳನ್ನು ಓದಿ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳುವರು. ವಿವಿಧ ಕ್ಷೇತ್ರಗಳಲ್ಲಿ ಉಪಯೋಗಿಸುವ ವಿವಿಧ ಬಗೆಯ ಯಂತ್ರೋಪಕರಣಗಳು, ಕೀಟನಾಶಕಗಳು, ಔಷಧಿಗಳು, ಆಹಾರ ಪದಾರ್ಥಗಳು, ಪಾದ ರಕ್ಷೆಗಳು, ಉಡುಪುಗಳು ಇವೇ ಮುಂತಾದ ವಸ್ತುಗಳು ಪ್ರಚಾರಕ್ಕೆ ದೃಕ್‌ಶ್ರವಣ ಸಾಧನಗಳ ಬಳಕೆ ಹೆಚ್ಚುತ್ತಲೇ ಇದೆ. ಆಕಾಶವಾಣಿ ಮತ್ತು ದೂರದರ್ಶನ ಕಾರ್ಯಕ್ರಮಗಳ ಶ್ರೋತೃಗಳಿಗೆ ಮತ್ತು ವೀಕ್ಷಕರಿಗೆ ಇವುಗಳ ಮಹತ್ವದ ಅರಿವಾಗುವುದು. ಅನಕ್ಷರಸ್ಥರಿಗೂ ಹಲವು ಉಪಕರಣಗಳ ಮತ್ತು ವಸ್ತುಗಳ ವಿಶೇಷ ಗುಣ ಮತ್ತು ಉಪಯುಕ್ತತೆಯನ್ನು ತಿಳಿಸುವ ಪ್ರಚಾರ ಮಾಧ್ಯಮಗಳು ಇವು. ಆದುದರಿಂದ ವಯಸ್ಕರ ಶಿಕ್ಷಣದಲ್ಲಿ ಇವುಗಳ ಉಪಯೋಗದ ಪ್ರಾಮುಖ್ಯವನ್ನು ಒತ್ತಿ ಹೇಳಬೇಕಾದ ಅಗತ್ಯವಿಲ್ಲ.

ನೋಡಿಕಲಿ, ಕೇಳಿಕಲಿ, ಮಾಡಿಕಲಿ ಎಂಬ ಮಾತುಗಳು ಜ್ಞಾನಾರ್ಜನೆಯಲ್ಲಿ ಮತ್ತು ಉತ್ಪಾದನಾ ಚಟುವಟಿಕೆಗಳಲ್ಲಿ ಪ್ರಮುಖ ಅಂಶಗಳು. ನಾವು ಎಷ್ಟೇ ವಿವರಣೆಕೊಟ್ಟರೂ ಕಲಿಯುವವರಿಗೆ ಅರ್ಥವಾಗದೆ ಹೋಗಬಹುದು. ಆದರೆ ನಾವು ತಿಳಿಸಬೇಕೆಂದಿರುವ ಜ್ಞಾನಕ್ಕೆ ಸಂಬಂಧಿಸಿದಂತೆ ಒಂದು ಪ್ರಯೋಗವನ್ನೋ, ಒಂದು ಉಪಕರಣವನ್ನೋ ಅಥವಾ ಒಂದು ವಸ್ತುವನ್ನೋ ಮಾಡಿ ಅದರ ಪ್ರಕ್ರಿಯೆಗಳನ್ನು ವೀಕ್ಷಿಸುವ ಅವಕಾಶವನ್ನು ಕಲಿಯುವವರಿಗೆ ಒದಗಿಸಿಕೊಟ್ಟರೆ ಆ ಪ್ರಕ್ರಿಯೆಗಳನ್ನು ಸ್ವತಃ ನೋಡುವುದರಿಂದ ಅವುಗಳಿಗೆ ಸಂಬಂಧಿಸಿದ ಎಲ್ಲ ವಿವರಗಳನ್ನೂ ಅರ್ಥ ಮಾಡಿಕೊಳ್ಳುವರು.

ಕಲಿಕೆಗೆ ಮೂರು ಮಾರ್ಗಗಳು. ನೋಡಿ ಕಲಿಯುವುದು, ಮಾಡಿಕಲಿಯುವುದು ಮತ್ತು ಕೇಳಿ ಕಲಿಯುವುದು. ಈ ಉಪಕರಣಗಳೇ ದೃಕ್‌ಶ್ರವಣಸಾಧನಗಳು. ಇವುಗಳನ್ನು ಬೋಧನಾಸಲಕರಣೆಗಳು ಎನ್ನುವುದಕ್ಕಿಂತ ''ಕಲಿಕೆಯ ಪರಿಕರಗಳು'' ಎಂದು ಕರೆಯುವುದು ಹೆಚ್ಚು ಸೂಕ್ತ.

ದೃಕ್‌ಶ್ರವಣ ದ್ವಂದ್ವ ಪದ. ಇದು ಇಂಗ್ಲಿಷಿನ Audio-Visual ಪದದ ಸಮಾನಾರ್ಥ ಪದ. ಇದನ್ನು ''ದೃಕ್'' ಎಂದರೆ ನೋಡುವ ''ಶ್ರವಣ'' ಎಂದರೆ ಕೇಳುವ ಎಂದರೆ ನೋಡುವ ಮತ್ತು ಕೇಳುವ ಎರಡೂ ಪ್ರಕ್ರಿಯೆಗಳನ್ನು ಹೊಂದಿರುವುದು ಎಂದು ಅರ್ಥೈಸಬಹುದು. Audio-Visual ಪದಗಳ ಜೊತೆಗೆ Aids ಎಂಬ ಮತ್ತೊಂದು ಪದ ಸೇರಿ Audio-Visual Aids ಆಗಿದೆ. ಕನ್ನಡದಲ್ಲಿ ಇದರ ಅರ್ಥ ''ದೃಕ್ ಶ್ರವಣ ಸಾಧನಗಳು'' ಎಂದು. ಬೋಧನೆಯನ್ನು ಪರಿಣಾಮಕಾರಿಯನ್ನಾಗಿ ಮಾಡಿ ಮಕ್ಕಳು ತಾವು ಬೋಧಿಸಿದುದನ್ನು ಜೀರ್ಣಿಸಿಕೊಂಡು ಅದನ್ನು ತಮ್ಮದನ್ನಾಗಿ ಮಾಡಿಕೊಳ್ಳುವಂತೆ ಮಾಡುವ ಉದ್ದೇಶದಿಂದ ಶಿಕ್ಷಕರು ಮತ್ತು ಶಿಕ್ಷಣ

ತಜ್ಞರು ನಡೆಸಿದ ಸತತ ಪ್ರಯೋಗಗಳು ಮತ್ತು ಸಂಶೋಧನೆಗಳ ಫಲವಾಗಿ ರೂಪುಗೊಂಡ ಸಾಧನಗಳು ಇವು. ಕೇವಲ ಶಬ್ದಗಳ ಬಳಕೆಯ ವಿವರಣೆ ನೀರಸವಾಗಿರುವುದಲ್ಲದೆ ಬೇಸರಿಕೆಯನ್ನುಂಟುಮಾಡುತ್ತದೆ. ಆ ವಿವರಣೆಗೆ ಪೂರಕವಾಗಿ ಮತ್ತು ಅದು ಹೆಚ್ಚು ಅರ್ಥವತ್ತಾಗಿಯೂ, ಪರಿಣಾಮಕಾರಿಯಾಗಿಯೂ ಆಗುವಂತೆ ಮಾಡುವ ಉದ್ದೇಶದಿಂದ ದೃಕ್‌ಶ್ರವಣ ಸಾಧನಗಳನ್ನು ಬೋಧನೆಯಲ್ಲಿ ವ್ಯಾಪಕವಾಗಿ ಉಪಯೋಗಿಸುತ್ತಿದ್ದೇವೆ.

ಶಿಕ್ಷಣ ತಜ್ಞ ಕೊಮಿನಿಯಸ್ ಬೋಧನೆ ಮತ್ತು ಕಲಿಕೆಯಲ್ಲಿ ದೃಕ್‌ಶ್ರವಣ ಸಾಧನೆಗಳ ಪ್ರಾಮುಖ್ಯವನ್ನು ಒತ್ತಿ ಹೇಳಿದ್ದಾನೆ. ವ್ಯಕ್ತಿ ತಾನು ನೋಡಿದುದನ್ನು ಬಹುಕಾಲ ಮನಸ್ಸಿನಲ್ಲಿ ಚಿತ್ರಿಸಿಕೊಳ್ಳಬಲ್ಲ. ಅದು ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ನೆನಪಿನಲ್ಲಿಟ್ಟುಕೊಳ್ಳುವಂತೆ ಮಾಡುವುದು. ಈ ಎರಡೂ ಒಗ್ಗೂಡಿದರೆ ಬೋಧನೆ ಮತ್ತು ಕಲಿಕೆ ಅರ್ಥವತ್ತಾಗುತ್ತವೆ. ಜ್ಞಾನಾರ್ಜನೆ ಸುಲಭವಾಗುತ್ತದೆ. ಇದರಿಂದಲೇ ಏನೋ ನಮ್ಮ ಹಿರಿಯರು ಸಮಾಜದಲ್ಲಿ ಜನರು ಉತ್ತಮ ಮೌಲ್ಯಗಳನ್ನು ಪಾಲಿಸುವಂತೆ ಪ್ರಚಾರ ಮಾಡಲು ಯಕ್ಷಗಾನ, ನಾಟಕಗಳು, ಪ್ರಸಂಗಗಳು, ಹರಿಕಥೆ, ಶಿವಕಥೆ, ಗೊಂಬೆಯಾಟ ಕಾವ್ಯವಾಚನ ಮುಂತಾದವುಗಳ ವ್ಯವಸ್ಥೆ ಮಾಡಿಕೊಂಡಿದ್ದರು. ಅವುಗಳು ಜನಪ್ರಿಯವಾಗಿದ್ದುದಲ್ಲದೆ ಜನರಲ್ಲಿ ಒಳ್ಳೆಯ ಸಂಪ್ರದಾಯ ಮತ್ತು ಭಾವನೆಗಳು ಬೆಳೆಯುವಂತೆ ಮಾಡಲು ನೆರವಾಗುತ್ತಿದ್ದುವು. ಯಾವಾಗಲೂ ಸತ್ಯವನ್ನೇ ಹೇಳಬೇಕು; ಸುಳ್ಳು ಹೇಳಬಾರದು ಎಂಬುದೊಂದು ಮುಖ್ಯವಾದ ಮೌಲ್ಯ. ಕೆಲವೊಮ್ಮೆ ನಾವು ಜೀವನದಲ್ಲಿ ಪಾಲಿಸಿಕೊಂಡು ಬಂದಿರುವ ಮೌಲ್ಯಕ್ಕೆ ಅಪಚಾರವಾಗದಂತೆ ಒಬ್ಬ ವ್ಯಕ್ತಿಯ ಪ್ರಾಣಕ್ಕೆ ಅಪಾಯವಾಗುವುದನ್ನು ತಡೆಗಟ್ಟಲು ಸುಳ್ಳು ಹೇಳುವುದು ಅಗತ್ಯವೆನಿಸಿದರೆ ಅಂತಹ ಸನ್ನಿವೇಶದಲ್ಲಿ ಸುಳ್ಳು ಹೇಳಿದರೆ ನಾವು ನಂಬಿ ಪಾಲಿಸುತ್ತಿರುವ ಮೌಲ್ಯವನ್ನು ತಿರಸ್ಕರಿಸಿದಂತಲ್ಲ. ಇದು ಧರ್ಮಸಮ್ಮತ. ಒಬ್ಬ ತಪಸ್ವಿ ಮತ್ತು ಕಳ್ಳರ ತಂಡದ ನಡುವಿನ ಸಂಭಾಷಣೆ ಇದನ್ನು ಪುಷ್ಟೀಕರಿಸುತ್ತದೆ. ಹರಿಶ್ಚಂದ್ರ ನಾಟಕವನ್ನು ನೋಡಿದುದರಿಂದ ಆ ನಾಟಕದ ನಾಯಕ ಹರಿಶ್ಚಂದ್ರ ಸತ್ಯಪಾಲನೆಗಾಗಿ ಅನುಭವಿಸಿದ ಕಷ್ಟನಷ್ಟಗಳು ನನ್ನನ್ನು ಸತ್ಯಮಾರ್ಗದಲ್ಲಿ ನಡೆಯುವಂತೆ ಮಾಡಿದುವು ಎಂದು ಹೇಳಿಕೊಂಡಿದ್ದಾರೆ ಗಾಂಧೀಜಿ. ಅಂದರೆ ದೃಶ್ಯಾವಳಿಗಳು ಮತ್ತು ಸಂಭಾಷಣೆಗಳು ನೋಡುವವರ ಮತ್ತು ಕೇಳುವವರ ಮೇಲೆ ಪ್ರಭಾವ ಬೀರಿ ಅವುಗಳು ತಿಳಿಸಬೇಕೆಂದಿರುವ ಮೌಲ್ಯಗಳು ಮತ್ತು ಜ್ಞಾನ ಮನಸ್ಸಿನಾಳಕ್ಕೆ ಇಳಿದು ಅವು ವ್ಯಕ್ತಿಯ ಮನಸ್ಸಿನಲ್ಲಿ ಸ್ಥಾಯಿಯಾಗಿ ನಿಲ್ಲುವಂತೆ ಮಾಡುತ್ತವೆ. ಈ ಕಾರಣದಿಂದಲೇ ಬೋಧನೆ ಮತ್ತು ಕಲಿಕೆಯಲ್ಲಿ ದೃಕ್‌ಶ್ರವಣ ಸಾಧನಗಳು ಬಹುವಾಗಿ ಬಳಕೆಯಲ್ಲಿವೆ.

ಶಿಕ್ಷಕರು ಈ ಸಾಧನಗಳ ಮೂಲಕ ತಮ್ಮ ಅನುಭವಗಳನ್ನು ಕಲಿಯುವವರಿಗೆ ತಲುಪಿಸುವರು. ಈ ಸಾಧನಗಳು ಕಲಿಯುವವರು ತಮಗೆ ದೊರಕುವ ಜ್ಞಾನದ ತುಣುಕುಗಳನ್ನು ಸ್ಪಷ್ಟವೂ, ನಿರ್ದಿಷ್ಟವೂ ಆದ ರೀತಿಯಲ್ಲಿ ಅರ್ಥಮಾಡಿಕೊಂಡು ಆ ಜ್ಞಾನಭಂಡಾರವನ್ನು ತಮ್ಮದನ್ನಾಗಿಸಿಕೊಳ್ಳಲು ನೆರವಾಗುವುವು. ಇವುಗಳ ವ್ಯಾಪಕ ಉಪಯೋಗ ಬೋಧನಾ ಪದ್ಧತಿಯಲ್ಲಿ ಒಂದು ಕ್ರಾಂತಿಯನ್ನೇ ಉಂಟುಮಾಡಿದೆ. ಇವುಗಳ ಉಪಯೋಗ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗಷ್ಟೇ ಸೀಮಿತವಾಗಿಲ್ಲ. ಅವುಗಳ ಹೊರಗೂ ಯುವಕರ ತರಬೇತು ಕೇಂದ್ರಗಳಲ್ಲಿ, ಯುವಕ ಸಂಘಗಳ ಚಟುವಟಿಕೆಗಳಲ್ಲಿ, ಯುವತಿ ಮಂಡಳಿ ಕಾರ್ಯಕ್ರಮಗಳಲ್ಲಿ, ಅನೌಪಚಾರಿಕ ಶಿಕ್ಷಣ ಕ್ಷೇತ್ರದಲ್ಲಿ ಮತ್ತು ವಯಸ್ಕರ ಶಿಕ್ಷಣ ಕಾರ್ಯಕ್ರಮದಲ್ಲೂ ಪ್ರಮುಖಸ್ಥಾನ ಪಡೆದಿದೆ.

ಶಿಕ್ಷಣ ಎಂದಾಗ ಅದು ವಯಸ್ಕರ ಶಿಕ್ಷಣವನ್ನೂ ಒಳಗೊಂಡಿದೆ. ಶಾಲಾ ಶಿಕ್ಷಣ ಹಂತದಲ್ಲಿ ದೃಕ್‌ಶ್ರವಣ ಸಾಧನಗಳು ಬೋಧನೆಯನ್ನು ಅರ್ಥಪೂರ್ಣವಾಗಿ ಮಾಡುವುದಲ್ಲದೆ ಕಲಿಯುವಿಕೆಯನ್ನೂ ಸರಳವಾಗಿಸಿ ಅರ್ಥವತ್ತಾಗಿಸುತ್ತದೆ ಎಂಬುದು ನಮ್ಮ ನಿಲುವಾದರೆ ಅವುಗಳು ವಯಸ್ಕರ ಶಿಕ್ಷಣದಲ್ಲೂ ಅಗತ್ಯ ಸಾಧನಗಳೆಂಬುದರಲ್ಲಿ ಯಾವುದೇ ವಿವಾದ ಇಲ್ಲ.

ದೃಕ್ ಶ್ರವಣ ಸಾಧನಗಳು :

೧. ಕಪ್ಪು ಹಲಗೆ, ೨. ಪಠ್ಯಪುಸ್ತಕಗಳು, ೩. ಚಿತ್ರಪಟಗಳು, ಭೂಪಟಗಳು, ನಕ್ಷೆಗಳು ೪. ಫ್ಲಾನಲೊಗ್ರಾಫ್ ೫. ಎಪಿಡಿಯೋಸ್ಕೋಪ್ ೬. ನೆತ್ತಿಮೇಲ್ಗಡೆ ಪ್ರಕ್ಷೇಪಕ ೭. ಚಲನಚಿತ್ರ ಪದರ್ಶನ ೮. ಬೊಂಬೆಯಾಟಗಳು, ೯. ನಾಟಕಗಳು (ಬೀದಿ ನಾಟಕಗಳೂ ಸೇರಿದಂತೆ), ೧೦. ಪ್ರಚಾರೋಪನ್ಯಾಸಗಳು, ೧೧. ಆಕಾಶವಾಣಿ ಕಾರ್ಯಕ್ರಮಗಳು, ೧೨. ದೂರದರ್ಶನ ಕಾರ್ಯಕ್ರಮಗಳು ಇವಿಷ್ಟೂ ದೃಕ್‌ಶ್ರವಣ ಸಾಧನಗಳು. ಈ ಸಾಧನಗಳನ್ನು ಬೋಧನೆಯಲ್ಲಿ ಮತ್ತು ಕಲಿಕೆಯಲ್ಲಿ ಎಷ್ಟು ಪರಿಣಾಮಕಾರಿಯಾಗಿ ಉಪಯೋಗಿಸಬಹುದೆಂಬುದು ಕೇಂದ್ರದ ಕಾರ್ಯಕರ್ತರ ಜಾಣ್ಮೆಯನ್ನು ಮತ್ತು ಕೌಶಲವನ್ನವಲಂಬಿಸಿದೆ. ಶಿಕ್ಷಕ ತಾನು ತಿಳಿಸಬೇಕೆಂದಿರುವ ಕೌಶಲಗಳನ್ನು ಮತ್ತು ಜ್ಞಾನವನ್ನು ಕಲಿಯುವವರಿಗೆ ಮನಮುಟ್ಟುವಂತೆ, ಅವರ ನಿಲುಕಿಗೆ ಸಿಕ್ಕುವಂತೆ ವಿವರಿಸಲು ಪರಿಣಾಮಕಾರಿಯಾಗಿಯಾದರೂ ಉಪಯೋಗಿಸಬಹುದು; ಇಲ್ಲವೆ ಯಾವುದೆ ಪರಿಣಾಮ ಬೀರದಂತೆ ಯಾಂತ್ರಿಕವಾಗಿಯಾದರೂ ಉಪಯೋಗಿಸಬಹುದು; ಅದು ಅವರ ಕೌಶಲಗಳನ್ನವಲಂಬಿಸಿದೆ.

೧. ಕಪ್ಪು ಹಲಗೆ : ಅತ್ಯಂತ ಸುಲಭವಾಗಿ ದೊರೆಯುವ ಮತ್ತು ಎಲ್ಲರೂ ಉಪಯೋಗಿಸಬಹುದಾದ ದೃಶ್ಯ ಸಾಧನ ಕಪ್ಪುಹಲಗೆ. ಅದು ವ್ಯಾಪಕವಾಗಿ ಉಪಯೋಗದಲ್ಲಿದೆ ಎಂದು ಹೇಳುವುದಕ್ಕಿಂತ ಅದೊಂದು ಅಗತ್ಯವಾಗಿ ಬೇಕಾಗುವ ಸಾಧನ ಎಂದು ಹೇಳುವುದು ಸೂಕ್ತ. ವಯಸ್ಕರ ಶಿಕ್ಷಣ ಕೇಂದ್ರಗಳಿಗೆ ಸರಬರಾಜು ಮಾಡುವ ಪರಿಕರಗಳಲ್ಲಿ ಇದೂ ಒಂದು. ಮರದಹಲಗೆಗಳನ್ನು ಜೋಡಿಸಿ ಸೇರಿಸಿ ಚೌಕಟ್ಟು ಹಾಕಿ ಅದರ ಮೇಲ್ಮೈ ಸಮ ಮಾಡಿ ಕಪ್ಪು ಬಣ್ಣ ಹಾಕಿ ಇದನ್ನು ಸಿದ್ಧಪಡಿಸುವರು. ವಯಸ್ಕರ ಶಿಕ್ಷಣ ಕೇಂದ್ರಗಳು ಶಾಲೆಗಳಲ್ಲಿ ನಡೆದರೆ ಅಲ್ಲಿರುವ ಕಪ್ಪುಹಲಗೆಯನ್ನು ಉಪಯೋಗಿಸಬಹುದು. ಕೇಂದ್ರಗಳಿಗೆ ಪ್ರತ್ಯೇಕ ಸ್ಥಳವಿಲ್ಲದೆ ಇರುವುದರಿಂದ ಮರದ ಕಪ್ಪುಹಲಗೆ ಉಪಯೋಗಿಸುವುದು ಕಷ್ಟ. ಆದುದರಿಂದ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸುಲಭವಾಗಿ ಕೊಂಡೊಯ್ಯಬಹುದಾದಂತಹ ಸುರುಳಿ ಕಪ್ಪುಹಲಗೆ ಉಪಯೋಗ ಸಾಮಾನ್ಯವಾಗಿದೆ. ಇದನ್ನು ರೆಕ್ಸಿನ್ ಬಟ್ಟೆಯಿಂದ ಮಾಡುತ್ತಾರೆ. ಗೋಡೆ ಸಮತಟ್ಟಾಗಿಯೂ ನಯವಾಗಿಯೂ ಇಲ್ಲದಿದ್ದರೆ ಇದನ್ನು ಉಪಯೋಗಿಸುವುದು ಕಷ್ಟ. ಅಕ್ಷರಗಳ, ಪದಗಳ ಮತ್ತು ಸಂಖ್ಯೆಗಳ ಪರಿಚಯ ಮಾಡಿಸುವುದಕ್ಕೆ ಬೇರೆ ಬೇರೆ ವೃತ್ತಿಗಳಿಗೆ ಸಂಬಂಧಿಸಿದ ಮಾಹಿತಿ ಕೊಡುವುದಕ್ಕೆ ಇದು ಅಗತ್ಯ.

೨. ಪಠ್ಯಪುಸ್ತಕಗಳು : ಪಠ್ಯಪುಸ್ತಕಗಳು ಎನ್ನುವುದಕ್ಕಿಂತ ಕಲಿಕೆಯ ಸಾಮಗ್ರಿಗಳು ಎಂದು ಹೇಳಿದರೆ ಹೆಚ್ಚು ಸಮಂಜಸವೆನಿಸುತ್ತದೆ. ಇವುಗಳಲ್ಲಿ ವರ್ಣರಂಜಿತ ಚಿತ್ರಗಳಿದ್ದು ಆಕರ್ಷಣೀಯವಾಗಿರಬೇಕು. ವಯಸ್ಕರು ತಮ್ಮ ದಿನನಿತ್ಯದ ವ್ಯವಹಾರದಲ್ಲಿ, ತಮ್ಮ ವೃತ್ತಿಯಲ್ಲಿ ಬಳಸುವ ಪದಗಳು ಮತ್ತು ಭಾಷೆಯನ್ನೇ ಉಪಯೋಗಿಸಿ ರಚಿಸಬೇಕು. ಪ್ರಾರಂಭದಲ್ಲಿ ಒಂದು ಪದದಿಂದ ಮೊದಲು ಮಾಡಿ ಅವರು ಕುತೂಹಲರಾದಂತೆಲ್ಲ ಎರಡು, ಮೂರು ಅಥವಾ ನಾಲ್ಕು ಪದಗಳ ವಾಕ್ಯಗಳನ್ನು ಉಪಯೋಗಿಸಬೇಕು. ಇದು ಹಂತ ಹಂತವಾಗಿ ಸಾಗಬೇಕು. ಉದಾಹರಣೆಗೆ: ಕದ, ದನ, ಕರು, ಕುರಿ, ಹಾಲು, ಆಡು, ಮಗು, ಮರ, ನೇಗಿಲು,

ನೊಗ, ಗಾಡಿ- ಇವೇ ಮುಂತಾದ ಪದಗಳನ್ನು ಪರಿಚಯಿಸಿ ಅವುಗಳನ್ನು ಅವರು ಬರೆಯುವಂತೆ ಮಾಡಬೇಕು. ಕ್ರಮೇಣ ವಾಕ್ಯಗಳನ್ನು ಪ್ರಾರಂಭಿಸಬೇಕು. ಉದಾಹರಣೆಗೆ : ಇದು ಹಸು. ಇದು ಬಸವನ ಹಸು. ಇದು ಕರೆಯುವ ಹಸು. ಈರನಿಗೆ ಅದನ್ನು ಕಂಡರೆ ಬಹಳ ಪ್ರೀತಿ. ಮನೆಯ ಜನರೆಲ್ಲರೂ ಅದನ್ನು ಪ್ರೀತಿಸುವರು. ಹೀಗೆ ಸರಳ ವಾಕ್ಯಗಳ ಮೂಲಕ ಹೈನುಗಾರಿಕೆಯನ್ನು ಪರಿಚಯಿಸಬೇಕು. ಪುಸ್ತಕದ ಮೇಲು ಹೊದಿಕೆ ರಂಗುರಂಗಿನದಾಗಿದ್ದು ವಯಸ್ಕರನ್ನು ಆಕರ್ಷಿಸುವಂತಿರಬೇಕು. ಒಳಗಡೆ ಅಧ್ಯಾಯ ಪಾಠಕ್ಕೆ ಸರಿಹೊಂದುವಂತೆ ಬಣ್ಣದ ಚಿತ್ರಗಳಿರಬೇಕು. ಚಿತ್ರನೋಡಿದ ಕೂಡಲೆ ಆದರ ಸಂಕೇತ ಏನೆಂಬುದು ವಯಸ್ಕರಿಗೆ ತಿಳಿಯುವಂತಿರಬೇಕು. ಇದು ನಾವು ಉಪಯೋಗಿಸುತ್ತಿರುವ ಕಲಿಕೆಯ ಸಾಮಗ್ರಿಗಳ ಗುಣಮಟ್ಟ ತೃಪ್ತಿಕರವಾಗಿಲ್ಲ. ಕಲಿಕೆಯ ಹಂತದ ನಂತರ ಆ ಅವಧಿಯಲ್ಲಿ ವಯಸ್ಕರು ಗಳಿಸಿದ ಸಾಕ್ಷರತಾಶಕ್ತಿಯನ್ನು ಉಳಿಸಿಕೊಂಡು ಬೆಳೆಸಿಕೊಳ್ಳಲು ನೆರವಾಗುವಂತೆ ನವಸಾಕ್ಷರರಿಗೆ ಸಾಹಿತ್ಯ ರಚಿಸಿ ಒದಗಿಸಬೇಕು.

೩. ಚಿತ್ರಪಟಗಳು, ಭೂಪಟಗಳು, ನಕ್ಷೆಗಳು:

ಶಿಕ್ಷಣ ಕ್ಷೇತ್ರದಲ್ಲಷ್ಟೇ ಅಲ್ಲ ವಯಸ್ಕರ ಶಿಕ್ಷಣದಲ್ಲೂ ಇವುಗಳನ್ನು ಹೆಚ್ಚಾಗಿ ಉಪಯೋಗಿಸುತ್ತೇವೆ. ದನಗಳ ಕೊಟ್ಟಿಗೆಯನ್ನು ಹೇಗಿಡಬೇಕೆಂದು ವಿವರಿಸಲು, ಸಸಿಮಡಿಗಳನ್ನು ಸಿದ್ಧಪಡಿಸುವುದಕ್ಕೆ ಸಂಬಂಧಿಸಿದ ವಿವರಗಳನ್ನು ಕೊಡಲು, ಬತ್ತ, ಕಬ್ಬು, ತೆಂಗು ಮುಂತಾದವುಗಳ ಕೃಷಿಗೆ ಸಂಬಂಧಿಸಿದ ಮಾಹಿತಿ ಕೊಡಲು, ಅವರ ಗ್ರಾಮ ಪಂಚಾಯಿತಿ, ತಾಲ್ಲೂಕು, ಜಿಲ್ಲೆಗಳು ಮತ್ತು ರಾಜ್ಯವನ್ನು ಪರಿಚಯಿಸಲು ಚಿತ್ರಪಟಗಳು ಮತ್ತು ಭೂಪಟಗಳನ್ನು ಉಪಯೋಗಿಸುತ್ತೇವೆ. ಅವುಗಳು ನಮ್ಮ ಉದ್ದೇಶ ನೆರವೇರಿಸಬೇಕಾದರೆ ಅನೇಕ ವಿಷಯಗಳನ್ನು ಒಂದೇ ಚಿತ್ರದಲ್ಲಿ ವಿವರಿಸಲು ಪ್ರಯತ್ನಿಸಬಾರದು. ಚಿತ್ರಗಳು ಸ್ಫುಟವಾಗಿರಬೇಕು ಮತ್ತು ಅವುಗಳು ವಯಸ್ಕರ ಮನಸ್ಸನ್ನು ಆಕರ್ಷಿಸುವಂತಿರಬೇಕು. ಉದ್ಯಮಿಗಳು ಮತ್ತು ವ್ಯಾಪಾರಗಾರರು ಉಪಯೋಗಿಸುವ ಪ್ರಚಾರ ಸಾಮಗ್ರಿಗಳು ನಮಗೆ ಮಾರ್ಗದರ್ಶಕಗಳು. ವಯಸ್ಕರ ಶಿಕ್ಷಣ ಕೇಂದ್ರಗಳಿಗೆ ನಾವು ರಚಿಸುವ ದೃಶ್ಯ ಸಾಧನಗಳು ಅದೇ ಮಾದರಿಯಲ್ಲಿದ್ದು ಅವುಗಳಿಗಿಂತಲೂ ಆಕರ್ಷಣೀಯವಾಗಿರಬೇಕು.

೪. ಫ್ಲಾನಲೊಗ್ರಾಫ್: ನಯವಾದ ಹಲಗೆಯ ಮೇಲೊ, ಪ್ಲೈವುಡ್ ಹಲಗೆಯಮೇಲೊ ಸಡಿಲವಾಗಿ ನೆಯ್ದಿರುವ ಉಣ್ಣೆಯ ಬಟ್ಟೆಯನ್ನು ಅಂಟಿಸಿ ಮಾಡಿರುವ ಸಾಧನ. ಪ್ರದರ್ಶಿಸಬೇಕಾಗಿರುವ ಚಿತ್ರಗಳು ಮತ್ತು ಪದಗಳನ್ನು ಬರೆದಿರುವ ರಟ್ಟಿನ ಅಥವಾ ಕಾಗದದ ಹಿಂಬದಿಗೆ ಮರಳು ಕಾಗದದ ಚೂರುಗಳನ್ನು ಅಂಟಿಸಿದರೆ ಅವುಗಳು ಫ್ಲಾನಲೋಗ್ರಾಫ್ ಮೇಲೆ ಭದ್ರವಾಗಿ ನಿಲ್ಲುವುವು. ನಾವು ವಯಸ್ಕರಿಗೆ ತಿಳಿಸಬೇಕೆಂದಿರುವ ವಿಷಯಗಳಿಗೆ ಸಂಬಂಧಿಸಿದಂತೆ ಚಿತ್ರಗಳು ಮತ್ತು ನಕ್ಷೆಗಳನ್ನು ಬರೆದು ಅವುಗಳನ್ನು ಈ ಸಾಧನದ ನೆರವಿನಿಂದ ಪ್ರದರ್ಶಿಸಿ ಅವರಿಗೆ ಅರ್ಥವಾಗುವಂತೆ ವಿವರಿಸಬಹುದು. ಒಮ್ಮೆ ಸಿದ್ಧಪಡಿಸಿದ ಚಿತ್ರಗಳನ್ನು ಅಗತ್ಯವೆನಿಸಿದಾಗಲೆಲ್ಲ ಉಪಯೋಗಿಸಬಹುದು. ವಿಷಯಾನುಕ್ರಮ ಚಿತ್ರರಚನೆ ಮತ್ತು ಅವುಗಳ ಉಪಯೋಗ ಶಿಕ್ಷಕರ ಕೌಶಲವನ್ನವಲಂಬಿಸಿದೆ. ಇದೊಂದು ಅತಿ ಸುಲಭವಾಗಿ ಸಿದ್ಧಪಡಿಸಿ ವಯಸ್ಕರ ಶಿಕ್ಷಣದಲ್ಲಿ ಪರಿಣಾಮಕಾರಿಯಾಗಿ ಉಪಯೋಗಿಸಬಹುದಾದ ಮತ್ತು ಹೆಚ್ಚು ಖರ್ಚಿಲ್ಲದೆ ತಯಾರಿಸಬಹುದಾದಂತಹ ಸಾಧನ.

೫. ಎಪಿಡಿಯಾಸ್ಕೋಪ್: ಎಪಿಡಿಯಾಸ್ಕೋಪ್ ಮತ್ತು ಡಯಾಸ್ಕೋಪ್ ಇವೆರಡರ ಪ್ರಕ್ಷೇಪಣಗಳನ್ನೂ ಒಳಗೊಂಡಿರುವ ಒಂದು ಯಂತ್ರ (ಮಾಯಾದೀಪ) ಈ ಯಂತ್ರದ ಕೆಳಗೆ

ಚಿತ್ರಗಳನ್ನಿಟ್ಟು ಪ್ರಕ್ಷೇಪಿಸಿದಾಗ ಆ ಚಿತ್ರಗಳ ಪ್ರತಿಬಿಂಬಗಳು ಮುಂದಿನ ಪರದೆಯ ಮೇಲೆ ಬೀಳುವುವು. ಇದಕ್ಕಾಗಿ ಪ್ರತ್ಯೇಕ ಚಿತ್ರಗಳನ್ನು ರಚಿಸುವ ಅಗತ್ಯವಿಲ್ಲ. ಉಪಯೋಗಿಸುವ ಪುಸ್ತಕದಲ್ಲಿಯೇ ಆಕರ್ಷಕವಾದ ವರ್ಣಚಿತ್ರಗಳಿದ್ದರೆ ಅವುಗಳೇ ಸಾಕು. ಅವುಗಳು ಸ್ಫುಟವಾಗಿದ್ದು ಬಣ್ಣದ ಚಿತ್ರಗಳಾಗಿದ್ದರೆ ಆಕರ್ಷಣೀಯವಾಗಿರುತ್ತವೆ. ಅವುಗಳು ಚೆನ್ನಾಗಿಲ್ಲದಿದ್ದರೆ ವಿಷಯಗಳಿಗನುಗುಣವಾಗಿ ಚಿತ್ರಗಳನ್ನು ಬರೆಸಬೇಕಾಗುವುದು. ಚಿತ್ರಗಳನ್ನು ಪ್ರದರ್ಶಿಸಿ ಸಂಬಂಧಪಟ್ಟ ವಿಷಯಗಳನ್ನು ವಿವರಿಸಬಹುದು. ಚಿತ್ರಗಳು ಎಲ್ಲರಿಗೂ ಸ್ಪಷ್ಟವಾಗಿ ಕಾಣುವುವು.

೬. ಓವರ್ ಹೆಡ್ ಪ್ರೊಜೆಕ್ಟರ್ (ನೆತ್ತಿ ಮೇಲ್ಗಡೆ ಪ್ರಕ್ಷೇಪಕ):

ನಾವು ವಿವರಿಸಬೇಕೆಂದಿರುವ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಸೂಚಕ ಪದ ಅಥವಾ ಸೆಳೆನುಡಿಗಳನ್ನು ಒಂದು ಪ್ಲಾಸ್ಟಿಕ್ ಹಾಳೆಯಲ್ಲಿ ಬರೆದು ದರ್ಪಣದ ಮೇಲಿಟ್ಟರೆ ಅದು ಮುಂದಿನ ತೆರೆಯಮೇಲೆ ಬೀಳುತ್ತದೆ. ಆ ಪದಗಳನ್ನು ಕೇಂದ್ರಬಿಂದುಗಳನ್ನಾಗಿಟ್ಟುಕೊಂಡು ಕಲಿಯುವವರಿಗೆ ಸಂಬಂಧಿಸಿದ ವಿಷಯಗಳ ವಿವರಗಳನ್ನು ತಿಳಿಸಬಹುದು. ತೆರೆಯಮೇಲೆ ಕಾಣುವ ಸೂಚಕಪದಗಳು ಕಲಿಯುವವರ ಮನಸ್ಸಿನಲ್ಲಿ ನಿಲ್ಲುವುವು. ಅವುಗಳಿಗೆ ಸಂಬಂಧಪಟ್ಟ ವಿಷಯಗಳೂ ಅವರಿಗೆ ತಲುಪಿ ಅವರು ಅದನ್ನು ಅರ್ಥ ಮಾಡಿಕೊಳ್ಳುವರು.

೭. (ಅ) ಜಾರುಪಟಲ ಅಥವಾ ಚಿತ್ರಫಲಕ : (ಆ) ಚಿತ್ರಗಳ ಪಟ್ಟಿ (ಇ) ಚಲನಚಿತ್ರ ಪ್ರೇಕ್ಷಕ

ಈ ಮೂರೂ ರೀತಿಯ ದೃಶ್ಯ ಸಾಧನಗಳು ಬೋಧನೆಯಲ್ಲಿ ಅತಿ ಹೆಚ್ಚಾಗಿ ಬಳಕೆಯಲ್ಲಿವೆ. ಮೊದಲನೆಯ ಎರಡು ಅಂದರೆ ಚಿತ್ರಪಟಲ ಮತ್ತು ಚಿತ್ರಗಳಪಟ್ಟಿಗಳು ಕೇವಲ ದೃಶ್ಯ ಸಾಧನಗಳು. ಅವುಗಳನ್ನು ಉಪಯೋಗಿಸುವವರು ಆಯಾ ವಿಷಯಕ್ಕೆ ಸಂಬಂಧಿಸಿದಂತೆ ವಿವರಣೆಕೊಡಬೇಕು. ಈ ವಿವರಣೆಯ ಕಾಲದಲ್ಲಿ ಈ ದೃಶ್ಯಗಳು ಎಷ್ಟುಕಾಲ ಅಗತ್ಯವೋ ಅಷ್ಟುಕಾಲ ಉಳಿಸಿಕೊಳ್ಳಬಹುದು.

ವಿವಿಧ ವಿಷಯಗಳಿಗೆ ಸಂಬಂಧಪಟ್ಟಂತೆ ಅತಿಮುಖ್ಯ ಘಟಕಗಳನ್ನು ಆಯ್ಕೆಮಾಡಿ ಅವುಗಳಿಗೆ ಸಂಬಂಧಿಸಿದ ಚಿತ್ರ ರಚಿಸಿ ಚಿತ್ರಫಲಕಗಳನ್ನು ರಚಿಸುವರು. ಈ ಚಿತ್ರಫಲಕಗಳು ಅನುಕ್ರಮವಾಗಿರುವುದರಿಂದ ಅವುಗಳನ್ನು ನೋಡುವವರು ಆಯಾ ವಿಷಯಕ್ಕೆ ಸಂಬಂಧಿಸಿದಂತೆ ಹಂತ ಹಂತವಾಗಿ ಆಗುವ ಬೆಳವಣಿಗೆಯನ್ನು ಸುಲಭವಾಗಿ ಅರ್ಥಮಾಡಿಕೊಳ್ಳುವರು. ಚಿತ್ರಫಲಕಗಳ ಪ್ರದರ್ಶನದ ಜೊತೆಗೆ ವಿವರಣೆಯೂ ಇರುವುದರಿಂದ ಶಿಕ್ಷಣ ಕೇಂದ್ರಕ್ಕೆ ಬರುವ ವಯಸ್ಕರು ಅವರಿಗೆ ತಿಳಿಸಬೇಕೆಂದು ಉದ್ದೇಶಿಸಿರುವ ವಿಷಯವನ್ನು ಸುಲಭವಾಗಿ ಅರ್ಥಮಾಡಿಕೊಳ್ಳುವರು. ಒಂದೇ ಚಿತ್ರದಲ್ಲಿ ಹೆಚ್ಚಿನ ವಿವರಗಳನ್ನು ಕೊಡಲು ಪ್ರಯತ್ನಿಸಿ ಚಿತ್ರಗೊಂದಲಮಯವಾಗದಂತೆ ಎಚ್ಚರ ವಹಿಸಬೇಕು. ಚಿತ್ರಫಲಕಗಳು ಕೆಲವೇ ಅಂಶಗಳನ್ನು ಒಳಗೊಂಡಿದ್ದರೆ ಅವುಗಳು ನೋಡುವವರನ್ನು ಆಕರ್ಷಿಸುತ್ತದೆ.

(ಇ) ಕೊನೆಯದ ಚಲನಚಿತ್ರ ಪ್ರೇಕ್ಷಕ: ಇದು ಚಲನಚಿತ್ರ ಮಂದಿರಗಳಲ್ಲಿ ಉಪಯೋಗಿಸುವಂತಹ ಮಾದರಿಯದೆ. ಆದರೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸುಲಭವಾಗಿ ಸಾಗಿಸಿಕೊಂಡು ಹೋಗಬಹುದಾದ ಗಾತ್ರದ್ದು. ಅದಕ್ಕೆ ಬೇಕಾದ ಬೆಳ್ಳಿತೆರೆಯೂ ಚಿಕ್ಕದು. ಇವುಗಳನ್ನು ಬೇಕಾದ ಕಡೆಗೆ ತೆಗೆದುಕೊಂಡು ಹೋಗಿ ಬೇರೆ ಬೇರೆ ವಿಷಯಗಳಿಗೆ ಸಂಬಂಧಿಸಿದಂತೆ ತಯಾರಿಸಿದ ಚಲನಚಿತ್ರಗಳನ್ನು ಆ ಮಾಹಿತಿಗಳ ಅಗತ್ಯವಿರುವ ಸಮುದಾಯದಲ್ಲಿ ಪ್ರದರ್ಶಿಸಿ ಅವರಿಗೆ ಅಗತ್ಯ ಮಾಹಿತಿ ಒದಗಿಸಬಹುದು. ಸಾಂಕ್ರಾಮಿಕ ರೋಗಗಳಿಗೆ ಕಾರಣ, ಅವುಗಳು ಹರಡುವ ಬಗೆ, ಅವುಗಳ ನಿಯಂತ್ರಣ, ಮಕ್ಕಳ ಪೋಷಣೆ, ಆರೋಗ್ಯ ಮತ್ತು ನೈರ್ಮಲ್ಯಗಳ

ಬಗ್ಗೆ ಜನ ಸಾಮಾನ್ಯರಿಗೆ ತಿಳುವಳಿಕೆ ಕೊಡಲು ಆರೋಗ್ಯ ಇಲಾಖೆ ಇದನ್ನು ಪರಿಣಾಮಕಾರಿಯಾಗಿಯೇ ಉಪಯೋಗಿಸುತ್ತಿದೆ. ವಯಸ್ಕರ ಶಿಕ್ಷಣ ಯೋಜನೆಯಲ್ಲಿ ಕಲಿಕಾ ಕೇಂದ್ರಗಳನ್ನು ಆಕರ್ಷಣೀಯವಾಗಿ ಮಾಡಲು, ವಯಸ್ಕರು ಓದು ಬರಹ ಕಲಿಯಲು ಅವರನ್ನು ಮಾನಸಿಕವಾಗಿ ಸಿದ್ಧಪಡಿಸಲು, ಪ್ರಚಲಿತ ಕಾಲದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಗಳು, ಅವುಗಳಲ್ಲಿ ಅವರ ಪಾತ್ರ, ಅವರು ಅವಲಂಭಿಸಿರುವ ವಿವಿಧ ವೃತ್ತಿಗಳಲ್ಲಿ ಅವರ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡು ಆ ಮೂಲಕ ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳುವುದರ ಜೊತೆಗೆ ರಾಷ್ಟ್ರದ ಸಂಪತ್ತನ್ನೂ ಹೆಚ್ಚಿಸಲು ನೆರವಾಗುವಂತಹ ಚಲನಚಿತ್ರಗಳನ್ನು ತಯಾರಿಸಿ ಪ್ರದರ್ಶಿಸಿ ಅವರಲ್ಲಿ ಅರಿವು ಮತ್ತು ಕ್ರಿಯಾಶೀಲತೆ ಉಂಟುಮಾಡಬಹುದು. ವಿಷಯಗಳ ಆಯ್ಕೆ, ಚಿತ್ರಗಳ ಅವಧಿ, ವಿವರಗಳು ಮತ್ತು ವಿವರಣೆಯ ಭಾಷೆಯನ್ನು ನಿರ್ಧರಿಸುವುದೇ ಕಷ್ಟದ ಕೆಲಸ. ವಿವರಣೆ ಸರಳವಾಗಿರಬೇಕು, ಸಮಂಜಸವಾಗಿರಬೇಕು, ನೇರವಾಗಿರಬೇಕು ಮತ್ತು ನೋಡುವವರ ಮತ್ತು ಕೇಳುವವರ ಮನಸ್ಸಿನ ಮೇಲೆ ನಿರೀಕ್ಷಿತ ಪರಿಣಾಮ ಉಂಟುಮಾಡುವಂತಿರಬೇಕು. ಈ ಕ್ಷೇತ್ರದಲ್ಲಿ ವಿಶ್ವದ ಬೇರೆ ಬೇರೆ ದೇಶಗಳಲ್ಲಿ ಸಂಶೋಧನೆಗಳು ನಡೆದಿವೆ. ಈ ಸಂಶೋಧನೆಗಳ ಫಲಿತಾಂಶಗಳೇನು? ಅವುಗಳಿಂದ ನಾವೆಷ್ಟು ಲಾಭ ಪಡೆಯಬಹುದು? ನಮ್ಮ ಪರಿಸರಕ್ಕೆ ಹೊಂದಿಕೊಳ್ಳುವಂತೆ ಅವುಗಳನ್ನು ಪರಿಷ್ಕರಿಸಿ ಉಪಯೋಗಿಸಬಹುದೆಂಬಿವೇ ಮುಂತಾದ ವಿಷಯಗಳನ್ನು ಕುರಿತಂತೆ ನಾವು ಆಲೋಚಿಸಬೇಕಾಗಿದೆ.

೧೯೭೮ರಲ್ಲಿ ರಾಷ್ಟ್ರವ್ಯಾಪ್ತ ಸಾಕ್ಷರತಾ ಆಂದೋಲನ ಕಾರ್ಯಕ್ರಮದ ಅಂಗವಾಗಿ ಅಸ್ತಿತ್ವಕ್ಕೆ ಬಂದ ರಾಜ್ಯ ಸಂಪನ್ಮೂಲ ಕೇಂದ್ರ ನಿರ್ವಹಿಸಬೇಕಾಗಿದ್ದ ಮುಖ್ಯ ಕಾರ್ಯಕ್ರಮಗಳು.೧.ಕಾರ್ಯಕರ್ತರಿಗೆ ತರಬೇತು ನೀಡುವುದು. ೨.ಕಲಿಕೆಯ ಸಾಮಗ್ರಿಗಳನ್ನು ಸಿದ್ಧಪಡಿಸುವುದು.೩.ಕಾರ್ಯಕರ್ತರಿಗೆ ಕೈಪಿಡಿಗಳನ್ನು ಸಿದ್ಧಪಡಿಸುವುದು. ೪. ಕಾರ್ಯಕ್ರಮದ ಮೌಲ್ಯಮಾಪನ.೫. ಸಾಕ್ಷರತೆಯ ಮೌಲ್ಯಮಾಪನ. ೬. ದೃಕ್‌ಶ್ರವಣ ಸಾಧನಗಳನ್ನು ಸಿದ್ಧಪಡಿಸುವುದು. ೭.ನವ ಸಾಕ್ಷರರಿಗೆ ಸಾಹಿತ್ಯ ರಚಿಸುವುದು.

ಆದರೆ ಆ ಸಂಸ್ಥೆ ಈ ಮೂಲ ಉದ್ದೇಶಗಳನ್ನು ಸಾಧಿಸಲು ಸಂಪೂರ್ಣವಾಗಿ ವಿಫಲವಾಗಿದೆ ಎಂದು ಹೇಳಲು ವಿಷಾದಿಸುತ್ತೇನೆ. ಈ ಸಂಸ್ಥೆ ರಾಜ್ಯ ವಯಸ್ಕರ ಶಿಕ್ಷಣ ಸಂಸ್ಥೆಯ ನೇರಮಾರ್ಗದರ್ಶನದಲ್ಲಿ ಕೆಲಸಮಾಡಬೇಕೆಂಬುದು ನನ್ನ ನಿಲುವಾಗಿದ್ದೂ ಅದು ಮೈಸೂರಿನಲ್ಲಿ ಸ್ಥಾಪನೆಯಾಗಲು ಕಾರಣಕರ್ತ ನಾನು. ಈ ಸಂಸ್ಥೆ ವಯಸ್ಕರ ಶಿಕ್ಷಣ ಸಮಿತಿಯ ಪ್ರಾರಂಭ, ಅದರ ಕಾರ್ಯಕ್ರಮಗಳು, ಅವುಗಳ ಗುರಿ ಮುಂತಾದವುಗಳನ್ನು ಪರಿಚಯಿಸಿಕೊಂಡು ಆ ಜಾಡಿನಲ್ಲಿಯೇ ಮುಂದುವರಿಯಲು ಪ್ರಯತ್ನಿಸಲಿಲ್ಲ. ಇದಕ್ಕೆ ಕಾರಣ ಎರಡು: (೧) ವಯಸ್ಕರ ಶಿಕ್ಷಣ ಸಮಿತಿಯಿಂದಾಗಲಿ, ವಯಸ್ಕರ ಶಿಕ್ಷಣ ಇಲಾಖೆಯಿಂದಾಗಲಿ ಮಾರ್ಗದರ್ಶನ ಮತ್ತು ಸ್ಫೂರ್ತಿ ದೊರಕದಿದ್ದುದು; (೨)ಕಾರ್ಯಕರ್ತರ ಅಧ್ಯಕ್ಷತೆ ಇಂದು ಆ ಸಂಸ್ಥೆ ಒಂದು ನಿರುಪಯೋಗಿ ಸಂಸ್ಥೆಯಾಗಿ ಉಳಿದಿದೆ. ಈ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ಕಾರ್ಯಕರ್ತರು ಎಚ್ಚೆತ್ತು ಅಧ್ಯಯನಶೀಲರಾಗಿ ಕಾರ್ಯಪ್ರವೃತ್ತರಾದರೆ ವಯಸ್ಕರ ಶಿಕ್ಷಣಕ್ಕೆ ಅಗತ್ಯವಾದ ದೃಕ್‌ಶ್ರವಣ ಸಾಧನಗಳನ್ನು ಸಿದ್ಧಪಡಿಸಬಹುದು.

ಸಾಕ್ಷರತೆ ಹಾಗೂ ಜ್ಞಾನ ಪ್ರಸಾರದ ಅಗತ್ಯ

ಡಿ.ಪಿ.ಗೋವಿಂದರಾಜು
೭೮೪,೧೬ನೇ ಮೇಯಿನ್
ಸರಸ್ವತಿಪುರ,
ಮೈಸೂರು-೫೭೦ ೦೦೯

ಪ್ರಜಾಪಭುತ್ವದಲ್ಲಿ ಜನತೆಯ ಪಾತ್ರ ಬಹು ಮುಖ್ಯ. ಅಜ್ಞಾನ, ಬಡತನ, ರೋಗ ರುಜಿನ, ಮೂಢನಂಬಿಕೆ ಇತ್ಯಾದಿ ಸಾಮಾಜಿಕ ಪಿಡಗುಗಳಿಂದ ಜನತೆ ಮುಕ್ತರಾಗುವುದು ಬಹು ಅಗತ್ಯ. ಪ್ರಜಾಪ್ರಭುತ್ವದಲ್ಲಿ ಜನತೆ ಎಲ್ಲಾ ಹಂತಗಳಲ್ಲೂ ಸಕ್ರಿಯವಾಗಿ ಭಾಗ ವಹಿಸಬೇಕು. ಭಾರತದಲ್ಲಿ ಬಹುಪಾಲು ಗ್ರಾಮೀಣ ಜನತೆ ಶಿಕ್ಷಣ ಹಾಗೂ ಅರಿವಿನಿಂದ ವಂಚಿತರಾಗಿದ್ದಾರೆ. ಈಗ ಎಲ್ಲೆಡೆ ಜ್ಞಾನದ ಆಸ್ಫೋಟನವಾಗುತ್ತಿದೆ. ಗ್ರಾಮಾಂತರ ಯುವಕರಲ್ಲಿ ೧೫ ರಿಂದ ೪೫ ವರ್ಷದ ವಯೋಮಿತಿಯಲ್ಲಿ ಸುಮಾರು ೨೦ ಕೋಟಿಗೂ ಮಿಗಿಲಾಗಿ ಅನಕ್ಷರಸ್ಥರಿದ್ದಾರೆ. ಈ ಪರಿಸ್ಥಿತಿ ಸಮಾಜದ ಹಾಗೂ ದೇಶದ ಅಭಿವೃದ್ಧಿಗೆ ಮಾರಕವಾಗಿದೆ. ಜನತೆ ಶೋಷಕರ ಆಮಿಷ ಆಕಾಂಕ್ಷೆಗಳಿಗೆ ಬಲಿಯಾಗುತ್ತಿದ್ದಾರೆ. ನಿರಕ್ಷರತೆ, ಅಜ್ಞಾನ ಭೂತಾಕಾರವಾಗಿ ಬೆಳೆದು ಪ್ರಜಾಪ್ರಭುತ್ವವನ್ನೇ ಕಬಳಿಸುತ್ತಿದೆ.

ಕೇವಲ ಅಕ್ಷರ ಕಲಿಕೆಯು ಶಿಕ್ಷಣದ ಗುರಿಯಲ್ಲ . ಅಕ್ಷರ ಕಲಿಕೆಯಿಂದ ಜ್ಞಾನ ಪ್ರಸಾರವಾಗಬೇಕು. ಜನತೆಗೆ ಅದರಲ್ಲೂ ಯುವ ಪೀಳಿಗೆಗೆ ಜೀವನದ ದೈನಂದಿನ ವ್ಯವಹಾರ ಕಸಬುಗಳಲ್ಲಿ ವೃತ್ತಿ ಜ್ಞಾನ ಪಡೆದು ದೇಶದ ಸಾಮಾಜಿಕ, ಆರ್ಥಿಕ ಪ್ರಗತಿಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಅಗತ್ಯವಾದ ಜ್ಞಾನ, ಅರಿವಿನ ಪ್ರಸಾರ ಅತ್ಯಗತ್ಯ. ಅರಿವು ಜನತೆಯನ್ನು ಅಸಹಾಯಕ, ಪರಿಸ್ಥಿತಿಯಿಂದ ಬಿಡುಗಡೆ ಮಾಡುತ್ತದೆ. ಸಾಮಾಜಿಕ, ಆರ್ಥಿಕ ಶೋಷಕರಿಂದ ರಕ್ಷಣೆ ಸಿಗುತ್ತೆ. ಅಕ್ಷರ ಕಲಿಕೆಯಿಂದ ಸಾಕ್ಷರತೆ, ನಂತರ ಸಾಕ್ಷಾತ್ಕಾರ ದೊರಕುತ್ತದೆ. ಸಾಕ್ಷರತೆ ಕುರುಡನಿಗೆ ಕಣ್ಣು ದೊರಕಿಸಿದಷ್ಟೆ ಸಂತೃಪ್ತಿಯನ್ನು ಕೊಡಲಿದೆ. ಆಧುನಿಕ ಮಾನವ, ಶಿಕ್ಷಣವಿಲ್ಲದೆ ಜೀವಿಸ ಲಾರ. ಗ್ರಾಮಾಂತರ ಜನತೆಗೆ ಅವರಾಡುವ 'ಆಡುಭಾಷೆ'ಯಲ್ಲಿ ಜ್ಞಾನಪ್ರಸಾರವಾಗಲು ನೆರವು ನೀಡಬೇಕಾಗಿದೆ.

ಇಂದು ನಮ್ಮ ದೇಶದಲ್ಲಿ ಶಿಕ್ಷಣವು ವೈಪರೀತ್ಯಗಳಿಂದ ಕೂಡಿದೆ. ಶಿಕ್ಷಣ ಕೇವಲ ಕೆಲವು ಮಂದಿಗೆ ಸೀಮಿತವಾಗಿರುತ್ತದೆ. ನಮ್ಮ ಹಣದ ಹೆಚ್ಚುಪಾಲು ಉನ್ನತ ಶಿಕ್ಷಣಕ್ಕೆ ಮೀಸಲಾಗಿ ಮೂಲಭೂತವಾಗಿ ಕೊಡ ಬೇಕಾದ ಪ್ರಾಥಮಿಕ ಶಿಕ್ಷಣಕ್ಕೆ ಆದ್ಯತೆ ನೀಡಿರುವುದಿಲ್ಲ. ಇನ್ನು ಶಿಕ್ಷಣ ಪಡೆದವರು ಕೂಡ , ಜೀವನಕ್ಕೆ ಹೊಂದಿಕೊಳ್ಳದೆ ಅವರು ಪಡೆದ ಶಿಕ್ಷಣ ಬಹುಪಾಲು 'ಪುಸ್ತಕದ ಜ್ಞಾನ'ವಾಗಿ ನಿರುಪಯುಕ್ತವಾಗುತ್ತಿದೆ. ಇನ್ನು ಮೇಲಾದರೂ ಪ್ರಾಥಮಿಕ ಶಿಕ್ಷಣ ಹಾಗೂ ಸಾಕ್ಷರತಾ ಕಾರ್ಯಕ್ರಮಗಳಿಗೆ ಆದ್ಯತೆ ಕೊಟ್ಟು, ಸರ್ವರಿಗೂ ಕೊನೆಪಕ್ಷ ಪ್ರಾಥಮಿಕ ಶಿಕ್ಷಣ ನೀಡಿದ ನಂತರ ಜೀವನಕ್ಕೆ ಹೊಂದಿಕೊಳ್ಳುವ ಶಿಕ್ಷಣ ಕೊಡುವುದು ಬಹು ಅಗತ್ಯ. ಗ್ರಾಮೀಣ ಯುವಜನ ಮಾನವ ಶಕ್ತಿಯನ್ನು ಸಾಕ್ಷರತಾ ಕಾರ್ಯಕ್ರಮಗಳಲ್ಲಿ ತೊಡಗಿಸಬೇಕು. ರಾಷ್ಟ್ರೀಯ, ಅಂತರರಾಷ್ಟ್ರೀಯ , ವೈಜ್ಞಾನಿಕ, ವೈಚಾರಿಕತೆ, ನಾಡಿನ ಚರಿತ್ರೆ, ಸಂಸ್ಕೃತಿ, ಸಾಹಿತ್ಯ, ಕಲೆಗಳ ಬಗ್ಗೆ ಜ್ಞಾನ ಪ್ರಸಾರವಾಗಬೇಕು.

ಡೆನ್‌ಮಾರ್ಕ್ ದೇಶದ ಪ್ರಗತಿಗೆ ಅಲ್ಲಿನ 'ಜನತಾ ಶಾಲೆ' (ಫೋಕ್ ಹೈಸ್ಕೂಲ್)ಗಳು ಮಹತ್ತರ ಕಾಣಿಕೆ ಸಲ್ಲಿಸುತ್ತಿವೆ. ಮಧ್ಯಮ ವರ್ಗದ ಜನತೆಗೆ ಜೀವನಕ್ಕೆ ಉಪಯುಕ್ತವಾದ

ಜ್ಞಾನ, ಅರಿವನ್ನು ನೀಡಲಾಗುತ್ತಿದೆ. ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯು ಈಗಾಗಲೇ ಪ್ರಾರಂಭಿಸಿರುವ ವಿದ್ಯಾಪೀಠಗಳು ಇಂದಿನ ಅವಶ್ಯಕತೆಗಳಿಗೆ ಸ್ಪಂದಿಸಿ, ಶಿಕ್ಷಣ ಕೊಡಬೇಕಾಗಿದೆ. ಸಾಕ್ಷರತೆ ಹಾಗೂ ಸಾಮಾಜಿಕ ಕಾರ್ಯಕ್ರಮಗಳಿಗೆ ವಿದ್ಯಾಪೀಠಗಳು ಕೇಂದ್ರಗಳಾಗಬೇಕು. ಗ್ರಾಮೀಣ ಪ್ರದೇಶದಲ್ಲಿ ಕೊನೆಪಕ್ಷ ಪ್ರತಿ ತಾಲ್ಲೂಕಿಗೆ ಒಂದೊಂದು ವಿದ್ಯಾಪೀಠಗಳನ್ನು ತೆರೆಯಬೇಕು. ಸರ್ಕಾರದ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮ, ಅಲ್ಲಿಂದಲೇ ಗ್ರಾಮೀಣ ಜನತೆಗೆ ಪ್ರಸಾರವಾಗಬೇಕು. ಈಗಾಗಲೇ ಯುವಪೀಳಿಗೆಗೆ ತಪ್ಪಿಹೋದ ಮೂಲಭೂತ ಶಿಕ್ಷಣವನ್ನು ಈ ಕೇಂದ್ರಗಳಲ್ಲಿ ಕೊಡಬಹುದಾಗಿದೆ. ಈಗಿರುವ ವಿದ್ಯಾಪೀಠಗಳಿಗೆ ಕಾಯಕಲ್ಪಕೊಟ್ಟು ಪುನಶ್ಚೇತನಗೊಳಿಸುವುದು ಅಗತ್ಯ. ಶಿಕ್ಷಣಕ್ಕೆ ಆದ್ಯತೆ ಅಲ್ಲಿ ಸಿಗಬೇಕಾಗಿದೆ.

ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಹಲವಾರು ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಇದಕ್ಕೆ ಸರಕಾರದ ಹಾಗೂ ಜನತೆಯ ಸಹಕಾರ, ಪ್ರೋತ್ಸಾಹ ಅಗತ್ಯ. ಈ ಬಗ್ಗೆ ನಾಡಿನ ಶಿಕ್ಷಣ ತಜ್ಞರು, ರಾಜಕೀಯ ನಾಯಕರು ಕೂಡಲೇ ಚಿಂತಿಸಿ ಕ್ರಮಕೈಗೊಳ್ಳುವುದು ಅಗತ್ಯ.

ಬಲಶಾಲಿಯಾದವನಿಗೆ ಯಾವ ಕೆಲಸವೂ ಕಷ್ಟ ಅಲ್ಲ. ವಿದ್ಯಾವಂತನಿಗೆ ಯಾವ ದೇಶವೂ ಪರದೇಶ ಅಲ್ಲ. ಒಳ್ಳೆಯ ಮಾತುಗಾರನಿಗೆ ಶತ್ರುಗಳೇ ಇಲ್ಲ.

- ಹಿತೋಪದೇಶ

ಸ್ವಾತಂತ್ರ್ಯವನ್ನು ಪಡೆಯಲು ತೆತ್ತಷ್ಟೇ ಬೆಲೆಯನ್ನು ಅದರ ರಕ್ಷಣೆಗಾಗಿಯೂ ತೆರಬೇಕಾಗುವುದು. ಗಳಿಸಿದ ಸ್ವಾತಂತ್ರ್ಯ ತಾನಾಗಿಯೇ ನಮ್ಮ ಕೈಯಲ್ಲಿ ಉಳಿಯಲಾರದು. ಅದನ್ನು ನಾವೇ ಸಾಕಿಕೊಂಡು ಹೋಗಬೇಕು.

- ನೆಹರೂಜಿ

ವಿದ್ಯಾಪೀಠಗಳು

ಬಿ. ಕೆ. ಸೀತಾರಾಮಯ್ಯ
೩೫೮, ೩ನೇ ಕ್ರಾಸ್, ೧೪ನೇ ಮೇಯಿನ್,
ಸರಸ್ವತಿಪುರಂ, ಮೈಸೂರು-೯

ವಯಸ್ಕರ ಅಕ್ಷರ ಪ್ರಚಾರ ಸಮಿತಿಯು, ಹೆಚ್ಚಿನ ಕಾರ್ಯಕ್ರಮಗಳನ್ನು ತನ್ನ ತೆಕ್ಕೆಗೆ ಸೇರಿಸಿಕೊಂಡನಂತರ ವಯಸ್ಕರ ಶಿಕ್ಷಣ ಸಮಿತಿಯಾಯಿತು. ಅಕ್ಷರ ಪ್ರಚಾರದ ಜತೆಗೆ ಇನ್ನೂ ಅನೇಕ ಕಾರ್ಯಕ್ರಮಗಳು ಸೇರಿ ಕೊಂಡವು. ಅದರಲ್ಲಿ ವಿದ್ಯಾಪೀಠವೂ ಒಂದು.

ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯಕರ್ತರಿಗೆ ಗ್ರಾಮಸ್ಥರ ನಿಕಟ ಸಂಪರ್ಕ ಇತ್ತು. ಅವರ ನಡೆ ನುಡಿಗಳ ಸೂಕ್ಷ್ಮ ಪರಿಚಯವಿತ್ತು. ಅಲ್ಪ ಸ್ವಲ್ಪ ಶಿಕ್ಷಣಕ್ಕೂ ಗ್ರಾಮದ ಯುವಕರು ದೂರದ ಪಟ್ಟಣಗಳಿಗೆ ಹೋಗಬೇಕಿತ್ತು. ಹೆಚ್ಚು ಗ್ರಾಮಗಳಲ್ಲಿ ಪ್ರಾಥಮಿಕ ಶಾಲೆಗಳೇ ಇರಲಿಲ್ಲ. ಯುವಕರು ಪಟ್ಟಣದ ಜೀವನಕ್ಕೆ ಹೊಂದಿಕೊಂಡು, ಅದಕ್ಕೇ ಮಾರುಹೋದರು. ಗ್ರಾಮಗಳಿಗೆ ಹಿಂದಿರುಗುವ ಮನಸ್ಸು ಬರಲಿಲ್ಲ. ವಿದ್ಯಾವಂತ ಯುವಕರು, ಇದರಿಂದ , ಗ್ರಾಮಗಳಲ್ಲಿ ಇಲ್ಲದಂತಾಯಿತು. ಶಾಲೆಯನ್ನು ಬಿಟ್ಟ ಯುವಕರು ಮಾತ್ರ ಉಳಿದುಕೊಂಡರು. ನಿರುದ್ಯೋಗಿ ಯುವಕರು, ಶಾಲೆ ಬಿಟ್ಟವರು, ಗ್ರಾಮಗಳಿಗೆ ಒಂದು ರೀತಿಯ ಶಾಪ. ವಿದ್ಯಾವಂತ ಯುವಕರನ್ನು ಗ್ರಾಮಗಳಿಗೆ ಆಕರ್ಷಿಸಿ, ಈ ವಲಸೆಯನ್ನು ತಡೆಯುವುದು ಅನಿವಾರ್ಯವಾಯಿತು.

ಭಾರತೀಯ ಸಭ್ಯ ಸಂಸ್ಕೃತಿ ಇರುವುದೇ ಗ್ರಾಮಾಂತರ ಪ್ರದೇಶದಲ್ಲಿ . ಬ್ರಿಟಿಷರ ಆಡಳಿತದಿಂದ ಜೀವನದಲ್ಲಿ ಬದಲಾವಣೆಗಳಾದುವು. ಧರ್ಮಕರ್ಮಗಳು ಕಡಿಮೆಯಾದುವು. ಸಮಾಜದ ಶಾಂತಿ ಕದಡಿತು. ಈಗ ಪ್ರಜಾಪ್ರಭುತ್ವದ ಸುಸಂಸ್ಕೃತ ಸತ್ಪ್ರಜೆಯಾಗಲು ಅವಶ್ಯಕವಾದ ಶಿಕ್ಷಣವನ್ನು ಒದಗಿಸುವುದು ಅಗತ್ಯ. ಎಲ್ಲ ಮಾಧ್ಯಮಗಳನ್ನು ಒದಗಿಸಿಕೊಳ್ಳಬಹುದು.

ಪ್ರಜೆಯು ಮೊದಲು ಕುಟುಂಬದ ಸದಸ್ಯ. ಸಹಬಾಳ್ವೆ ಮೈತುಂಬಿ ಬರಬೇಕು. ಕುಟುಂಬದ ಎಲ್ಲ ಸದಸ್ಯರ ಕ್ಷೇಮವನ್ನು ಬಯಸುವ ಸದಸ್ಯ ಎಲ್ಲರ ಪ್ರೀತಿ ವಿಶ್ವಾಸವನ್ನೂ ಗಳಿಸಿ, ಕುಟುಂಬದ ಸಂಘಟನೆಯನ್ನು ಕಾಪಾಡುವುದು ಅವಶ್ಯಕ. ಎರಡನೆಯದಾಗಿ ತನ್ನ ಸುತ್ತಲಿ ಸಮಾಜದಲ್ಲಿ ಪ್ರಜಾಪ್ರಭುತ್ವದ ಸತ್ಪ್ರಜೆ ನಂತರ ದೇಶದ ಹಿತಾಸಕ್ತಿಗಾಗಿ ಬದ್ಧಿ ತಾಳ್ಮೆಗಳನ್ನು ಬೆಳೆಸಿಕೊಂಡವನು. ಕಡೆಯದಾಗಿ ಇಡೀ ಮಾನವ ಕುಲಕ್ಕೆ ಸೇರಿದ್ದೇನೆಂಬ ತಿಳಿವಳಿಕೆ. ಸರ್ವೋದಯ ಮನೋಭಾವ ತುಂಬಿರಬೇಕು. ಕುವೆಂಪು ಅವರ ಮಾತಿನಲ್ಲಿ ಹೇಳಬೇಕಾದರೆ, ಸಮಾನತಾವಾದಿ. ಇದು ಬಹಳ ಆದರ್ಶವಾಗಿರಬಹುದು. ಆದರೆ ಪ್ರಯತ್ನ ಮಾಡಿದರೆ ಸಾಧನೆ ಎರಡೇ ಆಗಬಹುದು ಅಂತೂ ಆಶಾ ಭಾವನೆಬೇಕು.

ಅಂತೂ ಗ್ರಾಮಗಳ ಯುವಕರು, ಅದರಲ್ಲೂ, ವಿದ್ಯಾವಂತ ಯುವಕರು, ಗ್ರಾಮದಲ್ಲೇ ವಾಸಿಸುವುದು ಅನಿವಾರ್ಯವೆಂಬುದು ಮನದಟ್ಟಾಯಿತು. ದಿಸೆಯಲ್ಲಿ ವಿದ್ಯಾಪೀಠಗಳು ಆರಂಭವಾದುವು.

ಡೆನ್ಮಾರ್ಕ್ ದೇಶದಲ್ಲಿ ಫೋಕ್ ಹೈಸ್ಕೂಲುಗಳು ಯುವಕರಿಗೆ ನೀಡಿದ ಉತ್ಕೃಷ್ಟ ಶಿಕ್ಷಣದಿಂದ ಆದೇಶ ಪ್ರಪಂಚದಲ್ಲೇ ಒಂದು ಉತ್ತಮ, ಅಭಿವೃದ್ಧಿ ಹೊಂದಿದ, ದೇಶವಾಯಿತು. ಅಲ್ಲಿಯ ಸಹಕಾರ ಜೀವನ, ಪಶುಪಾಲನೆ, ಕೋಳಿ ಸಾಕಣೆ, ವ್ಯವಸಾಯ ಇವೆಲ್ಲವೂ ಸರ್ಕಾರದ ಹತೋಟಿಯಿಂದ ಹೊರಗೆ ಉಳಿದಿವೆ. ಅವೇ ಸರ್ಕಾರವನ್ನು ಹತೋಟಿಯಲ್ಲಿಟ್ಟಿವೆ. ಈ ಫೋಕ್ ಹೈಸ್ಕೂಲುಗಳ ಆದರ್ಶ ನಮಗೆ ಬೇಕಾಯಿತು. ಅದರಿಂದ ಸ್ಫೂರ್ತಿಪಡೆದು ವಿದ್ಯಾಪೀಠಗಳ ಯೋಜನೆ

ಯನ್ನು ತಯಾರಿಸಿದರು. ನಮ್ಮ ಸಂಸ್ಕೃತಿ, ಆರ್ಥಿಕ ಸಾಮಾಜಿಕ ಜೀವನಕ್ಕೆ ಅನುಗುಣ ವಾಗಿ ಮಾರ್ಪಾಟಾಯಿತು. ನಮ್ಮ ಪ್ರಾಚೀನ ಗುರುಕುಲಾಶ್ರಮಗಳು ಮಾದರಿಯಾದುವು.

ನಂಜನಗೂಡಿನ ಸಮೀಪ ಶ್ರೀನಂಜುಂಡೇಶ್ವರನ ಸನ್ನಿಧಿಯಲ್ಲಿ ಶ್ರೀವಿಶ್ವೇಶ್ವರಗೌಡರು ನೀಡಿದ ಸ್ಥಳದಲ್ಲಿ ಮೊದಲನೆಯ ವಿದ್ಯಾಪೀಠ ಸ್ಥಾಪನೆಯಾಯಿತು.

ಭಾರತೀಯ ಪ್ರಜೆ ಹೇಗಿರಬೇಕೆಂಬುದನ್ನು ಈ ಹಿಂದೆ ವಿವರಿಸಲು ಪ್ರಯತ್ನಿಸಲಾಗಿದೆ. ವಿದ್ಯಾಪೀಠದ ಶಿಕ್ಷಣಾರ್ಥಿ ಆರು ತಿಂಗಳು ಈ ವಸತಿ ಶಾಲೆಯಲ್ಲಿ ಕಲಿಯುತ್ತಾನೆ. ತನ್ನ ಸಮಾಜದ, ರಾಷ್ಟ್ರದ ಆಗುಹೋಗುಗಳ ಬಗ್ಗೆ ಚಿಂತನೆ ಮಾಡುವ ಆಸಕ್ತಿ ಕೆರಳಬೇಕು. ಧರ್ಮ ಮತ್ತು ಸಾಂಸ್ಕೃತಿಕ ವಿಷಯಗಳ ಅಧ್ಯಯನದಿಂದ ಮಾನವೀಯ ಗುಣಗಳು ಬೆಳೆಯಬೇಕು. ಶಿಸ್ತಿನ ಜೀವನ ನಡೆಸಬೇಕು. ಜೀವನದ ಮೌಲ್ಯಗಳು ಶಿಕ್ಷಣಾರ್ಥಿಗೆ ಮನದಟ್ಟಾಗಬೇಕು.

ಯುವಕ ಗ್ರಾಮವಾಸಿ. ಗ್ರಾಮದ ಜೀವನವನ್ನೇ ಇಲ್ಲಿ ನಡೆಸುತ್ತಾನೆ. ವಿದ್ಯಾ ಪೀಠದ ಜೀವನ ಯಾವರೀತಿಯಲ್ಲಿ ಪಟ್ಟಣದ ಜೀವನಕ್ಕೆ ಹೋಲುವಂತಿರಬಾರದೆಂಬುದು ಮುಖ್ಯ. ಊಟ, ತಿಂಡಿ, ವಾಸ, ಆಟ, ಪಾಠಗಳು, ಪರಿಸರ ಎಲ್ಲವೂ ಗ್ರಾಮೀಣ.

"India is the richest country with the poorest people" (ಸಂಪದ್ಭರಿತವಾದ ಭಾರತದಲ್ಲಿ ವಾಸಿಸುವ ಜನ ಕಡುಬಡವರು) ಎಂದು ಪಾಶ್ಚಿಮಾತ್ಯ ತಜ್ಞರೊಬ್ಬರು ಉದ್ಘೋಷಿಸಿದ್ದಾರೆ. ಭಾರತದಲ್ಲಿ ವನಸಂಪತ್ತು, ಜಲಸಂಪತ್ತು, ಖನಿಜ ಸಂಪತ್ತು ಎಲ್ಲವೂ ಇವೆ. ಅದಕ್ಕಿಂತ ಮಿಗಿಲಾಗಿ ಯುವಸಂಪತ್ತು ತುಂಬಿದೆ. ಇವೆಲ್ಲವುದರ ಸದ್ಬಳಕೆಗೆ ಜ್ಞಾನ, ತಿಳಿವಳಿಕೆ, ಸ್ಫೂರ್ತಿದಾಯಕ ಶಿಕ್ಷಣ ಪದ್ಧತಿ ಆವಶ್ಯಕ.

ವಿದ್ಯಾಪೀಠಗಳ ಮಹತ್ವವನ್ನರಿತ ಕೇಂದ್ರ ಸರ್ಕಾರ ಎಲ್ಲ ರಾಜ್ಯಗಳಲ್ಲೂ ವಿದ್ಯಾಪೀಠಗಳ ಸ್ಥಾಪನೆಗೆ ಯೋಜಿಸಿತು. ೧೯೫೬ರಲ್ಲಿ ರಾಷ್ಟ್ರಮಟ್ಟದ ವಿಚಾರಘೋಷ್ಠಿ ಒಂದು ಮೈಸೂರು ಸಮೀಪದ ಇಲವಾಲದ ಹತ್ತಿರವಿರುವ ಆಲೋಕ ಬಂಗಲೆಯಲ್ಲಿ ನಡೆಯಿತು. ಈ ಸಮ್ಮೇಳನದ ವಿದ್ಯಾಪೀಠಗಳಲ್ಲಿ ಶಿಕ್ಷಣ ಹೇಗೆ ಇರಬೇಕೆಂದು ತೀರ್ಮಾನಿಸಿತು.

ವಿದ್ಯಾಪೀಠಗಳು ಕರ್ನಾಟಕದಲ್ಲಿ ಮಾತ್ರ ನಡೆಯುತ್ತಿರುವ ಶಿಕ್ಷಣ ಕೇಂದ್ರಗಳು. ಇನ್ನೆಲ್ಲೂ ಈ ಕೇಂದ್ರಗಳನ್ನು ನಡೆಸುತ್ತಿಲ್ಲ. ಕಾರ್ಯಕರ್ತರ ಅಭಾವ ಇದಕ್ಕೆ ಕಾರಣ ಇರಬಹುದು. ವಿದ್ಯಾಪೀಠದ ಪಠ್ಯವಿಷಯ ಮೂರು ಅಂಶಗಳನ್ನೊಳಗೊಂಡಿದೆ. ಪ್ರಚಲಿತ ವಿಷಯಗಳ ಬಗ್ಗೆ ಆಸಕ್ತಿ ಕೆರಳಿಸಿ, ತನ್ನ ಸಮಾಜ, ದೇಶ ಹಾಗೂ ವಿಶ್ವದ ಸಮಸ್ಯೆಗಳನ್ನು ಕುರಿತು ಚಿಂತಿಸುವಂತಾಗಬೇಕು. ಯುವಕ ಮಾನವೀಯ ಗುಣಗಳನ್ನು ಉದಾರ ದೃಷ್ಟಿಯನ್ನು ಬೆಳೆಸಿಕೊಳ್ಳಲು ಧಾರ್ಮಿಕ ಚಿಂತನೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಏರ್ಪಡಿಸುವುದು. ಶಿಸ್ತಿನ ಜೀವನ ನಡೆಸಿ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವುದು. ಸ್ವಯಂಸ್ಫೂರ್ತಿಯಿಂದ ಕೆಲಸ ಕಾರ್ಯಗಳನ್ನು ನಡೆಸುವುದು.

ಗ್ರಾಮೀಣ ಯುವಕ ಗ್ರಾಮದಲ್ಲೇ ಜೀವಿಸುವಂತಾಗಲು ಸಜ್ಜು ಮಾಡುವುದು ಮುಖ್ಯ. ಆರ್ಥಿಕ ಜೀವನವನ್ನು ಉತ್ತಮಪಡಿಸಿಕೊಳ್ಳಲು ವೈಜ್ಞಾನಿಕ ವ್ಯವಸಾಯ ಪದ್ಧತಿಯನ್ನು ಅಭ್ಯಸಿಸಬೇಕು. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಉತ್ತಮ ಮಟ್ಟವನ್ನು ಪಡೆಯಬೇಕು. ಗ್ರಾಮದ ಆಗುಹೋಗುಗಳಲ್ಲಿ ಭಾಗಿಯಾಗುವಂತೆ ಹುರಿದುಂಬಿಸುವ ಉತ್ತೇಜಕ ಶಿಕ್ಷಣಕ್ಕೆ ಏರ್ಪಾಡು ಮಾಡಬೇಕು. ಗ್ರಾಮೀಣ ಜೀವನ ಅಲ್ಲಿ ಪ್ರತಿಬಿಂಬಿಸಬೇಕು. ಪಟ್ಟಣದ ಜೀವನವನ್ನು ಹೋಲುವಂತಿರಬಾರದು. ಗ್ರಾಮೀಣ ಪರಿಸರ ಕಲ್ಪನೆ ಅಲ್ಲಿರಬೇಕು. ಅದಕ್ಕೆ ಆದ್ಯ ಪ್ರಾಶಸ್ತ್ಯವಿರಬೇಕು. ಆಟ ಪಾಠಗಳಲ್ಲಿ, ಊಟವಸತಿಯಲ್ಲಿ ಗ್ರಾಮೀಣ ಛಾಯೆ ಇರಬೇಕು.

ಗ್ರಾಮದ ಉಸಿರು ವ್ಯವಸಾಯ. ಆದರೆ ನಮ್ಮ ರೈತರಿಗೆ ವರ್ಷ ಪೂರ್ತಿ ವ್ಯವಸಾಯದ ಕೆಲಸ ಇರಲಾರದು. ಪಶುಪಾಲನೆ, ಕೋಳಿ ಸಾಕಣೆ , ಗೃಹ ಕೈಗಾರಿಕೆಗಳು ಹೆಚ್ಚಿನ ಆದಾಯಕ್ಕೆ ಆವಶ್ಯಕ . ಇವು ಲಾಭದಾಯಕ ಕಸಬುಗಳು ಬಿಡುವಿನ ಕಾಲದ ಸದುಪಯೋಗ ಇವುಗಳಿಂದ ಸಾಧ್ಯ.

ಹೆಚ್ಚಿನ ತಿಳಿವಳಿಕೆಗಾಗಿ ಚರಿತ್ರೆ, ಜೀವನ ಚರಿತ್ರೆಗಳು, ಸ್ವಾತಂತ್ರ್ಯ ಕಾಲದ ಪರಿಚಯ, ವಿಜ್ಞಾನ, ಗ್ರಾಮೀಣ ಅರ್ಥಶಾಸ್ತ್ರ ವಿಜ್ಞಾನ ಹಾಗೂ ಇತರೆ ವಿಷಯಗಳು ಪಠ್ಯಕ್ರಮದಲ್ಲಿ ಸೇರಿಕೊಂಡಿವೆ. ಪ್ರಸಕ್ತ ಸಮಸ್ಯೆಗಳ ಚರ್ಚೆಗೆ ಹೆಚ್ಚಿನ ಅವಕಾಶ ಪಾಠ ಪ್ರವಚನಗಳು ಸಾಧ್ಯವಾದಷ್ಟು ಚರ್ಚಾ ರೂಪದಲ್ಲಿರುತ್ತವೆ. ಸಾಂಸ್ಕೃತಿಕ ಜೀವನವನ್ನು ಬೆಳೆಸಲು ಗ್ರಾಮ ಕಲೆಗಳ ಅಭ್ಯಾಸ , ಅವುಗಳ ವಿಶಿಷ್ಟ ಕೊಡುಗೆಯ ತಿಳಿವಳಿಕೆಯ ಚರ್ಚೆ ಉಂಟು.

ವಿದ್ಯಾಪೀಠಗಳು ವಸತಿ ಶಿಕ್ಷಣ ಕೇಂದ್ರಗಳು, ಯುವಕರು ೫ ರಿಂದ ೬ ತಿಂಗಳುಗಳು ಇಲ್ಲಿರುತ್ತಾರೆ. ಇವು ಗ್ರಾಮೀಣ ಶಿಕ್ಷಣ ಕೇಂದ್ರಗಳು. ವ್ಯವಸಾಯಕ್ಕೆ ಪ್ರಾಶಸ್ತ್ಯವಿರುವುದರಿಂದ ವ್ಯವಸಾಯ ಯೋಗ್ಯವಾದ ಸ್ಥಳಗಳನ್ನು ಆರಿಸಿಕೊಳ್ಳಲಾಗಿದೆ. ವಿದ್ಯಾರ್ಥಿಗಳಿಗೆ ವ್ಯವಸಾಯದ ವಿಭಿನ್ನ ಪ್ರಾಕಾರಗಳ ಪರಿಚಯವಾಗಬೇಕಾದುದರಿಂದ, ಸಾಕಷು ವಿಶಾಲವಾದ ಜಮೀನುಗಳನ್ನು ಪಡೆಯಲಾಗಿದೆ. ಹೊಲ, ಗದ್ದೆ, ತೋಟಗಳು ಎಲ್ಲವೂ ಇಲ್ಲಿವೆ.

ಮೊದಲು ವಿದ್ಯಾಪೀಠಗಳಿಗೆ ಜಮೀನನ್ನು ಖಾಸಗಿ ವ್ಯಕ್ತಿಗಳಿಂದ ದಾನವಾಗಿ ಪಡೆಯಲಾಯಿತು. ಡಾ॥ಸಂಪತ್ತು ಎಂಬುವರು ಯಗಚೀ ನದಿಯ ದಡದಲ್ಲಿ ರಮಣೀಯ ಪ್ರದೇಶವನ್ನು ದಾನಮಾಡಿದರು. ಇದರಿಂದ ಹಾಸನ ಜಿಲ್ಲೆಯಲ್ಲಿ ಯಗಚೀ ವಿದ್ಯಾಪೀಠ ಸ್ಥಾಪನೆಯಾಯಿತು. ಬಿಜಾಪುರ ಜಿಲ್ಲೆಯಲ್ಲಿ ಬಂಥನಾಳ ಮಠದ ಶಿವಯೋಗಿ ಸ್ವಾಮಿಗಳು ಫಲವತ್ತಾದ ಜಮೀನನ್ನು ವಿದ್ಯಾಪೀಠಕ್ಕೆ ದಾನ ಮಾಡಿದರು. ಬಂಥನಾಳ ವಿದ್ಯಾಪೀಠದ ಸ್ಥಾಪನೆಗೆ ನೆರವು ನೀಡಿ, ಅದರ ಅಭಿವೃದ್ಧಿಗೆ ಸಾಕಷ್ಟು ದುಡಿದರು. ಮೊದಲ ಕೆಲವು ವಿದ್ಯಾಪೀಠಗಳಿಗೆ ದಾನವಾಗಿ ಬಂದ ಜಮೀನು ಕೇಂದ್ರಸ್ಥಾನವಾದುವು. ನಂತರ ಜಮೀನಿನ ವಿಸ್ತೀರ್ಣ-ಕಾರ್ಯ ಆಯಿತು. ಒಂದು ವಿದ್ಯಾಪೀಠಕ್ಕೆ ಸುಮಾರು ೩೦-೪೦ ಎಕರೆ ಜಮೀನು ಆವಶ್ಯಕ. ನೀರಾವರಿ ಅನುಕೂಲಗಳೂ ಇರಬೇಕು.

ವಿದ್ಯಾಪೀಠದ ಶಿಕ್ಷಣದ ಮಹತ್ವವನ್ನರಿತ ನಂತರ, ರಾಜಕೀಯ ಮುಂದಾಳುಗಳು, ಇತರರೂ ಸರಕಾರದ ಮೇಲೆ ಒತ್ತಡ ತಂದು, ಹೆಚ್ಚು ಹೆಚ್ಚು ಜಮೀನುಗಳನ್ನು ಸಮಿತಿಗೆ ಒದಗಿಸಿದರು. ಪ್ರಜೆಗಳ ಒತ್ತಡಕ್ಕೆ ಮಣಿದ ಸರಕಾರ ಎಲ್ಲ ಜಿಲ್ಲೆಗಳಲ್ಲೂ ಉತ್ತಮವಾದ ಜಮೀನನ್ನು ಒದಗಿಸಲು ಮುಂದೆ ಬಂದಿದೆ. ಶ್ರೀ ಎಸ್. ಆರ್. ಕಂಠಿಯವರು ವಿದ್ಯಾಮಂತ್ರಿಯಾಗಿ, ವಿದ್ಯಾಪೀಠಕ್ಕೆ ಒಮ್ಮೆ ಭೇಟಿ ಕೊಟ್ಟರು. ಪ್ರತಿ ತಾಲ್ಲೂಕಿನಲ್ಲೂ ಇಂಥ ಒಂದು ಕೇಂದ್ರ ಇರಬೇಕೆಂದು ತಿಳಿಸಿದರು.

ಜಮೀನು ಸಾಧಾರಣವಾಗಿ ಜನನಿಬಿಡವಾದ, ಸುಂದರ ಹಾಗೂ ಪ್ರಶಾಂತ ವಾತಾವರಣ ಹೊಂದಿವೆ. ಸಮಿತಿಯು ಆರಿಸಿರುವ ಸ್ಥಳಗಳು ಅಂಥವು.

ಶಿವಮೊಗ್ಗ ಜಿಲ್ಲೆಯ ತುಂಗಾ ವಿದ್ಯಾಪೀಠ ತುಂಗಾ ಅಣೆಕಟ್ಟೆಯ ಸಾಮೀಪ್ಯ ಹೊಂದಿದೆ. ಗುಡ್ಡಗಳು, ದೊಡ್ಡ ಕಾಡುಗಳ ಮಧ್ಯದಲ್ಲಿರುವ ಈ ಕೇಂದ್ರ ತುಂಬ ಸುಂದರವಾಗಿದೆ. ಬಳ್ಳಾರಿ ಜಿಲ್ಲೆಯ ಪಂಪಾ ವಿದ್ಯಾಪೀಠ ರಾಮಸಾಗರ ನಾಲೆಯ ಸಮೀಪವಿದೆ. ದೊಡ್ಡ ದೊಡ್ಡ ಬಂಡೆಗಳು ಹಿನ್ನೆಲೆಯನ್ನೊದಗಿಸಿದೆ. ವಿದ್ಯಾಪೀಠಗಳಲ್ಲಿ ಬೆಳೆದಿರುವ ತೆಂಗು, ಮಾವು, ಸಪೋಟ ಗಿಡಗಳು, ಹಸಿರು ಗದ್ದೆ ಹೊಲಗಳೂ ಸೌಂದರ್ಯವನ್ನು ಹೆಚ್ಚಿಸಿವೆ. ವಿದ್ಯಾಪೀಠಗಳಲ್ಲಿರುವ ಸೌಂದರ್ಯ, ಪ್ರಶಾಂತ ವಾತಾವರಣ ತಾವೇ ವಿದ್ಯಾರ್ಥಿಗಳ ಮೇಲೆ

ಅಗೋಚರ ಪರಿಣಾಮವನ್ನು ಬೀರುತ್ತವೆ.

ನಂಜನಗೂಡು ವಿದ್ಯಾಪೀಠದ ಬಯಲು ತರಗತಿ ಎರಡು ಮಾವಿನ ಮರಗಳು ಕೂಡಿ, ಒದಗಿಸುವ ನೆರಳಿನಲ್ಲಿದೆ. ಕೇಂದ್ರ ಸರ್ಕಾರದ ಶಿಕ್ಷಣ ತಜ್ಞರೊಬ್ಬರು ವಿದ್ಯಾಪೀಠದ ಪರಿಚಯ ಮಾಡಿಕೊಳ್ಳಲು ಬಂದರು. ದೆಹಲಿಯಿಂದ ಬಂದ ಅವರಿಗೆ, ಬೇರೇ ಪ್ರಪಂಚಕ್ಕೇ ಹೋದಂತಾಯ್ತು. ''ಮುಂದಿನ ಜನ್ಮದಲ್ಲಿ ಜನಿಸಿದರೆ ನಂಜನಗೂಡು ವಿದ್ಯಾಪೀಠದಲ್ಲಿ ಜನಿಸುತ್ತೇನೆ'' ಎಂದು ಹೇಳಿದರು. ರವೀಂದ್ರ ನಾಥ ಟಾಗೂರರ ಶಾಂತಿನಿಕೇತನದ ಕಾರ್ಯಕರ್ತರು ಬಂದು ''ಶಾಂತಿ ನಿಕೇತನ ದಲ್ಲೂ ಇಂಥ ಸುಂದರ ವಾತಾವರಣವಿಲ್ಲ'' ಎಂದು ಹೊಗಳಿದರು. ಇದಕ್ಕಿಂತ ಹೆಚ್ಚಿನ ಪ್ರಶಂಸೆ ಬೇಕಿಲ್ಲ. ಹಾಸನದ ಯಗಚೀ ವಿದ್ಯಾಪೀಠ ಯಗಚಿ ನದಿಯ ದಡದ ಮೇಲಿದೆ. ಅಲ್ಲಿನ ತೆಂಗು, ಮಾವು, ಹಲಸು, ಸಪೋಟ ಮರಗಳ ಜತೆಗೆ ನದಿ ಸೇರಿ ಅಪೂರ್ವವಾದ ಸೌಂದರ್ಯವನ್ನು ಒದಗಿಸಿದೆ. ಅನೇಕರಿಗೆ ಇದು ಪ್ರವಾಸಿ ಕೇಂದ್ರವಾಗಿ ಬಿಟ್ಟಿದೆ. ಜನ ಸ್ನೇಹಿತರೊಡನೆ, ಮನೆ ಮಂದಿಯೊಡನೆ ವಿಹಾರಾರ್ಥವಾಗಿ ಬರುವುದೂ ಉಂಟು.

ವಿದ್ಯಾಪೀಠದ ಸುತ್ತಮುತ್ತಲ ಗ್ರಾಮಸ್ಥರ ಮೇಲೆ ಅಲ್ಲಿಯ ಚಟುವಟಿಕೆಗಳು ಪ್ರಭಾವ ಬೀರಬೇಕು. ಕಾರ್ಯಕರ್ತರು ಸ್ವಚ್ಛ ವಾತಾವರಣವನ್ನು ಕಾಪಾಡಿಕೊಂಡಿರಬೇಕು. ವಸತಿ ಗೃಹಗಳು, ಕಛೇರಿಗಳು, ಸಿಬ್ಬಂದಿಯ ಮನೆಗಳೂ ಸ್ವಚ್ಛತೆಗೆ ಮಾದರಿಯಾಗಬೇಕು.

ವಿದ್ಯಾಪೀಠದಲ್ಲಿ ಶಿಕ್ಷಣಾರ್ಥಿಗಳು ಅವರ ಅರಿವಿಲ್ಲದೆಯೇ ಉತ್ತಮ ಗುಣಗಳನ್ನು ಬೆಳೆಸಿಕೊಳ್ಳಲು ಅವಕಾಶವಿದೆ. ಶಿಕ್ಷಕರು ಎಲ್ಲ ವಿಷಯಗಳನ್ನು ತಿಳಿಯ ಹೇಳಬೇಕಿಲ್ಲ. ಶಿಕ್ಷಕರ ನಡೆನುಡಿಗಳು ತಾವಾಗಿಯೇ ಪ್ರಭಾವ ಬೀರುತ್ತವೆ. ವಿದ್ಯಾಪೀಠದ ಕಲಿಕೆ ಒಂದು ಹರ್ಷದಾಯಕ ಪ್ರವೃತ್ತಿ ಗುರುಗಳೊಡನೆ ಸಂವಾದ, ಸಹಪಾಠಿಗಳೊಡನೆ ಸರಸ ಸಂವಾದ, ಅನುಭವಗಳ ವಿನಿಮಯ, ಶಿಸ್ತಿನ ಜೀವನ ಇವುಗಳಿಂದ ಪ್ರಭಾವಿತನಾಗದೆ ಇರಲಾರ. ಈ ಕಾರಣದಿಂದ ಸಿಬ್ಬಂದಿಯ ಕಾರ್ಯದಕ್ಷತೆ , ನಡೆನುಡಿಗಳು ಒಂದು ಪರಂಪರೆಯನ್ನೇ ಸೃಷ್ಟಿಸಬೇಕಾಗುತ್ತದೆ. ಸರಳ ಜೀವನ ಶ್ರೇಷ್ಠವಾದ ಯೋಚನೆ ಸಂಸ್ಥೆಯ ಗುರಿಗಳಲ್ಲೊಂದು.

ವಿದ್ಯಾಪೀಠದ ಮುಖ್ಯಸ್ಥ ಆಚಾರ್ಯ. ಆಂಗ್ಲ ಭಾಷೆಯಲ್ಲಿ 'ಪ್ರಿನ್ಸಿಪಾಲ್'. ವಯಸ್ಕರ ಶಿಕ್ಷಣ ಸಮಿತಿಯ ಅನುಭವೀ ಕಾರ್ಯಕರ್ತ. ಸತ್ಸಂಪನ್ನ, ಪ್ರಭಾವೀ ಆಡಳಿತಗಾರ. ವಿದ್ಯಾರ್ಥಿಗಳ ಮೇಲೆ ಪ್ರಭಾವ ಬೀರ ಬೇಕಾದರೆ ಹೆಚ್ಚಿನ ತಿಳಿವಳಿಕೆ ಅಗತ್ಯ. ನಡೆನುಡಿಗಳಲ್ಲಿ ಆಚರಣೆಯಲ್ಲಿ ಸದಾ ಯೋಚನಾಪರ. ಸರಳಜೀವಿಯಾಗಿ, ಸದಾ ಹಸನ್ಮುಖಿ ಯಾಗಿದ್ದು ಶಿಕ್ಷಣಾರ್ಥಿಗಳಿಗೂ, ಸಿಬ್ಬಂದಿ ವರ್ಗಕ್ಕೂ ಮೇಲ್ಪಂಕ್ತಿಯಾಗಿರ ಬೇಕು. ಆಚಾರ್ಯರನ್ನು ಪರೀಕ್ಷಿಸುವ ಅನೇಕ ಸಂದರ್ಭಗಳು ನಿತ್ಯವೂ ಒದಗುತ್ತವೆ. ಖಡ್ಗದ ಮೇಲೆ ನಡೆದಂತೆ ಇವನ ಇರವು, ಬಾಳು, ಶಿಸ್ತಿನ ಸಿಪಾಯಿಯೂ ಹೌದು. ಯೋಗ್ಯ ಕಾರ್ಯಕರ್ತರು ಸಿಗದಿದ್ದಾಗ, ಆಚಾರ್ಯರ ಹುದ್ದೆಗೆ ಸರಕಾರದಿಂದ ತಜ್ಞರನ್ನು ಎರವಲಾಗಿ ಪಡೆದಿದ್ದು ಉಂಟು.

ವಿದ್ಯಾಪೀಠಗಳು ವ್ಯವಸಾಯ ಶಿಕ್ಷಣ ಕೇಂದ್ರವೂ ಅಲ್ಲ, ಕೈಗಾರಿಕಾ ಶಿಕ್ಷಣ ಕೇಂದ್ರವೂ ಅಲ್ಲ. ಆದರೂ ವ್ಯವಸಾಯಕ್ಕೆ ಸಾಕಷ್ಟು ಪ್ರಾಧಾನ್ಯ. ಸ್ಥಳವನ್ನು ಪಡೆಯುವಾಗಲೇ ವ್ಯವಸಾಯ ಯೋಗ್ಯ, ವಿಶಾಲ ಭೂಮಿ ಬೇಕೆಂದು ತೀರ್ಮಾನಿಸಲಾಗುತ್ತೆ. ನೀರಾವರಿಯೂ ಇರುವ ಪ್ರದೇಶವನ್ನೇ ಆರಿಸಿಕೊಳ್ಳುತ್ತಾರೆ. ನಮ್ಮ ರೈತನ ಮಕ್ಕಳ ಮುಖ್ಯ ಕಸಬು ವ್ಯವಸಾಯ. ಆ ಕಾರಣ ವ್ಯವಸಾಯ ತಜ್ಞನೊಬ್ಬ ವ್ಯವಸಾಯ ಶಿಕ್ಷಕ. ವ್ಯವಸಾಯದಲ್ಲಿ ಅನೇಕ ಸಂಶೋಧನೆಗಳೂ ಪ್ರಯೋಗ

ಗಳೂ ನಡೆಯುತ್ತಲೇ ಇವೆ. ಶಿಕ್ಷಣಾರ್ಥಿ ಪ್ರಬುದ್ಧ ರೈತನಾಗಿ, ಮಾದರಿಯಾಗಬೇಕು. ವ್ಯವಸಾಯ ಇಲಾಖೆಯವರು ಕೂಡ ಇಲ್ಲಿ ಪ್ರಾತ್ಯಕ್ಷತಾ ತಾಕುಗಳನ್ನು ನಡೆಸಿ, ರೈತರಿಗೆ ಸಂಶೋಧನೆಗಳ ಪರಿಚಯವನ್ನು ಮಾಡುತ್ತಾರೆ. ವ್ಯವಸಾಯಕ್ಕೆ ಸಂಬಂಧಪಟ್ಟ ಇತರ ಸಂಸ್ಥೆಗಳೂ ವಿದ್ಯಾಪೀಠದ ಪ್ರಯೋಜನ ಪಡೆಯುತ್ತವೆ. ವ್ಯವಸಾಯಕ್ಕೆ ಪೂರಕವಾದ ಪಶುಸಂಗೋಪನೆ, ಕೋಳಿಸಾಕಣೆಗಳ ಪರಿಚಯವೂ ಆಗುವುದು.

ವಿದ್ಯಾರ್ಥಿಯ ಉಪಯೋಗಕ್ಕಾಗಿ ಅವರಿಗೆ ಆಸಕ್ತಿಯಿರುವ ಯಾವುದಾದರೂ ಕೈಗಾರಿಕೆಯನ್ನು ಉಪ ಕಸುಬಾಗಿ ಕಲಿಸುತ್ತಾರೆ. ವ್ಯವಸಾಯದಿಂದ ಬಿಡುವುಯಿದ್ದಾಗ, ಈ ಕಸಬುಗಳಿಂದ ಸ್ವಲ್ಪ ಆದಾಯ ಹೆಚ್ಚಿಸಿಕೊಳ್ಳಬಹುದು. ಮರಮುಟ್ಟುಗಳನ್ನು ತಯಾರಿಸುವುದು, ನೇಗಿಲನ್ನು ದುರಸ್ತಿಮಾಡುವುದು, ಬಡಗಿಯಾಗಿ ಕಲಿಯಬಹುದು. ಬಿಡುವಿನ ಕಾಲದಲ್ಲಿ ಮಾತ್ರ ಈ ಕೆಲಸ. ಬಟ್ಟೆ ಹೊಲಿಯುವುದು ಈಗ ಲಾಭದಾಯಕ ಕಸಬು. ಇದಕ್ಕೆ ಹೆಚ್ಚಿನ ಗಮನ ಕೊಡಲಾಗಿದೆ. ಕೈಗಾರಿಕಾ ಶಿಕ್ಷಕನೊಬ್ಬ ಇದನ್ನು ನಡೆಸುತ್ತಾನೆ. ವಿದ್ಯಾರ್ಥಿಗಳಿಗೆ ಬೇರೆ ಕಸಬಿಗೆ ಬೇರೆ ಬೇರೆ ಶಿಕ್ಷಕನಿರುತ್ತಾನೆ.

ಯಾವ ಕಸಬನ್ನು ಕಲಿತರೂ, ಪ್ರಾವೀಣ್ಯತೆಯ ಪಡೆಯ ಬೇಕಾದರೆ ದೀರ್ಘ ಕಾಲದ ಅಭ್ಯಾಸಬೇಕು. ವಿದ್ಯಾಪೀಠದ ಶಿಕ್ಷಣದ ನಂತರ ಹೆಚ್ಚಿನ ಸಾಧನೆಗೆ ತಾವೇ ಏರ್ಪಾಡು ಮಾಡಿಕೊಳ್ಳಬೇಕು.

ಈಗಿನ ಕಾಲಕ್ಕೆ ತಕ್ಕಂತೆ ಹೊಸ ಹೊಸ ಕಸಬುಗಳನ್ನು ಕಲಿಸಲು ಪ್ರಯತ್ನ ನಡೆದಿದೆ. ವಿದ್ಯುಚ್ಛಕ್ತಿ ಸಲಕರಣೆಗಳ ದುರಸ್ತಿ ರೇಡಿಯೋ, ಟಿ.ವಿ.ಗಳ ದುರಸ್ತಿ, ನೀರೆತ್ತುವ ಪಂಪುಸೆಟ್ಟುಗಳ ದುರಸ್ತಿ ಮುಂತಾದುವನ್ನು ಅಳವಡಿಸಿಕೊಳ್ಳಲಾಗಿದೆ. ಇವು ಯುವಕರಿಗೆ ಆದಾಯಕ್ಕೆ ಉತ್ತಮ ಅವಕಾಶಗಳನ್ನೊದಗಿಸುತ್ತದೆ. ಗ್ರಾಮಗಳಲ್ಲೂ ಈಗ ವೃತ್ತಿ ಲಾಭದಾಯಕ.

ಈ ಹೊಸ ಕಸಬುಗಳನ್ನು ಕಲಿತ ಯುವಕರಿಗೆ ಅಲ್ಪ ಧನಸಹಾಯಕ್ಕೆ ಪ್ರಯತ್ನಿಸಬೇಕು. ತಾಲ್ಲೂಕು ಪಂಚಾಯತಿಗಳು, ಜಿಲ್ಲಾ ಪಂಚಾಯತಿಗಳು ಈ ದಿಸೆಯಲ್ಲಿ ಮುಂದುಬರಬೇಕಾಗಿದೆ ಈ ರೀತಿ ಜೀವನಕ್ಕೆ ಅನುಕೂಲವಾದರೆ ನಿರುದ್ಯೋಗಿ ಯುವಕರಿಗೆ ವಿದ್ಯಾಪೀಠದ ಬಗ್ಗೆ ಆಕರ್ಷಣೆ ಉಂಟಾಗುವುದು.

ವಿದ್ಯಾಪೀಠದ ನಿತ್ಯದ ಕಾರ್ಯಚಟುವಟಿಕೆಗಳ ಬಗ್ಗೆ ಸ್ವಲ್ಪ ಯೋಚನೆ ಮಾಡೋಣ.

ವಿದ್ಯಾರ್ಥಿಗಳು ಸೂರ್ಯೋದಯಕ್ಕೆ ಮುಂಚಿತವಾಗಿ ಎದ್ದು, ಸಾಮೂಹಿಕ ಪ್ರಾರ್ಥನೆ ಮಾಡುತ್ತಾರೆ. ಆರಿಸಿದ ಕೆಲವು ದೇವರ ನಾಮಗಳೂ ಶರಣರ ವಚನಗಳು, ಭಜನೆಗಳೂ ಇರುತ್ತವೆ. ಗಾಂಧೀಜಿಯವರ ಆಶ್ರಮ ಪ್ರಾರ್ಥನೆಯಂತೆ ಎಲ್ಲ ಮತ ಧರ್ಮಗಳ ಕೃತಿಗಳೂ ಸೇರುತ್ತವೆ. ವಿದ್ಯಾಪೀಠದ ಸಿಬ್ಬಂದಿ ಎಲ್ಲಾ ಕೂಡಿ ಪ್ರಾರ್ಥನೆ ನಡೆಸಿದರೆ, ಇದರ ಮಹತ್ವ ಹೆಚ್ಚುವುದು ಎಲ್ಲರೂ ಕೂಡಿ ಹಾಡಿದಾಗ ಸುಶ್ರಾವ್ಯವಾಗಿರುತ್ತದೆ. ನಂಜನಗೂಡು ವಿದ್ಯಾಪೀಠದ ಬಳಿ ಗಣ್ಯರೊಬ್ಬರು ಪ್ರಾರ್ಥನಾ ವೇಳೆಯಲ್ಲಿ ಪ್ರಯಾಣ ಮಾಡುತ್ತಿದ್ದರು. ಕಾರನ್ನು ನಿಲ್ಲಿಸಿ ಪ್ರಾರ್ಥನೆಯನ್ನು ಕಡೆಯವರೆಗೂ ಕೇಳಿ ಸಂತೋಷಗೊಂಡರು. ಅದರ ಕುರುಹಾಗಿ ಶ್ರೀರಾಮ ಪಟ್ಟಾಭಿಷೇಕದ ಒಂದು ಸುಂದರ ಫೋಟೋವನ್ನು ಕೊಟ್ಟರು.

ಸಂಜೆಯೂ ಒಂದು ಪ್ರಾರ್ಥನೆ ಮಾಡುತ್ತಾರೆ. ಸಂಜೆಯ ಪ್ರಾರ್ಥನೆಯಲ್ಲಿ ಭಗವದ್ಗೀತೆಯ ಸ್ಥಿತಪ್ರಜ್ಞ ದರ್ಶನದ ಭಾಗವನ್ನು ಪಠಿಸುತ್ತಾರೆ. ಗಾಂಧೀಜಿಯವರ ಏಕಾದಶ ವ್ರತ, ಶಾಂತಿ ಮಂತ್ರಗಳು ಕೂಡಿವೆ. ಸಂಜೆಯ ಪ್ರಾರ್ಥನೆ ನಂತರ, ಆಚಾರ್ಯರು ದಿನ ಪತ್ರಿಕೆಯಲ್ಲಿರುವ ಮುಖ್ಯ ಪ್ರಸಕ್ತ ವಿಷಯಗಳನ್ನು ಚರ್ಚಿಸುವುದು ವಾಡಿಕೆ.

ಬೆಳಗಿನ ಪ್ರಾರ್ಥನೆಯನಂತರ, ವಿದ್ಯಾಪೀಠದ ಎಲ್ಲ ಕಟ್ಟಡಗಳು, ರಸ್ತೆಗಳೂ

ಶುಚಿಯಾಗಬೇಕು. ಇಬ್ಬರಿಗೆ ಒಂದು ಜಾಗದಂತೆ ಹಂಚಿಕೊಂಡು ಎಲ್ಲರೂ ಈ ಗುಡಿಸುವ ಕೆಲಸದಲ್ಲಿ ತೊಡಗುತ್ತಾರೆ. ಅಡಿಗೆ ಮನೆಗೆ ನೀರು ಒದಗಿಸುವುದು, ಅಡಿಗೆಯವರಿಗೆ ಸಹಾಯ ಮಾಡುವುದು ಇತ್ಯಾದಿ ಒಬ್ಬರಿಗೊ, ಇಬ್ಬರಿಗೊ ಒದಗಿಸುತ್ತಾರೆ. ವಾರಕ್ಕೊಮ್ಮೆ ಇದು ಬದಲಾಗುತ್ತದೆ. ಯಾವ ಕೆಲಸವೂ ಹಿರಿದಲ್ಲ, ಯಾವುದೂ ಕಿರಿದಲ್ಲ. ಕಕ್ಕಸುಗಳ ಶುಚಿತ್ವವೂ ಒಬ್ಬರಿಗೆ ಬೀಳುತ್ತದೆ. ಅಡಿಗೆ ಮನೆಯ ಎಲ್ಲ ವ್ಯವಹಾರವೂ ಒಬ್ಬರಿಗೆ. ಸಹ ವಿದ್ಯಾರ್ಥಿ ಯಾರಾದರೂ ಅನಾರೋಗ್ಯಕ್ಕೆ ತುತ್ತಾದರೆ, ಆತನ ಶುಶ್ರೂಷೆ ಒಬ್ಬನಿಗೆ. ವಿದ್ಯಾಪೀಠಕ್ಕೆ ಬಂದ ಅತಿಥಿಗಳನ್ನು ಸ್ವಾಗತಿಸಿ, ಅವರ ಅಗತ್ಯತೆಗಳನ್ನು ನೋಡುವುದೂ ಒಂದು ಕೆಲಸ. ಕಾಯಕವೇ ಕೈಲಾಸ ಎಂದು ಬಸವಣ್ಣನವರು ಹೇಳಿರುವಂತೆ, ಆಶ್ರಮವಾಸಿಗಳು ದೈಹಿಕವಾಗಿ ದುಡಿಯಲೇಬೇಕು. ಈ ಕೆಲಸಗಳನ್ನು ವಿದ್ಯಾರ್ಥಿಗಳೆಲ್ಲರೂ ಕೂಡಿ, ವಾರಕ್ಕೊಮ್ಮೆ ತೀರ್ಮಾನಿಸುತ್ತಾರೆ. ಇಲ್ಲಿ ಪ್ರಜಾಪ್ರಭುತ್ವದ ಆಳ್ವಿಕೆ. ವಾರಕ್ಕೊಬ್ಬ ಮುಖಂಡ. ಎಲ್ಲರೂ ಅವನ ಮಾತಿಗೆ ಆ ವಾರ ಬೆಲೆ ಕೊಡಲೇಬೇಕು. ತಪ್ಪು ನೆಪ್ಪುಗಳೇನಾದರೂ ಆದರೆ, ಆಚಾರ್ಯರ ಗಮನಕ್ಕೆ ತಂದು, ಸರಿಪಡಿಸಿಕೊಳ್ಳತಕ್ಕದ್ದು. ವಿದ್ಯಾಪೀಠದಲ್ಲಿ ೩೦ ಜನ ಯುವಕರಿಗೆ ಅವಕಾಶವಿದೆ.

ಈ ಸಫಾಯಿ ಕೆಲಸದ ಬಗ್ಗೆ ಯೋಚಿಸಿದಾಗ, ಒಂದು ಘಟನೆ ನೆನಪಿಗೆ ಬರುತ್ತದೆ. ಆಗ ನಂಜನಗೂಡು ವಿದ್ಯಾಪೀಠವಲ್ಲದೆ, ಹಾಸನದ ಸಮೀಪ ಯಗಚೀ ವಿದ್ಯಾಪೀಠ, ಇವು ಎರಡೇ ಇದ್ದುವು. ದೂರ ದೂರದ ಹಳ್ಳಿಗಳಿಂದ ಯುವಕರು ವಿದ್ಯಾಪೀಠಗಳಿಗೆ ಬಂದು ಸೇರುತ್ತಿದ್ದರು. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಇಬ್ಬರು ಯುವಕರು ಬಂದಿದ್ದರು. ಈ ಯುವಕರು ಧನಿಕರ ಮಕ್ಕಳು.ತೆಂಗು, ಅಡಿಕೆ, ಕಬ್ಬು ಬೆಳೆಯುವ ಜನ ಎಂದೂ ದೈಹಿಕ ಕೆಲಸಕ್ಕೆ ಕೈಹಾಕಿದವರಲ್ಲ. ಸದಾ ಬಿಳೀ ಬಟ್ಟೆ ತೊಟ್ಟು ಓಡಾಡಿ ಕೊಂಡವರು. '' ಈ ಗುಡಿಸುವುದು, ಬಾಚುವುದು ಯಾವುದನ್ನೂ ನಾವು ಮಾಡುವುದಿಲ್ಲ. ನಾವು ಮಾಡಲೇಬೇಕಿದ್ದರೆ, ನಮ್ಮ ಪರವಾಗಿ ಕೂಲಿಯವರ ಕೈಲಿ ಮಾಡಿಸಿ, ಕೂಲಿಯನ್ನು ನಾವು ಕೊಡುತ್ತೇವೆ'' ಎಂದು ತಿಳಿಸಿದರು. ಆದರೆ ಶಿಕ್ಷಣಾವಧಿಯಲ್ಲಿ ಅವರು ಪೂರ್ಣವಾಗಿ ಬದಲಾದರು. ಅವಧಿಯ ಕಡೆಯಲ್ಲಿ, ವಿದ್ಯಾರ್ಥಿಗಳ ಗುಂಡಿ ಕಕ್ಕಸ್ಸು ತುಂಬಿತ್ತು. ಅದು ಗೊಬ್ಬರವಾಗಿ ಪರಿವರ್ತನೆಯಾಗಿತ್ತು. ಯುವಕರು ಇಬ್ಬರೂ ಕೂಡಿ ಗೊಬ್ಬರದ ಗುಂಡಿಯಲ್ಲಿದ್ದ ಗೊಬ್ಬರವನ್ನು ಹೊತ್ತು ಸಪೋಟ ಗಿಡಗಳಿಗೆ ಹಾಕಿದರು. ಅವರಿಗೆ ಕಾಯಕ ಮೈಗೂಡಿ ಬಂದಿತ್ತು.

ಬೆಳಗಿನ ಫಲಾಹಾರದ ನಂತರ ಎರಡು ಘಂಟೆಗಳ ಶ್ರಮದಾನ, ಗದ್ದೆಯಲ್ಲೊ, ಹೊಲದಲ್ಲೊ, ತೋಟದಲ್ಲೊ ಕೆಲಸ. ವ್ಯವಸಾಯ ತೋಟಗಾರಿಕೆಗಳಲ್ಲಿ ಹೆಚ್ಚಿನ ತಿಳಿವಳಿಕೆ. ಮಣ್ಣು ಪರೀಕ್ಷೆ, ಹೊಸ ಉಪಕರಣಗಳ ಉಪಯೋಗ, ರಾಸಾಯನಿಕ ಗೊಬ್ಬರಗಳು, ಸಸ್ಯ ಸಂರಕ್ಷಣೆ ಇತ್ಯಾದಿ ಎಲ್ಲದರ ಪರಿಚಯ.

ಶ್ರಮದಾನ ಮುಗಿಸಿ, ಯುವಕರು ಎರಡು ಘಂಟೆಗಳ ಕಾಲ ಚರ್ಚಾ ತರಗತಿಗಳಲ್ಲಿ ಭಾಗವಹಿಸುವರು. ಈ ಚರ್ಚಾ ತರಗತಿಗಳೂ ಶಾಲಾ ಕೊಠಡಿಯಲ್ಲಿ ನಡೆಯುವುದಿಲ್ಲ, ವಿಶಾಲವಾದ ಬಯಲು ತರಗತಿ. ಮಾವಿನ ಮರದ ನೆರಳಿನಲ್ಲೊ, ಆಲದ ಮರದ ನೆರಳಿನಲ್ಲೊ ಋಷ್ಯಾಶ್ರಮದಲ್ಲಿ ನಡೆದಂತೆ ನಡೆಯುವುದು. ಚರ್ಚಿಸಿದ ವಿಷಯದ ಮುಖ್ಯಾಂಶಗಳನ್ನು ಬರೆದು ಕೊಳ್ಳುವ ಸಾಮರ್ಥ್ಯ ಯುವಕರಿಗಿರಬೇಕು. ಆ ಕಾರಣದಿಂದಲೇ, ಅವರ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ. ಆಗಿರಬೇಕೆಂಬುದು.

ವ್ಯವಸಾಯ ಶಿಕ್ಷಕರು, ಆಚಾರ್ಯರೂ ಈ ತರಗತಿಗಳಲ್ಲಿ ಭಾಗವಹಿಸುತ್ತಾರೆ. ಇದಲ್ಲದೆ

ಅಭಿವೃದ್ಧಿ ಇಲಾಖೆಗಳಿಂದ ತಜ್ಞರನ್ನು ಬರಮಾಡಿ ಕೊಳ್ಳಲಾಗುವುದು. ವ್ಯವಸಾಯ, ಆರೋಗ್ಯ, ಪಶುಪಾಲನೆ, ಸಹಕಾರ, ಪಂಚಾಯತಿ ರಾಜ್ಯ ಹೀಗೆ ಹಲವು ಇಲಾಖೆಯ ಅಧಿಕಾರಿಗಳು, ರಾಸಾಯನಿಕ ಗೊಬ್ಬರದ ತಜ್ಞರು, ಕೈಗಾರಿಕಾ ಇಲಾಖೆಯ ತಜ್ಞರು ಬಂದು ಪಾಠ ಮಾಡುವರು. ಹಾಗೆ ವೈವಿಧ್ಯಮಯ ಶಿಕ್ಷಣ ದೊರೆಯುವುದು.

ಸಾಹಿತ್ಯ, ಚರಿತ್ರೆ, ರಾಜಕೀಯ ವಿಷಯಗಳನ್ನು ಚರ್ಚಿಸಲು ಶಾಲಾ ಕಾಲೇಜುಗಳ ಉಪಾಧ್ಯಾಯರು ದಯಮಾಡಿಸುತ್ತಾರೆ. ಸಾಂಸ್ಕೃತಿಕ ವಿಷಯಗಳ ಚರ್ಚೆಯೂ ನಡೆಯುವುದು. ಒಮ್ಮೆ ಹೈಸ್ಕೂಲಿನ ಕನ್ನಡ ಪಂಡಿತರೊಬ್ಬರು, ತಾವೇ ರಚಿಸಿದ ಚಂದ್ರಹಾಸ ಕಾವ್ಯವನ್ನು ಓದಿ, ಅರ್ಥ ಹೇಳಿದರು. ಈ ಕಾವ್ಯವಾಚನ ಮತ್ತು ಪ್ರವಚನ ವಿದ್ಯಾರ್ಥಿಗಳ ಕಣ್ಣಿನಲ್ಲಿ ಧಾರಾಕಾರವಾಗಿ ನೀರು ಹರಿಸಿತು. ಹೀಗೆ ಸಜ್ಜನರ ಸಹವಾಸ ಅವರಿಗೆ ದೊರೆಯುವುದು. ಆಗಾಗ ಅತಿಥಿ ಭಾಷಣಕಾರರನ್ನು ಬರಮಾಡಿಕೊಳ್ಳಲು ಅವಕಾಶವಿದೆ.

ಧಾರ್ಮಿಕ ಚಿಂತನೆ, ಸಾಂಸ್ಕೃತಿಕ ಚಟುವಟಿಕೆಗಳು, ದೇಶ ಭಕ್ತರ ಜೀವನ ಚರಿತ್ರೆ, ಇತಿಹಾಸಗಳು ಮಾನವೀಯ ದೃಷ್ಟಿಯನ್ನು ಬೆಳೆಸುತ್ತವೆ. ವಯಸ್ಕರ ಶಿಕ್ಷಣ ಸಮಿತಿಯ ಸಕಲ ಕಾರ್ಯಚಟುವಟಿಕೆಗಳ ಪರಿಚಯ ಅವರಿಗಿರುತ್ತದೆ.

ಸಮಿತಿಯು ವಿದ್ಯಾಪೀಠಗಳಿಗೆ ತಯಾರಿಸಿರುವ ಪಠ್ಯವನ್ನು, ನಿಗದಿತ ಕಾಲದಲ್ಲಿ ಚರ್ಚಿಸಲು ಕಷ್ಟಸಾಧ್ಯ. ಆ ಕಾರಣ ಆಚಾರ್ಯರು ಅಥವಾ ಇತರ ಸಿಬ್ಬಂದಿ ಕೆಲಸದಲ್ಲಿ ತೊಡಗಿರುವಾಗಲೇ ಸಂದರ್ಭಕ್ಕೆ ತಕ್ಕಂತೆ, ವಿಷಯಗಳನ್ನು ಚರ್ಚಿಸುವರು. ಕೇಂದ್ರದಲ್ಲಿ ಒಂದು ಪುಸ್ತಕ ಭಂಡಾರವೂ ಇದೆ. ಅದರ ಲಾಭವನ್ನು ವಿದ್ಯಾರ್ಥಿಗಳು ಪಡೆಯುವರು.

ಇಲ್ಲಿ ಯಾವ ಮಾಸಿಕ, ವಾರ್ಷಿಕ ಪರೀಕ್ಷೆಗಳೂ ಇಲ್ಲ. ಪರೀಕ್ಷೆಯ ಒತ್ತಡ ಇಲ್ಲಿಲ್ಲ. ಶಿಕ್ಷಣದ ಅಂತ್ಯದಲ್ಲಿ ಎಲ್ಲರಿಗೂ ಪ್ರಶಸ್ತಿ ಪತ್ರ ಸಿಗುತ್ತದೆ. ಇದು ಯಾವ ಡಿಗ್ರಿಯೂ ಅಲ್ಲ, ಡಿಪ್ಲೋಮವೂ ಅಲ್ಲ.

ಪ್ರವಾಸ ಶಿಕ್ಷಣದ ಒಂದು ಮುಖ್ಯ ಭಾಗ. ೧೦-೧೨ ದಿನಗಳ ಕಾಲದ ಪ್ರವಾಸ ಏರ್ಪಡಿಸಿ, ರಾಜ್ಯದ ಕೆಲವು ಮುಖ್ಯ ಸಂದರ್ಶನ ಯೋಗ್ಯ ಕೇಂದ್ರಗಳಿಗೆ ವಿದ್ಯಾರ್ಥಿಗಳನ್ನು ಕರೆದೊಯ್ಯಲಾಗುವುದು. ಅನೇಕ ಅನುಭವಗಳು ಈ ಕಾಲದಲ್ಲಿ ಬರುತ್ತವೆ. ಪ್ರವಾಸ ಕಾಲದಲ್ಲಿ ಒದಗಬಹುದಾದ ದೈಹಿಕ ಶ್ರಮಗಳನ್ನು ಸಹಿಸುವ ತಾಳ್ಮೆ ಬೆಳೆಯುತ್ತದೆ.

ಬೇಲೂರು ಹಳೇಬೀಡುಗಳಂತಹ ಪುರಾತನವಾದ ಸುಂದರ ದೇವಾಲಯಗಳ ವೀಕ್ಷಣೆಯಿಂದ ವಾಸ್ತುಸಿರಿಯ ಪರಿಚಯವಾಗುವುದು. ಪರದೇಶದಿಂದ ಲಕ್ಷಾಂತರ ಪ್ರವಾಸಿಗರು ಬಂದು ಸಂದರ್ಶಿಸುವ ಈ ದೇವಾಲಯಗಳನ್ನು ನಮ್ಮ ಯುವಕರೂ ನೋಡಬೇಡವೇ ? ಶ್ರವಣ ಬೆಳಗೊಳದ ಗೋಮಟೇಶ್ವರನನ್ನೂ ನೋಡಬೇಕು. ಕೈಗಾರಿಕಾ ಕೇಂದ್ರಗಳು, ವಿದ್ಯುತ್ ಉತ್ಪಾದನಾ ಕೇಂದ್ರಗಳು, ಅಣೆಕಟ್ಟೆಗಳು ಇತ್ಯಾದಿಗಳಿಗೆ ಭೇಟಿಯಿತ್ತು, ಪರಿಚಯ ಮಾಡಿಕೊಳ್ಳಬೇಕು. ಅಲ್ಲಿ ಹಿರಿಯ ಅಧಿಕಾರಿಗಳನ್ನು ಭೇಟಿಯಾಗಿ, ಹೆಚ್ಚಿನ ಮಾಹಿತಿಯನ್ನು ಪಡೆಯಬೇಕು.

ಕೇಂದ್ರದಲ್ಲಿ ನಿತ್ಯ ಜೀವನದ ಕೆಲವು ವೈಶಿಷ್ಟ್ಯಗಳನ್ನು ನೋಡಬೇಕು. ಯುವಕರೆಲ್ಲರೂ ಒಂದು ವಿಶಾಲವಾದ ಶಯನ ಗೃಹದಲ್ಲಿ ಮಲಗುತ್ತಾರೆ. ಬೇರೆ ಬೇರೆ ಕೊಠಡಿಗಳಿಲ್ಲ. ಊಟ ತಿಂಡಿಯಲ್ಲೂ ಒಂದೇ ಸಾರಿ ಎಲ್ಲರೂ ಕೂರುವರು. ಜಾತಿಭೇದ ಇಲ್ಲಿ ಇಲ್ಲವೇ ಇಲ್ಲ.

ಒಮ್ಮೆ ಸಮಾಜ ಸೇವಾ ಇಲಾಖೆಯ ಅಧಿಕಾರಿಗಳು ಬಂದು, ವಿದ್ಯಾರ್ಥಿಗಳ ಜಾತಿಗಳನ್ನು ತಿಳಿಯಲು ಬಯಸಿದರು. ಅವರಿಗೆ ಪರಿಶಿಷ್ಟ ಜಾತಿಯ ಯುವಕರ ಬಗ್ಗೆ ಮಾಹಿತಿ ಬೇಕಿತ್ತು. ಆ ರೀತಿಯ ಯಾವ

ದಾಖಲೆಯೂ ವಿದ್ಯಾಪೀಠದಲ್ಲಿ ದೊರೆಯದು. "ನಿಮಗೆ ಆ ಮಾಹಿತಿ ಅವಶ್ಯಕವಾಗಿ ಬೇಕಿದ್ದರೆ ಒಬ್ಬಬ್ಬರನ್ನು ಏಕಾಂತವಾಗಿ ಭೇಟಿ ಮಾಡಿ, ತಿಳಿಯಿರಿ. ಆ ಅಂಕಿ ಅಂಶಗಳು ನಿಮ್ಮಲ್ಲೇ ಇರಲಿ. ವಿದ್ಯಾಪೀಠದಲ್ಲಿ ಎಲ್ಲರೂ ಒಂದೇ ಕುಟುಂಬದವರು. ಇಲ್ಲಿ ಯಾವ ಭೇದ ಭಾವವೂ ಇಲ್ಲ. ಜಾತಿ ಪಂಗಡಗಳ ವಿಷಬೀಜ ಬಿತ್ತುವುದು ಬೇಡ" ಎಂದು ತಿಳಿಸಲಾಯಿತು.

ವಿದ್ಯಾಪೀಠ ವ್ಯವಸಾಯ ಶಿಕ್ಷಣ ಕೇಂದ್ರವೂ ಅಲ್ಲ. ಕೈಗಾರಿಕಾ ಶಿಕ್ಷಣ ಕೇಂದ್ರವೂ ಅಲ್ಲ. ಆದರೆ ಇಲ್ಲಿ ಕಲಿಯುವುದೇನು ? ನವ ಸಮಾಜದ ನಿರ್ಮಾಣಕ್ಕೆ ದಾರಿ ತೋರುವುದು ಮಾತ್ರ. ಯುವಕರಲ್ಲಿ ಮಾನಸಿಕ ಬದಲಾವಣೆಯಾಗುವುದಂತೂ ಖಂಡಿತ. ಸಮಾಜದಲ್ಲಿ ನಾನಾರೀತಿ ಬದಲಾವಣೆಗಳಾಗಿವೆ. ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ತಾಂತ್ರಿಕ ಬದಲಾವಣೆಗಳು ಗಮನಾರ್ಹವಾಗಿವೆ. ಈ ಹೊಸ ಸಮಾಜದಲ್ಲಿ ಜವಾಬ್ದಾರಿಯುತ ಪ್ರಜೆಯಾಗಿ, ಅನುಕೂಲವಾದರೆ, ಮುಂದಾಳತ್ವ ವಹಿಸಿ, ನಡೆಸಕೊಂಡು ಹೋಗಬೇಕೆಂಬುದು ಶಿಕ್ಷಣದ ಗುರಿ. ಆದರೆ ಗ್ರಾಮದ ಪರಿಸರದಲ್ಲಿ ಇದಕ್ಕೆ ಅವಕಾಶ ಸಿಗದೇ ಇರಬಹುದು. ಅನೇಕರು ಯುವಕ ಮುಖಂಡರೂ ಗ್ರಾಮ ಪಂಚಾಯತಿಯ ಅಧಿಕಾರ ವಹಿಸಿಕೊಂಡಿದ್ದಾರೆ. ಸಹಕಾರ ಸಂಘಗಳ ಅಧ್ಯಕ್ಷರಾಗಿದ್ದಾರೆ, ಇನ್ನು ಬೇರೆ ಬೇರೆ ಜವಾಬ್ದಾರಿಯುತ ಪದವಿಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಏನೇ ಆದರೂ ತಾವು ಸೇವೆ ಸಲ್ಲಿಸುವ ಕ್ಷೇತ್ರದಲ್ಲಿ ನಿಷ್ಠೆಯನ್ನು ತೋರುತ್ತಾರೆಂಬುದು ಪ್ರಕಟವಾಗಿದೆ.

ಪೊಲೀಸ್ ಪೇದೆಗಳಾಗಿದ್ದಾರೆ, ಬಸ್ ಕಂಡಕ್ಟರುಗಳಾಗಿದ್ದಾರೆ, ಗುಮಾಸ್ತರಾಗಿದ್ದಾರೆ. ಎಲ್ಲಿಯೇ ವಿದ್ಯಾಪೀಠದ ಶಿಕ್ಷಣದ ಮುದ್ರೆ ಕಾಣುತ್ತದೆ. ಒಮ್ಮೆ ಆಚಾರ್ಯರೊಬ್ಬರು ಬಸ್ಸಿನಲ್ಲಿ ಪ್ರಯಾಣ ಮಾಡಿದಾಗ ಶಿಷ್ಯನೊಬ್ಬನು ಕಂಡಕ್ಟರ್ ಆಗಿದ್ದ. ಆತ ಆಚಾರ್ಯರಿಗೆ ಟಿಕೆಟ್ ಕೊಡದೆ ಹಾಗೆಯೇ ಕರೆದುಕೊಂಡು ಹೋದ. ಟಿಕೆಟ್ ಇಲ್ಲದೆ ಪ್ರಯಾಣ ಮಾಡುವುದು ಆಚಾರ್ಯರಿಗೆ ಜಿಗುಪ್ಸೆಯಾಯಿತು. ಬಸ್ ಇಳಿದು ಹೋಗುವಾಗ ಜೇಬಿನಲ್ಲಿ ಟಿಕೆಟ್ ಇದ್ದುದು ಕಂಡುಬಂತು. ಶಿಷ್ಯ ಸರ್ಕಾರಕ್ಕೆ ಮೋಸ ಮಾಡಿಲ್ಲವೆಂಬ ಸಂತೋಷ ಅವರಿಗಾಯ್ತು. ವಿದ್ಯಾಪೀಠದ ಹಳೆಯ ವಿದ್ಯಾರ್ಥಿಗಳು ಭೂದಾನ ಕಾರ್ಯಕರ್ತರಿಗೆ ಸರ್ವೋದಯ ಕಾರ್ಯಕರ್ತರಿಗೆ ಗ್ರಾಮಗಳಲ್ಲಿ ನೆರವು ನೀಡಿದ್ದರೆಂದು ಶ್ಲಾಘನೆಗೆ ಒಳಗಾಗಿದ್ದು ಈ ಹಳೆಯ ವಿದ್ಯಾರ್ಥಿಗಳ ಸೌಜನ್ಯದ ಬಗ್ಗೆ ಈ ಕಾರ್ಯಕರ್ತರು ಒಳ್ಳೆಯ ಮಾತನ್ನಾಡಿದ್ದಾರೆ.

ಈ ಶ್ರೇಷ್ಠ ಶಿಕ್ಷಣವನ್ನು ಒದಗಿಸಬೇಕಾದರೆ ಆಚಾರ್ಯರ ದಕ್ಷತೆಯನ್ನು ಪರಿಗಣಿಸಬೇಕು. ಅವರಿಗೆ ಗುರುತರವಾದ ಜವಾಬ್ದಾರಿಯಿದೆ. ಅನೇಕ ವಿಷಯಗಳನ್ನು ವಿದ್ಯಾರ್ಥಿಗಳೊಡನೆ ಚರ್ಚಿಸಿ, ಅವರ ಜ್ಞಾನದಾಹವನ್ನು ತೃಪ್ತಿಪಡಿಸಲು, ಆಚಾರ್ಯರಿಗೆ ಹೆಚ್ಚಿನ ಜ್ಞಾನಬೇಕು. ಅವರು ಸದಾ ಕಲಿಯುತ್ತಿರಬೇಕು. ಶಿಕ್ಷಣಾರ್ಥಿಗಳಿಂದಲೂ ಕಲಿಯುವ ವಿಷಯಗಳು ಇರುತ್ತವೆ. ವಿಷಯ ಯಾವ ಮೂಲೆಯಿಂದ ಬಂದರು ಹೀರಿಕೊಳ್ಳುವ ಶಕ್ತಿ ಬೇಕು. ವಿದ್ಯಾರ್ಥಿಗಳ ಅನೇಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ನೆರವಾಗಲು ತಾಳ್ಮೆ ಬೇಕು.

ಮೊದಮೊದಲ ಕೆಲವು ಆಚಾರ್ಯರು ಸಮಿತಿಯ ಅನುಭವಿ ಕಾರ್ಯಕರ್ತರು ರಚನಾತ್ಮಕ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸಿದ್ದವರು. ಶ್ರೀ ಟಿ. ಆರ್. ಗೋವಿಂದರಾವ್ ಎನ್ನುವವರು ಮಹಾತ್ಮ ಗಾಂಧಿಯವರೊಡನೆ ಎರಡು ಮೂರು ವರ್ಷ ಆಶ್ರಮದಲ್ಲಿ ಪರಿಶ್ರಮ ಪಡೆದವರು. ನಿಸ್ವಾರ್ಥ ಕಾರ್ಯಕರ್ತರು, ದೇಶಭಕ್ತರು. ಆತ್ಮೀಯತೆಯನ್ನು ಮೈಗೂಡಿಸಿಕೊಂಡಿದ್ದವರು.

ಶ್ರೀ ಗೋವಿಂದರಾಯರು ಯಗಚೀ ವಿದ್ಯಾಪೀಠದ ಮೊದಲ ಆಚಾರ್ಯರು. ಅವರಿಗೆ ೩೦ ಎಕರೆ ಜಮೀನನ್ನು ಕೊಟ್ಟು ವಿದ್ಯಾಪೀಠವನ್ನು ಸ್ಥಾಪಿಸಲು ತಿಳಿಸಿದರು. ಹಾಸನದಿಂದ ವಿದ್ಯಾಪೀಠಕ್ಕೆ ನಿತ್ಯವೂ ನಡೆದು ಹೋಗಿ, ಕೆಲಸಮಾಡುತ್ತಿದ್ದರು. ದಾರಿಯಲ್ಲಿ ಬಿದ್ದಿದ್ದ ಸಗಣಿಯನ್ನು ತಮ್ಮ ಲುಂಗಿಯಲ್ಲಿ ಕಟ್ಟಿಕೊಂಡು ಹೋಗಿ ಜಮೀನಿಗೆ ಹಾಕುತ್ತಿದ್ದರಂತೆ. ಈ ವಿಷಯವನ್ನು ಸುತ್ತಮುತ್ತಲ ಗ್ರಾಮಸ್ಥರು ಈಗಲೂ ಹೇಳುತ್ತಾರೆ. ಈಗ ಗೋವಿಂದರಾಯರಂತಹ ಜನ ವಿರಳ.

ಗ್ರಾಮಾಭಿವೃದ್ಧಿಯಲ್ಲಿ, ಸಮಾಜ ಸೇವೆಯಲ್ಲಿ ಪದವಿ ಪಡೆದವರನ್ನು ಆಚಾರ್ಯರಾಗಿ ನೇಮಿಸುವುದು ಲಾಭದಾಯಕ. ವಿದ್ಯಾಪೀಠದ ಆಚಾರ್ಯರಿಗೆ ಶಿಕ್ಷಣ ಕೊಡುವ ಜವಾಬ್ದಾರಿಯ ಜತೆಗೆ ಆಡಳಿತ ಜವಾಬ್ದಾರಿಯನ್ನು ಹೇರಲಾಗಿದೆ. ಕಛೇರಿಯ ಕೆಲಸ ಹೆಚ್ಚಾಗಿದೆ. ಅಲ್ಲದೆ ಅವರಿಗೆ ಹೆಚ್ಚಿನ ಅಧಿಕಾರವೂ ಇರುವುದಿಲ್ಲ. ಎಲ್ಲಾ ವಿಷಯಗಳಿಗೂ ಕೇಂದ್ರ ಕಛೇರಿಯ ಅಪ್ಪಣೆಗೆ ಕಾಯಬೇಕು. ಆಚಾರ್ಯರಿಗೆ ದಕ್ಷ ಸಹಾಯಕರನ್ನು ಒದಗಿಸಿ, ಅಧಿಕಾರ ವಿಕೇಂದ್ರಿಕರಣ ಮಾಡಿದರೆ ಕೆಲಸ ಇನ್ನೂ ಸಮರ್ಪಕವಾಗಿ ನಡೆಯುವುದು. ಆದರೆ ಈಗಿನ ಕಾರ್ಯಕರ್ತರು ದಕ್ಷರಲ್ಲವೆಂಬುದು ತಿಳಿದ ವಿಷಯ. ದಕ್ಷರಾದವರನ್ನು ಬೇರೆಡೆಯಿಂದ ಎರವಲು ಪಡೆಯಲೂ ಸಾಕು. ಕೇಂದ್ರ ಕಛೇರಿಯು ಸದಾ ಪೊಲೀಸರಂತೆ ಕಾವಲು ಕಾಯುವ ಸ್ಥಿತಿ ಬಂದಿದೆ. ಸರಿಯಾದ ಕಾರ್ಯಕರ್ತರನ್ನು ನೇಮಿಸಿ, ಹೆಚ್ಚುಕಾಲ ಒಂದೇ ವಿದ್ಯಾಪೀಠದಲ್ಲಿ ದುಡಿಯಲು ಅವಕಾಶ ಕೊಡಬೇಕು. ಹಾಗಾದರೆ ಕೇಂದ್ರ ಅಭಿವೃದ್ಧಿ ಹೊಂದಲು ಸಾಧ್ಯ. ಆದಾಯವನ್ನು ಹೆಚ್ಚಿಸಿ ಕೊಳ್ಳಲು ಅನುಕೂಲ.

ವಿದ್ಯಾಪೀಠದ ಸಿಬ್ಬಂದಿಗೆ ''ಪ್ರಾಜೆಕ್ಟ್ ಆಲೋಯೆನ್'' ರೀತಿ ಹೆಚ್ಚು ಸಂಭಾವನೆಗೆ ಅವಕಾಶ ಮಾಡಿದರೆ ಒಳ್ಳೆಯದು. ಅವರ ಮಕ್ಕಳು ದೂರದ ಶಾಲಾ-ಕಾಲೇಜುಗಳಿಗೆ ಹೋಗಿ ಬರಬೇಕಾಗುತ್ತದೆ. ಆರೋಗ್ಯ ಕಾಪಾಡಿಕೊಳ್ಳಲು ದೂರದ ಊರುಗಳಲ್ಲಿರುವ ಔಷಧಾಲಯಗಳಿಗೆ ಹೋಗಿ ಬರಬೇಕು. ಈ ಹೆಚ್ಚಿನ ಸಂಭಾವನೆಯಿಲ್ಲದಿದ್ದರೆ, ಅವರಿಗೆ ತುಂಬ ಅನಾನುಕೂಲವಾಗುತ್ತದೆ.

ವಿದ್ಯಾಪೀಠದ ಆಗು ಹೋಗುಗಳಲ್ಲಿ ಆಯಾ ಜಿಲ್ಲೆಯ ಪ್ರಮುಖರು ಭಾಗಿಯಾಗಲು ಒಂದು ಸಲಹಾ ಸಮಿತಿಯ ಅಗತ್ಯವಿದೆ. ಈ ಸಮಿತಿಯನ್ನು ಆಗಿಂದಾಗ್ಗೆ ಸೇರಿಸಿ ವಿಚಾರ ವಿನಿಮಯ ಮಾಡಿಕೊಳ್ಳಬೇಕು. ಕೇಂದ್ರದ ಹಿತಕ್ಕಾಗಿ ಎಲ್ಲರ ನೆರವನ್ನು ಪಡೆಯಬೇಕು.

ವಿದ್ಯಾಪೀಠಗಳ ಯೋಜನೆಗೆ, ಬೆಳವಣಿಗೆಗೆ ಅನೇಕ ವ್ಯಕ್ತಿಗಳೂ, ಸಂಸ್ಥೆಗಳೂ ಕಾರಣಕರ್ತರು. ಸಮಿತಿಯ ಕಾರ್ಯದರ್ಶಿಯವರಾಗಿದ್ದ ಶ್ರೀ ಎಸ್.ವಿ. ಶ್ರೀನಿವಾಸ ರಾವ್, ಶ್ರೀನ.ಭದ್ರಯ್ಯ ಅವರು ಮೊದಲಲ್ಲಿ ಆಚಾರ್ಯರಾಗಿದ್ದು ಕೊಂಡು ಕೇಂದ್ರಕ್ಕೆ ಒಂದು ರೂಪ ಕೊಟ್ಟರು. ಅಧ್ಯಕ್ಷರಾಗಿದ್ದ ಶ್ರೀ ಟಿ.ಮಾದಯ್ಯಗೌಡರು ಸಾಕಷ್ಟು ಪ್ರಚಾರ ಮಾಡಿ ರಾಷ್ಟ್ರ ಮತ್ತು ಅಂತರ ರಾಷ್ಟ್ರ ಮಟ್ಟದಲ್ಲಿ ಪ್ರಖ್ಯಾತಿ ತಂದರು. ಅವರು ಸಂಸತ್ ಸದಸ್ಯರಾಗಿದ್ದಾಗ ಡೆನ್ಮಾರ್ಕಿನಲ್ಲಿ ಇದಕ್ಕೆ ಮಾನ್ಯತೆ ಸಿಗುವಂತೆ ಮಾಡಿದರು. ಅಮೆರಿಕದ ಫೋರ್ಡ್ ಫೌಂಡೇಷನ್ ಸಂಸ್ಥೆ ಹೊಸ ವಿದ್ಯಾಪೀಠಗಳನ್ನು ಸ್ಥಾಪಿಸಲು ಹಣ ಸಹಾಯ ಒದಗಿಸಿತು. ಇದಕ್ಕೆ ಶ್ರೀ ಮಾದಯ್ಯ ಗೌಡರ ಪ್ರಯತ್ನ ಸಾಕಷ್ಟಿತ್ತು.

ಯುನೆಸ್ಕೋ ಸಂಸ್ಥೆಯು ವಯಸ್ಕರ ಶಿಕ್ಷಣ ಸಮಿತಿಯನ್ನು ಅಂಗಸಂಸ್ಥೆಯನ್ನಾಗಿ ಪರಿಗಣಿಸಿದ್ದರಿಂದ ಅನೇಕ ರಾಷ್ಟ್ರಗಳಲ್ಲಿ ಈ ಕೇಂದ್ರಗಳ ಪರಿಚಯವಾಯಿತು. ಅಭಿವೃದ್ಧಿ ಹೊಂದುತ್ತಿರುವ ಕೆಲವು ರಾಷ್ಟ್ರಗಳ ಕಾರ್ಯಕರ್ತರು ಅಧ್ಯಯನಕ್ಕಾಗಿ ವಿದ್ಯಾಪೀಠಗಳಿಗೆ ಬಂದರು.

ಡೆನ್ಮಾರ್ಕಿನ ಮೆಲ್ಲಿಂ ಫೋಕ್ ಲೈಟ್ ಸಂಪರ್ಕ ಎಂಬ ಸಂಸ್ಥೆಯು ವಿದ್ಯಾಪೀಠಗಳ ಬಗ್ಗೆ ಹೆಚ್ಚು ಆಸ್ಥೆಯನ್ನು ಹೊಂದಿತು. ವಿದ್ಯಾ

ಪೀಠಗಳಿಗೆ ಜನ-ಧನ ಎರಡನ್ನು ಒದಗಿಸಿತು. ಡೆನ್ಮಾರ್ಕಿನ ತಜ್ಞರು ಶಿವಾರಗುಡ್ಡ ವಿದ್ಯಾಪೀಠ ಮತ್ತು ಗಾಜನೂರು ವಿದ್ಯಾಪೀಠಗಳಲ್ಲಿ ತಂಗಿದ್ದು, ಅನೇಕ ರೀತಿಯಲ್ಲಿ ಈ ಕೇಂದ್ರಗಳನ್ನು ಅಭಿವೃದ್ಧಿಪಡಿಸಿದರು. ವ್ಯವಸಾಯಕ್ಕೆ ಯಂತ್ರೋಪಕರಣಗಳನ್ನು ಅಳವಡಿಸಿದರು. ಪಶುಪಾಲನೆ ಮತ್ತು ಕೋಳಿಸಾಕಣೆಗೆ ಅವರು ಬಹಳ ಮಹತ್ವವನ್ನು ಕೊಟ್ಟರು, ಕಾರಣ ಎರಡೂ ಅವರ ದೇಶದಲ್ಲಿ ಬಹಳ ಮುಖ್ಯವಾದ ಉದ್ಯಮಗಳು. ಇದು ಪುಟ್ಟರಾಜ್ಯವಾದರೂ ಡೆನ್ಮಾರ್ಕಿನ ಹಾಲಿನ ಪದಾರ್ಥಗಳು, ದನದ ಮಾಂಸ, ಕೋಳಿ ಮೊಟ್ಟೆ, ಮಾಂಸ ಯೂರೋಪಿನ ಎಲ್ಲ ರಾಷ್ಟ್ರಗಳಲ್ಲೂ ಬಳಕೆಯಾಗುತ್ತದೆ. ಪಶುಪಾಲನೆಗಾಗಿ ಡೆನ್ಮಾರ್ಕಿನಿಂದ ಉತ್ತಮ ತಳಿಯ ಹಸುಗಳನ್ನು, ಹೋರಿಯನ್ನು ತರಿಸಿ, ಇಲ್ಲಿ ತಳಿ ಅಭಿವೃದ್ಧಿ ನಡೆಸಿದರು. ಸಾವಿರಾರು ಕೋಳಿಗಳನ್ನು ತರಿಸಿ, ಕೋಳಿ ಸಾಕಣೆಗೆ ಹೆಚ್ಚು ಉತ್ತೇಜನ ಕೊಟ್ಟರು. ಈ ಉದ್ಯಮಗಳಲ್ಲಿ ಪ್ರವೀಣರಾದ ಕಾರ್ಯಕರ್ತರನ್ನು ವಿದ್ಯಾಪೀಠಗಳಲ್ಲಿಟ್ಟು ಅಭಿವೃದ್ಧಿಪಡಿಸಿದರು. ಗೃಹ ಕೈಗಾರಿಕೆಗಳಿಗೂ ನೆರವು ನೀಡಿದರು.

ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯಕರ್ತರನ್ನು ಡೆನ್ಮಾರ್ಕ್ ದೇಶಕ್ಕೆ ಕರೆಸಿಕೊಂಡು ಕೋಳಿ ಸಾಕಣೆ, ಪಶುಪಾಲನೆಯಲ್ಲಿ ತರಬೇತಿ ನೀಡಿದರು. ಡೇನರ ವಾಸಕ್ಕಾಗಿ ವಿದ್ಯಾಪೀಠಗಳಲ್ಲಿ ಮನೆಗಳನ್ನು ಕಟ್ಟಿಸಿದರು. ವಿದ್ಯಾರ್ಥಿಗಳ ವಾಸಕ್ಕಾಗಿ ಶಿವಾರಗುಡ್ಡ ವಿದ್ಯಾಪೀಠದಲ್ಲಿ ಭವ್ಯವಾದ ವಸತಿ ಗೃಹವನ್ನು ಕಟ್ಟಿಸಿದರು. ಅದರ ಆರಂಭೋತ್ಸವಕ್ಕೆ ಡೆನ್ಮಾರ್ಕಿನ ಪ್ರಧಾನ ಮಂತ್ರಿಗಳೇ ಆಗಮಿಸಿದ್ದರು.

ವಿದ್ಯಾಪೀಠಗಳಲ್ಲಿ ಇನ್ನೂ ಕೆಲವು ಚಟುವಟಿಕೆಗಳು ನಡೆದಿವೆ. ಪಂಚಾಯತ್ ರಾಜ್ಯ ಶಿಕ್ಷಣ ಕೇಂದ್ರಗಳನ್ನು ರಾಜ್ಯ ಸರ್ಕಾರ ಪ್ರತಿಷ್ಠಾಪನೆ ಮಾಡಿ, ಸಮಿತಿಯ ಕಾರ್ಯಕರ್ತರನ್ನೇ ಶಿಕ್ಷಕರನ್ನಾಗಿ ನೇಮಿಸಿತು. ನಂಜನಗೂಡು ಮತ್ತು ಗಾಜನೂರು ಕೇಂದ್ರಗಳು ಅನೇಕ ಜಿಲ್ಲೆಗಳ ಗ್ರಾಮ ಪಂಚಾಯತಿಗಳು, ತಾಲ್ಲೂಕು ಬೋರ್ಡುಗಳ ಸದಸ್ಯರಿಗೆ, ಅಧ್ಯಕ್ಷರುಗಳಿಗೆ ಶಿಕ್ಷಣ ಶಿಬಿರಗಳನ್ನು ನಡೆಸಿದುವು.

ವಿದ್ಯಾಪೀಠದಲ್ಲಿ ೬ ತಿಂಗಳು ವಾಸಿಸಲು ಅನುಕೂಲವಿಲ್ಲದ ಮಹಿಳೆಯರಿಗೆ ಅಲ್ಪ ಅವಧಿಯ ಶಿಬಿರಗಳನ್ನು ನಡೆಸಲಾಗುವುದು. ಇವು ಮೂರು ದಿನಗಳಿಂದ ಹಿಡಿದು ಒಂದು ವಾರದವರೆಗೆ ನಡೆಯುತ್ತವೆ. ಮಹಿಳೆಯರಿಗೆ ಅವಶ್ಯಕವಾದ ಹಾಗೂ ಆಸಕ್ತಿಯಿರುವ ವಿಷಯಗಳ ಬಗ್ಗೆ, ಅವರಿಗೆ ಮಾಹಿತಿ ಒದಗಿಸಲಾಗುವುದು. ಆರೋಗ್ಯ, ಮಕ್ಕಳ ಆರೋಗ್ಯ, ಕುಟುಂಬ ಯೋಜನೆ, ಕೈತೋಟಗಳು, ಸಮತೋಲನ ಆಹಾರ ಇತ್ಯಾದಿ ವಿಷಯಗಳನ್ನು ತಿಳಿಸಿಕೊಡಲಾಗುವುದು. ಈಗ ಪಂಚಾಯತಿ ರಾಜ್ಯದಲ್ಲಿ ಮಹಿಳೆಯರ ಪಾತ್ರ, ಮಕ್ಕಳ ಕಲಿಕೆ ಮುಂತಾದ ಪ್ರಚಲಿತ ವಿಷಯಗಳನ್ನು ಚರ್ಚಿಸಬಹುದು.

ಈಗ ರಾಜ್ಯದಲ್ಲಿ ೧೬ ವಿದ್ಯಾಪೀಠಗಳು ಇವೆ. ಅವುಗಳಲ್ಲಿ ನಾಲ್ಕನ್ನು ಮಹಿಳೆಯರಿಗಾಗಿ ಮೀಸಲಿಡಲಾಗಿದೆ. ಈ ಕೇಂದ್ರಗಳಲ್ಲಿ ಮಹಿಳೆಯರಿಗೆ ಅಗತ್ಯವಾದ ಕಸೂತಿ, ಹೆಣಿಗೆ, ಮಕ್ಕಳ ಮತ್ತು ಮಹಿಳೆಯ ಪೋಷಣೆ, ಆರೋಗ್ಯ, ಸಮತೋಲನ ಆಹಾರ ಮುಂತಾದ ವಿಷಯಗಳಿಗೆ ಹೆಚ್ಚಿನ ಪ್ರಾಧಾನ್ಯತೆ ಇರುತ್ತದೆ. ಸಾಂಸ್ಕೃತಿಕ ಚಟುವಟಿಕೆಗಳಾಗಿ ಗಮಕ, ದೇವರನಾಮ, ಭಾವಗೀತೆ, ಜಾನಪದ ನೃತ್ಯಗಳನ್ನು ಕಲಿಯುತ್ತಾರೆ.

ದೇಶದಲ್ಲಿ ಈಗ ಜಾತೀಯತೆಯ ದುರ್ಗಂಧ ಹರಡಿದೆ. ಗ್ರಾಮೀಣ ಜನತೆಯಲ್ಲಿ ದ್ವೇಷ, ಮತ್ಸರ, ಪೈಪೋಟಿ, ಶೋಷಣೆ ತುಂಬಿ ಉಸಿರುಕಟ್ಟಿಸುವಂತಾಗಿದೆ. ದುಷ್ಟ ಶಕ್ತಿಗಳ ಕಪಿಮುಷ್ಟಿಯಿಂದ ಜನ ಸಾಮಾನ್ಯರ ಬಿಡುಗಡೆಗೆ ವಿಚಾರ ಕ್ರಾಂತಿಯೇ ಮಾರ್ಗ. ಎಲ್ಲರಿಗೂ ಲೋಕ ಶಿಕ್ಷಣ ಅವಶ್ಯಕ. ಸ್ವಾತಂತ್ರ್ಯ ಪೂರ್ವದಲ್ಲಿದ್ದಂತೆ ನಿಸ್ವಾರ್ಥವಾಗಿ ದೇಶಕ್ಕಾಗಿ ಸಮಾಜಕ್ಕಾಗಿ ದುಡಿಯುವ ಯುವಶಕ್ತಿ ಬೇಕು. ವಿದ್ಯಾಪೀಠಗಳು ಈ ದಿಸೆಯಲ್ಲಿ ಶ್ರಮಿಸಬೇಕು.

ವಯಸ್ಕರ ಶಿಕ್ಷಣ ಸಮಿತಿಯ ಪ್ರಕಟಣೆಗಳು

ಎಚ್.ಆರ್. ಚಂದ್ರವದನ ರಾವ್
ಪ್ರಾಂಶುಪಾಲರು(ನಿ)
೨೮೭೭/೧೦, ಚಾಮುಂಡಿಪುರಂ
ಮೈಸೂರು-೫೭೦ ೦೦೪

ನವಸಾಕ್ಷರರು ತಾವು ಕಲಿತುದನ್ನು ಮರೆತು ಪುನಃ ನಿರಕ್ಷರಸ್ಥರಾಗದಿರಬೇಕಾದರೆ ಅವರಿಗೆ ಅಗತ್ಯವಾದ ಪತ್ರಿಕೆ ಮತ್ತು ಪುಸ್ತಕಗಳನ್ನು ಪ್ರಕಟಿಸಿ ಕಡಿಮೆ ದರದಲ್ಲಿ ಅವನ್ನು ಅವರಿಗೆ ತಲುಪುವಂತೆ ಮಾಡಬೇಕೆಂಬ ಧ್ಯೇಯವನ್ನು 'ವಯಸ್ಕರ ಶಿಕ್ಷಣ ಸಮಿತಿ' ಇಟ್ಟುಕೊಂಡು 'ಬೆಳಕು' ವಾರಪತ್ರಿಕೆಯನ್ನು 'ಪುಸ್ತಕಪ್ರಪಂಚ' ಎಂಬ ಹೆಸರಿನ ಮಾಸಿಕವನ್ನು , ಪ್ರಕಟಿಸುತ್ತಾ ಬಂದಿರುವುದರ ಜೊತೆ ಹಲವಾರು ಜ್ಞಾನ ವರ್ಧಕ ಅಮೂಲ್ಯ ಪುಸ್ತಕಗಳನ್ನು ಅದು ಪ್ರಕಟಿಸಿದೆ.

೧೬ಪಾಯಿಂಟ್‌ಗಳಲ್ಲಿ ಮುದ್ರಣ ಗೊಳ್ಳುವ 'ಬೆಳಕು' ವಾರಪತ್ರಿಕೆಯಲ್ಲಿ ವಾರದ ಮುಖ್ಯ ವಾರ್ತೆಗಳಲ್ಲದೆ ಧಾರಾವಾಹಿ, ಕಥೆ, ಪಶುಪಾಲನೆ ಮತ್ತು ಆರೋಗ್ಯದ ಬಗ್ಗೆ ಲೇಖನಗಳಿರುವುದರಿಂದ ಅದು ನವಸಾಕ್ಷರರಿಗೆ ಪ್ರಿಯವಾದ ಪತ್ರಿಕೆಯಾಗಿದೆ. ಸ್ವಾತಂತ್ರ್ಯಕ್ಕೆ ಮುಂಚೆಯೇ (ಈಗ ೫೭ನೇ ಸಂಪುಟದ ಸಂಚಿಕೆಗಳು ಬರುತ್ತಿವೆ) ಶುರುವಾದ ಈ ಪತ್ರಿಕೆ ಎಡರು ತೊಡರುಗಳಿಲ್ಲದೆ ಪ್ರಕಟವಾಗುತ್ತಿರುವುದಕ್ಕೆ ಕಾರಣ ಅದರ ಜನಪ್ರಿಯತೆ ಎಂದು ಒತ್ತಿ ಹೇಳುವ ಅಗತ್ಯವಿಲ್ಲ. "ಬೆಳಕು' ವಾರಪತ್ರಿಕೆಯಲ್ಲಿ ಪ್ರಕಟವಾದ ಕೆಲವು ಕಥೆಗಳನ್ನು ಆಯ್ದು ಪ್ರಕಟಿಸಿರುವ 'ಸಣ್ಣ ಕಥೆಗಳು' (೧೯೮೮, ೧೯೯೫) ಹಲವಾರು ಮುದ್ರಣಗಳನ್ನು ಕಂಡಿವೆ.

'ಪುಸ್ತಕ ಪ್ರಪಂಚ', ವಯಸ್ಕರ ಶಿಕ್ಷಣ ಸಮಿತಿ ಪ್ರಕಟಿಸುವ ಮಾಸಿಕ. ಜಾಹೀರಾತುಗಳ ಅಬ್ಬರವಿಲ್ಲದೆ, ಉದ್ರೇಕಗೊಳಿಸುವ ಲೇಖನಗಳು, ಚಿತ್ರಗಳು ಇಲ್ಲದೆ, ಓದುಗರಿಗೆ ಶುಚಿರುಚಿಯಾದ ಜ್ಞಾನದ ಸವಿಯೂಟ ಉಣಿಸುವ ಪತ್ರಿಕೆ ಇದು. 'ಸಾಮಾನ್ಯರಿಗೆ ಮಾತ್ರವಲ್ಲ, ಪಂಡಿತರಿಗೂ ಹಿಡಿಸುವಂಥ ಹಾಗೂ ಉಪಯುಕ್ತವಾಗುವಂಥ ಲೇಖನಗಳು ಈ ಪತ್ರಿಕೆಯಲ್ಲಿ ಪ್ರಕಟವಾಗುತ್ತವೆ. ಕಲೆ, ವಿಜ್ಞಾನ, ಸಂಸ್ಕೃತಿಗೆ ಸಂಬಂಧಿಸಿದ ವಿವಿಧ ವಿಷಯಗಳನ್ನೊಳಗೊಂಡ ಈ ಲೇಖನಗಳಲ್ಲಿ ಭಿನ್ನ, ವಿಭಿನ್ನ, ರುಚಿ, ಅಭಿರುಚಿಗಳನ್ನು ತಣಿಸುವ ಚೈತನ್ಯದಾಯಕ ದ್ರವ್ಯವಿದೆ' ಎನ್ನುವ ಡಾ. ದೇಜಗೌರವರ ಮಾತು ಪೂರ್ಣ ಸತ್ಯ, ಒಳ್ಳೆಯ ಲೇಖನಗಳನ್ನು ಆಯ್ದು ಪ್ರಕಟಣೆಗೆ ನೆರವಾಗುವ ಸಂಪಾದಕ ಮಂಡಲಿ ತುಂಬ ಶ್ರಮವಹಿಸುತ್ತದೆ ಎಂದು ಪತ್ರಿಕೆಯನ್ನು ನೋಡಿದರೆ ತಕ್ಷಣವೆ ಅರಿವಾಗುವುದು.

'ಪುಸ್ತಕ ಪ್ರಪಂಚ' ಕೆಲವು ವಿಶೇಷ ಸಂಚಿಕೆಗಳನ್ನು ತಂದಿದೆ. ಕವಿವರ್ಯ ಕುವೆಂಪು, 'ಅಲೆದಾಡುವ ವಿಶ್ವಕೋಶ' ಎಂದೆನಿಸಿದ ಕಡಲತೀರದ ಭಾರ್ಗವ ಶಿವರಾಮ ಕಾರಂತ, ಕನ್ನಡದ ಕಣ್ಮಣಿ ದೇಜಗೌರವರ ಬಗ್ಗೆ ಪುಸ್ತಕ ಪ್ರಪಂಚ ತಂದಿರುವ ವಿಶೇಷ ಸಂಚಿಕೆಗಳು ಸಂಗ್ರಹ ಯೋಗ್ಯ.

ವಯಸ್ಕರ ಶಿಕ್ಷಣ ಸಮಿತಿ ಅನೇಕ ಅಮೂಲ್ಯ ಪುಸ್ತಕಗಳನ್ನು, ಕಿರು ಹೊತ್ತಿಗೆಗಳನ್ನು ವಿದ್ವಾಂಸರುಗಳಿಂದ ಬರೆಸಿ ಹೊರತಂದಿದೆ. 'ವಯಸ್ಕರ ಶಿಕ್ಷಣ ಮಾಲೆ'ಯ ಪುಸ್ತಕಗಳು ಕಡಿಮೆ ಬೆಲೆಯವು. ಆದರೆ ಹೆಚ್ಚು ಮೌಲ್ಯ ಹೊಂದಿರುವಂಥಹವು- ವಿಶ್ವವಿದ್ಯಾನಿಲಯ ಗಳ ಪ್ರಸಾರಾಂಗ ಹೊರತಂದಿರುವ ಕಿರು ಹೊತ್ತಿಗೆಗಳಂತೆ. ಈ ಮಾಲೆಯ ಅನೇಕ ಪುಸ್ತಕಗಳು ಪುನಃ ಪುನಃ ಮುದ್ರಣವಾಗಿರು

ವುದುಅವುಗಳ ಜನಪ್ರಿಯತೆಗೆ ಸಾಕ್ಷಿಯಾಗಿದೆ.

ಸಮಿತಿ ಹೊರ ತಂದಿರುವ 'ಪುಸ್ತಕ ಭಂಡಾರ ಮಾಲೆ'ಯ ಶ್ರೀ ಎಚ್.ಎಲ್. ನಾಗೇಗೌಡರ 'ನನ್ನೂರು', ದಿಗ್ಗಜ ಪ್ರೊ. ದೇಜಗೌ ಅವರ 'ಯುದ್ಧ ಮತ್ತು ಶಾಂತಿ', 'ಸಂಪಾದಕೀಯ ಸಂಕಲನ', 'ಕಾರಂತರ ದರ್ಶನ'-ಇವು ಸಾಹಿತ್ಯ ಲೋಕದಲ್ಲಿ ಚಿರಕಾಲ ಉಳಿಯುವಂತಹವು. 'ನನ್ನೂರು' ಪುಸ್ತಕದ ಬಗ್ಗೆ ರಾಷ್ಟ್ರಕವಿ ಕುವೆಂಪು ಹೇಳುತ್ತಾರೆ 'ನನ್ನೂರ'ನ್ನು ಆಸ್ವಾದಿಸಿ, ಮೆಚ್ಚಿ ಕೃತಿಕಾರನಿಗೆ ಕೃತಜ್ಞರಾಗದೆ ಯಾರೊಬ್ಬರೂ ಹೋಗುವುದಿಲ್ಲ ಎಂದು ಭಾವಿಸುತ್ತೇನೆ.'' ೩೫೦ ಪುಟಗಳಿರುವ ಇದರ ಬೆಲೆ ರೂ ೮/ ಮಾತ್ರ

ಅನುವಾದ ಒಂದು ಕಲೆ. ಸಾಮಾನ್ಯ ಜನ ತಿಳಿದಿರುವಂತೆ ಇದು ಸುಲಭದ ಕಾರ್ಯವೇನೂ ಅಲ್ಲ. ಅನುವಾದಕನಿಗೆ ಸಂಬಂಧಪಟ್ಟ ಎರಡು ಭಾಷೆಗಳ ಮೇಲೆ ಸ್ವಾಮ್ಯವಿರಬೇಕು, ಜೊತೆಗೆ ಮೂಲ ಲೇಖಕನ ಮನೋವ್ಯಾಪಾರ ಆತನಿಗೆ ಗೊತ್ತಿರಬೇಕು. ಇಲ್ಲದಿದ್ದರೆ ಅನುವಾದಿತ ಕೃತಿ ನೀರಸವಾಗುತ್ತದೆ. ಬಹಳ ಜನ ಅನುವಾದಕರು 'ದೇಹವನ್ನು ಉಳಿಸಿ ಕೊಳ್ಳುತ್ತಾರೆ, ಆದರೆ ಆತ್ಮವನ್ನು ಕೊಂದು ಬಿಡುತ್ತಾರೆ,' ಡಾ. ದೇಜಗೌ ಅವರು ಅಸದೃಶ ಭಾಷಾಂತರಕಾರರು. ಅವರ ಅನುವಾದಿತ ಕೃತಿ 'ಯುದ್ಧ ಮತ್ತು ಶಾಂತಿ' (ಮೂಲ ಲಿಯೋ ಟಾಲ್‌ಸ್ಟಾಯ್) ಮೂಲದಷ್ಟೇ ಸೊಗಸು, ಸುಂದರ. ವಯಸ್ಕರ ಶಿಕ್ಷಣ ಸಮಿತಿ ಇಂತಹ ಪುಸ್ತಕವನ್ನು ಪ್ರಕಟಿಸಿರುವುದು ನಿಜಕ್ಕೂ ಶ್ಲಾಘನೀಯ.

ಸುಲಭವಾಗಿ ಓದಿಸಿಕೊಂಡು ಹೋಗುತ್ತಾ ಬೇರೊಂದು ಪ್ರಪಂಚಕ್ಕೆ ಒಯ್ಯುವ ಕತೆ ಕಾದಂಬರಿ ಸಾಮಾನ್ಯ ಜನರಿಗೆ ಇಷ್ಟ. ಸುಲಭವಾಗಿ ಅರ್ಥವಾಗುವುದಿಲ್ಲ ಎಂಬ ಕಾರಣ ಒಡ್ಡಿ ಅವರು ವಿಜ್ಞಾನದ ಬಗ್ಗೆ ಬರೆದ ಲೇಖನಗಳನ್ನು, ಪುಸ್ತಕಗಳನ್ನು ಓದುವುದಿಲ್ಲ. ನೀಲಿ ಆಕಾಶದಲ್ಲಿ ರಾತ್ರಿ ಹೊತ್ತು ಕಂಗೊಳಿಸುವ ಮಿನುಗುತಾರೆಗಳನ್ನು ನೋಡಿ ವಿಸ್ಮಯಗೊಳ್ಳುವ ಅವರಿಗೆ ನಕ್ಷತ್ರಗಳ ಬಗ್ಗೆ ಎಷ್ಟು ಗೊತ್ತಿದೆ? ಇದನ್ನು ನಿವಾರಿಸುವುದಕ್ಕೆಂದೇ ಬರೆದ ಕೃತಿ, 'ನಕ್ಷತ್ರ ವೀಕ್ಷಣೆ'. ಇದೊಂದು ಅಪರೂಪದ ವೈಜ್ಞಾನಿಕ ಗ್ರಂಥ. 'ಚಿತ್ರ, ಸಂಖ್ಯೆ, ರೂಪಕ, ಕಲೆ, ವಿವರಣೆ, ಪದ್ಯ ಇವುಗಳಿಂದ ಕುತೂಹಲ ಕೆರಳಿಸಿ ಓದುವಂತೆ ಮಾಡುವ' ಈ ಕೃತಿಯನ್ನು ಬರೆದ ಪ್ರೊ. ಜಿ.ಟಿ.ನಾರಾಯಣರಾಯರು ಸ್ತುತ್ಯಾರ್ಹರು.

ವಯಸ್ಕರ ಶಿಕ್ಷಣ ಸಮಿತಿ ಪ್ರಕಟಿಸಿರುವ ಉತ್ತಮೋತ್ತಮ ಪುಸ್ತಕವೆಂದರೆ ಆಧುನಿಕ ವಾಲ್ಮೀಕಿ ಕುವೆಂಪು ವಿರಚಿತ 'ಜನಪ್ರಿಯ ವಾಲ್ಮೀಕಿ ರಾಮಾಯಣ'. ಪಂಡಿತ ಪಾಮರರ ಹೊಗಳಿಕೆಗೆ ಪಾತ್ರವಾದ ಇದು ಅನೇಕ ಆವರ್ತಿಗಳನ್ನು ಕಂಡಿದೆ. 'ಬೆಳಕು' ಇದನ್ನು ಧಾರಾವಾಹಿಯಾಗಿ ಪ್ರಕಟಿಸುತ್ತಾ ಇದೆ. ವಯಸ್ಕರ ಶಿಕ್ಷಣ ಸಮಿತಿ 'ಪೌರಾಣಿಕ ಗ್ರಂಥ ಮಾಲೆ' ಅಡಿಯಲ್ಲಿ ಈ ಕೃತಿ ರತ್ನವನ್ನೂ, ಶ್ರೀ ಸಿದ್ಧಯ್ಯ ಪುರಾಣಿಕರವರ 'ಶರಣ ಚರಿತಾಮೃತ'ವನ್ನು ಪ್ರಕಟಿಸಿದೆ.

ಸಮಿತಿ 'ಸಾಹಿತ್ಯ ರಚನಾಲಯ' 'ಲಕ್ನೋದ ಸಾಕ್ಷರತಾ ನಿಕೇತನ' ಇವರು ರಚಿಸಿಕೊಟ್ಟ ನೂರಾರು ಕಿರುಪುಸ್ತಕಗಳನ್ನು ಪ್ರಕಟಿಸಿ ನವಸಾಕ್ಷರರ ಜ್ಞಾನ ತೃಷೆ ಅಡಗಿಸಿದೆ. ಪುಸ್ತಕಗಳ ಬೆಲೆ ಒಂದೊಂದಕ್ಕೂ ಕೇವಲ ರೂ.೨-೫೦.

ವಯಸ್ಕರ ಶಿಕ್ಷಣ ಸಮಿತಿಯ ಪ್ರಕಟಣೆಗಳೆಲ್ಲಾ ಸದಭಿರುಚಿಯುಳ್ಳಂಥಹವು. ಕೆಲವಂತೂ ಸಾಹಿತ್ಯ ಲೋಕಕ್ಕೆ ಮೆರಗು ಕೊಡುವಂಥಹವು. ಸಮಿತಿಯ ಈ ಕಾರ್ಯ ಸ್ತುತ್ಯಾರ್ಹ.

ಅಕ್ಷರ ಲೋಕದ ಪುಟ್ಟ ಹಣತೆ 'ಬೆಳಕು'

ಡಾ॥ ನಿರಂಜನ ವಾನಳ್ಳಿ
ಎಲ್ ೪೪,೯ನೆ ಮುಖ್ಯರಸ್ತೆ
ಮಾನಸಗಂಗೋತ್ರಿ
ಮೈಸೂರು-೫೭೦ ೦೦೬

ಎಲ್ಲ ಬಲ್ಲವ ಚಂದ
ಬೆಲ್ಲ ತಿನ್ನಲು ಚಂದ
ಎಲ್ಲ ಅಕ್ಷರ ಕಲಿಯೆ ಬಲುಚಂದ
ಕೋಲು ಕೋಲೆನ್ನ ಕೋಲೆ
ಮುತ್ತಿನ ರತ್ನದ ಕೋಲು ಕೋಲೆನ್ನ ಕೋಲೆ

ಲೇ: ಬೆ. ಬೋರೇಗೋಡ, ಬೆಣಗನಹಳ್ಳಿ

ಸಾರ್ವತ್ರಿಕ ಸತ್ಯವನ್ನು ಸಾರುವ ಅಚ್ಚ ಕನ್ನಡದ ಈ ಕೋಲಾಟದ ಪದ ಪ್ರಕಟಗೊಂಡಿರುವುದು ೧೯೫೦ನೇ ಇಸವಿಯ ದೀಪಾವಳಿ ಸಂಚಿಕೆಯಲ್ಲಿ. ಸರಿಯಾಗಿ ೫೦ ವರ್ಷಗಳ ಹಿಂದೆ, ಸರಳ ಕನ್ನಡದಲ್ಲಿ ನವಸಾಕ್ಷರರಿಗೆ ಬೇಕಾದ ಸಂದೇಶವನ್ನು ಅವರಿಗೆ ಇಷ್ಟವಾಗ ಬಲ್ಲ ರೂಪದಲ್ಲೇ ನೀಡುವುದು ಬೆಳಕು ಪತ್ರಿಕೆಯ ರೀತಿ-ನೀತಿ. ಸರಿಸುಮಾರು ೬೦ ವರ್ಷಗಳಿಂದಲೂ 'ಬೆಳಕು' ಇದನ್ನೇ ಮಾಡುತ್ತಿದೆ. ಆದಕ್ಕೇ ಕನ್ನಡದಲ್ಲಿ ಬೆಳಕು ಪತ್ರಿಕೆಗೆ ವಿಶಿಷ್ಟ ಸ್ಥಾನವಿದೆ. ಆರು ದಶಕಗಳಿಂದ ಕನ್ನಡಿಗರ ಮನ-ಮನೆಗಳನ್ನು ಬೆಳಗಿದ ಹೆಮ್ಮೆ 'ಬೆಳಕಿ'ಗಿದೆ.

ಮೈಸೂರು ನಗರದಲ್ಲಿ ೧೯೪೧ರಲ್ಲಿ ಅಕ್ಷರ ಪ್ರಚಾರ ಸಮಿತಿ ಸ್ಥಾಪನೆಯಾಯಿತು. ಸಮಿತಿಯ ಅಂಗವಾಗಿ ೧೯೪೨ನೇ ಇಸವಿ ದೀಪಾವಳಿಗೆ (ಶನಿವಾರ, ನವೆಂಬರ್ ೭, ೧೯೪೨)'ಬೆಳಕು' ಪತ್ರಿಕೆ ಪ್ರಥಮ ಕಿರಣವನ್ನು ಹೊರಹೊಮ್ಮಿಸಿತು. 'ಅಜ್ಞಾನವೇ ಕತ್ತಲು ಜ್ಞಾನವೇ ಬೆಳಕು' ಎಂಬುದು ಪತ್ರಿಕೆಯು ಅಂದು ಸಾರಿದ ಘೋಷವಾಕ್ಯ.

'ಇಂದಿನಿಂದ ಕ್ರಮವಾಗಿ ವಾರವಾರವೂ 'ಬೆಳಕು' ಎಂಬ ಪತ್ರಿಕೆಯನ್ನು ಅಚ್ಚುಹಾಕಿಸಲು ಏರ್ಪಾಟಾಗಿದೆ. ಇದರಿಂದ ಹೊಸದಾಗಿ ಅಕ್ಷರ ಕಲಿತವರಿಗೆ ಪತ್ರಿಕೆಯನ್ನು ಓದುವ ಅಭ್ಯಾಸವಾಗಬೇಕು. ಪ್ರಪಂಚದ ಸುದ್ದಿಗಳು ಅವರಿಗೆ ತಿಳಿಯಬೇಕು. ಮುಂದಕ್ಕೆ ಅವರು ತಾವೇ ಇತರ ಪತ್ರಿಕೆಗಳನ್ನು ಓದಬೇಕು. ತಾವು ಕಲಿತ ವಿದ್ಯೆಯನ್ನು ಬೆಳಕಿನ ಮೂಲಕ ಹೆಚ್ಚಿಸಿಕೊಳ್ಳಬೇಕು. ಈ ಉದ್ದೇಶಗಳಿಂದ ಈ ವಾರ ಪತ್ರಿಕೆಯನ್ನು ಹೊರಡಿಸುತ್ತೇವೆ. ಇದು ಎಲ್ಲ ಊರುಗಳಲ್ಲಿಯೂ ಬೆಳಗಲಿ'- ಎಂಬುದಾಗಿ ಸಂಪಾದಕರು ಮೊದಲ ಸಂಚಿಕೆಯಲ್ಲಿ ನಿವೇದಿಸಿಕೊಂಡಿದ್ದರು. ಎರಡು ಪುಟದ ಕ್ರೌನ್ ಆಕಾರದ ಮೊದಲ ಸಂಚಿಕೆಯ ಮುಖಪುಟದ ಮೇಲ್ಭಾಗದಲ್ಲಿ ದಪ್ಪ ಅಕ್ಷರಗಳಲ್ಲಿ ಮೈಸೂರು ಮಹಾರಾಜರ ಶುಭಾಶಯಗಳಿದ್ದವು. ಎಸ್. ವಿ. ಶ್ರೀನಿವಾಸ ರಾಯರನ್ನು ಸಂಪಾದಕರೆಂದು ಹೆಸರಿಸಲಾಗಿದ್ದ ಪತ್ರಿಕೆ, ನಗರದ ಪಂಚಾಚಾರ್ಯ ಪ್ರೆಸ್ಸಿನಲ್ಲಿ ಮುದ್ರಣಗೊಂಡಿತು.

'ಹೊಸದಾಗಿ ಓದು ಬರೆಹಗಳನ್ನು

ಕಲಿತವರ ಉಪಯೋಗಕ್ಕಾಗಿ ಪತ್ರಿಕೆಯು ಮೀಸಲಾಗಿದೆ. ಅವರಿಗೆ ಓದಿನಲ್ಲಿ ಇಷ್ಟವಿರುತ್ತದೆ. ಆದರೆ ಅವರು ಸುಲಭವಾಗಿ ಓದಬಹುದಾದ ಸರಳವಾದ ಲೇಖನಗಳನ್ನು ಬಯಸುತ್ತಾರೆ. ಅವರು ಸರಾಗವಾಗಿ ಓದಿ ಸಂತೋಷಪಡುವಂತೆ ಸುಲಭವಾಗಿಯೂ ಮತ್ತು ಸ್ವಾರಸ್ಯವಾಗಿಯೂ ಇರತಕ್ಕ ಲೇಖನಗಳನ್ನು ಬೆಳಕು ಪತ್ರಿಕೆಯು ಅವರಿಗೆ ಒದಗಿಸುತ್ತದೆ' - ಅಂದಿನ ಮೈಸೂರು ರಾಜ್ಯದ ನ್ಯಾಯಾಂಗ ಮಂತ್ರಿಗಳಾಗಿದ್ದ ಕೆ. ಟಿ. ಭಾಷ್ಯಂರವರು 'ಬೆಳಕು' ಪತ್ರಿಕೆಯ ಸೇವೆಯನ್ನು ಅದಕ್ಕೆ ಎಂಟು ವರುಷ ತುಂಬಿದಾಗ ಸೂಕ್ತವಾಗಿಯೇ ಗುರುತಿಸಿದ್ದಾರೆ. ಇಂದಿಗೂ 'ಬೆಳಕು' ಸಲ್ಲಿಸುತ್ತಿರುವ ಸೇವೆಗೆ ಇದು ಭಾಷ್ಯದಂತಿದೆ.

ನವಸಾಕ್ಷರರು ಈ ಪತ್ರಿಕೆಯ ಓದುಗರಾದ್ದರಿಂದ ಬೇರೆ ಪತ್ರಿಕೆಗಳಿಗಿಂತ ಇಲ್ಲಿ ಅಕ್ಷರಗಳು ದೊಡ್ಡದಾಗಿವೆ. ದೇಶ-ವಿದೇಶದ ಸುದ್ದಿ ತುಣುಕುಗಳು, ಬೇಸಾಯ, ಆರೋಗ್ಯ ಮುಂತಾದ ಖಾಯಂ ಅಂಕಣಗಳು ಸಣ್ಣ ಸಣ್ಣ ಕತೆಗಳು, ಪ್ರಬಂಧಗಳು, ಸರಳ ಪದ್ಯಗಳು ಇಲ್ಲಿ ಪ್ರಕಟಗೊಳ್ಳುತ್ತವೆ. ರೇಖಾ ಚಿತ್ರಗಳು, ವ್ಯಂಗ್ಯ ಚಿತ್ರಗಳೂ ಇವೆ. ಚಿತ್ರಗಳನ್ನು ನೀಡಿ ಸೂಕ್ತವಾದ ಕತೆ ಬರೆಯುವಂತೆ ಓದುಗರನ್ನು ಪ್ರೇರೇಪಿಸುವ ಪ್ರಯತ್ನಗಳೂ ನಡೆದಿವೆ. ರಾಜ್ಯಾದ್ಯಂತ ಇರುವ ವಯಸ್ಕರ ಶಿಕ್ಷಣ ವಿದ್ಯಾಪೀಠಗಳ ಚಟುವಟಿಕೆಗಳು ಇಲ್ಲಿ ಸುದ್ದಿಯಾಗಿ ದಾಖಲಾಗುತ್ತವೆ. 'ಬೆಳಕು' ಏನನ್ನೇ ಪ್ರಕಟಿಸಲಿ, ಅದು ಇದೀಗ ತಾನೇ ಅಕ್ಷರ ಕಲಿತವರು ಓದಲು ಅನುಕೂಲವಾಗುವಂತೆ ಸರಳವಾಗಿರುತ್ತದೆ. ಆಕರ್ಷಕವಾಗಿರುತ್ತದೆ. ಎಲ್ಲರನ್ನೂ ಸಾಕ್ಷರರನ್ನಾಗಿಸಬೇಕೆಂಬ ಕಾಳಜಿಯಿಂದ ಕೂಡಿರುತ್ತದೆ. ಉದಾಹರಣೆಗೆ ೧೯೫೫ನೇ ಇಸವಿಯ ದೀಪಾವಳಿಗೆ ಬೆಳಕು ಪ್ರಕಟಿಸಿರುವ ಶುಭಾಶಯವನ್ನು ಗಮನಿಸಬೇಕು:

ಈ ವರುಷ ಮಳೆ-ಬೆಳೆ ಚೆನ್ನಾಗಿ ಆಗಲಿ,
ಎಲ್ಲರಿಗೂ ಹೊಟ್ಟೆತುಂಬ ಅನ್ನ ಮೈ ತುಂಬ ಬಟ್ಟೆ ಸಿಕ್ಕಲಿ,
ಎಲ್ಲ ದೇಶಗಳಲ್ಲಿಯೂ ಸದಾ ಶಾಂತಿ ನೆಲೆಸಿರಲಿ,
ನಮ್ಮ ಗ್ರಾಮದಲ್ಲಿ ಅನಕ್ಷರಸ್ಥರೇ ಇಲ್ಲದಂತಾಗಲಿ.

ಐವತ್ತು ವರ್ಷಗಳ ಹಿಂದೆ ಬೆಳಕು ಓದುಗರಿಗೆ ಕೋರಿದ ಹಾರೈಕೆ ಇಂದಿಗೂ ಪ್ರಸ್ತುತ. 'ಬೆಳಕು' ಎಷ್ಟು ಸರಳವಾಗಿ ತನ್ನ ಧೋರಣೆಗಳನ್ನು ವ್ಯಕ್ತಪಡಿಸುತ್ತದೆ ಎಂಬುದಕ್ಕೆ ಸಾಕ್ಷಿ. ಎಲ್ಲಕ್ಕಿಂತ ಮುಖ್ಯವಾಗಿ ಸಾಕ್ಷರತೆಗೆ ಒತ್ತುಕೊಡುವ ಪ್ರಯತ್ನವನ್ನು 'ಬೆಳಕು' ಎಲ್ಲೆಲ್ಲಿಯೂ ಮಾಡುತ್ತದೆ ಎಂಬುದಕ್ಕೆ ಒಳ್ಳೆಯ ಪುರಾವೆ.

'ಬೆಳಕು' ವಾರಪತ್ರಿಕೆಯ ಹಿಂದಿನ ಸಂಚಿಕೆಗಳನ್ನು ಓದುತ್ತಾ ಹೋದರೆ ಪತ್ರಿಕೆಯು ಹಾಗೆ, ಕನ್ನಡ ಪತ್ರಿಕೋದ್ಯಮ ಬೆಳೆದುಬಂದ ಹಾದಿಯನ್ನೂ ಗುರುತಿಸಬಹುದು. ಉದಾಹರಣೆಗೆ ಮೊದಲ ವರ್ಷದ ೩೦ನೇ ಸಂಚಿಕೆಯ ಮುಖಪುಟದ ಲೇಖನಕ್ಕೆ ನೀಡಲಾದ ಶಿರೋನಾಮೆ ಹೀಗಿದೆ: ಶ್ರೀರಾಮಕೃಷ್ಣನ ಹುಟ್ಟಿದ ಹಬ್ಬ' ಇಂದು ಈ ಶೀರ್ಷಿಕೆಯನ್ನು ಓದುವಾಗ ವಿಚಿತ್ರವೆನಿಸುತ್ತದೆ. ಆದರೆ ಆಗ ಕನ್ನಡ ಪತ್ರಿಕೋದ್ಯಮವೇ ಇನ್ನೂ ಪ್ರೌಢಾವಸ್ಥೆಯನ್ನು ತಲುಪಿರಲಿಲ್ಲ. ಇದಕ್ಕೆ 'ಬೆಳಕು' ಹೊರತಲ್ಲ. ಮುಂದಿನ ದಿನಗಳಲ್ಲಿ 'ಶ್ರೀ ಅರವಿಂದರು ದೇಹವನ್ನು ಬಿಟ್ಟರು', 'ಸರದಾರರು ಸ್ವರ್ಗಸ್ಥರಾದರು' ಮುಂತಾದ ಶೀರ್ಷಿಕೆಗಳೂ ಸಿಗುತ್ತವೆ. ಕನ್ನಡ ಪತ್ರಿಕಾ ಭಾಷೆ ಬೆಳೆದ ಬಗೆಯನ್ನು ಅಧ್ಯಯನ ಮಾಡುವವರು 'ಬೆಳಕು' ಪತ್ರಿಕೆ ಬೆಳೆದು ಬಂದ ದಾರಿಯನ್ನು ಗಮನಿಸಲೇಬೇಕು.

ಐವತ್ತರ ದಶಕದ 'ಬೆಳಕು' ಓದುವಾಗ

ನನ್ನನ್ನು ವಿಶೇಷವಾಗಿಸೆಳೆದಿದ್ದು 'ಜಪುವಾದಾಗ ನೂಲಿರಿ' ಎಂಬ ಒಂದು ಜಾಗ ತುಂಬುವ (ಫಿಲ್ಲರ್) ಸಣ್ಣ ಘೋಷಣೆ. ಈಗಿನ ತಲೆಮಾರಿಗೆ ಈ ವಾಕ್ಯ ಅರ್ಥವೇ ಆಗಲಿಕ್ಕಿಲ್ಲ. ಅಂದರೆ ನಾವು ಗಾಂಧೀಯುಗದ ಭಾರತದಿಂದ ಎಷ್ಟು ದೂರ ಬಂದಿದ್ದೇವೆ ನೋಡಿ! ಅಂದರೆ ಬೆಳಕು ಪತ್ರಿಕೆಯ ಚರಿತ್ರೆಯೆಂದರೆ ಕರ್ನಾಟಕದ ವಯಸ್ಕರ ಶಿಕ್ಷಣ ಆಂದೋಲನದ ಚಟುವಟಿಕೆಗಳ ದಾಖಲೆಯೊಂದೇ ಅಲ್ಲ ರಾಜ್ಯ-ದೇಶವು ಆಯಾ ಕಾಲಮಾನದಲ್ಲಿ ಪಾಲಿಸಿದ ಆಸಕ್ತಿಗಳ ಸರ್ವಕಾಲಿಕ ದಾಖಲೆಯೂ ಹೌದು!

ಬೆಳಕು ಪತ್ರಿಕೆಯ ಆರು ದಶಕದ ಚರಿತ್ರೆಯನ್ನು ಗಮನಿಸಿದರೆ ಹೆಚ್ಚೂ ಕಡಿಮೆ ವಾರವಾರವೂ ತಪ್ಪದೇ ಪ್ರಕಟಗೊಂಡಿರುವುದು 'ಬೆಳಕು' ವಿನ ಹೆಗ್ಗಳಿಕೆ. ತಾಂತ್ರಿಕ ಕಾರಣದಿಂದ ಕೆಲವು ವಾರ ನಿಂತಿದ್ದರೂ ಮುಂದಿನ ಸಂಚಿಕೆಗಳಲ್ಲಿ ಪುಟಗಳನ್ನು ಹೆಚ್ಚಿಸಿ ಸಂಯುಕ್ತ ಸಂಚಿಕೆಗಳನ್ನು ಓದುಗರಿಗೆ ನೀಡಲಾಗಿದೆ. ಒಂದು ಕಾಲದಲ್ಲಿ ನವಸಾಕ್ಷರರೊಂದೇ ಅಲ್ಲ ಅಕ್ಷರಸ್ಥರೆಲ್ಲರ ಅಚ್ಚು ಮೆಚ್ಚಿನ ಪತ್ರಿಕೆಯಾಗಿ ಬೆಳೆದ 'ಬೆಳಕು' ೧೫ ಸಾವಿರದವರೆಗೆ ಪ್ರಸಾರವನ್ನು ಹೆಚ್ಚಿಸಿಕೊಂಡಿತ್ತು. ಎಸ್.ಎಸ್.ಎಲ್.ಸಿ. ಫೇಲಾದ ವಿದ್ಯಾರ್ಥಿಗಳಿಗೆಂದೇ ವಿಶೇಷ ಪುರವಣಿಗಳನ್ನು ನಿಯತವಾಗಿ ಹೊರತಂದು ಇತರ ವಿದ್ಯಾರ್ಥಿಗಳ ಬಗ್ಗೆ ಇರುವ ಕಾಳಜಿಯನ್ನೂ ಪ್ರದರ್ಶಿಸಿತ್ತು. ಲಾಭದಾಸೆಯಿಲ್ಲದೇ, ಮಾರುಕಟ್ಟೆಯ ಶಕ್ತಿಗಳೊಂದಿಗೆ ಒಪ್ಪಂದ ಮಾಡಿಕೊಳ್ಳದೇ, ಪ್ರಕಟಗೊಳ್ಳುವ 'ಬೆಳಕು' ವಿನಂಥ ಸಾಂಸ್ಥಿಕ ಪತ್ರಿಕೆಗೆ ೧೫ ಸಾವಿರದ ಪ್ರಸಾರ ದೊರೆಯುವುದು ಅಂದಿನ ಕನ್ನಡ ಸಂದರ್ಭದಲ್ಲಿ ವಿಶೇಷವೆನ್ನಬೇಕು.

ಈ ನಿಟ್ಟಿನಲ್ಲಿ ಯೋಚಿಸುವಾಗ, ಈಗ ವಯಸ್ಕರ ಶಿಕ್ಷಣದ ಬಗ್ಗೆ ಸರ್ಕಾರದ ನೀತಿ ಬದಲಾಗಿ, ಊರೂರುಗಳಲ್ಲಿ ಜನಶಿಕ್ಷಣ ನಿಲಯಗಳು ತೆರೆಯಲ್ಪಟ್ಟು, ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯಚಟುವಟಿಕೆಗಳ ವ್ಯಾಪ್ತಿಯೇ ಕುಗ್ಗುತ್ತಿರುವ ಸಂದರ್ಭದಲ್ಲಿ 'ಬೆಳಕು' ಹಿಂದಿಗಿಂತ ಸೊರಗಿದೆ. ಪ್ರಸಾರವೂ ಕುಗ್ಗಿದೆ.

'ಬೆಳಕು' ಪತ್ರಿಕೆಗೆ ಸ್ಥಾಪಕ ಸಂಪಾದಕರು ಎಸ್. ಪಿ. ಶ್ರೀನಿವಾಸರಾವ್ ಅವರು. ಆರ್. ಬಿ. ಶ್ರೀನಿವಾಸಮೂರ್ತಿಯವರು ಅತಿ ದೀರ್ಘಕಾಲ ಈ ಪತ್ರಿಕೆಯ ಸಂಪಾದಕರಾಗಿ ಪತ್ರಿಕೆಗೆ ಒಂದು ವ್ಯಕ್ತಿತ್ವ ತಂದು ಕೊಟ್ಟವರು. ಕೂಡಲಿ ಚಿದಂಬರಂ, ಎಂ. ಆರ್. ಲಕ್ಷ್ಮಮ್ಮ, ಐ. ಶ್ರೀ. ಪ್ರಸಾದ್, ಎಸ್. ಬಿ. ಕುಮಾರ್, ಎಸ್. ರಜತಾದ್ರಿ, ಚಂದ್ರಶೇಖರಾರಾಧ್ಯ ಹಾಗೂ ಆರ್. ಬೋರಯ್ಯನವರು ಈವರೆಗಿನ ಪತ್ರಿಕೆಯ ಇತರ ಸಂಪಾದಕರು. ೧೯೮೨ರಿಂದ ೧೯೯೪ರವರೆಗೆ ಸಂಪಾದಕರಾಗಿದ್ದ ಆರ್. ಬೋರಯ್ಯನವರು ಈಗ 'ಬೆಳಕು' ಪತ್ರಿಕೆಯ ಪ್ರಧಾನ ಸಂಪಾದಕರು. ಪ್ರತ್ಯೇಕ ಕಛೇರಿ, ಸಿಬ್ಬಂದಿಗಳನ್ನು ಹೊಂದಿರುವ 'ಬೆಳಕು' ಕರ್ನಾಟಕದಲ್ಲಿ ವಯಸ್ಕರ ಶಿಕ್ಷಣ ಸಮಿತಿಯ ಹೆಸರಿಗೇ ಪರ್ಯಾಯವೆನಿಸುವ ಮಟ್ಟಿಗೆ ಬೆಳೆದಿದೆಯೆಂದರೆ ತಪ್ಪಲ್ಲ.

'ಬೆಳಕು' ಒಂದು ಪುಟ್ಟ ಹಣತೆ. ಇಂಥ ನೂರಾರು ಹಣತೆಗಳು ಕೂಡಿದಾಗ ಜಗತ್ತಿನ ಕತ್ತಲನ್ನು ಹೋಗಲಾಡಿಸಬಲ್ಲವು. 'ಬೆಳಕು' ಅನವರತ ಬಾಳಲಿ!

ವಿದ್ಯುನ್ಮಾನ ಯುಗದಲ್ಲಿ ವಯಸ್ಕರ ಶಿಕ್ಷಣ

ಡಾ. ಬಿ. ಬಿ. ರಾಜಪುರೋಹಿತ
೭೧೬, ೧೬ನೆಯ ಮುಖ್ಯ ರಸ್ತೆ
ಸರಸ್ವತೀಪುರ, ಮೈಸೂರು-೯

'ವಯಸ್ಕರ ಶಿಕ್ಷಣ' ಎಂಬ ಮಾತು ನಮ್ಮಂಥ ಅಭಿವೃದ್ಧಿಶೀಲ ದೇಶಗಳಲ್ಲಿ ಮಾತ್ರ ಬಳಕೆಯಾಗುತ್ತದೆ. ಕಾರಣಾಂತರಗಳಿಂದ ಶಿಕ್ಷಣ ಪಡೆಯಬೇಕಾದ ಎಳೆ ವಯಸ್ಸಿನಲ್ಲಿ ಅದನ್ನು ಪಡೆಯಲಾಗುವುದಿಲ್ಲ. ಇದಕ್ಕೆ ಮುಖ್ಯವಾದ ಕಾರಣ ಬಡತನ. ವಿಸ್ತಾರವಾದ ಪ್ರದೇಶದಲ್ಲಿ ಹರಡಿದ ಜನಸಂಖ್ಯೆಗೆ ಓದು ಬರಹವನ್ನು ಮುಟ್ಟಿಸುವುದಕ್ಕೆ ಬೇಕಾಗುವಷ್ಟು ಸೌಕರ್ಯಗಳ ಕೊರತೆ ಇನ್ನೊಂದು ಕಾರಣ. ಓದು ಬರಹ ಗೊತ್ತಿರದಿದ್ದರೆ ನಡೆಯುವ ಅನಾಹುತ, ಅದು ಗೊತ್ತಿದ್ದರೆ ಆಗುವ ಸೌಕರ್ಯಗಳ ಬಗ್ಗೆ ಈಗ ಜನರಲ್ಲಿ ಸಾಕಷ್ಟು ಎಚ್ಚರಿಕೆ ಮೂಡಿದೆ. ಆಕಾಶವಾಣಿ ಮತ್ತು ದೂರದರ್ಶನಗಳು ಈ ದಿಕ್ಕಿನಲ್ಲಿ ಗಣನೀಯ ಸೇವೆಯನ್ನು ಸಲ್ಲಿಸಿವೆ. ವಿಶ್ವವಿದ್ಯಾನಿಲಯಗಳು, ಸರಕಾರೀ ಮತ್ತು ಇತರ ಸ್ವಾಯತ್ತ ಸಂಸ್ಥೆಗಳು ಈ ದಿಕ್ಕಿನಲ್ಲಿ ಮಹತ್ತ್ವದ ಕೆಲಸ ಮಾಡಿವೆ. ಎಲ್ಲ ಸಂಸ್ಥೆಗಳ ಶ್ರಮದ ಪರಿಣಾಮವಾಗಿ ಇಂದು ಕೇರಳ, ಪಶ್ಚಿಮ ಬಂಗಾಳ ಮೊದಲಾದ ಕೆಲವೆಡೆಯಲ್ಲಾದರೂ ಪ್ರತಿಶತ ನೂರರಷ್ಟು ಸಾಕ್ಷರತೆಯನ್ನು ಮುಟ್ಟಲು ಸಾಧ್ಯವಾಗಿದೆ. ಈ ಗುರಿಯನ್ನು ಮುಟ್ಟಲು ಕರ್ನಾಟಕ ಬಹಳೇನು ಹಿಂದುಳಿದಿಲ್ಲ. ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಕಳೆದ ಅರ್ಧಶತಮಾನಕ್ಕೂ ಹೆಚ್ಚು ಕಾಲ ಅಂದರೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕಿಂತ ಮೊದಲೇ ದೈತ್ಯಾಕಾರದ ಈ ಸಮಸ್ಯೆಯನ್ನು ಅರಿತುಕೊಂಡು ಸಮಯದ ಕರೆಗೆ ಸ್ಪಂದಿಸುತ್ತ ಬಂದಿದೆ ಎಂಬುದು ಸಂತಸದ ಸಂಗತಿ. ಪುಟ್ಟ ಆಕೃತಿಯಲ್ಲಿ ಪ್ರಕಟವಾಗುತ್ತಿದ್ದ 'ಪುಸ್ತಕ ಪ್ರಪಂಚ' ಪತ್ರಿಕೆಯನ್ನು ನಾನು ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗಿನಿಂದ ಅಂದರೆ ೧೯೪೮ರಿಂದ ಓದುತ್ತಿದ್ದುದು ನೆನಪಿದೆ. ಕನ್ನಡದಲ್ಲಿ ಬಂದ ಹೊಸ ಪುಸ್ತಕಗಳ ಪರಿಚಯವನ್ನು ವಯಸ್ಕರಿಗೆ ಮಾಡಿಕೊಡುವುದು ಅದರ ಉದ್ದೇಶವಾಗಿತ್ತೆಂದು ನೆನಪು. ಆಗಿನ ಮೈಸೂರು ಅರಸರ ಮುಂದಾಲೋಚನೆಗೆ ಇಂದಿನ ಜನತೆ ಕೃತಜ್ಞತೆ ಸಲ್ಲಿಸಬೇಕು.

ವಯಸ್ಕರ ಶಿಕ್ಷಣದ ಇತಿಮಿತಿ :

ವಯಸ್ಸಾದಂತೆ ಮನುಷ್ಯನಿಗೆ ಹೊಸ ವಿಷಯಗಳನ್ನು ಕಲಿತುಕೊಳ್ಳಬೇಕೆಂಬ ಇಚ್ಛೆ ಇದ್ದರೂ ಕಲಿತದ್ದನ್ನು ನೆನೆಪಿನಲ್ಲಿ ಹಿಡಿದಿಟ್ಟುಕೊಳ್ಳುವ ಮನಶ್ಶಕ್ತಿ ಕುಂದುತ್ತದೆ ಎಂಬ ನಂಬಿಕೆ ಇದೆ. ಇದು ಸ್ವಲ್ಪ ಮಟ್ಟಿಗೆ ನಿಜವೂ ಆಗಿದೆ. ಅನೇಕ ಪ್ರಾಪಂಚಿಕ ವಿಚಾರಗಳಲ್ಲಿ, ಕೌಟುಂಬಿಕ ಚಿಂತೆಗಳಲ್ಲಿ ತೊಡಗಿರುವ ಮನಸ್ಸಿಗೆ ತನ್ನ ಪೂರ್ಣ ಸಾಮರ್ಥ್ಯವನ್ನು ಕಲಿಯುವುದರ ಕಡೆಗೆ ತೊಡಗಿಸುವುದು ಸಾಧ್ಯವಾಗದೇ ಇರಬಹುದು. ಅದಕ್ಕಿರುವ ಒಂದು ಉಪಾಯವೆಂದರೆ ಪುನಃ ಪುನಃ ಕೇಳುವುದು, ಕೇಳಿದ್ದನ್ನೇ ಕೇಳುವದು. ಹೇಳುವವರಿಗೆ ಇದರಿಂದ ಸ್ವಲ್ಪ ಬೇಸರ ಬರಬಹುದು. ಆದರೆ ನಿರ್ವಾಹವಿಲ್ಲ. ಒಳ್ಳೆಯ ಪರಿಣಾಮಗಳಿಗಾಗಿ ಎಲ್ಲರೂ ಸ್ವಲ್ಪ ಕಷ್ಟ ಪಡಬೇಕಾಗುತ್ತದೆ. ಆಕಾಶವಾಣಿ ದೂರದರ್ಶನಗಳು ರೈತರಿಗೆ ಸುಧಾರಿತ ಬೇಸಾಯದ ಬಗ್ಗೆ ತಿಳುವಳಿಕೆ ಕೊಡುವಲ್ಲಿ ಪಟ್ಟ ಶ್ರಮದ ಸಾರ್ಥಕತೆಯನ್ನು ಆಹಾರ ಧಾನ್ಯಗಳು ಇಂದು

ಅಧಿಕ ಉತ್ಪಾದನೆಯಾಗುತ್ತಿರುವುದರಲ್ಲಿ ಕಾಣುತ್ತೇವೆ. ಅದೇ ರೀತಿ ಓದು ಬರಹದಲ್ಲಿ ಕೂಡ ಮತ್ತೆ ಮತ್ತೆ ಹೇಳುವುದರಿಂದ ವಿಷಯಗಳು ಮನದಟ್ಟಾಗುತ್ತವೆ.

ವಯಸ್ಕರ ಶಿಕ್ಷಣ ಎಂದಾಕ್ಷಣ ಎಲ್ಲರ ಕಣ್ಣೆದಿರಿಗೆ ಒಂದೇ ಚಿತ್ರ ಬರುತ್ತದೆ. ಕಂದೀಲದ ಬೆಳಕಿನಲ್ಲಿ ಕೆಲವು ಯುವಕರು ಅಥವಾ ಮುದುಕರು ಕುಳಿತು ಬಳಪದಿಂದ ಅಕ್ಷರಗಳನ್ನು ತೀಡುತ್ತಿರುವ ದೃಶ್ಯ. ಆದರೆ ಈಗ ಕಾಲ ಬದಲಾಗಿದೆ. ಅನೇಕ ಹೊಸ ಹೊಸ ಸಲಕರಣೆ ಗಳು ಬಂದಿವೆ. ಆದರಿಂದ ಕಲಿಯುವ ಕಲಿಸುವ ವಿಧಾನಗಳು ಭಿನ್ನವಾಗಿವೆ. ಇದರಿಂದ ಕಡಿಮೆ ಕಾಲಾವಧಿಯಲ್ಲಿ ಹೆಚ್ಚು ಪರಿಣಾಮಕಾರಿ ಯಾಗಿ ವಿಷಯಗಳನ್ನು ಹೇಳುವುದು ಸಾಧ್ಯ ವಾಗಿವೆ. ಈ ಸಲಕರಣೆಗಳ ಮತ್ತು ವಿಧಾನಗಳ ಬಗ್ಗೆ ವಿವರವಾಗಿ ನೋಡುವುದೇ ಈ ಲೇಖನದ ಗುರಿ.

ವಯಸ್ಕರ ಶಿಕ್ಷಣದ ಸಾಮಗ್ರಿ :

ಮೊದಲನೆಯದಾಗಿ ಕಲಿಯುವ ಕಾಲಕ್ಕೆ ಕಾರಣಾಂತರದಿಂದ ಓದು ಬರಹ ಕಲಿಯಲು ಸಾಧ್ಯವಿಲ್ಲದೇ ಹೋಗಿರುವ ವಯಸ್ಕರಿಗೆ ಅದನ್ನು ಕಲಿಸಿ ಸಮಾಜದಲ್ಲಿ ತಲೆಯೆತ್ತಿ ನಿಲ್ಲುವಂತೆ ಮಾಡುವುದು. ಇದರಿಂದ ಅವನಿಗೆ 'ತನಗೆ ಗೊತ್ತಿಲ್ಲದಂತೆ ಏನೋ ನಡೆಯುತ್ತದೆ' ಎಂಬ ಭೀತಿ ತೊಲಗುತ್ತದೆ. ನಂತರ ವಿವಿಧ ಉದ್ಯೋಗದ ಜನರಿಗೆ ಅವರಿಗೆ ಬೇಕಾಗುವ ವಿಷಯಗಳನ್ನು ಕುರಿತು ಹೆಚ್ಚಿನ ಮಾಹಿತಿ ನೀಡಬಹುದು. ಕುಂಬಾರನಿಗೆ ಬೇಕಾಗುವ ಮಣ್ಣಿನ ಬಗ್ಗೆ ಶಾಸ್ತ್ರೋಕ್ತ ತಿಳುವಳಿಕೆ ಕೊಡು ವುದು. ಯಾವ ಮಣ್ಣನ್ನು ಬಳಸುವುದರಿಂದ ಕಡಿಮೆ ಖರ್ಚಿನಲ್ಲಿ ಒಳ್ಳೆಯ ಪದಾರ್ಥಗಳನ್ನು ಕೊಡಬಹುದು ಎಂಬ ಕಲ್ಪನೆಯನ್ನು ಹುಟ್ಟಿಸು ವುದು ಮಹತ್ವದ್ದೆನಿಸುತ್ತವೆ. ಅದೇ ರೀತಿ, ಕಂಬಾರನಿಗೆ ಬೇಕಾಗುವ ಬೆಂಕಿಯ ಶಾಖವನ್ನು ಅನೇಕ ಮಾರ್ಗಗಳಿಂದ ಹೇಗೆ ಪಡೆಯ ಬಹುದು ಎಂದೋ, ಪೋಲಾಗದಂತೆ ಅದನ್ನು ಹೇಗೆ ಉಪಯೋಗಿಸಬಹುದು ಎಂದೋ, ಈ ಮೊದಲಾದ ವಿಷಯಗಳ ಬಗ್ಗೆ ತಿಳುವಳಿಕೆ ನೀಡುವುದು ಸೂಕ್ತ ಮತ್ತು ಅಗತ್ಯವೆನಿಸುತ್ತದೆ. ಹೀಗೆ ಪುರಾತನ ಕಾಲದಿಂದಲೂ ನಡೆದು ಬಂದ ರೀತಿ ನೀತಿಗಳ ಬಗ್ಗೆ ಹೊಸ ಬೆಳಕು ಚೆಲ್ಲುವದು ಅವರವರ ಜೀವನದಲ್ಲಿ ಹೊಸ ಚೇತನವನ್ನು ತುಂಬಬಲ್ಲುದು. ಪ್ರಪಂಚದ ಬೇರೆ ಬೇರೆ ಕಡೆಗಳಿಂದ ಜ್ಞಾನವನ್ನು ತಂದು ಒಂದೆಡೆ ಕೊಡುವುದರಿಂದ ಕಲಿಯುವವರಿಗೂ ಹೊಸ ಜೀವಬರಬಲ್ಲದು. ಯಂತ್ರೀಕರಣ ಗೊಳ್ಳುತ್ತಿರುವ ಈ ಕಾಲದಲ್ಲಿ ಕುಂಬಾರ ಕಂಬಾರ ಮೊದಲಾದ ಉದ್ಯೋಗಿಗಳು ಕಣ್ಮರೆಯಾಗುತ್ತಿರಬಹುದು. ಆದರೆ ಅಂಥವರ ಸ್ಥಾನದಲ್ಲಿ ಇಂದು ಬೇರೆ ಉದ್ಯೋಗಿಗಳು ಬಂದು ನಿಂತಿದ್ದಾರೆ. ಹಳ್ಳಿ ಹಳ್ಳಿಗೆಲ್ಲ ಹೋಗಿ ಮುಟ್ಟಿದ ವಿದ್ಯುತ್ತಿನ ಬಗ್ಗೆ ಮತ್ತು ಅದನ್ನು ಉಪಯೋಗಿಸುವವರಿಗೆ ಇರಬೇಕಾದ ಅಗತ್ಯ ಜ್ಞಾನವನ್ನು ವಿತರಿಸುವುದೂ ಇಂದಿನ ಪರಿಸ್ಥಿ ತಿಯಲ್ಲಿ ಮಹತ್ವದ್ದಾಗಿದೆ. ಹೀಗೆ ಊಹೆಯನ್ನು ವಿಸ್ತರಿಸುತ್ತ ಹೋದರೆ ಹೊಸ ಆಯಾಮಗಳು ಗೋಚರವಾಗುತ್ತ ಹೋಗುತ್ತವೆ. ಕಾಲಕ್ಕೆ ತಕ್ಕಂತೆ ಸಾಮಗ್ರಿ ಮಾರ್ಪಾಡುಗೊಳ್ಳ ಬೇಕಾಗುತ್ತದೆ. ಬರಬರುತ್ತ ಕಲಿಯುವವರೇ ತಮಗೆ ಬೇಕಾದುದನ್ನು ಕೇಳಿ ಪಡೆಯುವ ಕಾಲವೂ ಬರಬಹುದು.

ಹೊಸ ತಂತ್ರಜ್ಞಾನ ಮತ್ತು ಹಳೆಯ ಅಗತ್ಯಗಳು:

೧೯೭೭ ರಲ್ಲಿ ಮೈಸೂರು ವಿಶ್ವವಿದ್ಯಾ ನಿಲಯವು 'ಶಿಕ್ಷಣದಲ್ಲಿ ಟೆಲಿವಿಜನ್ನಿನ ಪಾತ್ರ ಮತ್ತು ಮಹತ್ವ' ಎಂಬ ವಿಷಯವನ್ನು ಕುರಿತು ರಾಜ್ಯ ಮಟ್ಟದ ಒಂದು ವಿಚಾರ ಗೋಷ್ಠಿ ಯನ್ನು ಏರ್ಪಡಿಸಿತ್ತು. ಅದರಲ್ಲಿ ನಾನೂ ಭಾಗವಹಿಸಿ ಪ್ರಬಂಧವೊಂದನ್ನು ಮಂಡಿಸಿದೆ. ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಹಿಂದೆ ಇಂಗ್ಲಿಷು ಪ್ರಾಧ್ಯಾಪಕರಾಗಿದ್ದ

ಪ್ರೊ. ಈಗಲ್‌ಟನ್ ಕೂಡ ಇಟಲಿಯಿಂದ ಬಂದು ಭಾಗವಹಿಸಿದ್ದರು. ಆಗಿನ ಕುಲಪತಿಗಳಾಗಿದ್ದ ಶ್ರೀ ಡಿ.ವಿ. ಅರಸ್ ಅವರು ವಿಚಾರಗೋಷ್ಠಿಯಲ್ಲಿ ಮಂಡಿತವಾದ ವಿಚಾರಗಳಿಂದ ಉತ್ತೇಜಿತರಾಗಿ ಪ್ರೊ. ಈಗಲ್‌ಟನ್ ಅವರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿ 'ದೂರದ ಶಿಕ್ಷಣ'ವನ್ನು ಹೇಗೆ ಪರಿಣಾಮಕಾರಿಯಾಗಿ ಮಾಡಬಹುದು ಎಂಬ ವಿಷಯಕ್ಕೆ ಸಲಹೆಗಳನ್ನು ಕೊಡಲು ಕೇಳಿದರು. ಆ ಸಮಿತಿಯಲ್ಲಿ ನಾನು ಮತ್ತು ಇನ್ನೊಬ್ಬರು (ಅವರ ಹೆಸರು ಈಗ ಮರೆತಿದೆ) ಸದಸ್ಯರಾಗಿದ್ದೆವು. ಯಾವುದೇ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳುವ ಸ್ವಭಾವದ ಪ್ರೊ. ಈಗಲ್‌ಟನ್ ಅವರು ನನ್ನಿಂದ ಅನೇಕ ವಿಷಯಗಳನ್ನು ಸಂಗ್ರಹಿಸಿ ಒಂದು ಸುದೀರ್ಘ ವರದಿ ತಯಾರಿಸಿದರು. ಪ್ರೊ. ಈಗಲ್‌ಟನ್ ಅವರು ನನ್ನನ್ನೂ ಜೊತೆಗೆ ಕರೆದುಕೊಂಡು ಹೋಗಿ ಆ ವರದಿಯನ್ನು ಶ್ರೀ ಅರಸ್ ಅವರಿಗೆ ಸಲ್ಲಿಸಿದರು. ಎಲ್ಲ ವರದಿಗಳಂತೆ ಆ ವರದಿಯೂ ಧೂಳು ತಿನ್ನುತ್ತ ಬಿದ್ದಿತೆನ್ನಿ. ಅದರಲ್ಲಿ ನಾವು ಮಾಡಿದ ಸಲಹೆಗಳಲ್ಲಿ ಕೆಲವು ನೆನಪಿವೆ.

ಚಾಮುಂಡಿಬೆಟ್ಟದ ಮೇಲೆ ಒಂದು ಟೆಲಿವಿಜನ್ ರಿಲೇ ಸ್ಟೇಷನ್ನು ಸ್ಥಾಪಿಸಿ ಮೈಸೂರಿನ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಒಂದೊಂದು ಟೆಲಿವಿಜನ್ ಸೆಟ್ಟು ಇಟ್ಟು ಆ ಮುಖಾಂತರ ವಯಸ್ಕರಿಗೆ ಬೇಕಾಗುವ ಶಿಕ್ಷಣವನ್ನು ಸಾಯಂಕಾಲ ಬಿತ್ತರಿಸುವುದು, ಅದರೊಡನೆ ಮಕ್ಕಳಿಗೆ ಅಗತ್ಯವಾಗಿ ಬೇಕಾಗುವ ವಿಜ್ಞಾನ ಪಾಠಗಳನ್ನು ಶಾಲಾ ವೇಳೆಯಲ್ಲಿ ಬಿತ್ತರಿಸುವುದು ಎಂದು ಸೂಚಿಸಲಾಗಿತ್ತು. ಅನೇಕ ಶಾಲೆಗಳಲ್ಲಿ ವಿಜ್ಞಾನ ಪ್ರಯೋಗಶಾಲೆಗಳು ಇರುವುದಿಲ್ಲ. ಆದುದರಿಂದ ಇಂಥ ಕಾರ್ಯಕ್ರಮಗಳು ಮಕ್ಕಳ ತಿಳುವಳಿಕೆಯನ್ನು ಖಂಡಿತ ಹೆಚ್ಚಿಸುತ್ತವೆ. ಈ ದಿಕ್ಕಿನಲ್ಲಿ ಆಗಿನ ಕೇಂದ್ರ ಮಂತ್ರಿಗಳಾಗಿದ್ದ ವಸಂತ ಸಾಠೆ ಅವರನ್ನೂ ಅರಸ್ ಅವರು ಸಂಪರ್ಕಿಸಿ ರಿಲೇ ಸ್ಟೇಷನ್ನಿಗೆ ಕೇಂದ್ರದ ಒಪ್ಪಿಗೆ ದೊರೆಯಬಹುದೆಂಬ ಸೂಚನೆಯನ್ನೂ ಪಡೆದಿದ್ದರು.

ಒಂದು ವೇಳೆ ರಿಲೇ ಕೇಂದ್ರಕ್ಕೆ ಕೇಂದ್ರ ಸರಕಾರದ ಒಪ್ಪಿಗೆ ಸಿಗದೆ ಇದ್ದಲ್ಲಿ ಯೋಜನೆಯನ್ನು ಬೇರೆ ರೀತಿಯಲ್ಲಿ ಕಾರ್ಯಗತಗೊಳಿಸಬಹುದು ಎಂದೂ ಸೂಚಿಸಲಾಗಿತ್ತು. ಒಂದು ಅಥವಾ ಎರಡು ಓ.ಬಿ. ವ್ಯಾನುಗಳನ್ನು ಕೊಂಡು ಅದು ಊರೂರು ಸುತ್ತಿ ಈ ಶಿಕ್ಷಣ ಕಾರ್ಯಕ್ರಮಗಳನ್ನು ಪ್ರಸಾರ ಮಾಡಬಹುದು. ಅದಕ್ಕೆ ಬೇಕಾಗುವ ವಿಡಿಯೋ ಪ್ಲೇಯರುಗಳು ಸಿಬ್ಬಂದಿ ಮೊದಲಾದ ವಿಷಯಗಳನ್ನೆಲ್ಲ ಲೆಕ್ಕಹಾಕಿ ಅಲ್ಲಿ ಕೊಡಲಾಗಿತ್ತು. ಪಾಠ್ಯ ವಿಷಯಗಳನ್ನು ತಯಾರಿಸುವ ಸ್ಟುಡಿಯೋದ ರೂಪರೇಷೆಯನ್ನೂ ಅಲ್ಲಿ ಕೊಟ್ಟಿತ್ತು. ಆ ಯೋಜನೆ ಕಾರ್ಯರೂಪಕ್ಕೆ ಬಂದಿದ್ದರೆ ಇಡೀ ಭಾರತದಲ್ಲಿಯೇ ವಯಸ್ಕರ ಶಿಕ್ಷಣಕ್ಕೆ ಹೊಸ ತಂತ್ರಜ್ಞಾನವನ್ನು ಮೊದಲು ಬಳಸಿದ ಕೀರ್ತಿ ಮೈಸೂರು ವಿಶ್ವವಿದ್ಯಾನಿಲಯದ್ದಾಗುತ್ತಿತ್ತು. ಈಗಿನಷ್ಟು ಸೌಕರ್ಯಗಳು ೧೯೭೭ರಲ್ಲಿ ಇರಲಿಲ್ಲವಾದ್ದರಿಂದ ಆ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದು ಸುಲಭದ ಮಾತಾಗಿರಲಿಲ್ಲ. ಇಂದು ಎ.ಐ.ಆರ್.ಸಿ. ಗಳು ಶೈಕ್ಷಣಿಕ ಕಾರ್ಯಕ್ರಮಗಳ ತಯಾರಿಕೆಯಲ್ಲಿ ತೊಡಗಿವೆ. ಅಲ್ಲದೆ ಕೇಬಲ್ ಮೂಲಕ ವಿಡಿಯೋ ಕಾರ್ಯಕ್ರಮಗಳನ್ನು ಹಳ್ಳಿ ಹಳ್ಳಿಗೆ ತಲುಪಿಸುವುದು ಇಂದು ಬಹು ಸುಲಭದ ಕೆಲಸ. ಕೇಬಲ್ ಟಿವಿಗಳನ್ನು ಕೇವಲ ಮನರಂಜನೆಗೆ ಉಪಯೋಗಿಸುವುದರ ಬದಲು ಶೈಕ್ಷಣಿಕ ಕಾರ್ಯಕ್ರಮಗಳ ಪ್ರಸಾರಕ್ಕೂ ಬಳಸಬಹುದು. ವಯಸ್ಕರ ಶಿಕ್ಷಣವೇ ಆಗಲಿ, ಶಾಲಾ ಶಿಕ್ಷಣವೇ ಆಗಲಿ,

ಅದು ಪ್ರಯೋಜನಕಾರೀ ಚಟುವಟಿಕೆ ಎಂಬ ಅರಿವು ನಮ್ಮ ಜನರಲ್ಲಿ ಇನ್ನೂ ಬೇರೂರಿಲ್ಲ. ಆದುದರಿಂದಾಗಿ ಇಂದು ಮನರಂಜನೆಗೆ ಖರ್ಚು ಮಾಡುವ ಹಣದಲ್ಲಿ ಒಂದಂಶವನ್ನಾದರೂ ಶಿಕ್ಷಣಕ್ಕೆ ಖರ್ಚು ಮಾಡಬೇಕೆಂಬ ಬುದ್ಧಿ ನಮ್ಮ ಜನಕ್ಕೆ ಬಂದಿಲ್ಲ.

ಗಣಕಯಂತ್ರ ಮತ್ತು ಶೈಕ್ಷಣಿಕ ಕಾರ್ಯಕ್ರಮ:

ಟಿವಿಗಳ ಜೊತೆಗೆ ಇಂದು ಗಣಕ ಯಂತ್ರಗಳೂ ಲಭ್ಯವಾಗಿವೆ. ಇಂದಿನ ಕಂಪ್ಯೂಟರುಗಳು ಕೇವಲ ಗಣಕ ಯಂತ್ರಗಳಷ್ಟೇ ಅಲ್ಲ. ಅವು ಬುದ್ಧಿವಂತ ಸಾಧನಗಳು. ಒಬ್ಬ ಬುದ್ಧಿವಂತ ಶಿಕ್ಷಕ ಮಾಡಬಹುದಾದ ಕೆಲಸವನ್ನು ಈ ಯಂತ್ರ ಮಾಡಬಲ್ಲದು. ಪರೀಕ್ಷೆಗಳನ್ನು ನಡೆಸಬಲ್ಲದು. ವಿದ್ಯಾರ್ಥಿಯು ಕೊಟ್ಟ ಉತ್ತರಗಳ ಮೌಲ್ಯಮಾಪನವನ್ನು ಮಾಡಿ ಅವನಿಗೆ ಬಂದ ಅಂಕಗಳನ್ನು ಪ್ರಾಮಾಣಿಕವಾಗಿ ಹೇಳಬಲ್ಲದು. ಯಾಕೆ ಕಡಿಮೆ ಅಂಕಗಳು ಬಂದವು ಎಂದು ವಿವರಿಸಬಲ್ಲದು. ಹೀಗೆ ಕಲಿಯುವವರಲ್ಲಿ ಹೆಚ್ಚಿನ ಆತ್ಮವಿಶ್ವಾಸವನ್ನು ಮೂಡಿಸಬಲ್ಲದು. ಇಂದಿನ ಗಣಕಯಂತ್ರಗಳು ಕನ್ನಡದಲ್ಲಿಯೂ ವ್ಯವಹರಿಸಬಲ್ಲವು. ಆದುದರಿಂದ ಎಲ್ಲ ವಿಷಯಗಳು ಕನ್ನಡದಲ್ಲಿಯೇ ಇರಬೇಕೆಂದು ಇಚ್ಛಿಪಟ್ಟರೆ ಅದೇನೂ ಕಷ್ಟದ ಕೆಲಸವಲ್ಲ. ಬೇಕಾದರೆ ಏಕಕಾಲಕ್ಕೆ ಹಿಂದಿ, ತಮಿಳು, ತೆಲುಗು ಮೊದಲಾದ ಭಾಷೆಗಳಲ್ಲಿ ಶಿಕ್ಷಣ ನೀಡಬಲ್ಲದು. ಬುದ್ಧಿವಂತ ಶಿಕ್ಷಕ ಎಲ್ಲೇ ಇರಲಿ ಅವರ ತಜ್ಞ ಶಿಕ್ಷಣವನ್ನು ದೂರದಲ್ಲಿ ಕುಳಿತ ವಿದ್ಯಾರ್ಥಿಯೂ ಪಡೆಯಬಲ್ಲ. ಈ ಧೋರಣೆಯನ್ನು ಕಾರ್ಯ ರೂಪಕ್ಕೆ ತರುವ ದೃಷ್ಟಿಯಿಂದ ಎನ್.ಸಿ.ಇ. ಆರ್.ಟಿ.ಯು 'ಕ್ಲಾಸ್ ಪ್ರಾಜೆಕ್ಟ್' ನ್ನು ಪ್ರಾರಂಭಿಸಿ ಅನೇಕ ಶಾಲೆಗಳಲ್ಲಿ ಕಂಪ್ಯೂಟರುಗಳನ್ನು ಸ್ಥಾಪಿಸಿತು. ಶಿಕ್ಷಕರೂ ವಿದ್ಯಾರ್ಥಿಗಳೂ ಕಂಪ್ಯೂಟರುಗಳನ್ನು ಆಟದ ವಸ್ತುವನ್ನಾಗಿ ಉಪಯೋಗಿಸಿದರೇ ವಿನಾ ಶೈಕ್ಷಣಿಕ ಕಾರ್ಯಕ್ರಮಗಳನ್ನು ವಿಧಾಯಕ ರೀತಿಯಲ್ಲಿ ನಡೆಸಲಿಲ್ಲ.

ಕಂಪ್ಯೂಟರೆಂಬ ಹೊಸ ಸಲಕರಣೆಯ ಉತ್ಸಾಹ ಇಂದು ಕಡಿಮೆಯಾಗಿದೆ. ಎಲ್ಲೆಡೆಗೆ ಅವು ಸಾಮಾನ್ಯವಾಗಿವೆ. ಇಂಟರ್ನೆಟ್ ಮುಖಾಂತರ ಜಗತ್ತಿನ ಯಾವುದೇ ಮೂಲೆಯಿಂದಲೂ ಇಂದು ವಿಷಯವನ್ನು ತರಿಸಿಕೊಳ್ಳಬಹುದಾಗಿದೆ. ಕನ್ನಡದಲ್ಲಿಯೂ ಕಾರ್ಯಕ್ರಮಗಳನ್ನು ಇಂಟರ್ನೆಟ್ಟಿನಲ್ಲಿ ನೋಡಬಹುದಾಗಿದೆ. ಈ ಸೌಲಭ್ಯವನ್ನು ವಯಸ್ಕರ ಶಿಕ್ಷಣಕ್ಕೂ ಬಳಸಬಹುದು. ಜಗತ್ತಿನ ಯಾವುದೇ ಮೂಲೆಯಿಂದ ವಿಷಯಗಳನ್ನು ತರಿಸಿ ನೋಡಬಹುದೆಂಬ ಮಾತು ನವಸಾಕ್ಷರರಿಗೂ ಆಕರ್ಷಕವಾಗಬಹುದು.

ವಯಸ್ಕರ ಶಿಕ್ಷಣ ಲೋಕಲ್ ಏರಿಯಾ ನೆಟ್ವರ್ಕ್ :

ಯಾವಾಗಲೂ ಇಂಟನೆಟ್‌ನಲ್ಲಿ ಕಾರ್ಯಕ್ರಮಗಳನ್ನು ನೋಡಲು ಸಾಧ್ಯವಾಗುವುದಿಲ್ಲ. ಏಕೆಂದರೆ ಅದಕ್ಕೆ ಖರ್ಚೂ ಹೆಚ್ಚು ಬರುತ್ತದೆ. ಅಲ್ಲದೇ ಅದು ಟೆಲಿಫೋನ್ ಲೈನನ್ನು ಉಪಯೋಗಿಸುವುದರಿಂದ ಅದಕ್ಕಾಗಿ ಇರುವ ಟೆಲಿಫೋನ್ ಲೈನು ಬೇರೆ ಕಾರ್ಯಗಳಿಗೆ ಲಭ್ಯವಾಗುವುದಿಲ್ಲ. ಆದುದರಿಂದ ಸತತ ಶಿಕ್ಷಣ ಕಾರ್ಯಕ್ರಮಗಳನ್ನು ನಡೆಸುವ ಪ್ರಸಂಗ ಬಂದಾಗ ಲೋಕಲ್ ಏರಿಯಾ ನೆಟ್ವರ್ಕ್ (ಲ್ಯಾನ್)ನ್ನು ಹೆಚ್ಚು ಪರಿಣಾಮಕಾರಿಯಾಗಿ ಬಳಸಬಹುದು. ಲ್ಯಾನ್ ಬಳಸುವುದೆ ಇದ್ದರೆ ಅದರ ಬಲಾಬಲಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಪಾಠ್ಯ ವಸ್ತುಗಳನ್ನು ತಯಾರಿಸಬಹುದು. ಕಲಿಯುವವರು ಯಾವುದೇ ಒಂದು ಟರ್ಮಿನಲ್ಲಿನ ಮುಂದೆ ಕುಳಿತುಕೊಂಡು ಮುಖ್ಯ ಸರ್ವರಿನಿಂದ ತಮಗೆ ಬೇಕಾದ ಕಾರ್ಯಕ್ರಮಗಳನ್ನು ತೆರೆದು ಕೊಂಡು ನೋಡಲು ಲ್ಯಾನ್‌ನಲ್ಲಿ ಸಾಧ್ಯವಾಗುತ್ತದೆ. ಕಲಿಕೆಯ ಬೇರೆ ಬೇರೆ ಹಂತಗಳಲ್ಲಿ ಇರುವ

ವಿದ್ಯಾರ್ಥಿಗಳು ಬೇರೆ ಬೇರೆ ಟರ್ಮಿನಲ್ಲುಗಳ ಮುಂದೆ ಕುಳಿತು ತಮಗೆ ಸಂಬಂಧಪಟ್ಟ ಕಾರ್ಯಕ್ರಮಗಳನ್ನು ನೋಡುವ ಸೌಕರ್ಯ ಲ್ಯಾನ್‌ನಲ್ಲಿ ಇದೆ. ಅಲ್ಲದೆ ಉಚ್ಚಾರಗಳನ್ನು ಕಲಿಸುವುದಾದರೆ ಅಥವಾ ಓದುವುದನ್ನು ಕಲಿಸುವುದಾದರೆ ಸೌಂಡ್ ಕಾರ್ಡಿಗೆ ಮೈಕ್ರೋಫೋನ್ ಜೋಡಿಸಿ ಕಲಿಯುವವರ ಉಚ್ಚಾರಗಳನ್ನು ಕಂಪ್ಯೂಟರಿನಲ್ಲಿ ಧ್ವನಿ ಮುದ್ರಿಸಿ, ಶಿಕ್ಷಕ ಅದನ್ನು ಪರೀಕ್ಷಿಸಿ ತಿದ್ದುವ ಸೌಲಭ್ಯಗಳೂ ಅಲ್ಲಿವೆ. ಇಂಥ ವ್ಯವಸ್ಥೆಯಲ್ಲಿ ಸ್ಲೇಟು-ಬಳಪ ಬೇಕಾಗಿಲ್ಲ. ಕಂಪ್ಯೂಟರಿನ ಸ್ಕ್ರೀನಿನ ಮೇಲೆಯೇ ಬರವಣಿಗೆಯನ್ನು ಅಭ್ಯಸಿಸ ಬಹುದು. ಬೇಡವಾದದ್ದನ್ನು ಅಳಿಸಿ ಹಾಕ ಬಹುದು. ವಿದ್ಯಾರ್ಥಿ ಬರೆದ ಅಕ್ಷರಗಳ ಆಕೃತಿ ಸರಿಯಾಗಿದೆಯೋ ಇಲ್ಲವೋ ಎಂದು ಪೂರ್ವದಲ್ಲಿ ಸಂಗ್ರಹಿಸಿಟ್ಟ ಅಕ್ಷರಗಳೊಡನೆ ಹೋಲಿಸಿ ನೋಡಬಹುದು. ಮತ್ತೆ ತಿದ್ದಿಕೊಳ್ಳ ಬಹುದು. ಈ ವ್ಯವಸ್ಥೆಯ ಇನ್ನೊಂದು ದೊಡ್ಡ ಅನುಕೂಲತೆಯೆಂದರೆ, ಕಲಿಯುವವರು ಯಾವಾಗ ಬೇಕಾದರೂ ಕಾರ್ಯಕ್ರಮಕ್ಕೆ ಸೇರಿಕೊಳ್ಳಬಹುದು. ಯಾವುದೋ ಒಂದು ದಿನಾಂಕದಂದು ಕಲಿಸುವ ಕಾರ್ಯಕ್ರಮ ಪ್ರಾರಂಭವಾಗುತ್ತದೆ; ಆ ದಿನಾಂಕ ಕಳೆದು ಬಂದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವುದು ಸಾಧ್ಯವಾಗುವುದಿಲ್ಲ ಎಂಬ ಮಾತು ಲ್ಯಾನ್ ಬಳಸುವ ಶಿಕ್ಷಣ ಪದ್ಧತಿಯಲ್ಲಿ ಇರುವುದಿಲ್ಲ. ಇಂಥ ಕಾರ್ಯಕ್ರಮವನ್ನು ಜಾರಿಗೊಳಿಸುವುದೇ ಆದರೆ ಅದಕ್ಕೆ ಎಷ್ಟು ಸರ್ವರುಗಳು ಬೇಕು, ಒಂದೊಂದು ಸರ್ವರಿಗೆ ಎಷ್ಟು ಟರ್ಮಿನಲ್ಲುಗಳು ಇರಬೇಕು, ಅವುಗಳನ್ನು ಎಲ್ಲೆಲ್ಲಿ ಇಡಬೇಕು ಎಂಬ ವಿವರಗಳನ್ನು ಸನ್ನಿವೇಶ, ಮತ್ತು ಲಭ್ಯವಿರುವ ಹಣದ ಮೊತ್ತದ ಮೇಲಿಂದ ನಿರ್ಣಯಿಸಬಹುದು. ನಮ್ಮ ದೇಶದಲ್ಲಿ ಅಗತ್ಯಕ್ಕೆ ತಕ್ಕಷ್ಟು ಹಣ ದೊರೆಯುವುದಿಲ್ಲ ಎಂಬುದೇ ದೊಡ್ಡ ಸಮಸ್ಯೆ. ಒಂದು ವೇಳೆ ದೊರೆತರೆ ನಿಗದಿತ ದಿನಾಂಕದಂದು ಇಡೀ ದೇಶವನ್ನು ಪ್ರತಿಶತ ನೂರರಷ್ಟು ಸಾಕ್ಷರರನ್ನಾಗಿ ಮಾಡುವುದು ಅಸಾಧ್ಯವೇನಲ್ಲ.

ವಿದ್ಯುನ್ಮಾನದ ಬರಲಿರುವ ಮಾಯಾಜಾಲ :

ನಾಳೆ ಇಲೆಕ್ಟ್ರಾನಿಕ್ ಸ್ಲೇಟು ಮತ್ತು ಬಳಪಗಳು ಬರುತ್ತವೆ. ಪ್ರತಿಯೊಂದು ಸ್ಲೇಟು ಮುಖ್ಯ ಸರ್ವರಿನೊಂದಿಗೆ ನಿಸ್ತಂತು ಸಂಪರ್ಕ ಹೊಂದಿರುತ್ತದೆ. ವಿದ್ಯಾರ್ಥಿ ಬರೆಯುತ್ತಿದ್ದ ಹಾಗೆಯೇ ಅವನ ಬಳಪಕ್ಕೆ ಪೂರ್ವನಿಯೋಜಿತ ತಂತ್ರಾಂಶ ಮಾರ್ಗದರ್ಶನ ಮಾಡುತ್ತಿರುತ್ತದೆ. ಸ್ವತಂತ್ರ ಪ್ರವೃತ್ತಿಯ ವಿದ್ಯಾರ್ಥಿ 'ನಾನು ಬರೆಯುವುದನ್ನು ಬರೆದು ಮುಗಿಸುತ್ತೇನೆ, ಆಮೇಲೆ ಬೇಕಾದರೆ ಬರೆದದ್ದನ್ನು ತಿದ್ದು' ಎಂದು ಹೇಳಲೂ ಕೂಡ ಅಲ್ಲಿ ಅವಕಾಶವಿರುತ್ತದೆ. 'ಹೊಸ ಪಾಠ'ದ ಗುಂಡಿಯನ್ನು ಒತ್ತಿದರೆ ಹೊಸ ಪಾಠ ಸ್ಲೇಟಿನ ಮೇಲೆ ಮೂಡುತ್ತ ಹೋಗುತ್ತದೆ. ಒಂದು ಸಲ ಅದು ಪಾಠವನ್ನು ಓದಿಯೂ ತೋರಿಸುತ್ತದೆ. ಮುಂದೆ ವಿದ್ಯಾರ್ಥಿ ಓದಬೇಕು. ಅದು ಮೈಕಿನ ಮುಖಾಂತರ ರೆಕಾರ್ಡ್ ಆಗಿ, ಓದಿದ್ದು ಎಲ್ಲಿ ತಪ್ಪಾಯಿತು ಎಂದೂ ತೋರಿಸುತ್ತದೆ. ಸರಿ ಓದಿದ ಮೇಲೆ 'ನೀನು ಜಾಣ, ಹೀಗೇ ಮುಂದುವರಿಸು' ಎಂದು ಬೆನ್ನು ತಟ್ಟುತ್ತದೆ. 'ಇದೇ ರೀತಿ ನೀನು ಪ್ರಯತ್ನ ಮಾಡಿದರೆ ಇಂತಿಷ್ಟು ದಿನಗಳಲ್ಲಿ ನೀನು ಪೂರ್ಣ ಸಾಕ್ಷರನಾಗುತ್ತೀಯಾ. ಆಮೇಲೆ ನಿನ್ನ ಹೆಂಡತಿಗೆ ಕಾಗದ ಬರೆಯಬಹುದು.' ಎಂದು ಹುರಿದುಂಬಿಸುತ್ತದೆ. ಈ ಇಲೆಕ್ಟ್ರಾನಿಕ್ ಸ್ಲೇಟುಗಳನ್ನು ಹೊಂದಿದವರು ತಮ್ಮ ತಮ್ಮ ಮನೆಗಳಲ್ಲಿಯೇ ಕುಳಿತು ಅನುಕೂಲವಾದ ಸಮಯದಲ್ಲಿ ಓದು ಬರಹ ಮಾಡಬಹುದು.

ಅಂಥ ಕಾಲಕ್ಕಾಗಿ ಕಾಯುವುದಕ್ಕಿಂತ ಏನಿದೆಯೋ ಅದರ ಪರಮಾವಧಿ ಉಪಯೋಗ ಪಡೆದುಕೊಂಡು ಮುಂದೆ ಸಾಗಿ, ಗುರಿ ಸಾಧಿಸಿಕೊಳ್ಳುವುದು ಬುದ್ಧಿವಂತಿಕೆಯಲ್ಲವೇ?

ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರು : ಒಂದು ಸಿಂಹಾವಲೋಕನ

ಆರ್. ಬೋರಯ್ಯ
೧೫೯, ಮೊದಲನೆ ಮುಖ್ಯ ರಸ್ತೆ
ಮೊದಲನೆಯ ಹಂತ, ಬೃಂದಾವನ
ಬಡಾವಣೆ, ಮೈಸೂರು-೨೦

ಜಗತ್ತಿನ ವಯಸ್ಕರ ಶಿಕ್ಷಣರಂಗದಲ್ಲಿ ಅಪೂರ್ವ ಸಾಧನೆ ಮಾಡಿದ ಸಂಸ್ಥೆಗಳಲ್ಲಿ ಕರ್ನಾಟಕ ವಯಸ್ಕರ ಶಿಕ್ಷಣ ಸಮಿತಿಗೆ ವಿಶಿಷ್ಟ ಸ್ಥಾನವಿದೆ. ಮಹಾತ್ಮ ಗಾಂಧೀಜಿಯವರ ರಚನಾತ್ಮಕ ಕಾರ್ಯಗಳಲ್ಲಿ ವಯಸ್ಕರ ಶಿಕ್ಷಣ ಕಾರ್ಯವೂ ಒಂದು. ಈ ಕಾರ್ಯವನ್ನು ದೀಕ್ಷೆಯಂತೆ ವಹಿಸಿಕೊಂಡು, ನಾಡಿನ ಶೈಕ್ಷಣಿಕ, ಸಾಹಿತ್ಯಿಕ, ಸಾಂಸ್ಕೃತಿಕ ವಲಯಗಳಲ್ಲಿ; ಒಂದು ವಿಶ್ವವಿದ್ಯಾನಿಲಯದ ಸರಿಸಾಟಿಯಾಗಿ ತನ್ನ ಸೇವೆ ಸಲ್ಲಿಸಿದೆ. ವಯಸ್ಕರ ಶಿಕ್ಷಣ ಸಮಿತಿಯನ್ನು ಮೈಸೂರು ವಿಶ್ವವಿದ್ಯಾನಿಲಯದ 'ಪರಪುಟ್ಟ' ಎಂದು ಕರೆಯಬಹುದಾಗಿದೆ.

ಇಂತಹ ಪ್ರತಿಷ್ಠಿತ ಸಂಸ್ಥೆಯಲ್ಲಿ ಅನೇಕ ಮಹನೀಯರು ಅಧ್ಯಕ್ಷರಾಗಿ ದುಡಿದಿದ್ದಾರೆ. ೧೯೪೧ರಲ್ಲಿ ಆರಂಭವಾದ ಸಂಸ್ಥಾನ ಅಕ್ಷರ ಪ್ರಚಾರ ಸಮಿತಿ, ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯಾಗಿ ಪರಿವರ್ತನೆಯಾಗುವರೆಗೆ ; ಆಚಾರ್ಯ ಬಿಎಂಶ್ರೀರವರಿಂದ ಇಂದಿನ ಜಿ.ಕೆ.ಲೋಕರೆ ವರೆಗೆ; ಶಿಕ್ಷಣ, ಸಾಹಿತ್ಯ, ರಾಜಕೀಯ, ನ್ಯಾಯಾಂಗ ಈ ವಲಯಗಳಲ್ಲಿನ ಗಣ್ಯಾತಿಗಣ್ಯರು ಅಧ್ಯಕ್ಷರಾಗಿ ವಯಸ್ಕರ ಶಿಕ್ಷಣ ಸಮಿತಿಯಲ್ಲಿ ದುಡಿದಿದ್ದಾರೆ. ಇದುವರೆಗೆ ೪೦ ಮಂದಿ ಈ ಸಮಿತಿಯಲ್ಲಿ ಸೇವೆ ಸಲ್ಲಿಸಿರುವ ಬಗ್ಗೆ ದಾಖಲೆಗಳಿಂದ ತಿಳಿದು ಬರುತ್ತದೆ. ಇವರೆಲ್ಲರ ಕಾರ್ಯ ಸಾಧನೆಯನ್ನು ಪರಿಚಯ ಮಾಡಿಕೊಡುವುದು, ಒಂದು 'ಪ್ರೌಢ ಪ್ರಬಂಧ'ಕ್ಕೆ ವಸ್ತುವಾಗ . ಕರಿಯನ್ನು ಕನ್ನಡಿಯಲ್ಲಿರಿಸುವಂತೆ ಪ್ರಾತಿನಿಧಿಕವಾಗಿ ಕೆಲವು ಅಧ್ಯಕ್ಷರ ಸೇವೆಯನ್ನು ನೆನೆಯುವುದು ಈ ಪುಟ್ಟ ಲೇಖನದ ಉದ್ದೇಶ.

ಬಿಎಂಶ್ರೀ (೧೮೮೪-೧೯೪೬) :

ಕನ್ನಡದ ಕಣ್ವರೆಂದು ಖ್ಯಾತ ನಾಮರಾದ ಬಿಎಂಶ್ರೀಕಂಠಯ್ಯನವರು ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರು. ಆಂಗ್ಲ ಪ್ರಾಧ್ಯಾಪಕರಾಗಿ ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್‌ರಾಗಿ, ಪ್ರಾಚಾರ್ಯರಾಗಿ ಆಡಳಿತಾನುಭವಪಡೆದವರು. ಶ್ರೀಯವರ 'ಇಂಗ್ಲೀಷ್ ಗೀತಗಳು' ಕನ್ನಡ ಸಾಹಿತ್ಯದಲ್ಲಿ ಮನ್ವಂತರ ನಡೆಸಿದ ಕೃತಿ. ಗ್ರೀಕ್ ರುದ್ರನಾಟಕಗಳನ್ನು ರೂಪಾಂತರ, ಭಾಷಾಂತರದ ಮೂಲಕ ಕನ್ನಡಕ್ಕೆ ತಂದು, ಒಂದು ಚಿಂತನೆಯನ್ನು ಹುಟ್ಟುಹಾಕಿಬಿಟ್ಟವರು. ಅಶ್ವತ್ಥಾಮನ್, ಪಾರಸೀಕರು, ಈ ನಾಟಕಗಳು ರಂಗಭೂಮಿಗೆ ಬಿಎಂಶ್ರೀಯವರು ಕೊಟ್ಟ ಅಪೂರ್ವ ಕೊಡುಗೆಗಳು.

ಈ ಹಿನ್ನೆಲೆಯಿಂದ ಬಂದ ಬಿಎಂಶ್ರೀಯವರು ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರಾದುದು, ಒಂದು ಭಾಗ್ಯ ವಿಶೇಷ. ಶ್ರೀಕಂಠಯ್ಯನವರು ೧೯೪೧ ರಿಂದ ೧೯೪೨ ರವರೆಗೆ ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿದ್ದರು. ಆ ಅವಧಿಯಲ್ಲಿ, ಅವರೊಡನೆ ಕ್ರಿಯಾತ್ಮಕವಾಗಿ ಸಹಕರಿಸಿದ ಡಬ್ಲ್ಯು.ಜಿ. ಈಗಲ್‌ಟನ್, ಟಿ.ಕೃಷ್ಣಮೂರ್ತಿ ಎಸ್.ವಿ. ಶ್ರೀನಿವಾಸರಾವ್ ಇವರನ್ನು ಸ್ಮರಿಸುವುದು ಉಚಿತವಾಗಿದೆ. ೧೯೪೨ರ ಪ್ರಜಾಪ್ರತಿನಿಧಿ ಸಭೆಯ ಸೇರ್ಪಡೆ ಸಂದರ್ಭದಲ್ಲಿ ಬಿಎಂಶ್ರೀಯವರು ನೀಡಿದ ಭಾಷಣ ವಯಸ್ಕರ ಶಿಕ್ಷಣ ಸಮಿತಿಯ ಅಗತ್ಯತೆಯನ್ನು ಹೀಗೆ ಬಿಂಬಿಸಿದ್ದಾರೆ.

"ವಿದ್ಯೆ ಇಲ್ಲದವನು ಪಶುವೆಂತಲೂ ವಿದ್ಯೆಯಿಂದ ಅಮೃತವನ್ನು ಉಣ್ಣಬಹುದೆಂತಲೂ ಯಾವುದೂ ಜ್ಞಾನಕ್ಕೆ ಸರಿಯಿಲ್ಲವೆಂತಲೂ ಹಿರಿಯರು ಹೇಳಿದ್ದಾರೆ. ಜ್ಞಾನಕ್ಕೆ ವಿದ್ಯೆಯೂ ವಿದ್ಯೆಗೆ ಓದುಬರಹವೂ ತಳಹದಿ... ಸಮಿತಿಯವರು ಈ ರೀತಿ-ನೀತಿಗಳನ್ನು ಏರ್ಪಡಿಸಿ, ಅಕ್ಷರಮಾಲೆಯ ಪಟ, ಓದುವ ಮೊದಲ ಪುಸ್ತಕಗಳು, ವಯಸ್ಕರ ತಿಳುವಳಿಕೆಯ ಪುಸ್ತಕಮಾಲೆ, ಪುಸ್ತಕ ಭಂಡಾರ

ಮುಂತಾದ ಪ್ರಕಟಣ ಕಾರ್ಯವನ್ನು ಕೈಗೊಂಡಿರುತ್ತಾರೆ... ನಾಡ ಹಿರಿಯರೆ, ತಮ್ಮ ಸಹಾನುಭೂತಿ, ಸಹಾಯ, ಸಲಹೆಗಳಿಂದ ಅಗಾಧವೂ, ಅಪಾರವೂ ಆದ ಅವರೆ ಅತ್ಯಗತ್ಯವಾದ ನಮ್ಮ ಕಾರ್ಯದಲ್ಲಿ ನಮಗೆ ಧೈರ್ಯವೂ-ಮಾರ್ಗದರ್ಶನವೂ ಉಂಟಾಗುವುದೆಂಬ ನಂಬಿಕೆಯಿಂದ ಈ ಸಮ್ಮೇಳನ ಕರೆದಿರುತ್ತೇವೆ.... ವಿದ್ಯಾವಂತರಾದ ಪ್ರಜೆಗಳ ಮೇಲೆ ಪ್ರಜಾಪ್ರಭುತ್ವ ನಿಂತಿದೆ ಎಂಬುದನ್ನು ಅರಿತವರು ಅದು ಬರಿಯ ಬಲವಲ್ಲ, ಬರಿಯ ಬಹುಮತರೇ ಅಲ್ಲ. ಹಕ್ಕುಗಳಿಗಿಂತಲೂ ಹೆಚ್ಚಾಗಿ ಜವಾಬ್ದಾರಿಯನ್ನು ಬಯಸುವ ಬಲ್ಲಾಳುಗಳ ಆಳಿಕೆ.''

ಈ ಮಾತುಗಳಿಂದ ಜನತೆಯ ಸಾಕ್ಷರತೆಯ ಅಗತ್ಯತೆಯ ಬಗ್ಗೆ ಬಿಎಂಶ್ರೀರವರ ಕಳಕಳಿಯನ್ನು ಅರಿಯಬಹುದಾಗಿದೆ. ಬಿಎಂಶ್ರೀ ಕೃತು ಶಕ್ತಿಯನ್ನು ಗುರುತಿಸುತ್ತಾ ನ. ಭದ್ರಯ್ಯನವರು ಹೀಗೆ ವ್ಯಕ್ತಪಡಿಸುತ್ತಾರೆ: ''ಸರ್ಕಾರದ ಆರ್ಥಿಕ ಸಹಾಯ ವರ್ಷಕ್ಕೆ ಹನ್ನೆರಡು ಸಾವಿರದಿಂದ ಒಂದು ಲಕ್ಷಕ್ಕೆ ಹೆಚ್ಚಿತು. ಕಾರ್ಯ ಯಶಸ್ವಿಯಾಗಿ ನಡೆದು ಇನ್ನೂ ಹೆಚ್ಚು ಹಣ ಬೇಕಾದರೆ ಕೊಡುವ ಭರವಸೆ ಬಂತು. ಸಮಿತಿಯ ಪ್ರಾರಂಭದಲ್ಲಿ ಅವರ ಪ್ರಭಾರ ಸಲಹೆ ನೇತೃತ್ವ ಒಂದು ಪ್ರೇರೇಪಣ ಶಕ್ತಿಯಾಗಿ ಚಳುವಳಿಯ ಯಶಸ್ಸಿಗೆ ಕಾರಣವಾಯಿತು. ಸಮಿತಿಯ ಮುನ್ನಡೆ ಸುಗಮವಾಯಿತು.'' ಭದ್ರಯ್ಯನವರ ಈ ನುಡಿಗಳು ಬಿಎಂಶ್ರೀಯವರ ವಯಸ್ಕರ ಶಿಕ್ಷಣ ಸಮಿತಿ ಕುರಿತಾದ ಸಾಧನೆ ಸಿದ್ಧಿಗಳಿಗೆ ತಿಲಕವಿಟ್ಟಂತಿದೆ.

ಶ್ರೀಕಂಠಯ್ಯನವರ ವಯಸ್ಕರ ಶಿಕ್ಷಣ ಸಮಿತಿಯ ಸಂಬಂಧಗಳನ್ನು ಒಂದು ಪ್ರಸಂಗವನ್ನು ಉಲ್ಲೇಖಿಸುವುದರ ಮೂಲಕ ನಿರೂಪಿಸಬಹುದು.: ಬಿಎಂಶ್ರೀರವರು ಧಾರವಾಡದ ಜನತಾ ಕಾಲೇಜಿನ ಪ್ರಾಚಾರ್ಯರಾಗಿ ಹೋದ ನಂತರ, ವಯಸ್ಕರ ಶಿಕ್ಷಣ ಸಮಿತಿಯನ್ನು ಬಿಡಬೇಕಾಯಿತು. ಅವರನ್ನು ಬೀಳ್ಕೊಟ್ಟಾಗ ''ನನಗೆ ಬೆಳಕು ಕಲಿಸಿ ಕೊಡುತ್ತೀರಿ'' ಎಂದು ಮುಗುಳ್ನಗುತ್ತ ತಿಳಿಸಿದರು. ವಯಸ್ಕರ ಶಿಕ್ಷಣ ಸಮಿತಿಯ ನೆನಪನ್ನು ಅವರ ಪ್ರಕಟಣೆಯಾದ 'ಬೆಳಕು' ವಾರಪತ್ರಿಕೆಯ ಮೂಲಕ ಸ್ಮರಿಸಿಕೊಳ್ಳುತ್ತಿದ್ದ ಶ್ರೀಯವರ ಹಿರಿತನಕ್ಕೆ ನಾವೆಲ್ಲ ಮಣಿಯಬೇಕು.

ಬಿಎಂಶ್ರೀಯವರ ಸಾಹಿತ್ಯ, ಶಿಕ್ಷಣ ಸೇವೆಯನ್ನು ಸ್ಮರಿಸಿಕೊಂಡು ಅವರ ಶತಮಾನೋತ್ಸವವನ್ನು ನಾಡಿನಾದ್ಯಂತ ಆಚರಿಸಲಾಯ್ತು. ಸಮಿತಿ ೧೯೮೪ರಲ್ಲಿ 'ಪುಸ್ತಕ ಪ್ರಪಂಚ' ಶ್ರೀ ಸಂಚಿಕೆಯ ಮೂಲಕ ತನ್ನ ಕೃತಜ್ಞತೆ ಸಲ್ಲಿಸಿದೆ.

ಎನ್. ಬಾಲಕೃಷ್ಣಯ್ಯ:

ವಯಸ್ಕರ ಶಿಕ್ಷಣ ಸಮಿತಿಯಲ್ಲಿ ೧೯೪೪ ರಿಂದ ೧೯೪೮ರವರೆಗೆ ಅಧ್ಯಕ್ಷರಾಗಿದ್ದ ಎನ್. ಬಾಲಕೃಷ್ಣಯ್ಯವರು ಸಂಸ್ಥೆಗೊಂದು ಘನತೆ ತಂದುಕೊಟ್ಟ ಹಿರಿಯ ಚೇತನ. ವಯಸ್ಕರ ಶಿಕ್ಷಣ ಸಮಿತಿಗೆ, ಇವರ ಕಾಲದಲ್ಲಿ ಸಾರ್ವಜನಿಕರು ವಿಶ್ವವಿದ್ಯಾನಿಲಯ, ಸಂಘ-ಸಂಸ್ಥೆ, ಸರ್ಕಾರಗಳಿಂದ ಸಹಾಯದ ನೆರೆ ಹರಿದು ಬಂತು ಎಂದರೆ ಅತಿಶಯೋಕ್ತಿಯಾಗಲಾರದು. ಈ ಎಲ್ಲಾ ಮೂಲಗಳಿಂದ ನೆರವು ದೊರಕಿಸಿಕೊಡುವಲ್ಲಿ ಎನ್. ಬಾಲಕೃಷ್ಣಯ್ಯನವರು ತ್ರಿಕರಣ ಪೂರ್ವಕವಾಗಿ ಶ್ರಮಿಸಿದವರು. ಸಾಕ್ಷರತಾ ಕಾರ್ಯಕ್ರಮ, ಗ್ರಂಥಾಲಯ ಸೇವೆ, ಜನತಾ ಶಿಕ್ಷಣ, ಚಲನಚಿತ್ರ ಪ್ರದರ್ಶನ, ವಿದ್ಯಾಪೀಠದ ರೂಪರೇಷೆ, ಬಾಲಕೃಷ್ಣಯ್ಯನವರ ಸೇವಾವಧಿಯಲ್ಲಿ ರೂಪುಗೊಂಡುವು.

ಮೇಲೆ ತಿಳಿಸಿದ ಕ್ರಿಯಾತ್ಮಕ ಕಾರ್ಯಕ್ರಮಗಳಿಗೆ ತಜ್ಞರ ನೆರವು ಅಗತ್ಯವೆಂದು ತಿಳಿದ ಬಾಲಕೃಷ್ಣಯ್ಯನವರು ಅವುಗಳಿಗೆ ವಿಶ್ವವಿದ್ಯಾನಿಲಯಗಳು, ಕನ್ನಡ ಸಾಹಿತ್ಯ ಪರಿಷತ್ತು, ಕಾಲೇಜು ಪ್ರಾಧ್ಯಾಪಕರು, ಶಿಕ್ಷಣ ತಜ್ಞರನ್ನೊಳ

ಗೊಂಡ ಕೆಲವು ಉಪಸಮಿತಿಗಳನ್ನು ಇವರ ಕಾಲದಲ್ಲಿ ರೂಪಿಸಿ, ಕಾರ್ಯಕ್ರಮವನ್ನು ಚುರುಕುಗೊಳಿಸಲಾಯಿತು. ಬಾಲಕೃಷ್ಣಯ್ಯನವರ ಕಾಲದಲ್ಲಿದ್ದ ಉಪಸಮಿತಿಗಳು ಜಾತ್ಯಾತೀತ, ಲಿಂಗಭೇದವಿಲ್ಲದ ಬಹುಜನ ಸುಖಾಯ ವೃತ್ತಿಯ ಒಂದು ಅಪೂರ್ವ ಸಹಯೋಗ. ಅವು ಹೀಗಿವೆ:

೧.ಕನ್ನಡ ಸಮಿತಿ ,೨.ತೆಲುಗು ಸಮಿತಿ, ೩. ಉರ್ದು ಸಮಿತಿ, ೪. ತಮಿಳು ಸಮಿತಿ, ೫. ಪುಸ್ತಕ ಭಂಡಾರ ಸಮಿತಿ,೬. ಪುಸ್ತಕ ಪ್ರಪಂಚ-ಸಂಪಾದಕೀಯ ಮಂಡಲಿ, ೭. ಜ್ಞಾನ ಪ್ರಸಾರ ಸಮಿತಿ, ೮. ಬೈಲಾಟದ ಬಳಗ, ೯. ವಿದ್ಯಾಪೀಠ ಸಮಿತಿ, ೧೦. ಸ್ಟೋರ್ಸ್ ಸಮಿತಿ, ೧೧. ಪ್ರಕಟನಾ ಸಮಿತಿ, ೧೨. ಬೆಳಕು ಸಂಪಾದಕೀಯ ಮಂಡಲಿ. ೧೩. ಲಿಪಿ ಸಂಸ್ಕರಣ ಸಮಿತಿ, ೧೪. ಲೆಕ್ಕ ಪರಿಶೀಲನಾ ಸಮಿತಿ.

ಮೇಲ್ಕಂಡ ಉಪಸಮಿತಿಗಳು ವಯಸ್ಕರ ಶಿಕ್ಷಣ ಸಮಿತಿಯ ಸಮಗ್ರ ಕಾರ್ಯಕ್ರಮಗಳ ರೂಪರೇಷೆಗಳನ್ನು ರೂಪಿಸುವಲ್ಲಿ ಹಲವಾರು ಮಹನೀಯರು ಬಾಲಕೃಷ್ಣಯ್ಯನವರಿಗೆ ಪ್ರತ್ಯಕ್ಷ ಪರೋಕ್ಷವಾಗಿ ದುಡಿದಿದ್ದಾರೆ. ತೀ.ನಂ.ಶ್ರೀ., ಬಿ.ಕುಪ್ಪಸ್ವಾಮಿ, ಕೆ.ಎಸ್.ಆಚಾರ್ಲು, ಪ್ರೊ.ಅಬ್ದುಲ್ ಖಾದರ್ ಸರ್ವರಿ, ಥಿಯೋಡಾರ್ ಮಾಣಿಕಲಾಲ್, ರಹಮತುನ್ನೀಸಾ ಬೇಗಮ್, ಗುಲಾಂ ಅಹಮದ್, ಕೆ.ಪಟ್ಟಾಭಿರಾಮಯ್ಯ, ಎ.ಎನ್.ಮೂರ್ತಿರಾವ್, ಎಸ್.ವಿ. ಶ್ರೀನಿವಾಸರಾವ್, ಸ.ಭದ್ರಯ್ಯ, ವಿ.ಸೀತಾರಾಮಯ್ಯ, ಎಂ.ಆರ್.ಲಕ್ಷ್ಮಮ್ಮ, ಕೆ.ವಿ. ರಾಘವಾಚಾರ್, ನಾ.ಕಸ್ತೂರಿ, ಎಂ.ಎನ್. ಶೀತಮ್ಮ, ಜಿ.ಪಿ.ರಾಜರತ್ನಂ, ಶಿವರಾಮ ಕಾರಂತ, ನಟೇಶ ಮೊದಲಿಯಾರ್, ಓ.ಕೆ.ನಂಬಿಯಾರ್, ಡಾ.ಎಂ.ಸಿದ್ದಲಿಂಗಯ್ಯ, ಕೆ.ವಿಶ್ವೇಶ್ವರಗೌಡ, ಜಿ.ಎಸ್. ಕುರುಪಾದ, ಟಿ.ಮಾದಯ್ಯಗೌಡ, ಕುವೆಂಪು, ಎಸ್.ಬಿ. ಜೋಶಿ, ಎ.ಎನ್.ನರಸಿಂಹಯ್ಯ, ಡಾ.ಎಂ. ಎಚ್.ಕೃಷ್ಣ ಈ ಎಲ್ಲ ಮಹನೀಯರು ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದರು.

ಎನ್.ಬಾಲಕೃಷ್ಣಯ್ಯನವರ ಕಾಲದಲ್ಲಿ ಹಳೆಯ ಮೈಸೂರು ಸಂಸ್ಥಾನದ ೧೨ ಜಿಲ್ಲೆಗಳಲ್ಲಿ ಅಕ್ಷರ ಕಲಿಕೆ ಕೇಂದ್ರಗಳು ಎಲ್ಲ ವರ್ಗದ ಜನರ ಕಲಿಕೆಗೆ ಪ್ರೋತ್ಸಾಹಕಾರಕವಾಗಿದ್ದವೆಂದು ತಿಳಿದು ಬರುತ್ತದೆ. ಕಲಿತ ಓದು-ಬರಹಗಳನ್ನು ಉಳಿಸಿ-ಬೆಳೆಸುವಲ್ಲಿ ಗ್ರಂಥಾಲಯ ಸೇವೆಯನ್ನು ಅಂದಿನ ದಿನಗಳಲ್ಲಿ ಸಾರ್ವಜನಿಕ ಬೆಂಬಲದಿಂದ ಆರಂಭಿಸಿದ್ದು ಶಿಕ್ಷಣ ಕ್ಷೇತ್ರದಲ್ಲಿ ಒಂದು ಮೈಲಿಗಲ್ಲು.

ಜನತೆಯ ಮನರಂಜನೆ, ಶಿಕ್ಷಣ ಇವುಗಳಿಗೆ ಪೂರಕವಾದ ಚಲನಚಿತ್ರಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ಪ್ರದರ್ಶಿಸುವ ವ್ಯವಸ್ಥೆ ಅಂದು ಇತ್ತು. ಬಾಲಕೃಷ್ಣಯ್ಯನವರ ಕಾಲದಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ೧೨ ಚಲನಚಿತ್ರಗಳನ್ನು ಸಂತೆ, ಜಾತ್ರೆ, ಹಬ್ಬ, ಹರಿದಿನಗಳಲ್ಲಿ ಪ್ರದರ್ಶಿಸಲಾಗುತ್ತಿತ್ತು.

ಕನ್ನಡ ಪತ್ರಿಕೋದ್ಯಮ ಕ್ಷೇತ್ರದಲ್ಲಿ 'ಪುಸ್ತಕ ಪ್ರಪಂಚ' ಮಾಸಿಕಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಇದು ಆರಂಭವಾದದ್ದು ಆಗಸ್ಟ್ ೧೯೪೬, ಎನ್.ಬಾಲಕೃಷ್ಣಯ್ಯನವರು ಅಧ್ಯಕ್ಷರಾಗಿ, ಜಿ.ಹನುಮಂತರಾಯರು ಪ್ರಧಾನ ಸಂಪಾದಕರಾಗಿ ಎ.ಎನ್. ಮೂರ್ತಿರಾವ್, ವಿ.ಸೀ. ಗೊರೂರು, ಮುಂತಾದವರು ಸದಸ್ಯರಾಗಿ ಅದರ ಸರ್ವಾಂಗೀಣ ಬೆಳವಣಿಗೆಗೆ ದುಡಿದಿದ್ದಾರೆ. ಇವರ ಕಾಲದಲ್ಲಿ ನವಸಾಕ್ಷರರಿಗೆ ತಜ್ಞರಿಂದ ಹಲವು ಕೈ ಹೊತ್ತಿಗೆಯನ್ನು ಬರೆಸಲಾಯಿತು.

ವಿವಿಧ ವಿಷಯಗಳನ್ನು ಕುರಿತ ಅಂದು ಪ್ರಕಟವಾದ ಪುಸ್ತಕಗಳ ವಿವರ ಹೀಗಿದೆ:

ಕಾನೂನು-ವಿ.ಸೀ., ನ್ಯಾಯ-ವಿ.ಸೀ.,

ಖಾದಿ-ಎಸ್.ಮಂಜುನಾಥ್, ಪ್ರಾರಂಭದ ಆರಂಭ-ಮಾನಪ್ಪ, ಸ್ವಾಮಿ ವಿವೇಕಾನಂದ-ಸ್ವಾಮಿ ವಿಜ್ಞಾನಂದ, ಕೋಳಿಸಾಕಣೆ-ಕೆ.ಶಿವರಾಮಕಾರಂತ, ಸಂತೆ ಸುದ್ದಿ-ಎಂ.ವಿ. ಕೃಷ್ಣಸ್ವಾಮಿ ಮತ್ತು ಭರತರಾಜ್‌ಸಿಂಗ್, ಪ್ರಾರ್ಥನಾಪುಸ್ತಕ - ಸಂ.ಎಸ್.ವಿ.ಶ್ರೀ., ಜೀವಸಂತಾನ ಸಾಗಿದ ಬಗೆ-ನಭ., ಭಗವಾನ್ ಬುದ್ಧ-ವಾಸುದೇವ, ಬೇಲೂರು ಹಳೇಬೀಡು-ನಭ ಮತ್ತು ವಿ.ರಾಘವೇಂದ್ರ ರಾವ್, ಇದು ನಿಮಗೆ ಗೊತ್ತೆ?- ಎಚ್.ವೈ ಶಾರದಾಪ್ರಸಾದ್, ಕನಕದಾಸ - ಬಾದರಾಯಣ ಮೂರ್ತಿ, ಭಗವದ್ಗೀತೆ-ಸಿದ್ದವನಹಳ್ಳಿ ಕೃಷ್ಣಶರ್ಮ, ದಕ್ಷಿಣ ಆಫ್ರಿಕ-ಎಸ್.ವಿ. ಕೃಷ್ಣಮೂರ್ತಿ, ನಮ್ಮ ಭೂಮಿ-ಬಿ.ಪಿ. ರಾಧಾಕೃಷ್ಣ, ನಮ್ಮ ಮೈಸೂರು - ಎಂ. ರಾಮಸ್ವಾಮಿ, ಹಿಂದೂ ಧರ್ಮ-ಎಸ್.ವಿ.ಶ್ರೀ., ಧರ್ಮಶಾಸ್ತ್ರ - ವಿ.ಸೀ., ನಳಚರಿತ್ರೆ ಕಾವ್ಯ - ಎಚ್.ಎಂ.ಶಂಕರ ನಾರಾಯಣರಾವ್.

ಇದೇ ಸಂದರ್ಭದಲ್ಲಿ ಧರ್ಮಪ್ರಕಾಶ ಎಚ್.ಎಸ್.ವೆಂಕಾಜಿರಾಯರು, ೫೦೦೦ ರೂಪಾಯಿಗಳನ್ನು ಸಮಿತಿಗೆ ನೀಡಿ ಕುವೆಂಪು ರವರು 'ಜನಪ್ರಿಯ ವಾಲ್ಮೀಕಿ ರಾಮಾಯಣ' ಬರೆಯಲು ಏರ್ಪಡಿಸಿದ್ದಾರೆ. ಇಲ್ಲೆಲ್ಲ ಬಾಲಕೃಷ್ಣಯ್ಯನವರ ಕೃತು ಶಕ್ತಿ, ಕಾರಣ ವಾಗಿದೆ

ನಂಜನಗೂಡು ವಿದ್ಯಾಪೀಠ ಆರಂಭ ವಾದದ್ದು ಶ್ರೀ ಎನ್.ಬಾಲಕೃಷ್ಣಯ್ಯನವರು ಸಮಿತಿಯ ಅಧ್ಯಕ್ಷರಾಗಿದ್ದ ಕಾಲದಲ್ಲಿ. ಮುಂದೆ ಅದು ರಾಷ್ಟ್ರೀಯ, ಅಂತಾ ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದ್ದು ಅವರ ಶ್ರಮದ ಫಲ. ನ.ಭದ್ರಯ್ಯ, ಕೆ. ಏಕೀಶ್ವರಗೌಡರಂಥ ಗಾಂಧೀವಾದಿಗಳು, ತಜ್ಞರು ಇದಕ್ಕೆ ಸೇವೆಯ ಧಾರೆ ಎರೆದಿದ್ದಾರೆ. ವಿದ್ಯಾಪೀಠಕ್ಕೆ ಸಮಿತಿಗೆ ಮೈಸೂರಿನ ಮಹಾ ರಾಜರ ಭೂಮಿ ದೊರಕುವಲ್ಲಿ ಬಾಲಕೃಷ್ಣಯ್ಯ ನವರು ದುಡಿದವರು.

ಗ್ರಾಮಕಲೆಗಳ ಬಗ್ಗೆ ಅಪಾರ ಅಭಿಮಾನ ಹೊಂದಿದ ಬಾಲಕೃಷ್ಣಯ್ಯನವರು ಸೂತ್ರದ ಗೊಂಬೆ, ಬಯಲಾಟ, ಜನಪದ ಗೀತೆ ಮುಂತಾದ ಕಾರ್ಯಕ್ರಮಗಳ ಮೂಲಕ ಅದರ ಪುನರುಜ್ಜೀವನಕ್ಕೆ ಅಂದು ಅವರು ಶ್ರಮಿಸಿ ದರು. ಶಿವರಾಮಕಾರಂತರು ಈ ಕ್ಷೇತ್ರದಲ್ಲಿ ಸಮಿತಿಯೊಂದಿಗೆ ಗುರುತಿಸಿ ಕೊಂಡರು.

ತಾವು ಬೆಳೆದು ಸಮಿತಿಯನ್ನು ಬೆಳೆಸಿದ ಗಣ್ಯರಲ್ಲಿ ಎನ್.ಬಾಲಕೃಷ್ಣಯ್ಯ ಮರೆಯು ವಂತಿಲ್ಲ. ಗುಣ ಪಕ್ಷಪಾತಿಯಾದ ಅವರು ಭಾಗವಹಿಸುತ್ತಿದ್ದ ರಾಷ್ಟ್ರೀಯ ವೇದಿಕೆಗಳಲ್ಲಿ ಜತೆಯಲ್ಲಿ ಸಹೋದ್ಯೋಗಿಗಳನ್ನು ಒಯ್ಯು ತ್ತಿದ್ದರು. ೧೯೪೬ರಲ್ಲಿ ತಿರುವಾಂಕೂರಿನಲ್ಲಿ ನಡೆದ ಅಖಿಲ ಭಾರತ ವಯಸ್ಕರ ಶಿಕ್ಷಣ ಸಮ್ಮೇಳನವಲ್ಲಿ ವಯಸ್ಕರ ಶಿಕ್ಷಣ ಸಮಿತಿಯ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಟಿ.ಮಾದಯ್ಯ ಗೌಡರಂಥಹ ಹಿರಿಯರನ್ನು ಜೊತೆಯಾಗಿಸಿಕೊಂಡು ಭಾವಿ ಕಾರ್ಯಕರ್ತ ರನ್ನು ತಿರುವಾಂಕೂರಿನಲ್ಲಿ ಪರಿಚಯಿಸುತ್ತಾರೆ. ಇಷ್ಟೆಲ್ಲ ಸಾಧನೆ ಮಾಡಿದ ಬಾಲಕೃಷ್ಣಯ್ಯನವರು ೧೧.೬.೪೮ರವರೆಗೆ ವಯಸ್ಕರ ಶಿಕ್ಷಣ ಸಮಿತಿ ಅಧ್ಯಕ್ಷರಾಗಿದ್ದು, ತಮಗೆ ದೊರೆತ ಹೈಕೋರ್ಟ್ ನ್ಯಾಯಾಲಯದ ಹುದ್ದೆಯ ಕಾರ್ಯಭಾರ ದಿಂದ ಸಮಿತಿಗೆ ವಿದಾಯ ಹೇಳಿ ಹರಸಿ ಹೋಗುತ್ತಾರೆ. ಸಮಿತಿಯ ಅಧ್ಯಕ್ಷರಾಗಿದ್ದ ಹಿರಿಯರಿಗೆ ನ್ಯಾಯಾಧೀಶ ಪದವಿ ದೊರೆತದ್ದು ಸಮಿತಿಗೆ ಸಂದ ದೊಡ್ಡ ಗೌರವ.

ಶ್ರೀ ಟಿ.ಮಾದಯ್ಯ ಗೌಡರು :

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಯಲ್ಲಿ ಶ್ರೀ ಟಿ. ಮಾದಯ್ಯಗೌಡರು ಅಧ್ಯಕ್ಷರಾಗಿದ್ದ ಅವಧಿಯನ್ನು ಸುವರ್ಣಕಾಲವೆಂದೆ ಹೇಳಬೇಕು. ೧೯೪೮ ರಿಂದ ೭೭ ರವರೆಗಿನ ಇವರ ಸೇವಾವಧಿಯಲ್ಲಿ, ಸಮಿತಿಯು ರಾಷ್ಟ್ರ ಮತ್ತು ಅಂತಾರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಂಡು, ದೇಶ ವಿದೇಶದಿಂದ ವಯಸ್ಕರ ಶಿಕ್ಷಣ ಸಮಿತಿಗೆ ನೆರವಿನ ಮಹಾಪೂರ ಹರಿದು ಬರುವಂತಾಯ್ತು. ಮುಖ್ಯವಾಗಿ ಯುನೆಸ್ಕೋ ಹಾಗೂ ಡೆನ್ಮಾರ್ಕ್ ದೇಶದ ನೆರವು ವಯಸ್ಕರ ಶಿಕ್ಷಣ ಸಮಿತಿಯತ್ತ ಸೆಳೆಯುವಲ್ಲಿ ಮಾನ್ಯ ಶ್ರೀ ಟಿ. ಮಾದಯ್ಯಗೌಡರ ಕೃತು ಶಕ್ತಿ, ಮುಖಂಡತ್ವಗಳು ಕಾರಣವಾಗಿವೆ. ಮಾದಯ್ಯಗೌಡರು ತಮ್ಮ ಸೇವಾವಧಿಯಲ್ಲಿ ಸಮಿತಿ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅಗತ್ಯವಾದ ಸೌಲಭ್ಯಗಳನ್ನು ಮತ್ತು ಅಂತರ್ ಶಿಸ್ತನ್ನು ರೂಪಿಸಲು ದುಡಿದಿದ್ದಾರೆ.

ಟಿ. ಮಾದಯ್ಯಗೌಡರು, ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯಕಾರಿ ಮಂಡಲಿಗೆ ಸರ್ಕಾರದಿಂದ ನಿಯೋಜನೆಗೊಂಡ ಸದಸ್ಯರಾಗಿ ನೇಮಕಗೊಂಡು, ನಂತರ ಚುನಾಯಿತ ಸದಸ್ಯರಾಗಿ ಬಂದು ಅದರ ಸಕ್ರಿಯ ಕಾರ್ಯಕರ್ತರಾಗಿ ದುಡಿದು ಅನುಭವ ಪಡೆದರು. ಎನ್. ಬಾಲಕೃಷ್ಣಯ್ಯನವರು ಅಧ್ಯಕ್ಷರಾಗಿದ್ದಾಗ ಅವರೊಡನೆ ಅನೇಕ ರಾಷ್ಟ್ರೀಯ ವಯಸ್ಕರ ಸಮ್ಮೇಳನಗಳಲ್ಲಿ ಭಾಗವಹಿಸಿ ನುರಿತವರಾಗಿದ್ದರು. ಹೀಗಾಗಿ, ಅವರು ಆಡಳಿತ ನಡೆಸಲು ಈ ಹಿನ್ನೆಲೆ ಅಸ್ತಿಬಾರವಾಯಿತು. ಎನ್. ಬಾಲಕೃಷ್ಣಯ್ಯನವರು ಅಧ್ಯಕ್ಷರಾಗಿದ್ದ ಸಂದರ್ಭದಿಂದಲೂ ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪ್ರೊ. ಡಬ್ಲ್ಯು. ಜಿ. ಈಗಲ್‌ಟನ್, ಎಸ್. ವಿ. ಶ್ರೀನಿವಾಸರಾವ್ ಮುಂತಾದ ಮಹನೀಯರ ಸಹಾಯ-ಸಲಹೆಗಳು ಮಾದಯ್ಯಗೌಡರಿಗೆ ದೊರೆತು ವಯಸ್ಕರ ಶಿಕ್ಷಣ ಸಮಿತಿ ಪುಷ್ಟಗೊಂಡಿತು. ಈ ಸಂದರ್ಭದಲ್ಲೇ ವಯಸ್ಕರ ಶಿಕ್ಷಣ ಸಮಿತಿಗೆ ರಾಜಾಶ್ರಯ ದೊರೆತದ್ದನ್ನು ನಾವು ಮರೆಯುವಂತಿಲ್ಲ.

ಇಷ್ಟೆಲ್ಲ ಬೆಂಬಲವಿದ್ದರೂ ಸಮಿತಿ ಕೆಲವೊಂದು ಪ್ರತಿಕೂಲ ಸನ್ನಿವೇಶಗಳನ್ನು ಎದುರಿಸಬೇಕಾಯ್ತು. ಸಾರ್ವಜನಿಕರ ನಿರಾಸಕ್ತಿ, ಆಗತಾನೆ ರಾಜ್ಯದಲ್ಲಿ ಕಂಡು ಬಂದ ಕ್ಷಾಮ, ಪ್ರಜಾಪ್ರತಿನಿಧಿ ಸಭೆಯಲ್ಲಿ ಸಮಿತಿ ಬಗ್ಗೆ ಎದ್ದ ಅಪಸ್ವರ ಇವುಗಳನ್ನು ನಿಭಾಯಿಸುವಲ್ಲಿ ಟಿ. ಮಾದಯ್ಯಗೌಡರು ಅಮೋಘವಾಗಿ ದುಡಿದಿದ್ದಾರೆ. ರಚನಾತ್ಮಕ ಟೀಕೆಗಳನ್ನು ಸ್ವಾಗತಿಸಿದ್ದಾರೆ.

ಮಾದಯ್ಯಗೌಡರ ಕಾಲದಲ್ಲಿ ಸಾಕ್ಷರತಾ ಕಾರ್ಯಕ್ರಮ ಗ್ರಂಥಾಲಯ ಸೇವೆ, ಚಲನ ಚಿತ್ರಪ್ರದರ್ಶನ, ಗ್ರಾಮ ಕಲೆಗಳ ಪುನರುಜ್ಜೀವನಕ್ಕೆ ಹೆಚ್ಚು ಒತ್ತು ಸಿಕ್ಕಿದೆ. ಸಮಿತಿಯ ಪ್ರತಿಷ್ಠಿತ ಪತ್ರಿಕೆಗಳಾದ 'ಬೆಳಕು' ಮತ್ತು 'ಪುಸ್ತಕ ಪ್ರಪಂಚ'ಗಳ ಪ್ರಸಾರದಲ್ಲಿ ಹೆಚ್ಚಳ ಕಂಡುಬಂದಿದೆ. ನೆರೆಯ ರಾಜ್ಯಗಳಾದ ತಮಿಳುನಾಡು, ಮಹಾರಾಷ್ಟ್ರ, ಆಂಧ್ರಗಳಿಂದ ಈ ನಿಯತಕಾಲಿಕಗಳಿಗೆ ಚಂದಾದಾರರಾದ ಬಗ್ಗೆ ದಾಖಲೆಗಳಿಂದ ತಿಳಿದು ಬರುತ್ತದೆ. ಪ್ರಕಟನಾ ಕ್ಷೇತ್ರಕ್ಕೆ ಬಂದರೆ ಕೆಲವು ಪುಸ್ತಕಗಳು ಪುನರ್ಮುದ್ರಣಗೊಂಡು, ಕೆಲವು ಹೊಸ ಪುಸ್ತಕಗಳ ಮುದ್ರಣಗೊಂಡಿವೆ. ಜೀಶಂಪರ 'ಉಕ್ಕಿನ ಮನುಷ್ಯ' ಪ್ರಭಾಕರ್ ರವರ 'ಮಲೇರಿಯಾ', ಕೆ. ವಿ. ಸುಬ್ಬಣ್ಣನವರ 'ಜೇನು ಸಾಕುವ ಬಗೆ', ಕೆ. ವಿ. ಲಿಂಗಪ್ಪ ನವರ 'ಮಲೆನಾಡಿನಲ್ಲಿ ಮದುವೆ' ಪ್ರಕಟಗೊಂಡು ಜ್ಞಾನಾರ್ಜನೆಗೆ ಹಾದಿ ಮಾಡಿಕೊಟ್ಟಿವೆ.

ಎನ್. ಬಾಲಕೃಷ್ಣಯ್ಯನವರ ಕಾಲದಲ್ಲಿ ಪ್ರಕಟವಾಗಬೇಕಾದ ಕುವೆಂಪುರವರ 'ಜನಪ್ರಿಯ ವಾಲ್ಮೀಕಿ ರಾಮಾಯಣ' ಮಾದಯ್ಯಗೌಡರ ಅಧ್ಯಕ್ಷರಾದ ಅವಧಿಯಲ್ಲಿ ಮೂರ್ತಸ್ವರೂಪ ಬಂದು ೨.೧೦.೧೯೭೦ರಲ್ಲಿ ಅಂದಿನ ಮುಖ್ಯ

ಮಂತ್ರಿಗಳಾದ ಕೆ.ಸಿ.ರೆಡ್ಡಿಯವರ ಸಮ್ಮುಖದಲ್ಲಿ ಗಾಂಧಿ ಜಯಂತಿ ದಿನದಂದು ಬಿಡುಗಡೆಯಾದುದನ್ನು ಮರೆಯುವಂತಿಲ್ಲ. ಕೆ.ವಿ.ಪುಟ್ಟಪ್ಪನವರು ನವಸಾಕ್ಷರರಿಗಾಗಿ ಬರೆದುಕೊಟ್ಟ 'ಪುಟ್ಟಚಾರಿಯ ಕಾಡು ಕೋಳಿ' ಪ್ರಕಟವಾದುದು ಮಾದಯ್ಯಗೌಡರ ಕಾಲದಲ್ಲಿ ಮುಂದೊಂದು ದಿನ ರಸಋಷಿ ನಂಜನಗೂಡು ವಿದ್ಯಾಪೀಠಕ್ಕೆ ಆಗಮಿಸಿ (೧೯೫೮) ಘಟಿಕೋತ್ಸವ ಭಾಷಣ ನೀಡಿದುದು ಮಾದಯ್ಯಗೌಡರ ಹಿರಿತನಕ್ಕೆ ಸಾಕ್ಷಿ.

ಒಂದಿದ್ದ ವಿದ್ಯಾಪೀಠ, ಎರಡಾದವು ೧೯೫೦ರಲ್ಲಿ ಹಾಸನದ ಡಾ.ಸಂಪತ್ತು ಎನ್ನುವವರಿಂದ ಹದಿನಾಲ್ಕು ಎಕರೆ ಜಮೀನನ್ನು ವಯಸ್ಕರ ಶಿಕ್ಷಣ ಸಮಿತಿಗೆ ದಾನ ಪಡೆದು ಯಗಚಿನದಿ ದಂಡೆಯಲ್ಲಿ ವಿದ್ಯಾಪೀಠ ಆರಂಭಿಸಲಾಯ್ತು. ಇಲ್ಲೆಲ್ಲ ಮಾದಯ್ಯಗೌಡರ ಶ್ರಮ,ಶ್ರದ್ಧೆಗಳು ಕಾರ್ಯನಿರ್ವಹಿಸಿರುವುದನ್ನು ಕಾಣಬಹುದು.

ಮಾದಯ್ಯಗೌಡರ ಕಾಲದಲ್ಲಿ ಅನೇಕ ವಿಚಾರ ಸಂಕಿರಣಗಳು ನಡೆದಿವೆ. ಪ್ರಸ್ತಾವಿಕವಾಗಿ ಕೆಲವನ್ನು ಹೆಸರಿಸಬಹುದು, ಕನ್ನಂಬಾಡಿಯಲ್ಲಿ ದಿನಾಂಕ ೨.೧೧.೪೯ ರಿಂದ ೪.೧೨.೪೯ ರವರೆಗೆ ಯುನೆಸ್ಕೊ ಅಂತರ ರಾಷ್ಟ್ರೀಯ ಸಂಕಿರಣ, ೧೯೫೩ರ ಡಿಸೆಂಬರ್‌ನಲ್ಲಿ ಮೈಸೂರು ಸಮೀಪ ಅಲೋಕದಲ್ಲಿ ಯುನೆಸ್ಕೋ ತರಬೇತಿ ಶಿಬಿರ ಮುಖ್ಯವಾದುವುಗಳು. ಈ ಎಲ್ಲಾ ಸಂದರ್ಭಗಳಲ್ಲಿ ಮಾದಯ್ಯಗೌಡರು ವಯಸ್ಕರ ಶಿಕ್ಷಣ ಸಮಿತಿಯ ನೌಕರರ ಕ್ರಿಯಾಶೀಲತೆಯನ್ನು ಅರ್ಥಪೂರ್ಣವಾಗಿ ಬಳಸಿಕೊಂಡಿದ್ದಾರೆ.

ಗ್ರಾಮೀಣ ಕಲೆಗಳ ಅಭಿವೃದ್ಧಿಗೆ ಸಮಿತಿಯ ಸೇವೆ ಅಪಾರವಾದುದು. ಈ ಕಲೆಗಳನ್ನು ಹುಡುಕಿ ಸಾರ್ವಜನಿಕರ ನೆರವಿನಿಂದ ಅವುಗಳನ್ನು ಪ್ರೋತ್ಸಾಹಿಸಿದ್ದಾರೆ. ಶಿವಪುರದ ಸೂತ್ರದ ಬೊಂಬೆಗಳನ್ನು ೧೯೫೪ರಲ್ಲಿ ದೆಹಲಿಯವರೆಗೆ ಒಯ್ದು ಪ್ರದರ್ಶನಕ್ಕೆ ಶ್ರಮಿಸಿದ ಕೀರ್ತಿ ಮಾದಯ್ಯಗೌಡರಿಗೆ ಸಲ್ಲಬೇಕು. ಅವು ಅಂದಿನ ಭಾರತದ ಉಪಾಧ್ಯಕ್ಷರಾಗಿದ್ದ ಡಾ.ಎಸ್. ರಾಧಾಕೃಷ್ಣನ್‌ರವರನ್ನು ಆಕರ್ಷಿಸಿದ್ದನ್ನು ಮರೆಯುವಂತಿಲ್ಲ. ಇಲ್ಲೆಲ್ಲ ಎಸ್.ವಿ.ಕೃಷ್ಣಮೂರ್ತಿರಾಯರಂತಹ ಗಣ್ಯರು ಗೌಡರಿಗೆ ನೆರವು ನೀಡಿದ್ದಾರೆ.

ಮಾದಯ್ಯಗೌಡರು ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿದ್ದಾಗ ಅಮೆರಿಕಾದ ಫೋರ್ಡ್ ಫೌಂಡೇಷನ್ನು ಹಾಗೂ ಭಾರತ ಸರ್ಕಾರದ ಶಿಕ್ಷಣ ಇಲಾಖೆ ಪ್ರಾಯೋಜಿಸಿದ ಪ್ರವಾಸದಲ್ಲಿ ಡೆನ್ಮಾರ್ಕ್ ದೇಶಕ್ಕೆ ಹೋಗಿ ಬಂದರು. ಸಾಗರದಾಚೆಗೆ ವಯಸ್ಕರ ಶಿಕ್ಷಣ ಸಮಿತಿಯ ಕೀರ್ತಿ ಪತಾಕೆಯನ್ನು ಹಾರಿಸಿ, ಮುಂದೆ ವಯಸ್ಕರ ಶಿಕ್ಷಣ ಸಮಿತಿಗೆ ಡೆನ್ಮಾರ್ಕ್‌ನ ನೆರವು ದೊರಕಿಸಿಕೊಡುವಲ್ಲಿ ಶ್ರಮಿಸಿದ್ದಾರೆ. ರಜತಾದ್ರಿ, ಬಿ.ವಿ.ಸತ್ಯನಾರಾಯಣ, ರಾಮಚಂದ್ರ, ಕೃಷ್ಣಮೂರ್ತಿ ಮುಂತಾದವರು ಡೆನ್ಮಾರ್ಕ್ ದೇಶಕ್ಕೆ ಹೋಗಿ ಅಲ್ಲಿ ತರಬೇತಿ ಪಡೆದು ಮುಂದೆ ವಯಸ್ಕರ ಶಿಕ್ಷಣ ಕ್ಷೇತ್ರಕ್ಕೆ ಸಂಪನ್ಮೂಲ ವ್ಯಕ್ತಿಗಳಾದುದು ಮಾದಯ್ಯ ಗೌಡರ ಶ್ರಮದ ಫಲ. ಯುನೆಸ್ಕೋನಿಂದ ಗಿಫ್ಟ್‌ಕೂಪನ್ ಯೋಜನೆಯ ಮೂಲಕ ಸಮಿತಿಗೆ ಧನ ಸಹಾಯ ದೊರಕಿಸಿಕೊಡಲು ಗೌಡರು ದುಡಿದವರು.

ಚಲನಚಿತ್ರದಂತಹ ಪ್ರಭಾವಿ ಮಾಧ್ಯಮ ಸಮಿತಿಯ ಪ್ರಚಾರ ಶಿಕ್ಷಣ ಕಾರ್ಯಕ್ರಮಗಳಿಗೆ ಸಂಪರ್ಕ ಸೇತುವೆಯಾಗಿದೆ. ಮಾದಯ್ಯಗೌಡರ ಕಾಲದಲ್ಲಿ ವಯಸ್ಕರ ಶಿಕ್ಷಣ ಸಮಿತಿ ಕೆಲವು ಚಲನಚಿತ್ರಗಳನ್ನು ತಯಾರಿಸಿದೆ. ಸಾಕ್ಷರತೆಯ ಮಹತ್ವವನ್ನು ತಿಳಿಸುವ 'ಈರ

ಜೀರಿ' ರಾಜ್ಯದ ಸಾಧನೆ ತಿಳಿಸುವ 'ನಮ್ಮ ಮೈಸೂರು' ಮುಖ್ಯವಾದುವುಗಳು. ಶಿಕ್ಷಣಕ್ಕೆ ಬೇಕಾಗುವ ಚಲನಚಿತ್ರ ಸಾಧನಗಳನ್ನು ತಯಾರಿಸುವ ವಿಷಯದಲ್ಲಿ ತರಬೇತಿ ನೀಡಲು ಯುನೆಸ್ಕೊ ಮಾದಯ್ಯಗೌಡರ ನೇತೃತ್ವದಲ್ಲಿ ಒಂದು ವಿಚಾರ ಸಂಕಿರಣವನ್ನು ಮೈಸೂರಿನಲ್ಲಿ ಸಮಿತಿಯ ಆಶ್ರಯದಲ್ಲಿ ೧೯೫೩-೫೪ರಲ್ಲಿ ನಡೆಸಲಾಯ್ತು.

ಟಿ. ಮಾದಯ್ಯಗೌಡರು ಲೋಕಸಭೆಯ ಸದಸ್ಯರಾಗಿದ್ದವರು. ಸಮಿತಿಯಲ್ಲಿನ ಸೇವೆ ಪ್ರತ್ಯೇಕ್ಷ-ಪರೋಕ್ಷವಾಗಿ ಅವರು ಜನನಾಯಕರಾಗಲು ಕಾರಣವಾಗಿದೆ. ಕೃತಜ್ಞತಾ ಪೂರ್ವಕವಾಗಿ ಮಾದಯ್ಯಗೌಡರು ಒಂದು ಅಪೂರ್ವ ದಾಖಲೆಗಳನ್ನು ಸಮಿತಿಗೆ ಬಿಟ್ಟು ಹೋಗಿದ್ದಾರೆ.

ಶ್ರೀ ನ. ಭದ್ರಯ್ಯ (೧೯೮೨-೮೮):

ಕರ್ನಾಟಕದಲ್ಲಿ ವಯಸ್ಕರ ಶಿಕ್ಷಣ ಎಂದರೆ ಭದ್ರಯ್ಯ ಎನ್ನುವಷ್ಟರ ಮಟ್ಟಿಗೆ ಶ್ರೀ ನ. ಭದ್ರಯ್ಯನವರು ಖ್ಯಾತಿ ಪಡೆದವರು. ವಯಸ್ಕರ ಶಿಕ್ಷಣ ಸಮಿತಿಯಲ್ಲಿ ವಿದ್ಯಾಪೀಠದ ಆಚಾರ್ಯರಾಗಿ, ಪ್ರಧಾನ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ ಮೇಲೆ ಬಂದವರು. ೧೯೫೫-೧೯೫೮, ೧೯೫೯-೧೯೬೨, ೧೯೬೫-೧೯೬೬ ಈ ಅವಧಿಗಳಲ್ಲಿ ಸಮಿತಿಯ ಅಧ್ಯಕ್ಷರಾಗಿ ಚುನಾಯಿತರಾದ ಭದ್ರಯ್ಯನವರು ಅಪ್ಪಟ ಗಾಂಧೀವಾದಿ.

ಭದ್ರಯ್ಯನವರು ವಿದ್ಯಾರ್ಥಿ ಜೀವನದಿಂದಲೂ, ಸಾಮಾಜಿಕ ಸಮಾನತೆಗೆ ಹೋರಾಡಿದ ಭೂಪ. ಸ್ವದೇಶ ಚಳುವಳಿಯಲ್ಲಿ ತೊಡಗಿಸಿಕೊಂಡು, ಗಾಂಧೀಜಿಯವರಿಂದ ದೀಕ್ಷಾಬದ್ಧರಾಗಿ ವಯಸ್ಕರ ಶಿಕ್ಷಣ ಕಾರ್ಯವನ್ನು ತಮ್ಮ ಮಂತ್ರವನ್ನಾಗಿಸಿಕೊಂಡು ಸಮಿತಿಯಲ್ಲಿ ದುಡಿದವರು.

ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯಗಳಲ್ಲಿ ಒಂದಾದ ವಿದ್ಯಾಪೀಠಗಳ ಸ್ಥಾಪನೆಯ ರೂವಾರಿ 'ನಭ' ಎನ್ನುವುದನ್ನು ಮರೆಯುವಂತಿಲ್ಲ. ಡೆನ್ಮಾರ್ಕ್ ಮತ್ತು ಅಮೆರಿಕಾದ ಫೋರ್ಡ್ ಫೌಂಡೇಷನ್ನಿನಿಂದ ಆರ್ಥಿಕ ನೆರವು ದೊರಕಿಸಿಕೊಂಡು ಹೆಚ್ಚುವರಿ ವಿದ್ಯಾಪೀಠಗಳು, ಅದಕ್ಕೊಂದು ಮುದ್ರಣಾಲಯ ದೊರಕಿಸಿ ಕೊಡುವಲ್ಲಿ ಭದ್ರಯ್ಯನವರ ಪ್ರಯತ್ನ ಚರಿತ್ರಾರ್ಹರನ್ನಾಗಿಸಿದೆ. ಯುನೆಸ್ಕೋ ತಜ್ಞರಾಗಿ ಆಫ್ರಿಕಾ, ಇಂಡೋನೇಷಿಯ, ಇರಾನ್ ಮುಂತಾದ ದೇಶಗಳಲ್ಲಿ ತಮ್ಮ ತಜ್ಞ ಸಲಹೆಗಳಿಂದ ಕರ್ನಾಟಕವನ್ನು, ವಯಸ್ಕರ ಶಿಕ್ಷಣ ಸಮಿತಿಯನ್ನು ಗುರುತಿಸುವಂತೆ ನ. ಭದ್ರಯ್ಯನವರು ಶ್ರಮಿಸಿದ್ದಾರೆ. ತಮ್ಮ ವಿಶ್ರಾಂತ ಜೀವನದಲ್ಲೂ ಸಮಿತಿಯ ವಿದ್ಯಾಪೀಠ ಪಠ್ಯಕ್ರಮ ರೂಪಿಸುವಲ್ಲಿ ಶ್ರೀ ನಭ ತೊಡಗಿಸಿಕೊಂಡಿದ್ದನ್ನು ಮರೆಯುವಂತಿಲ್ಲ.

ಭದ್ರಯ್ಯನವರು ಉತ್ತಮ ಲೇಖಕರು. ಶಿಕ್ಷಣವೆಂತೋ, ಅಂತೇ ಸಾಹಿತ್ಯದಲ್ಲೂ ಹೆಸರು ಮಾಡಿದವರು. 'ಕ್ಯಾಮರೂನಿನ ಬಣಗಳೊಡನೆ ಮತ್ತು ಅರಬ್ ದೇಶಗಳಲ್ಲಿ ಯುನೆಸ್ಕೊ ಸೇವೆಯಲ್ಲಿ, 'ಪ್ರಪಂಚ ಪರ್ಯಟನೆ, 'ಗಾಂಧಿ ಪ್ರಮಾಣ ವಚನಗಳು', 'ಅಶೋಕ ಚಕ್ರವರ್ತಿಯ ಚರಿತ್ರೆ', 'ಬೇಲೂರು ಮತ್ತು ಹಳೇಬೀಡು' ಇವು ನಭರವರ ಸಾಹಿತ್ಯ ಕೃತಿಗಳು. ಭದ್ರಯ್ಯನವರ ಶಿಕ್ಷಣ ಮತ್ತು ಸಾಹಿತ್ಯ ಸೇವೆಯನ್ನು ಕುವೆಂಪುರವರು ಹೀಗೆ ಗುರುತಿಸುತ್ತಾರೆ : ''ನನ್ನ ಜೀವಮಾನದಲ್ಲಿ ನಾನು ಕಂಡ ಮಹಾವಿಭೂತಿ ಪ್ರಮಾಣದ ಶ್ರೀ ಸಾಮಾನ್ಯ ವ್ಯಕ್ತಿಗಳಲ್ಲಿ ಶ್ರೀ ನ. ಭದ್ರಯ್ಯನವರು ಅತ್ಯಂತ ಮಹೋನ್ನತರಾದ ವ್ಯಕ್ತಿ ಎಂದು ಭಾವಿಸುತ್ತೇನೆ. ಅವರು ಬದುಕಿನಲ್ಲಿ ಯಾವ ವಿಶೇಷತೆಯನ್ನು ಪ್ರದರ್ಶಿಸದಂತೆ ಅತ್ಯಂತ ಮಹತ್

ಕಾರ್ಯಗಳನ್ನು ಎಸಗಿದ್ದಾರೆ. ಆಫ್ರಿಕಾ ದೇಶದ ಕಾಮರೂನ್‌ನಂತಹ ಕಾಡು ಜನರಿಂದ ಹಿಡಿದು ಜಗತ್ತಿನ ಅತ್ಯಂತ ಮುಂದುವರಿದ ನಾಗರಿಕತೆಯ ದೇಶಗಳೊಡನೆ, ವ್ಯಕ್ತಿಗಳೊಡನೆ ಅತ್ಯಂತ ಮೈತ್ರಿಯನ್ನು ಸಂಪಾದಿಸಿ, ನಿಜವಾದ ಅರ್ಥದಲ್ಲಿ ಜಗದ್ ವ್ಯಕ್ತಿಗಳಾಗಿದ್ದಾರೆ.

ಭದ್ರಯ್ಯನವರ ಸೇವೆಯನ್ನು ಸಮಿತಿ ಮುಕ್ತಕಂಠದಿಂದ ಸ್ಮರಿಸಿದೆ. ನೆಹರು ಸಾಕ್ಷರತಾ ಪ್ರಶಸ್ತಿ, ಮಹಮದ್ ರೆಹಜಾ ಪಹ್ಲವಿ ಪ್ರಶಸ್ತಿ ವಯಸ್ಕರ ಶಿಕ್ಷಣ ಸಮಿತಿಗೆ ದೊರಕುವಲ್ಲಿ ಭದ್ರಯ್ಯನಂತವರ ಸೇವೆ ಮಹತ್ವದ ಪಾತ್ರ ವಹಿಸಿದೆ. ಭದ್ರಯ್ಯನವರು ನಿಧನರಾದಾಗ 'ಪುಸ್ತಕ ಪ್ರಪಂಚ' ಅವರ ಬಗ್ಗೆ ವಿಶೇಷ ಸಂಚಿಕೆ ತಂದು ತನ್ನ ಶ್ರದ್ಧಾಂಜಲಿ ಸಲ್ಲಿಸಿದೆ.

ಶ್ರೀ ಪಿ. ಮಲ್ಲಿಕಾರ್ಜುನ ಸ್ವಾಮಿಯವರು :

ವಯಸ್ಕರ ಶಿಕ್ಷಣ ಸಮಿತಿಗೆ ಬಂದ ಕ್ರಿಯಾಶೀಲ ಅಧ್ಯಕ್ಷರಲ್ಲಿ ಪಿ. ಮಲ್ಲಿಕಾರ್ಜುನ ಸ್ವಾಮಿಯವರು ಮುಖ್ಯರು . ೧೯೭೬-೭೦ ರವರೆಗೆ ಮಲ್ಲಿಕಾರ್ಜುನ ಸ್ವಾಮಿಯುವರು ಅಧ್ಯಕ್ಷರಾಗಿ, ಸಮಿತಿಯ ಸರ್ವಾಂಗೀಣ ಬೆಳವಣಿಗೆಗೆ ಶ್ರಮಿಸಿದವರು. ಇವರ ಕಾಲದಲ್ಲಿ ವಯಸ್ಕರ ಶಿಕ್ಷಣ ಸಮಿತಿ ದೇಶ-ವಿದೇಶದ ಗಣ್ಯರನ್ನು ತನ್ನತ್ತ ಆಕರ್ಷಿಸಿತ್ತು. ಮಲ್ಲಿಕಾರ್ಜುನ ಸ್ವಾಮಿಯವರು ಅಧಿಕಾರಕ್ಕೆ ಬಂದಾಗ, ಸಮಿತಿ ೨೫ ವರ್ಷಗಳ ಸಾರ್ಥಕ ಸೇವೆಯನ್ನು ಸಲ್ಲಿಸಿತ್ತು. ತಾಲ್ಲೂಕು, ಜಿಲ್ಲಾ ಮಟ್ಟಗಳಲ್ಲಿ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳು ವ್ಯಾಪಕಗೊಂಡಿದ್ದು, ಎಲ್ಲ ಸ್ತರಗಳಲ್ಲಿ ಉತ್ತಮ ಸೇವೆ ಸಲ್ಲಿಸಿದ ನೆನಪಾರ್ಥವಾಗಿ ಬೆಳ್ಳಿಹಬ್ಬ ಆಚರಿಸಲಾಯ್ತು. ಬೆಂಗಳೂರು, ಮೈಸೂರಿನಲ್ಲಿ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅದ್ದೂರಿಯಾಗಿ ಕಾರ್ಯಕ್ರಮಗಳು ನಡೆದಿರುವುದನ್ನು ದಾಖಲೆಗಳಿಂದ, ಸ್ಮರಣೆಗಳಿಂದ ಎಕ್ಕಬಹುದಾಗಿದೆ.

ಸಾರ್ವಜನಿಕರ, ಸರ್ಕಾರದ, ಗಣ್ಯರ ಬೆಂಬಲವಿದ್ದರೂ ವಯಸ್ಕರ ಶಿಕ್ಷಣ ಸಮಿತಿ ಅನೇಕ ಕಷ್ಟಕಾರ್ಪಣ್ಯಗಳನ್ನು ಎದುರಿಸಿ, ಪಾಸ್ಕ ಮಲ್ಲಿಕಾರ್ಜುನ ಸ್ವಾಮಿಯವರ ಕಾಲದಲ್ಲಿ ಅಕ್ಷರ ಪ್ರಚಾರ, ಪುಸ್ತಕಭಂಡಾರ ವ್ಯವಸ್ಥೆ, ಚಲನಚಿತ್ರ ಪ್ರದರ್ಶನ, ಪ್ರಕಟನೆ, ವಿದ್ಯಾಪೀಠಗಳಲ್ಲಿ ತರಬೇತಿ, ಸಂಶೋಧನೆ, ಕಾರ್ಯಾಗಾರ, ವಿಚಾರಗೋಷ್ಠಿ, ಇತ್ಯಾದಿ ಚಟುವಟಿಕೆಗಳು ನಡೆದಿವೆ.

ಅಕ್ಷರ ಪ್ರಚಾರ ಕಾರ್ಯಕ್ರಮ, ಪುಸ್ತಕ ಭಂಡಾರಗಳ ಸೇವೆ ಚುರುಕುಗೊಂಡು ಹೆಚ್ಚು ಜನರಿಗೆ ತಲುಪುವಂತೆ ಮಲ್ಲಿಕಾರ್ಜುನ ಸ್ವಾಮಿಯವರು ಶ್ರಮಿಸಿದ್ದಾರೆ. ಸಮಿತಿಯ ಪ್ರಕಟನೆಗಳ ಸುಗ್ಗಿ, 'ಬೆಳಕು' ಪತ್ರಿಕೆ ೫೦೦೦ ದಿಂದ ೬೦೦೦ ದವರೆಗೆ 'ಪುಸ್ತಕ ಪ್ರಪಂಚ' ೨೦೦೦ ದಿಂದ ೩೦೦೦ದವರೆಗೆ ಪ್ರಸಾರಸಂಖ್ಯೆಯನ್ನು ಎತ್ತರಿಸಿಕೊಂಡವು. ಸುಮಾರು ೨೦,೦೦೦ ಪ್ರತಿಗಳ ಸಮಿತಿಯ ಪ್ರಕಟಣೆಯನ್ನು ಪುನರ್ ಮುದ್ರಿಸಿ ಪುಸ್ತಕ ಭಂಡಾರಗಳಿಗೆ, ನವಸಾಕ್ಷರರಿಗೆ ದೊರಕುವಂತೆ ಮಾಡಿದ್ದು ಸಾಮಾನ್ಯ ಕೆಲಸವಲ್ಲ. ಇಲ್ಲಿಲ್ಲ ಮಲ್ಲಿಕಾರ್ಜುನ ಸ್ವಾಮಿಯವರ ಪ್ರೋತ್ಸಾಹ, ಜ್ಞಾನ ಪಿಪಾಸೆ ಎದ್ದು ಕಾಣುತ್ತದೆ.

ಸಮಿತಿಯ ೧೨ ವಿದ್ಯಾಪೀಠಗಳಲ್ಲಿ ಯೋಗ್ಯ ತರಬೇತಿ ನಡೆದಿದೆ. ವಿದ್ಯಾಪೀಠದ ಹುಟ್ಟುವಳಿಯಲ್ಲಿ ಹೆಚ್ಚಳಗೊಂಡಿದ್ದು, ಡೆನ್ಮಾರ್ಕ್ ದೇಶದ ಸಹಯೋಗ ಮತ್ತಷ್ಟು ಹೆಚ್ಚಲು ಮಲ್ಲಿಕಾರ್ಜುನ ಸ್ವಾಮಿಯವರು ಶ್ರಮಿಸಿದ್ದಾರೆ. 'ಮೈಸೂರು-ಡೆನ್ಮಾರ್ಕ್' ಪ್ರಾಜೆಕ್ಟ್ ಆರಂಭವಾಗಿ ಡೆನ್ಮಾರ್ಕ್ ದೇಶದ ಅನುಭವಿಗಳು, ಶಿವಾರಗುಡ್ಡ, ತುಂಗಾ, ಕೆಂಗೇರಿ. ವಿದ್ಯಾಪೀಠಗಳಲ್ಲಿ ನೆಲಸಿ ವ್ಯವಸಾಯ ಮತ್ತು ಅದಕ್ಕೆ ಸಂಬಂಧಿಸಿದ ಕೈಗಾರಿಕೆಗಳಲ್ಲಿ ವಿಚಾರ ವಿನಿಮಯ ನಡೆದಿದೆ.

'ಮೈಸೂರು ಡೇನಿಸ್ ಪ್ರಾಜೆಕ್ಟ್'ನಿಂದಾಗಿ ಕರ್ನಾಟಕ ಡೆನ್ಮಾರ್ಕ್‌ನ ಸಂಬಂಧಗಳು ಮಧುರವಾಗಲು ಸಹಕಾರಿಯಾಯಿತು. ಅಲ್ಲದೆ, ವ್ಯವಸಾಯ, ಕೋಳಿ ಸಾಕಾಣಿಕೆ, ಪಶುಪಾಲನೆ

ಗಳಲ್ಲಿ ಉತ್ತಮ ವಿಷಯುಗಳನ್ನು ತಿಳಿಯುವ ಅವಕಾಶ ನಮ್ಮ ಗ್ರಾಮೀಣ ಯುವಕರಿಗೆ ದೊರೆತಿದೆ.

ಮಲ್ಲಿಕಾರ್ಜುನ ಸ್ವಾಮಿಯವರ ಕಾಲದಲ್ಲಿ ರಜತಮಹೋತ್ಸವ ಆಚರಿಸಿದ ಬಗ್ಗೆ ಈ ಹಿಂದೆ ಪ್ರಸ್ತಾಪಿಸಲಾಗಿತ್ತು. ಅಂದಿನ ರಾಜ್ಯಪಾಲರಾದ ಶ್ರೀ ಜಿ.ಎಸ್.ಪಾಠಕ್ ರವರು ಬೆಂಗಳೂರಿನಲ್ಲಿ ಕಾರ್ಯಕ್ರಮವನ್ನು ಉದ್ಘಾಟಿಸಿ ಹರಿಸಿದ್ದಾರೆ. ಸಮಿತಿಯ ೨೫ ವರ್ಷದ ಸಾರ್ಥಕ ಸೇವೆಯನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. ಮೈಸೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್.ನಿಜಲಿಂಗಪ್ಪನವರು ಭಾಗವಹಿಸಿ ಅದರ ಸಾರ್ಥಕ ಸೇವೆಯನ್ನು ಪ್ರಶಂಸಿಸಿ ಸಮಿತಿಗೆ ಹೆಚ್ಚಿನ ನೆರವು ನೀಡಲು ಭರವಸೆಯಿತ್ತದ್ದನ್ನು ದಾಖಲೆಗಳಿಂದ ಗುರುತಿಸಬಹುದಾಗಿದೆ. ಗ್ರಾಮಕಲೆಗಳ ಪ್ರದರ್ಶನ, ಕವಿ ಸಮ್ಮೇಳನ ಮುಂತಾದ ಕಾರ್ಯಕ್ರಮಗಳು ಮಲ್ಲಿಕಾರ್ಜುನ ಸ್ವಾಮಿಯವರ ನೇತೃತ್ವದಲ್ಲಿ ನಡೆದು ಸಾರ್ವಜನಿಕರ ಮೆಚ್ಚುಗೆ ಗಳಿಸಿದ್ದನ್ನು ಮರೆಯುವಂತಿಲ್ಲ.

ಅಖಿಲ ಭಾರತ ವಯಸ್ಕರ ಶಿಕ್ಷಣ ಗೋಷ್ಠಿ ದಿನಾಂಕ೧೫.೧೦.೬೭ರಂದು ಮಲ್ಲಿಕಾರ್ಜುನ ಸ್ವಾಮಿಯವರ ನೇತೃತ್ವದಲ್ಲಿ ನಡೆದದ್ದು ಒಂದು ಅಪೂರ್ವ ದಾಖಲೆ. ಈ ಗೋಷ್ಠಿಯನ್ನು ಖ್ಯಾತ ಶಿಕ್ಷಣ ತಜ್ಞರು, ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳು ಆದ ಡಾ.ಕೆ.ಎಲ್. ಶ್ರೀಮಾಲಿಯವರು ಉದ್ಘಾಟಿಸಿ ಸಮಿತಿಯ ಅಭ್ಯೋತ್ತರಗಳ ಬಗ್ಗೆ ಮಹತ್ವದ ಸಲಹೆ ನೀಡಿದ್ದಾರೆ.

ಮಲ್ಲಿಕಾರ್ಜುನ ಸ್ವಾಮಿಯವರು, ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದ್ದ ಗಣ್ಯರನ್ನು ಆಕರ್ಷಿಸುವಲ್ಲಿ ಶ್ರಮಿಸಿದವರು. ಇವರ ಕಾಲದಲ್ಲಿ ಜೆ.ಸಿ.ಮಾಥುರ್, ಡಾ.ಮೋಹನ್‌ಸಿನ್ಹಮೆಹ್ತಾ, ಎ.ಆರ್. ದೇಶಪಾಂಡೆ, ದುರ್ಗಾಬಾಯಿ ದೇಶಮುಖ್ ಮುಂತಾದ ಮಹನೀಯರು ಮೈಸೂರಿಗೆ ಬಂದಾಗಲೆಲ್ಲ ಸಮಿತಿಯ ಕಛೇರಿಗೆ ಹಾಗೂ ಮುದ್ರಣಾಲಯ, ವಿದ್ಯಾಪೀಠಗಳಿಗೆ ಭೇಟಿಯಿತ್ತು ತೃಪ್ತಿ ವ್ಯಕ್ತಪಡಿಸಿದ್ದಾರೆ. ಇಲ್ಲೆಲ್ಲ ಸ್ವಾಮಿಯವರ ಸರಳ-ಸಜ್ಜನಿಕೆ, ಶಿಸ್ತು ಎದ್ದು ಕಾಣುತ್ತಿತ್ತು.

ಶ್ರೀ ಕೆ.ಎಸ್.ಮುನಿಸ್ವಾಮಿ ಮತ್ತು ಶ್ರೀ ಬಿ.ವಿ.ಸತ್ಯನಾರಾಯಣರಂಥ ಅನುಭವಿ ಅಧಿಕಾರಿಗಳ ಸಹಾಯ-ಸಲಹೆಗಳು, ಮಲ್ಲಿಕಾರ್ಜುನ ಸ್ವಾಮಿಯವರಿಗೆ ದೊರೆತು, ಸಮಿತಿಯ ಚಟುವಟಿಕೆಗಳು, ಪ್ರೋತ್ಸಾಹಕಾರಕ ಸನ್ನಿವೇಶದಲ್ಲಿ ನಡೆದುದನ್ನು ಯಾರು ಮರೆಯುವಂತಿಲ್ಲ. ತಮ್ಮ ನಿಷ್ಠೆ, ಶ್ರಮ, ಬದ್ಧತೆಯಿಂದ ದುಡಿದಿದ್ದಾರೆ. ಶಾಸಕರಾಗಿ, ಮಂತ್ರಿಗಳಾಗಿ ಸಾರ್ವಜನಿಕ ಜೀವನದಲ್ಲಿ ತೊಡಗಿಸಿಕೊಳ್ಳುವಲ್ಲಿ ವಯಸ್ಕರ ಶಿಕ್ಷಣ ಸಮಿತಿಯ ಆಡಳಿತಾನುಭವ ನೆರವಿಗೆ ಬಂದಿದ್ದನ್ನು ಶ್ರೀ ಮಲ್ಲಿಕಾರ್ಜುನ ಸ್ವಾಮಿಯವರು ಆಗಾಗ ಪ್ರಸ್ತಾಪಿಸಿದ್ದನ್ನು ಅವರ ಸಮಕಾಲೀನರು ಇಂದಿಗೂ ನೆನೆಯುತ್ತಾರೆ.

ಶ್ರೀ ಪಿ.ಎನ್.ಜವರಪ್ಪಗೌಡರು:

ಮಂಡ್ಯಜಿಲ್ಲೆಯ ನಾಗಮಂಗಲದ ಪಾಲ ಅಗ್ರಹಾರದ ಗ್ರಾಮೀಣ ಪರಿಸರದಿಂದ ಬಂದ ಜವರಪ್ಪಗೌಡರು, ಬಾಲ್ಯ, ಯೌವನ ಕಾಲದಿಂದಲೂ ಹೋರಾಟದ ಬದುಕನ್ನು ಮೈಗೂಡಿಸಿ ಕೊಂಡವರು. ಕೃಷಿಮೂಲವಾದ ಕುಟುಂಬ, ಗ್ರಾಮಜೀವನದ ಏಳು-ಬೀಳುಗಳಿಂದ ಪರಿಪಕ್ವವಾದ ಜೀವನಾನುಭವ, ಎಲ್ಲರ ಬಗೆಗಿನ ಅಧ್ಯಯನ ಶೀಲಗುಣ; ಇವುಗಳಿಂದ ಲಭ್ಯವಾದ ಸತ್ವ .ಂದ ವಾಮನನಿಂದ ತ್ರಿವಿಕ್ರಮನಾಗಿ ಬೆಳೆದರು.

ಜವರಪ್ಪಗೌಡರು ಕಾಲೇಜು ಶಿಕ್ಷಣ ಪಡೆದ

ವರಲ್ಲ. ಆದರೆ, ಅವರ ಜೀವನಾನುಭವ ಯಾವ ವಿಶ್ವವಿದ್ಯಾನಿಲಯದ ಪದವಿ ಪಡೆದವರಿಗಿಂತ ಕಡಿಮೆಯಾದುದಲ್ಲ. ದಿನಸಿತ್ಯದ ಪಡಿಪಾಟಲಿನಿಂದ ಆರ್ಥಕ್ಕೆ ನಿಂತ ಅವರ ಶಿಕ್ಷಣ, ಜೀವನ ಶಾಲೆಯಲ್ಲಿ ಮುಂದುವರಿಯಿತು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಗೌಡರು, ಜೈಲುವಾಸ ಅನುಭವಿಸಿ, ಮುಂದೆ ರೈತ ಪರ ಚಳುವಳಿಗಳಲ್ಲಿ ಪಾನನಿರೋಧ ಸತ್ಯಾಗ್ರಹದಲ್ಲಿ ಧುಮುಕಿ ; ಆಗತಾನೆ ಆರಂಭವಾದ ವಯಸ್ಕರ ಶಿಕ್ಷಣ ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಕಾರ್ಯಕರ್ತರಾಗಿ (೧೯೪೧-೪೨) ದುಡಿದ ಅನುಭವವುಳ್ಳ ಟಿ.ಎನ್.ಜವರಪ್ಪಗೌಡರು ವಯಸ್ಕರ ಶಿಕ್ಷಣ ಸಮಿತಿ ಅಧ್ಯಕ್ಷರಾಗಿ (೧೯೮೦-೮೩) ಬಂದದ್ದು ಶಿಕ್ಷಣ, ಸಾಹಿತ್ಯ, ಸಂಸ್ಕೃತಿ ವಲಯಕ್ಕೆ ಶುಭೋದಯದ ಕಾಲವೆಂದೆ ಹೇಳಬೇಕು.

ಜವರಪ್ಪಗೌಡರು ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಅಧ್ಯಕ್ಷರಾಗಿದ್ದಾಗ ಅನೇಕ ರಚನಾತ್ಮಕ ಕಾರ್ಯಗಳು ನಡೆದಿವೆ. ಅವುಗಳಲ್ಲಿ ಕೆಲವನ್ನು ಪ್ರಾಸ್ತಾವಿಕವಾಗಿ ಗುರುತಿಸಬಹುದು. ವಯಸ್ಕರ ಶಿಕ್ಷಣ ಸಮಿತಿ ಆರ್ಥಿಕವಾಗಿ ತೊಂದರೆಯಲ್ಲಿದ್ದ ದಿನಗಳು. ಸರ್ಕಾರದ ಮಟ್ಟದಲ್ಲಿ ಹೋರಾಡಿ ೧೦ಲಕ್ಷವಿದ್ದ ಅನುದಾನವನ್ನು ೩೫ ಲಕ್ಷಕ್ಕೆ ತಂದರು. ಇದರಿಂದ ಸಮಿತಿಯ ಸಾಕ್ಷರತಾ ಕಾರ್ಯಕ್ರಮ, ಪುಸ್ತಕ ಭಂಡಾರದ ಚಟುವಟಿಕೆಗಳು ಚುರುಕುಗೊಂಡವು. ಜವರಪ್ಪಗೌಡರ ಕಾಲದಲ್ಲಿಸುಮಾರು ೨೬೦೦ ಪುಸ್ತಕ ಭಂಡಾರಗಳು ನವಚೈತನ್ಯ ಪಡೆದುವು. ಕೆಮ್ಮಣ್ಣುಗುಂಡಿ, ಚನ್ನರಾಯಪಟ್ಟಣ, ತೊಗರಿಘಟ್ಟಗಳಲ್ಲಿ ಕ್ಷೇತ್ರೀಯ ಗ್ರಂಥಭಂಡಾರಗಳನ್ನು ಆರಂಭಿಸಿದರು. ನಾಗಮಂಗಲದಲ್ಲಿ 'ಅಕ್ಷರ ಸೇನ' ಕಾರ್ಯಕ್ರಮ ಇವರ ಕಾಲದಲ್ಲಿ ಬಂತು.

ವಿದ್ಯಾಪೀಠಗಳಲ್ಲಿ ಹೊಸ ತರಬೇತಿ ಘಟಕಗಳನ್ನು ಆರಂಭಿಸುವುದರ ಮೂಲಕ ಗ್ರಾಮೀಣ ಯುವಕರು ಉದ್ಯೋಗ ತರಬೇತಿ ಪಡೆಯಲು ನೆರವಾದರು. ತೋಟಗಾರಿಕೆ, ಪಶುಪಾಲನೆಗೆ ಸಂಬಂಧಿಸಿದ ತರಬೇತಿ ವಿದ್ಯಾಪೀಠಗಳಲ್ಲಿ ದೊರೆಯಲು ಅಗತ್ಯ ಸೌಲಭ್ಯಗಳನ್ನು ಸರ್ಕಾರ, ಸಾರ್ವಜನಿಕರಿಂದ ದೊರಕಿಸಿಕೊಡಲು ಶ್ರಮಿಸಿದರು. ಕೆಂಗೇರಿಯಲ್ಲಿ ಪಶುಪಾಲನಾ ಘಟಕವನ್ನು ಸ್ಥಾಪಿಸಲು ಜವರಪ್ಪಗೌಡರು ಕಾರಣ ಕರ್ತರು.

೧೯೮೦ರಲ್ಲಿ ಭಾರತ ಸರ್ಕಾರ ವಯಸ್ಕರ ಶಿಕ್ಷಣ ಸಮಿತಿಗೆ ನೆಹರು ಸಾಕ್ಷರತಾ ಪ್ರಶಸ್ತಿ ನೀಡಿತು. ಆಗತಾನೆ ಅಧ್ಯಕ್ಷರಾಗಿ ಬಂದಿದ್ದ ಜವರಪ್ಪಗೌಡರುಸಮಿತಿಯ ಪರವಾಗಿ ಪ್ರಶಸ್ತಿ ಪಡೆದು, ಹಿಂದಿನ ಅಧ್ಯಕ್ಷರ ಹಾಗೂ ಸಮಿತಿ ಸಿಬ್ಬಂದಿಯವರ ಸೇವೆಯನ್ನು ನಮ್ರವಾಗಿ ಸ್ಮರಿಸಿದ್ದಾರೆ. ವಯಸ್ಕರ ಶಿಕ್ಷಣ ಸಮಿತಿಯೊಡನೆ ಕರುಳುಬಳ್ಳಿ ಸಂಬಂಧ ಬಿರಿಸಿ ಕೊಂಡ ಡಾ.ದೇಜಗೌ ಮುಂತಾದವರನ್ನು ಆ ಸಂದರ್ಭದಲ್ಲಿ ನೆನೆದಿದ್ದಾರೆ. ಪ್ರಶಸ್ತಿಯಿಂದ ಬಂದ ಹಣದಿಂದ ನೆಹರುರವರ ಹೆಸರಿನಲ್ಲಿ ಪಂಪಾ ವಿದ್ಯಾಪೀಠದಲ್ಲಿ ಒಂದು ಸ್ಮಾರಕ ಭವನ ನಿರ್ಮಿಸಲು ಕಾರಣ ಕರ್ತರಾದ ಗೌಡರು, ಕೆರೆಯ ನೀರನ್ನು ಕೆರೆಗೆ ಚೆಲ್ಲುವ ಸ್ಥಿತಪ್ರಜ್ಞರು.

ವಯಸ್ಕರ ಶಿಕ್ಷಣ ಸಮಿತಿ ನೌಕರರು ಕನಿಷ್ಠ ವೇತನದಲ್ಲಿ ಗರಿಷ್ಠ ಸೇವೆ ಸಲ್ಲಿಸುತ್ತಿದುದ್ದನ್ನು ಜವರಪ್ಪಗೌಡರು ತಿಳಿದವರಾಗಿದ್ದರು. ನೌಕರರನ್ನು ನಂಬಿದ ಕುಟುಂಬಗಳು ನೌಕರರು ನಿವೃತ್ತರಾದ ನಂತರ ಕಣ್ಣೀರು ಹಾಕಬಾರದು, ಅವರ ಮಕ್ಕಳ ಭವಿಷ್ಯ ಉತ್ತಮಗೊಳ್ಳಬೇಕು ಎನ್ನುವ

ಸಮುದ್ದೇಶದಿಂದ ವಿಶ್ರಾಂತಿ ವೇತನ, ತ್ರಿವಿಧ ಸೌಲಭ್ಯಗಳು ಕುಟುಂಬಕ್ಕೆ ದೊರಕುವಂತೆ ಮಾಡಿದ್ದಾರೆ. ನೌಕರರ ಸವಲತ್ತುಗಳನ್ನು ಉತ್ತಮ ಪಡಿಸುವ ಹಿನ್ನೆಲೆಯಲ್ಲಿ, ಸಾರ್ವಜನಿಕ ಜೀವನದ ಹಿತ ವನ್ನು ಜವರಪ್ಪಗೌಡರು ಕಡೆಗಣಿಸಿ ದವರಲ್ಲ.

ರಾಷ್ಟ್ರೀಯ ವೇದಿಕೆಗಳಲ್ಲಿ, ವಯಸ್ಕರ ಶಿಕ್ಷಣ ಸಮಿತಿಯನ್ನು ಗುರುತಿಸುವಂತೆ ಜವರಪ್ಪ ಗೌಡರು ಶ್ರಮಿಸಿದ್ದಾರೆ. ಗೌಡರು ಅಖಿಲ ಭಾರತ ವಯಸ್ಕರ ಶಿಕ್ಷಣ ಮಂಡಲಿಯ ಉಪಾಧ್ಯಕ್ಷರಾಗಿದ್ದವರು. ದಿನಾಂಕ ೨೫.೧೦.೭೫ ರಿಂದ ೨೭.೧೦.೭೫ ರವರೆಗೆ ಮಧ್ಯ ಪ್ರದೇಶದ ಜಬ್ಬಲ್‌ಪುರದಲ್ಲಿ ನಡೆದ ೨೮ನೇಯ ಅಖಿಲ ಭಾರತ ವಯಸ್ಕರ ಶಿಕ್ಷಣ ಸಮ್ಮೇಳನದಲ್ಲಿ ಸಮಿತಿಯ ಸಾಧನೆ ಸಿದ್ಧಿಗಳನ್ನು ಪ್ರತಿಬಿಂಬಿಸಿದ್ದಾರೆ. ಆ ಸಂದರ್ಭದಲ್ಲಿ ಜವರಪ್ಪಗೌಡರು ಸಮಿತಿಯ ಅಧ್ಯಕ್ಷರಾಗಿರಲಿಲ್ಲ. ಆದರೆ, ಅವರ ಸೇವೆಯನ್ನು ಗುರುತಿಸಿದ ಅಂದಿನ ಅಧ್ಯಕ್ಷರಾದ ಶ್ರೀ ಡಿ. ಕರಿಯಪ್ಪಗೌಡರು ಮೇಲ್ಕಂಡ ಕಾರ್ಯಕ್ರಮಕ್ಕೆ ಬಳಸಿಕೊಂಡದ್ದು ಜವರಪ್ಪ ಗೌಡರ ನಿಸ್ವಾರ್ಥ ಸೇವೆಗೆ ಹಿಡಿದ ಕನ್ನಡಿಯಾಗಿದೆ.

ಸಮಿತಿಯ ಅಚ್ಚುಕೂಟಕ್ಕೆ ೧೯೭೩ರಲ್ಲಿ ರಾಜ್ಯ ಪ್ರಶಸ್ತಿ ದೊರಕಿತು. ಇಲ್ಲಿ ಜವರಪ್ಪ ಗೌಡರ ಸಾಧನೆಯನ್ನು ಕಾಣಬಹುದಾಗಿದೆ. ನವಸಾಕ್ಷರರ ಸಾಹಿತ್ಯ ಕಮ್ಮಟ, ಜಾನಪದ ಕಾರ್ಯಕ್ರಮ, ಸಾಹಿತ್ಯಗೋಷ್ಠಿ, ಹಿರಿಯರ ಸತ್ಸಂಗಗಳಿಗೆ ಜವರಪ್ಪಗೌಡರು ಹೆಚ್ಚಿನ ಒಲವು ತೋರಿಸುತ್ತಿದ್ದರು.

ಪತ್ರಿಕೆ, ಪುಸ್ತಕೋದ್ಯಮಗಳ ಜವರಪ್ಪ ಗೌಡರ ನಂಟು ಹಳೆಯದು. 'ವಿಶ್ವಾಮಿತ್ರ' ಪತ್ರಿಕೆಯ ಸಂಪಾದಕರಾಗಿ ಸಾಕಷ್ಟು ಕೈಸುಟ್ಟು ಕೊಂಡಿದ್ದಾರೆ. ಇವರ ಸಾಹಿತ್ಯ ಬಳಗವು ದೊಡ್ಡದು. ಕುವೆಂಪುರವರ ಅಸೀಮ ಭಕ್ತರಾದ ಜವರಪ್ಪಗೌಡರ ನಾಲಿಗೆಯಲ್ಲಿ ರಸಋಷಿಯ ಕೃತಿಗಳು ಹರಿದಾಡುತ್ತಿದ್ದುದನ್ನು ಅವರ ಗೆಳೆಯರು ಸ್ಮರಿಸಿದ್ದಾರೆ. ಪ್ರೊ.ದೇಜಗೌ, ಕಾರಂತ, ಅ.ನ.ಕೃ., ಹಾ.ಮಾ.ನಾ, ಸಿಪಿಕೆ ಮುಂತಾದ ಸಾಹಿತ್ಯ ದಿಗ್ಗಜಗಳೊಡನೆ ಅವರ ಒಡನಾಟವಿತ್ತು. ಡಾ.ಎಂ.ಎಚ್.ಮರೀಗೌಡ, ರಾಮೇಗೌಡ ಮುಂತಾದ ತಜ್ಞರ ಸಹಾಯ ಸಹಕಾರಗಳು ವಯಸ್ಕರ ಶಿಕ್ಷಣ ಸಮಿತಿಗೆ ದೊರಕುವಂತೆ ಜವರಪ್ಪಗೌಡರು ಶ್ರಮಿಸಿದ್ದಾರೆ.

ವಯಸ್ಕರ ಶಿಕ್ಷಣ ಸಮಿತಿಯ 'ಬೆಳಕು' ಮತ್ತು 'ಪುಸ್ತಕ ಪ್ರಪಂಚ' ಪತ್ರಿಕೆಗಳ ಗುಣಮಟ್ಟ ಕಾಯ್ದುಕೊಳ್ಳುವಲ್ಲಿ ಜವರಪ್ಪಗೌಡರ ನೆರವನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬೇಕಾಗಿದೆ.

ವಿನೋದ ಪ್ರವೃತ್ತಿ, ಸರಸ-ಸಜ್ಜನಿಕೆಗೆ ಜವರಪ್ಪಗೌಡರು ಹೆಸರಾದವರು. ಸಂಘಟನ ಕಾರರಿಗೆ, ಕರ್ತೃತ್ವ ಶಾಲಿಗೆ ಇರಬೇಕಾದ ಅರ್ಹತೆಗಳು. ಈ ಗುಣ ಸಾರ್ವಜನಿಕ ಜೀವನ ದಲ್ಲಾಗಲಿ, ಖಾಸಗಿ ಜೀವನದ ಲ್ಲಾಗಲಿ ಗೌಡರಲ್ಲಿ ಎದ್ದು ಕಾಣುತ್ತಿತ್ತು.

ಪಿ.ಎಸ್.ಜವರಪ್ಪಗೌಡರ ಸಾರ್ವಜನಿಕ ಸೇವೆಯನ್ನು ಗುರುತಿಸಿ ಅವರ ಸ್ನೇಹಿತರು, ಅಭಿಮಾನಿಗಳು ದಿನಾಂಕ ೨.೮.೮೯ರಂದು ಮಂಡ್ಯದಲ್ಲಿ ಅದ್ದೂರಿಯಿಂದ ಸನ್ಮಾನಿಸಿದ್ದಾರೆ. ಆ ಸಮಾರಂಭದ ಅಧ್ಯಕ್ಷತೆಯನ್ನು ದಿ|| ಎಸ್.ನಿಜಲಿಂಗಪ್ಪನವರು ವಹಿಸಿ ಜವರಪ್ಪ ಗೌಡರನ್ನು ಹರಸಿದ್ದಾರೆ. ಜವರಪ್ಪಗೌಡರನ್ನು ಕುರಿತ ಅಭಿನಂದನ ಗ್ರಂಥ 'ಸಾಹಸಯಾತ್ರಿ' ಯನ್ನು ಅರ್ಪಿಸಿದ್ದಾರೆ. ಇದಕ್ಕಿಂತ ದೊಡ್ಡ ಅಭಿಮಾನಬೇಕೆ?

ಶ್ರೀ ಡಿ.ಕರಿಯಪ್ಪಗೌಡರು :

ಹಿರಿಯ ರಾಜಕಾರಣಿ, ಖ್ಯಾತ ನ್ಯಾಯವಾದಿ ಡಿ.ಕರಿಯಪ್ಪಗೌಡರು ವಯಸ್ಕರ ಶಿಕ್ಷಣ ಸಮಿತಿಯಲ್ಲಿ ೧೯೭೩-೭೮ರ ಅವಧಿಯಲ್ಲಿ ಅಧ್ಯಕ್ಷರಾಗಿದ್ದರು. ಗ್ರಾಮೀಣ ಹಿನ್ನೆಲೆಯಿಂದ ಬಂದ ಕರಿಯಪ್ಪಗೌಡರು ಹೆಚ್ಚಿನ ಆಶೋತ್ತರಗಳನ್ನು ಇಟ್ಟುಕೊಂಡಿದ್ದರು. ಸಮಿತಿಯ ವಿದ್ಯಾಪೀಠಗಳ ಅಭಿವೃದ್ಧಿಗೆ, ಸಾಕ್ಷರತಾ ಕಾರ್ಯಕ್ರಮಕ್ಕೆ ಪೂರಕವಾದ ಸಾಹಿತ್ಯ ಕಮ್ಮಟವನ್ನು ೧೯೭೬ರಲ್ಲಿ ಶಿವಾರಗುಡ್ಡದಲ್ಲಿ ವ್ಯವಸ್ಥೆ ಮಾಡಿದ್ದರು. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ನೆನಪಿಗಾಗಿ ನಂಜನಗೂಡು, ಕೆಂಗೇರಿ ವಿದ್ಯಾಪೀಠಗಳನ್ನು ಮಹಿಳಾ ವಿದ್ಯಾಪೀಠವಾಗಿ ಪರಿವರ್ತಿಸಲು ಶ್ರೀಮಾನ್ ಗೌಡರು ಶ್ರಮಿಸಿದ್ದಾರೆ. ಡೆನ್ಮಾರ್ಕ್ ದೇಶದ ಆಹ್ವಾನವನ್ನು ಮನ್ನಿಸಿ ಆ ದೇಶಕ್ಕೆ ಹೋಗಿ ಬಂದರು. ಅಲ್ಲಿನ ಉತ್ತಮಾಂಶಗಳ ಕಸಿ-ಸಸಿಯನ್ನು ವಿದ್ಯಾಪೀಠಗಳಲ್ಲಿ ಅಳವಡಿಸಿಕೊಳ್ಳಲು ಕರಿಯಪ್ಪಗೌಡರು ದುಡಿದಿದ್ದಾರೆ.

ಶ್ರೀ ಟಿ.ವಿ.ಶ್ರೀನಿವಾಸರಾವ್ ರವರು :

ವಿದ್ಯಾರ್ಥಿ ಜೀವನದಿಂದಲೂ ಸ್ವಾತಂತ್ರ್ಯ ಚಳುವಳಿಯಲ್ಲಿ ತೊಡಗಿಸಿಕೊಂಡ ಖ್ಯಾತ ನ್ಯಾಯವಾದಿ ಶ್ರೀನಿವಾಸರಾಯರು ವಯಸ್ಕರ ಶಿಕ್ಷಣ ಸಮಿತಿಯಲ್ಲಿ ೧೯೭೮-೮೦ ರವರೆಗೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮ ರಾಜ್ಯದಲ್ಲಿ ವ್ಯಾಪಕವಾಗಿ ಹರಡುವ ಸಂದರ್ಭದಲ್ಲಿ ಸಮಿತಿವತಿಯಿಂದ ಯೋಗ್ಯ ಭೂಮಿಕೆಯನ್ನು ರೂಪಿಸಿದವರು ಟಿ.ವಿ.ಯವರು. ನೌಕರರ ಭವಿಷ್ಯ ಸರಿಯಾಗಿ ಇಲ್ಲದಿದ್ದರೆ ಕಾರ್ಯಕ್ರಮ ರೂಪಿತವಾಗುವುದಿಲ್ಲ ಎಂಬುದನ್ನು ಅರಿತರಾಯರು, ಬಹುದಿನದಿಂದ ನನೆಗುದಿಗೆ ಬಿದ್ದಿದ್ದ ಹಂಗಾಮಿ ನೌಕರರ ಖಾಯಂಗೊಳಿಸುವಲ್ಲಿ ಶ್ರಮಿಸಿದವರು. ಅವರ ಈ ಸೇವೆಯನ್ನು ಸಮಿತಿಯ ನೌಕರರು ಕೃತಜ್ಞತೆಯಿಂದ ಇಂದಿಗೂ ಸ್ಮರಿಸುತ್ತಿದ್ದಾರೆ.

ಶ್ರೀ ಡಿ.ಎ.ಚಿಣ್ಣಪ್ಪನವರು :

ಕರ್ನಾಟಕದ ಕಾಶ್ಮೀರವೆಂದು ಕರೆಯಲಾಗುತ್ತಿರುವ ಕೊಡಗಿನ ಪರಿಸರದಿಂದ ಡಿ.ಎ.ಚಿಣ್ಣಪ್ಪನವರು ವಕೀಲರಾಗಿ, ಸಮಾಜ ಸೇವಕರ್ತರಾಗಿ, ರಾಜಕಾರಣಿಯಾಗಿ ಹೆಸರಾದವರು. ಸಮಿತಿಯಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಅದರ ಒಳ-ಹೊರಗನ್ನು ಬಲ್ಲ ಡಿ.ಎ.ಚಿಣ್ಣಪ್ಪನವರು ೧೯೮೧ರಿಂದ ೮೨ ರವರೆಗೆ ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರ ಕಾಲದಲ್ಲಿ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಸಮಿತಿಯು ಸಾಕ್ಷರತಾ ಕಾರ್ಯಕ್ರಮವನ್ನು ವ್ಯಾಪಕಗೊಳಿಸಲು ಶ್ರಮಿಸಿದ್ದಾರೆ. ರಾಜ್ಯ ಯೋಜನೆ, ವಿಶೇಷ ಘಟಕ ಯೋಜನೆಗಳ ಮೂಲಕ ವಯಸ್ಕರ ಶಿಕ್ಷಣ ಸಮಿತಿ ಸಾಕ್ಷರತಾ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿತು. ಶ್ರೀ ಸಿ.ಹನುಮೇಗೌಡ, ಶ್ರೀ ಡಿ.ಪಿ.ಗೋವಿಂದ ರಾಜ್‌ರಂಥ ಆಡಳಿತಾಧಿಕಾರಿಗಳು ಇವರ ಕಾಲದಲ್ಲಿ ಸಮಿತಿಯ ಚಟುವಟಿಕೆಗಳನ್ನು ಚುರುಕುಗೊಳಿಸಲು ಶ್ರೀ ಡಿ.ಎ. ಚಿಣ್ಣಪ್ಪನವರೊಡನೆ ಸಹಕರಿಸಿದ್ದಾರೆ. ಕಾರ್ಯಕಾರಿ ಸಮಿತಿಯ ಸದಸ್ಯರು ಸಾರ್ವಜನಿಕರ ಸಹಾಯ-ಸಹಕಾರಗಳಿಂದ ವಯಸ್ಕರ ಶಿಕ್ಷಣ ಸಮಿತಿಯ ಚುಟುವಟಿಕೆಗಳು ತ್ವರಿತಗೊಂಡವು. ವಯಸ್ಕರ ಶಿಕ್ಷಣ ಸಮಿತಿಯಲ್ಲಿನ ಕಾರ್ಯಾನುಭವ ಮುಂದೆ ಅವರು ರಾಜ್ಯ ಸಂಪುಟದಲ್ಲಿ ಗಣಿ ಮತ್ತು ಭೂ ವಿಜ್ಞಾನ ಖಾತೆಯಲ್ಲಿ

ಮಂತ್ರಿಯಾಗಲು ತಳಹಾದಿಯಾಯಿತು. ಎಂದರೆ ಅತಿಶಯೋಕ್ತಿಯಲ್ಲ.

ಶ್ರೀ ವಾಸುದೇವರವರು :

ವಯಸ್ಕರ ಶಿಕ್ಷಣ ಸಮಿತಿಯಲ್ಲಿ ೧೯೮೪ರಿಂದ ೮೫ರವರೆಗೆ ಅಧ್ಯಕ್ಷರಾಗಿದ್ದ ಶ್ರೀ ವಾಸುದೇವರವರು, ಹಿಂದುಳಿದ ಜನಾಂಗದಿಂದ ಬಂದವರು. ಜನಪರ ಚಳುವಳಿಗಳಲ್ಲಿ ಪಾಲ್ಗೊಂಡು, ಶಾಸಕರಾಗಿ, ಮುಂದೆ ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿ ದುಡಿದಿದ್ದಾರೆ. ಶ್ರೀ ವಾಸುದೇವರು ಅಧ್ಯಕ್ಷರಾಗಿದ್ದುದು ಒಂದು ವರ್ಷ, ಆದರೂ ಇದ್ದಷ್ಟು ದಿನಗಳಲ್ಲಿ ಅವರು ಸಮಿತಿಯ ಸಾಕ್ಷರತಾ ಕಾರ್ಯಕ್ರಮ, ವಿದ್ಯಾಪೀಠಗಳ ಅಭಿವೃದ್ಧಿಗೆ ಒಂದಲ್ಲ ಒಂದು ವಿಧದಲ್ಲಿ ಶ್ರಮಿಸಿದ್ದಾರೆ.

ಶ್ರೀ ದೇವನೂರು ಶಿವಮಲ್ಲುರವರು :

ಗ್ರಾಮೀಣ ಹಿನ್ನೆಲೆಯಿಂದ ಬಂದ ಶ್ರೀ ದೇವನೂರು ಶಿವಮಲ್ಲುರವರು , ವಿದ್ಯಾರ್ಥಿ ಜೀವನದಿಂದಲೂ ಸಾಮಾಜಿಕ ಕಳಕಳಿಯುಳ್ಳವರು. ಕಾಲೇಜು ಅಧ್ಯಾಪಕರಾಗಿ, ಯುವ ರಾಜಕಾರಣಿಯಾಗಿ ಎಲ್ಲ ವರ್ಗದ ಜನರ ಗೌರವ ಪಾತ್ರರಾದವರು. ಬದಲಾಗುತ್ತಿರುವ ಇಂದಿನ ಸ್ಥಿತಿಗತಿಗಳಿಗೆ ತಕ್ಕಹಾಗೆ ವಯಸ್ಕರ ಶಿಕ್ಷಣ ಸಮಿತಿಯ ಕಾಯಕಲ್ಪವಾಗಬೇಕು ಎಂದು ಶ್ರೀಯುತರು ಸಮಿತಿಯಲ್ಲಿ ಅಧ್ಯಕ್ಷರಾಗಿ ೧೯೮೬-೧೯೮೯ರವರೆಗೆ ದುಡಿದಿದ್ದಾರೆ. ಪಂಚಮ ಪತ್ರಿಕೆಯ ಮೂಲಕ ದುಡಿಯುವರ ಧನಿ ಯಾಗಿದ್ದವರು.

ಶಿವಮಲ್ಲುರವರ ಕಾಲದಲ್ಲಿ ಡೆನ್ಮಾರ್ಕ್ ದೇಶದ ಸಹಯೋಗದಿಂದ ಸಮಿತಿಯ ಕಾರ್ಯಕರ್ತರಿಗೆ ತರಬೇತಿ ನೀಡುವ ಏರ್ಪಾಡಾಯ್ತು.'ಪುಸ್ತಕ ಪ್ರಪಂಚ' ಪತ್ರಿಕೆಯ ವಿನ್ಯಾಸ ಬದಲಾಯಿಸಿ ಅದರಲ್ಲಿ ಉತ್ಸಾಹಿ, ವಿಚಾರವಾದಿ ಯುವಲೇಖಕರು ಪತ್ರಿಕೆಯ ಮೂಲಕ ಗುರುತಿಸಿಕೊಳ್ಳಲು ಪರೋಕ್ಷವಾಗಿ ಶಿವಮಲ್ಲು ದುಡಿದಿದ್ದಾರೆ.

ಐದು ದಶಕಗಳು ಮೀರಿ ಸೇವೆ ಸಲ್ಲಿಸಿದ ವಯಸ್ಕರ ಶಿಕ್ಷಣ ಸಮಿತಿಗೆ ಸ್ವಂತ ಸೂರಿನ ಕೊರತೆಯಿತ್ತು. ಹಿಂದಿನ ಅಧ್ಯಕ್ಷರುಗಳು ೪೦೦ x೪೦೦ ಅಡಿ ವಿಸ್ತೀರ್ಣದ ನಿವೇಶನಕ್ಕೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಪ್ರಸ್ತಾವನೆ ಸಲ್ಲಿಸಿ, ತಾಂತ್ರಿಕ ಕಾರಣಗಳಿಂದ ನಿವೇಶನದ ಒಡೆತನ ಸಮಿತಿಗೆ ದೊರುಕುವುದು ವಿಳಂಬವಾಗಿತ್ತು. ಶ್ರೀ ದೇವನೂರು ಶಿವಮಲ್ಲುರವರು, ನಿವೇಶನ ಸಮಿತಿಗೆ ೯೯ ವರ್ಷ ಲೀಸಿನಲ್ಲಿ ದೊರಕಲು ಕಾರಣಕರ್ತರಾದರು. ವಿಶ್ವವಿದ್ಯಾನಿಲಯದ ಆವರಣದಲ್ಲಿ ಅದರಲ್ಲೂ ಗಂಗೋತ್ರಿಯ ಪರಿಸರದಲ್ಲಿ ಸಮಿತಿಗೆ ಸೂರು ದೊರಕಿಸಿಕೊಳ್ಳುವುದು ಸಾಮಾನ್ಯ ಕಾರ್ಯವಲ್ಲ. ಈ ಹಿನ್ನೆಲೆಯಲ್ಲಿ ಶ್ರೀ ದೇವನೂರು ಶಿವಮಲ್ಲುರವರಿಗೆ ಉಪಕೃತರಾಗಬೇಕು.

ಉಪಸಂಹಾರ:

ಆಚಾರ್ಯ ಬಿಎಂಶ್ರೀ ರವರಿಂದ ಶ್ರೀ ಕೋಣಂದೂರು ಲಿಂಗಪ್ಪ(೯೭-೯೯) ನವರು ಸಮಿತಿಯ ಅಧ್ಯಕ್ಷರಾಗಿರುವವರೆಗೆ, ಸರ್ಕಾರದ ಅನೇಕ ಅಧಿಕಾರಿಗಳು ಅಧ್ಯಕ್ಷರಾಗಿ ದುಡಿದಿದ್ದಾರೆ. ಅವರಲ್ಲಿ ಸಾಕಷ್ಟು ಮಂದಿ ಐಎಎಸ್ ಅಧಿಕಾರಿಗಳು, ಶಿಕ್ಷಣ ಇಲಾಖೆಯಲ್ಲಿ ದುಡಿದು ಅನುಭವಗೊಳಿಸಿ ದವರು. ಇವರುಗಳು ಪ್ರಭಾರ ಅಧ್ಯಕ್ಷರಾಗಿ ಸಮಿತಿಯ ಅಭಿವೃದ್ಧಿಗೆ ಕಾರಣಕರ್ತರಾಗಿದ್ದಾರೆ. ಶ್ರೀ ಸಿ.ಬಿ.ಡಿಮೆಲೋ (೭೮), ಶ್ರೀ ಬಿ.ಕೆ.ಭಟ್ಟಾಚಾರ್ಯ(೮೦) ಶ್ರೀ ಬಿ.ಆರ್.ಪ್ರಭಾಕರ್ (೮೦-೮೧) ಶ್ರೀ ಎಂ.ಬಿ. ಪ್ರಕಾಶ್(೮೧-೮೧)

ಶ್ರೀಮತಿ ಅಹಲ್ಯ ಅಚ್ಚಯ್ಯ (೮೨) ಶ್ರೀ ಪಿ.ಜಿ. ಪುರಾಣಿಕ (೮೨-೮೪) ಶ್ರೀ ಸಿ.ಮುನಿಸ್ವಾಮಿ (೮೪),(೮೫-೮೯) ಶ್ರೀ ಸಿ.ಕೆ.ನೀಲಕಂಠ ರಾಜು (೮೯), ಶ್ರೀ ಚಿರಂಜೀವಿಸಿಂಗ್ (೮೯), ಶ್ರೀ ಪಿ.ಬಿ. ಮಹಿಷಿ (೮೯) ಶ್ರೀ ಕೆ. ಎಲ್.ನೇಗಿ (೮೯-೯೦),

ಎಲ್.ಶಾಂತಕುಮಾರಿ (೯೦- ೯೨), ಶ್ರೀ ಸಿದ್ದಯ್ಯ (೯೨-೯೩), ಶ್ರೀ ಪಿ.ಎಸ್.ವಿ.ರಾವ್ (೯೩-೯೪), ಶ್ರೀ ಟಿ.ಎಂ. ವಿಜಯಭಾಸ್ಕರ್ (೯೪), ಶ್ರೀ ಬಿ.ಪಿ. ತಿಪ್ಪಯ್ಯ, (೯೩-೯೬), ಶ್ರೀ ಪಿ.ಸುಬ್ಬರಾವ್ (೯೬-೯೭), ಶ್ರೀ ಯು.ಪ್ರಭು (೯೭) ಶ್ರೀ ಬಿ.ಟಿ.ಪೆಮ್ಮಯ್ಯ (೯೭).

ಹಾಲಿ ಅಧ್ಯಕ್ಷರಾದ ಮಾನ್ಯ ಶ್ರೀ ಜಿ.ಕೆ. ಲೋಕರೆಯವರು ದಿನಾಂಕ ೨೩.೧೧.೯೯ ರಿಂದ ಪ್ರಭಾರ ಅಧ್ಯಕ್ಷರಾಗಿ ಸಮಿತಿಯ ಪ್ರತಿ ಯೊಂದು ಕಾರ್ಯಚಟುವಟಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ . ಅಧಿಕಾರಿಗಳಾಗಿ ಸಮಿತಿಯ ಅಧ್ಯಕ್ಷರಾದ ಬಹಳಷ್ಟು ಮಹನೀಯರಿಗೆ ಹೆಚ್ಚಿನ ಕಾರ್ಯ ಭಾರ ಆದರೂ, ಆ ಎಲ್ಲ ಒತ್ತಡಗಳಿಂದ ಪ್ರತ್ಯೇಕವಾಗಿ ನಿಂತು ವಯಸ್ಕರ ಶಿಕ್ಷಣ ಸಮಿತಿಯ ಶ್ರೇಯೋಭಿವೃದ್ಧಿಗೆ ಪ್ರತ್ಯಕ್ಷ ಪರೋಕ್ಷವಾಗಿ ದುಡಿದಿದ್ದಾರೆ.



ವಿಕಾಸವೇ ಬದುಕು. ಸಂಕೋಚವೇ ಮರಣ, ಪ್ರೇಮವೆಲ್ಲಾ ವಿಕಾಸ.
ಸ್ವಾರ್ಥವೆಲ್ಲ ಸಂಕೋಚ. ಆದ್ದರಿಂದ ಪ್ರೇಮವೇ ಬದುಕಿನ ಧರ್ಮ.
-ಸ್ವಾಮಿವಿವೇಕಾನಂದ

ಪುಸ್ತಕ ಪ್ರಪಂಚ ಮತ್ತು ಪ್ರತಿಭಾ ಶೋಧನೆ

ಜಿ.ಟಿ.ನಾರಾಯಣರಾವ್
೮ ಅತ್ರಿ, ಕಾಮಾಕ್ಷಿ ಆಸ್ಪತ್ರೆ ರಸ್ತೆ
ಸರಸ್ವತೀಪುರ
ಮೈಸೂರು ೫೭೦ ೦೦೯

ನಾನು ಕಾಲೇಜ್ ವಿದ್ಯಾರ್ಥಿ ಆಗಿದ್ದಾಗ (೧೯೪೦ರ ದಶಕ) ಮಾಸ್ತಿಯವರು ನನ್ನ ಹಲವಾರು ಕತೆಗಳನ್ನೂ ವೈಚಾರಿಕ ಲೇಖನಗಳನ್ನೂ ''ಜೀವನ'' ಮಾಸಪತ್ರಿಕೆಯಲ್ಲಿ ಪ್ರಕಟಿಸಿ ನನಗೆ ಬೌದ್ಧಿಕ ಕುಲೀನರ ಪಾವನ ಏಕಾಂತತೆಗೆ ಪ್ರವೇಶ ಒದಗಿಸಿದ್ದರು. ಮುಂದೆ ಕಾಲೇಜ್ ಉಪನ್ಯಾಸಕನಾದ ತರುಣದಲ್ಲಿ ನಾನು ಬರೆದ ಜನಪ್ರಿಯ ಕನ್ನಡ ವಿಜ್ಞಾನ ಲೇಖನವನ್ನು ಪಾ.ವೆಂ.ಆಚಾರ್ಯರು ''ಕರ್ಮವೀರ''ದಲ್ಲಿ ಪ್ರಸಿದ್ಧಿಸಿದರು ಮಾತ್ರವಲ್ಲ, ಶೈಲಿಯಲ್ಲಿಯ ನನ್ನ ಪ್ರಯೋಗವನ್ನು ಮೆಚ್ಚಿ ಆದರಲ್ಲೇ ಮುನ್ನಡೆಯಲು ಪ್ರೋತ್ಸಾಹಿಸಿದರು ಕೂಡ. ಅಂದಿನ (೧೯೪೦-೫೦ ದಶಕಗಳು) ಖ್ಯಾತ ಇಂಗ್ಲಿಷ್ ಜನಪ್ರಿಯ ವಿಜ್ಞಾನ ಗ್ರಂಥಕರ್ತೃಗಳಾಗಿದ್ದ ಜೇಮ್ಸ್ ಜೀನ್ಸ್ ಮತ್ತು ಜಾರ್ಜ್ ಗ್ಯಾಮೊ ಇವರುಗಳ ಶೈಲಿಯಿಂದ ನಾನು ಗಾಢ ಪ್ರಭಾವಿತನಾಗಿದ್ದೆ.

ಅನೇಕ ವರ್ಷಗಳ ತರುವಾಯ ನನಗೆ ಪಾವೆಂ ಮತ್ತು ಮಾಸ್ತಿಯವರ ನಿಕಟ ಪರಿಚಯ ಮತ್ತು ಸಾಹಚರ್ಯ ಲಭಿಸಿದುವು. ಆಗ ನಾನರಿತೆ ಅವರ ಬಹುವರ್ಣಮಯ ಜೀವನಗಳ ಆಧಾರಸ್ಫುತ್ರಿ, ''ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆ''ಯುವ ಔದಾರ್ಯ.'' ಆತ್ಮೀಯ ಸಂವಾದಗಳಲ್ಲಿ ಉಭಯರೂ ನುಡಿದರು: ''ನಮ್ಮ ಹಿರಿಯರು ನಮ್ಮನ್ನು ಕೈಹಿಡಿದು ನಡೆಸಿದರು. ಅಕೃತ್ರಿಮ ಆಸಕ್ತಿ ಮತ್ತು ಪರಿಶುದ್ಧ ಪ್ರೇಮ ಮಾತ್ರ ಅವರ ಪ್ರೇರಕ ಶಕ್ತಿ. ಅವರ ನಿರೀಕ್ಷೆ ನಾವು ಈ ಸತ್ಪರಂಪರೆಯನ್ನು ಮುಂದುವರಿಸಬೇಕು ಎಂದು ಮಾತ್ರ''

ಮುಂದೆ ೧೯೬೮ರಲ್ಲಿ, ಅಂದು ನನಗೆ ತೀರ ಅಪರಿಚಿತರಾಗಿದ್ದ, ದೇಜಗೌ ಅವರು ನನ್ನ ಕಾಲೇಜ್ ಕೊಠಡಿಗೆ (ಬೆಂಗಳೂರು) ಬಂದು, ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯು ಹೊಸತಾಗಿ ಕೈಗೆತ್ತಿಕೊಂಡಿರುವ ಕನ್ನಡ ವಿಶ್ವಕೋಶ ಯೋಜನೆಗೆ ವಿಜ್ಞಾನ ಸಂಪಾದಕನಾಗಿ ಬರಬೇಕೆಂದು ಮುಕ್ತ ಆಹ್ವಾನ ನೀಡಿದಾಗ, ಅವರಲ್ಲಿ ನಾನು ಅದೇ ಪಾವೆಂ-ಮಾಸ್ತಿ ಔದಾರ್ಯ ಕಂಡೆ: ''ಪರಗುಣ ಪರಮಾಣುವುಮಂ ಗಿರಿಗೈದುರ್ಬುವ'' ಸಹಜ ಸೌಜನ್ಯ.

''ಕನ್ನಡದ ಕೆಲಸಕ್ಕೆ ಪ್ರತಿಯೊಬ್ಬ ಲೇಖಕನೂ ಬದ್ಧಕಂಕಣನಾಗಬೇಕು, ಇತರರನ್ನು ಅರಸಿ ಸಿದ್ಧಲೇಖಕರನ್ನಾಗಿಸಬೇಕು, ಈ ಜ್ಞಾನ ದಾಸೋಹ ನಿರಂತರವಾಗಿ ನಡೆಯುತ್ತಿರಬೇಕು,'' ಎಂದು ಕನ್ನಡ ವಿಶ್ವಕೋಶದ ಪ್ರಧಾನ ಸಂಪಾದಕರಾಗಿ ದೇಜಗೌ ಅವರು ನಮಗೆ ದೀಕ್ಷೆ ನೀಡಿದಾಗ (೧೯೬೯) ಸಹಜವಾಗಿ ನಾನು ಭಾವಪರವಶನಾದೆ, ಉದ್ದೀಪಿತನಾದೆ.

ಕನ್ನಡ ವಿಶ್ವಕೋಶಕ್ಕೆ ಸಮರ್ಪಕವಾಗಿ ವಿಜ್ಞಾನ ಲೇಖನಗಳನ್ನು ಬರೆಯಬಲ್ಲ ಸಮರ್ಥರನ್ನು ಅನ್ವೇಷಿಸುವುದು ನನಗೆ ವೃತ್ತಿನಿಮಿತ್ತ ಅನಿವಾರ್ಯ ಆವಶ್ಯಕತೆಯಾಗಿತ್ತು. ವಿಷಯಪರಿಣತರಾಗಿದ್ದರೂ ಕನ್ನಡದಲ್ಲಿ ಅಭಿವ್ಯಕ್ತಿಸಲು ಕಷ್ಟವಾಗುತ್ತಿದ್ದವರಿಗೆ, ''ನಿಮಗೆ ತೋಚಿದಂತೆ ಬರೆದು ಕೊಡಿ. ಅದನ್ನು ಶಿಷ್ಟ ಕನ್ನಡಕ್ಕೆ ರೂಪ-ಪರಿವರ್ತಿಸಿ, ನಿಮಗೆ ತೋರಿಸಿ ಒಪ್ಪಿಗೆ ಪಡೆದು, ನಿಮ್ಮ ಹೆಸರಿನಲ್ಲೇ ಮುದ್ರಿಸುವುದು ನನ್ನ ಹೊಣೆ,'' ಎಂದು ಧೈರ್ಯ ತುಂಬಿದ್ದಾ

ಯಿತು. ಇಂಗ್ಲಿಷಿನಲ್ಲೇ ಲೇಖನಗಳನ್ನು ಬರೆಯಿಸಿ ಕನ್ನಡಕ್ಕೆ ಅನುವಾದಿಸಿದ್ದೂ ಇತ್ತು. ಈ ನಿರಂತರ ಜ್ಞಾನಯಜ್ಞದ ಫಲಶ್ರುತಿ : ಪ್ರತಿಭಾಶೋಧನೆ, ಪೋಷಣೆ ಮತ್ತು ಉತ್ತೇಜನೆ ಸದಾ ನಡೆಯುತ್ತಿರಬೇಕಾದ ಕೈಂಕರ್ಯ ಎಂಬ ಅರಿವು. ಇಲ್ಲಿ ನನ್ನ ಪಾತ್ರ ರಾಸಾಯನಿಕ ಕ್ರಿಯೆಗಳನ್ನು ಚುರುಕುಗೊಳಿಸಿ ತಾನು ಅಬಾಧಿತವಾಗಿ ಉಳಿಯುವ ವೇಗವರ್ಧಕದ್ದು (catalyst).

ದೇಜಗೌ ಅವರು ''ಪುಸ್ತಕ ಪ್ರಪಂಚ''ದ ಪ್ರಧಾನ ಸಂಪಾದಕರೂ ಹೌದು : ಕನ್ನಡದ ಕೆಲಸದಲ್ಲಿ ಅವರಿಗೆ ಎಲ್ಲವೂ—ವೃತ್ತಿ, ಪ್ರವೃತ್ತಿ, ಗೌರವಸ್ಥಾನ ಇತ್ಯಾದಿ_ ಒಂದೇ, ದುಡಿಮೆಗೆ ವಿವಿಧ ಅವಕಾಶಗಳು ಮಾತ್ರ. ನಾನು ''ಪುಸ್ತಕ ಪ್ರಪಂಚ''ದ ಗೌರವ ಸಂಪಾದಕ ಮಂಡಳಿಯ ಒಬ್ಬ ಸದಸ್ಯನಾಗಿ ಸೇರಬೇಕೆಂದು ಅವರು ಅಪೇಕ್ಷಿಸಿದರು. ಅದು ನನಗೆ ಆದೇಶ! ಅಸ್ತು ಎಂದೆ(೧೯೭೯). ಇಲ್ಲಿ ನಮ್ಮ ಹೊಣೆ : ಈ ಪತ್ರಿಕೆಗೆ ಬರುವ ಲೇಖನಗಳನ್ನು ಓದಿ, ಸಂಪಾದಿಸಿ, ಮುದ್ರಣಕ್ಕೆ ಶಿಫಾರಸು ಮಾಡುವುದು, ಮತ್ತು ಇದರ ದನಿ, ಧೋರಣೆ ಕುರಿತಂತೆ ಸಲಹೆ ನೀಡುವುದು.

ಇದೇನೂ ಭಾರವಾದ ಹೊರೆ ಆಗಿರಲಿಲ್ಲ. ಆದರೆ ನಿಜವಾದ ಸಮಸ್ಯೆ ಇದ್ದುದು ಲೇಖನಗಳ ಅಭಾವದಲ್ಲಿ, ಬಂದವುಗಳ ಗುಣಮಟ್ಟದಲ್ಲಿ, ಮತ್ತು ನವಲೇಖಕರು ಇತ್ತ ಸುಳಿಯದಿರುವುದರಲ್ಲಿ. ಗುಣಮಟ್ಟವನ್ನೇನೋ ಸಂಪಾದನೆಯ ವೇಳೆ ಎತ್ತರಿಸುತ್ತಿದ್ದೆವು. ಸರಕೇ ಇರದೆ ಸಾರಣೆ ಹೇಗೆ! ಹೊಸ ಲೇಖಕರನ್ನು ''ಪುಸ್ತಕ ಪ್ರಪಂಚ'' ಆಕರ್ಷಿಸುತ್ತಿಲ್ಲವೇಕೆ? ಆಡಳಿತ ವಿಭಾಗ ಕುರಿತು ಹೇಳುವುದಾದರೆ ಅದು ಸರ್ಕಾರದ ಯಾಂತ್ರಿಕ ಜಡತೆಯ ಒಳಗೂ ಕ್ರಿಯಾಶೀಲವಾಗಿತ್ತು. ಸ್ವಂತ ಮುದ್ರಣಾಲಯ, ಕಟ್ಟಡ, ರೀಡರ್ಸ್ ಡೈಜೆಸ್ಟ್ ಮುಂತಾದ ಪ್ರಸಿದ್ಧ ಮಾಸಿಕಗಳಿಂದ ಕನ್ನಡಕ್ಕೆ ಅನುವಾದಿಸಿ ಮುದ್ರಿಸಲು ಮುಕ್ತ ಅನುಮತಿ, ಮತ್ತು ಪ್ರಕಟಿತ ಲೇಖನಗಳಿಗೆ ಗೌರವ ಸಂಭಾವನೆ ಪಾವತಿ ಇವು ''ಪುಸ್ತಕ ಪ್ರಪಂಚ''ದ ಭದ್ರ ಆಸ್ತಿಗಳಾಗಿದ್ದುವು. ಇದರಲ್ಲಿ ಮಸಾಲೆ ಲೇಖನಗಳಿಗೆ ಅವಕಾಶ ವಿರುತ್ತಿರಲಿಲ್ಲ, ಜಾಹೀರಾತುಗಳು ಪ್ರಕಟವಾಗುತ್ತಿರಲಿಲ್ಲ. ಇದರ ಪ್ರತಿಗಳು ವೃತ್ತಪತ್ರಿಕೆಗಳ ಮಾರಾಟ ಕೇಂದ್ರಗಳಲ್ಲಿ ದೊರೆಯುತ್ತಿರಲಿಲ್ಲ. ಕೇವಲ ಉತ್ಕೃಷ್ಟ ಗಂಭೀರ ವಾಚನೀಯ ಲೇಖನಗಳ ಮೂಲಕವೇ ಇದರ ಅಂತರಂಗ ಬಹಿರಂಗಗಳನ್ನು ಪುಷ್ಟೀಕರಿಸುವುದು ಸಾಧ್ಯವೇ? ಮರ್ಯಾದಾ ಪುರುಷೋತ್ತಮನಿಗೆ ಸಂತೆಯಲ್ಲಿ ನೆಲೆಉಂಟೇ?

ಪಾವೆಂ-ಮಾಸ್ತಿ-ದೇಜಗೌ ಮಾರ್ಗಾನುಸರಣೆಯೇ ಶರಣು: ಪ್ರತಿಭೆಯನ್ನು ಪತ್ತೆಹಚ್ಚು, ಬೆಂಬಲಿಸು, ಅದು ಬೆಳೆಯಲು ಅವಕಾಶ ಒದಗಿಸು, ಅದರ ಜೊತೆ ನೀನೂ ಬೆಳೆ!

ಅಂದರೆ ಪ್ರತಿಭಾಶೋಧನೆ ನಮ್ಮ ದೈನಂದಿನ ಚಟುವಟಿಕೆಗಳ ಒಂದು ಅಂಗವಾಗಿರಬೇಕು, ಸದಾ ಇದನ್ನು ಪ್ರೀತಿಯಿಂದ ನಿರ್ವಹಿಸುತ್ತಿರಬೇಕು. ನನಗೆ ಲಭಿಸಿದ ಕೆಲವು ಪ್ರರೂಪೀ ನಿದರ್ಶನಗಳನ್ನು ಗಮನಿಸಬೇಕು. ಇಲ್ಲಿ ವ್ಯಕ್ತಿಗಳನ್ನು ಪ್ರತೀಕಗಳೆಂದು ಭಾವಿಸಿದರೆ ಸ್ವಾರಸ್ಯ ಅಧಿಕ ಪ್ರಸ್ತುತವಾಗುವುದು, ಸಾರ್ವತ್ರಿಕವಾಗುವುದು. ಏಕೆಂದರೆ ಕಾಡಿನಲ್ಲಿ ಹೂಗಳಿಗೆ ಕೊರತೆ ಇಲ್ಲ, ಆದರೆ ಅವನ್ನು ಅರಸಿ ಗುರುತಿಸಿ ಮೆಚ್ಚುವ ರಸಿಕರಿಗೆ?

-೨-

೧. ಕೆಲವು ವರ್ಷಗಳ ಹಿಂದಿನ ಮಾತು. ನಾನು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಂಪಾದನ ಕಾರ್ಯಮಗ್ನನಾಗಿದ್ದೆ. ಅಪರಿಚಿತ ಆಗಂತುಕರೊಬ್ಬರು ಅನಿರೀಕ್ಷಿತವಾಗಿ ನನ್ನ ಕೊಠಡಿ ಪ್ರವೇಶಿಸಿ ಏನೋ ಪ್ರಶ್ನೆ ಕೇಳಿದರು. ಮಾತುಕತೆ ಮುಗಿದ ಬಳಿಕ ನಾನು ಕೇಳಿದೆ,

"ನೀವು ಯಾರು ?"

ಡಾ."ಎಚ್.ಡಿ. ಚಂದ್ರಪ್ಪಗೌಡ, ಶಿವಮೊಗ್ಗದವನು."

ಸುಪರಿಚಿತ ನಾಮ, ಕುವೆಂಪುಧಾಮ_ ಮಿಂಚಿನ ಹೊಳೆ ತುಳುಕಾಡಿದುದು !"ಪುಸ್ತಕ ಪ್ರಪಂಚಕ್ಕೆ ಲೇಖನಗಳನ್ನು ಬರೆದು ನನಗೆ ಕಳಿಸಿ."

ಬೇಡಿಕೆ ಫಲಿಸಿತು.

೨. ನಿವೃತ್ತ ಶರೀರ ವಿಜ್ಞಾನ ಪ್ರಾಧ್ಯಾಪಕ ಡಾ. ಎಸ್. ರಾಮರಾಯರು ಕನ್ನಡ ವಿಶ್ವ ಕೋಶದ ಗೌರವ ವೈದ್ಯಕೀಯ ಸಲಹೆಗಾರರು _ಅಂದರೆ ತಾಂತ್ರಿಕ ಲೇಖನಗಳನ್ನು ಓದಿ ಪರಿಷ್ಕರಿಸುವುದು ಅವರ ಹೊಣೆ. ಸಹಜವಾಗಿ ಇವರು "ಪುಸ್ತಕ ಪ್ರಪಂಚ"ದ ಒಬ್ಬ ಗಣ್ಯ ಲೇಖಕರಾದರು.

ಪ್ರಥಮ ಚಿಕಿತ್ಸೆ ಕುರಿತು ಇವರು ಬರೆದ ಮತ್ತು ನಮ್ಮ ಸಮಿತಿ ಪ್ರಕಟಿಸಿದ ಪುಸ್ತಕ ಇಂದಿಗೂ ಒಂದು ಆಕರ ಗ್ರಂಥವಾಗಿದೆ. ರಾಮರಾಯರು ಈಗ ಬದುಕಿಲ್ಲ. ಅವರಲ್ಲಿದ್ದ ಸುಪ್ತಪ್ರತಿಭೆಗೆ ಯುಕ್ತ ಮಾಧ್ಯಮವನ್ನು "ಪುಸ್ತಕ ಪ್ರಪಂಚ" ಒದಗಿಸಿತು ಎಂಬುದು ನಮ್ಮ ಸಮಾಧಾನ.

೩. ನಂಜನಗೂಡಿನಲ್ಲಿ ಒಂದು ಸಾರ್ವಜನಿಕ ವಿಜ್ಞಾನ ಉತ್ಸವ. ಮೊದಲು ನನ್ನ ಭಾಷಣ, ಖಗೋಳ ವಿಜ್ಞಾನ ವಿಷಯ ಕುರಿತು. ತುಂಬಿ ಬಿರಿಯುತ್ತಿದ್ದ ಸಭಾಸದರ ಪ್ರತಿಕ್ರಿಯೆ ಮಾತ್ರ ದಿವ್ಯಗಂಭೀರ ಮೌನ ! ಮತ್ತೆ "ಅವರ" ಭಾಷಣ. ತರುಣ, ತೇಜಸ್ವಿ ವೃತ್ತಿ ವೈದ್ಯ, ವಿಶಾಲ ಪರಿಸುಭ್ರ ನೊಸಲಿ ಗೊಪ್ಪುವ ತ್ರಿಪುಂಡ್ರ, ಧರಿಸಿದ್ದು ಸರಳ ದೊರೆಯುಡುಪು (ಇಜಾರ ಮೇಲೊಂದು ಜುಬ್ಬ)."ಮಾರಕ ಚಟಗಳ ಸಂಹಾರಕ ಗುಣಗಳು"_ಅವರು ಎಳೆ ಎಳೆಯಾಗಿ ಸಾಕ್ಷ್ಯಾಧಾರ ಸಹಿತ ತಿಳಿಗನ್ನಡದಲ್ಲಿ ಬಿತ್ತರಿಸಿದ ವಿಷಯ.

ಪ್ರತಿಕ್ರಿಯೆ ? ನನ್ನನ್ನೂ ಒಳಗೊಂಡಂತೆ ಸಭಾಸದರ ಜೀವಂತಭಾಗಿತ್ವ, ಉದ್ಗಾರಗಳು ಹೊನಲಾಗಿ ಹರಿದುವು. ಪ್ರಚಂಡ ಕರತಾಡನದಲ್ಲಿ ಮುಕ್ತಾಯ. ಹಿಂದಿನ ಸಾಲಿನಲ್ಲಿ ನಿಂತು ಆಲಿಸಿದ ಕೂಲಿಯುವನೊಬ್ಬ ಧಾವಿಸಿ ಬಂದ ವೇದಿಕೆಗೆ, ಒಂದೇ ಸವನೆ ಹೃದಯ ವೇದನೆಯ ನಿವೇದನೆ ಒಪ್ಪಿಸಿದ: "ಅಯ್ಯಪ್ಪಾ ಧಣಿ ! ನಾಬುಟ್ಬುಟ್ಟೆ ಈಗಿಂದೀಗಲೇ_ ಇನ್ಮುಂದೆ ಕುಡಿಯಾಕಿಲ್ಲಾ !"

ನನ್ನ ಅರಿವಿಗೆ ಬಾರದೇ ನಾನೆದ್ದು ನಿಂತೆ : "ಈ ಮಹನೀಯರೇನಾದರೂ ಮೊದಲಿನ ಭಾಷಣಕಾರರಾಗಿದ್ದರೆ ನನ್ನ ವೇಳೆಯನ್ನೂ ಇವರಿಗೆ ಪೂರ್ತಿ ಧಾರೆಯೆರೆದು ಕೊಟ್ಟು ಕೃತಾರ್ಥನಾಗಿರುತ್ತಿದ್ದೆ."

"ಪುಸ್ತಕ ಪ್ರಪಂಚ"ಕ್ಕೆ ಲೇಖನ ಬರೆಯಲು ಅವರಿಗೆ ಅಲ್ಲೇ ಆಹ್ವಾನವಿತ್ತೆ.

"ನಾನು ಮಾತಾಡಬಲ್ಲೆ ಮಾತ್ರ. ಕನ್ನಡದಲ್ಲಿ ಬರೆದು ರೂಢಿ ಇಲ್ಲ. ತಾಂತ್ರಿಕ ಪದಗಳ ಗೊಂಡಾರಣ್ಯದಿಂದ ಹೇಗೆ ಪಾರಾಗಲಿ ?" ಅವರ ಪ್ರಾಮಾಣಿಕ ಸಂದೇಹ.

"ವಿಷಯಬಲ್ಲಾತನಿಗೆ ನಿರೂಪಣೋತ್ಸಾಹವಿರುವಾತನಿಗೆ ಅಭಿವ್ಯಕ್ತಿ ಮಾಧ್ಯಮ ತಂತಾನೇ ಒಲಿದು ಸಿದ್ಧವಾಗುತ್ತದೆ. ತಾಂತ್ರಿಕ ಪದಗಳ ಸಮಸ್ಯೆ? ನಡೆದಂತೆ ಪರಿಹಾರವಾಗುವ, ನಡೆಯದಿರುವಾಗ ಹಿರಿದಾಗಿ ಹೆದರಿಸುವ, ಅಸ್ತಿತ್ವರಹಿತ ಗುಮ್ಮ ಇದು! Traveller !There is no path. Paths are made by walking.(ಹಾದಿಗಾ! ಹಾದಿ ಎಂಬುದು ಇಲ್ಲ. ನೀ ನಡೆದು ಹಾದಿ ಕಡಿಯಬೇಕು!)"

ಒಗೆಳೆಯ! ನೀಸದಾ ಪಥ ಕಡಿದು ಮುಂದೆ ನಡೆ
ಸಾಗರ ವಿಶಾಲತೆ ಹಿಮಾಲಯ ಮಹೌನ್ನತ್ಯ
ಬಾಗುವುವು ನಿನ್ನ ಪದ ತಲದಲ್ಲಿ ಗುರಿಕುರಿತ
ಜಾಗರಣೆ ಋಜು ಯಶಸ್ಸಿನ ಮೂಲ ಅತ್ರಿಸೂನು

ಅವರು ಬರೆದರು_ ವೈದ್ಯವಿಜ್ಞಾನದ ಬಗ್ಗೆ

ಮಾತ್ರ ಅಲ್ಲ, ಜೀವನದ ಅವ್ಯಕ್ತ ಮಗ್ಗುಲುಗಳ ಬಗ್ಗೆ ಕೂಡ. ''ಪುಸ್ತಕ ಪ್ರಪಂಚ''ದ ಅವಿಭಾಜ್ಯ ಅಂಗವಾಗಿ ಡಾ.ಸ.ಜ.ನಾಗಲೋಟಿಮಠರು ಅರಳಿ ಬೆಳಗಿ ಪರಿಮಳಿಸುತ್ತಿರುವ ಪರಿ ನಮಗೆಲ್ಲ ಪರಮ ಅಭಿಮಾನದ ಸಂಗತಿ. ಕನ್ನಡದಲ್ಲಿ ಅವರ ಹಲವಾರು ಕೃತಿಗಳೂ ಪ್ರಕಟವಾಗಿವೆ: ಆದ್ದರಿಂದ ''ಬಾರಿಸು ಕನ್ನಡ ಡಿಂಡಿಮವ, ಹೇ ಕರ್ನಾಟಕ ಹೃದಯಶಿವ!'' (ಕುವೆಂಪು)

೪. ಶತಾಯುಷಿ ಪ್ರೊ.ಎ.ಎನ್.ಮೂರ್ತಿರಾಯರು (ಜನನ ಜೂನ್ ೧೯೦೦)ತಮ್ಮ ಅಭಿಜಾತ ಕೃತಿ ''ಸಂಜೆಗಣ್ಣಿನ ಹಿನ್ನೋಟ''ದ (ಪ್ರಥಮ ಆವೃತ್ತಿ ೧೯೯೦, ಡಿ.ವಿ.ಕೆ. ಮೂರ್ತಿ) ಮುನ್ನುಡಿಯಲ್ಲಿ ಬರೆದಿದ್ದಾರೆ: ''ಈ ಪುಸ್ತಕವನ್ನು ಬರೆಯಬೇಕೆಂಬ ಯೋಚನೆ ಬಂದದ್ದು ೧೦-೧೨ ವರ್ಷಗಳ ಹಿಂದೆ; ಬರೆಯಲಾರಂಭಿಸಿದ್ದು ೧೯೮೪ರಲ್ಲಿ. ಬರವಣಿಗೆ ಬಸವನ ಹುಳುವಿನ ವೇಗದಲ್ಲಿ ಸಾಗಿದೆ. ಇಪತ್ತು ನಾಲ್ಕು ಪುಟ, ಅನಂತರ ಒಂದೆರಡು ತಿಂಗಳ ಆಲೆದಾಟ, ಮತ್ತೆ ನಾಲ್ಕಾರು ಪುಟ, ಅನಂತರ ಬೇರೆ ಕೆಲಸದಲ್ಲಿ ಇದನ್ನು ಬರೆಯುವುದು-ಹೀಗೆ, ಇದು ಮುಂದುವರಿದದ್ದು.''

೧೯೫೬ರಿಂದಲೂ ಅವರ ಪ್ರೀತಿಪರಿಧಿಯೊಳಗಿರುವ ಯೋಗ ನನ್ನದು. ನಾನು ಮೈಸೂರಿಗೆ ನೆಲಸಲು ಬರುವ (೧೯೬೬) ಮೊದಲು ಬೆಂಗಳೂರಿನಲ್ಲಿದ್ದೆ. ಯೋಗಾಯೋಗ, ಮಾಸ್ತಿಯವರ ಆತ್ಮಚರಿತ್ರೆ ''ಭಾವ''ದ ಉಕ್ತ ಪಾಠವನ್ನು ಬರೆದುಕೊಳ್ಳುವ ಅದೃಷ್ಟ ನನ್ನದಾಗಿತ್ತು. ಪ್ರತಿಯೊಬ್ಬ ವೇದವ್ಯಾಸನಿಗೂ ಒಬ್ಬ ಗಣಪತಿ, ಅಂತೆಯೇ ಪ್ರತಿಯೊಬ್ಬ ಜಾನ್ಸನ್ನನಿಗೂ ಒಬ್ಬ ಬಾಸ್ವೆಲ್ ಅಗತ್ಯ ಎಂಬ ಸಂಗತಿ ನನಗೆ ಮನವರಿಕೆಯಾಗಿತ್ತು.

ಎಂಬತ್ತನಾಲ್ಕರ ಜ್ಞಾನವಯೋವೃದ್ಧ ಮೂರ್ತಿರಾಯರ ಆತ್ಮಚರಿತ್ರೆಯನ್ನು ಪೂರ್ಣಗೊಳಿಸಲು ಇದ್ದ ಮಾರ್ಗ ಒಂದೇ: ಅವರಿಗೆ ಈ ಕೃತಿಯನ್ನು ಬರೆದು ಮುಗಿಸಲು ಒಂದು ಕಾಲಬಂಧಿತ ಕಾರ್ಯವಿಧಿಯನ್ನು ನಿಗದಿಮಾಡುವುದು. ದೇಜಗೌರಲ್ಲಿ ಈ ಸಂಗತಿಯನ್ನು ಪ್ರಸ್ತಾವಿಸಿದಾಗ ಇವರೊಂದು ಸುಲಭ ಮಾರ್ಗ ಸೂಚಿಸಿದರು.: ''ರಾಯರು ಬರೆದಂತೆ ಕ್ಲುಪ್ತವಾಗಿ ನಮಗೆ ಕಳಿಸುತ್ತಿರಲಿ. 'ಪುಸ್ತಕ ಪ್ರಪಂಚ'ದಲ್ಲಿ ಧಾರಾವಾಹಿಯಾಗಿ ಪ್ರಕಟಿಸೋಣ. ಇದು ನಮಗೊಂದು ಗೌರವದ ವಿಷಯ.''

ಮೂರ್ತಿರಾಯರ ಪೂರ್ವೋಕ್ತ ಮುನ್ನುಡಿಯಲ್ಲಿ ಮುಂದುವರಿದದ್ದು: ''.... ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯವರು ನಡೆಸುತ್ತಿರುವ 'ಪುಸ್ತಕ ಪ್ರಪಂಚ' ಎಂಬ ಮಾಸಪತ್ರಿಕೆಯಲ್ಲಿ ಈ ಪುಸ್ತಕದ ಅರ್ಧಕ್ಕಿಂತ ಸ್ವಲ್ಪ ಕಡಿಮೆ ಭಾಗ ಧಾರಾವಾಹಿಯಾಗಿ ಪ್ರಕಟವಾಯಿತು. ಅದಕ್ಕಾಗಿ ನಾನು ಆ ಸಮಿತಿಯವರಿಗೆ ಋಣಿ...''

೫. ೧೯೮೮-೮೯ರ ವೇಳೆಗೆ ಮೂರ್ತಿರಾಯರು ಮೈಸೂರಿಗೆ ಬಂದು ತಮ್ಮ ಹೆಂಡತಿಯ ತಂಗಿ ಮಗ ಡಿ.ವಿ.ಶಾಮಣ್ಣನವರಲ್ಲಿ ತುಸುಕಾಲ ತಂಗಿದ್ದರು. ಆ ಲಲಿತ-ಶಾಮಣ್ಣ ದಂಪತಿಗಳ ಈ ಬೆಚ್ಚಗಿನ ಗೂಡು ಸಾಹಿತಿ ಸಹೃದಯ ಮಿತ್ರರಿಗೆ ಇಚ್ಛೆ ಅರಿವ ದೇವರ ಬೀಡು ಆಗಿತ್ತು! ಇಲ್ಲಿಯ ನಿರಂತರ ವಿನೋದ ಚೈತಕ್ಕುಗಳ ಅವಿಭಾಜ್ಯ ಹಾಗೂ ಅನಿವಾರ್ಯ ಅಂಗ ಈ ನಲ್ಮೆಯ ದಂಪತಿಗಳು.

''ಶಾಮಣ್ಣ! ನಿಮ್ಮ ಮನೆಯಲ್ಲಿ ರೀಡರ್ಸ್ ಡೈಜೆಸ್ಟ್‌ನ ಮೇಳವನ್ನೇ ಕಾಣುತ್ತಿದ್ದೇನೆ.'' ನನ್ನ ಮೇಲುನೋಟಕ್ಕೆ ನಿರ್ಭಾವ ಪ್ರಶ್ನೆ.

''ಹೌದು! ನಾನು ಅದರ ಗಂಭೀರ ಓದುಗ'' ಅವರ ಸಹಜ ಉತ್ತರ.

''ಮಿಗಿಲಾಗಿ ಮನೆಯಲ್ಲಿ ಇಂಥ ಸಾಹಿತ್ಯ ಸಮಾರಾಧನೆ ಮತ್ತು ಪರಂಪರೆ. ಅಂದ ಮೇಲೆ

ನೀವು ಒಳ್ಳೆ ಬರಹಗಾರರೂ ಆಗಿರಬೇಕು!''

''ನಾನೆಂದೂ ಬರೆದಿಲ್ಲ ಸಾಹಿತ್ಯವನ್ನು.''

''ಹಾಗಾದರೆ ಈಗ ಬರೆಯಿರಿ: ರೀಡರ್ಸ್ ಡೈಜೆಸ್ಟ್‌ನಲ್ಲಿ ನಿಮಗೆ ಪ್ರಿಯವಾಗುವ ಲೇಖನ ಆಯ್ದು ಅದನ್ನು ಕನ್ನಡಕ್ಕೆ ಭಾಷಾನುವಾದಿಸಿ ನನಗೆ ಕೊಡಿ.''

ಶಾಮಣ್ಣನವರ ಜೊತೆ ನನಗೆ ಸಾಕಷ್ಟು ಸಲಿಗೆ ಇತ್ತು. ಈ ಕೆಲಸವನ್ನು ಅವರು ಪರಿಷ್ಕಾರವಾಗಿ ಮಾಡಬಲ್ಲರೆಂಬ ಭರವಸೆಯೂ ಇತ್ತು. ಅನುವಾದಿತ ಲೇಖನ ಸಕಾಲದಲ್ಲಿ ಬಂದಿತು. ''ಪುಸ್ತಕ ಪ್ರಪಂಚ''ದಲ್ಲಿ ಆ ಲೇಖನ ಪ್ರಕಟವಾಯಿತು. ಅದನ್ನು ನೋಡಿದ ಶಾಮಣ್ಣನವರ ಪ್ರತಿಕ್ರಿಯೆ: ''ಇದು ನನ್ನದೇ? ಎಷ್ಟು ಸಂತೋಷ! ನನ್ನಲ್ಲಿ ಇದ್ದಿರಬಹುದಾದ ಗುಣವನ್ನು ನನಗೇ ಅಚ್ಚರಿ ಆಗುವಂತೆ ಹೊರಕ್ಕೆ ತಂದಿದೆ ಪುಸ್ತಕ ಪ್ರಪಂಚ.''

ಈಗ ಶಾಮಣ್ಣ ನಮ್ಮ ಒಬ್ಬ ಪ್ರೌಢ ಲೇಖಕರು. ಆ ದೊಡ್ಡಣ್ಣನಿಗೆ (ಮೂರ್ತಿರಾಯರನ್ನು ಇವರೆಲ್ಲರೂ ಪ್ರೀತಿಯಿಂದ ಕರೆಯುವುದು) ಈ ತಮ್ಮಣ್ಣ ಸರಿಯಾದ ಜೋಡಿ. ಮುಗ್ಧರನ್ನು ಸಿದ್ಧರಾಗಿಸುವ, ಸಿದ್ಧರನ್ನು ಪ್ರಸಿದ್ಧರಾಗಿಸುವ, ಮತ್ತು ಪ್ರಸಿದ್ಧರನ್ನು ಪ್ರಸ್ತುತರನ್ನಾಗಿಸುವ ಕ್ರಿಯಾಕಾರಿ ''ಪುಸ್ತಕ ಪ್ರಪಂಚ.''

ಬೀಸು ಬಲೆ ಹೆಕ್ಕು ಕಾಳುಗಳ ಬಲು ಜತನದಲಿ
ಪೋಷಿಸುತ ಹಸನು ನೆಲದಲಿ ಬಿತ್ತಿ ಕಾಪಾಡು
ನಾಶಕಗಳಾಕ್ರಮಣದಿಂ, ಪೈರು ಹಡೆದಾಗ
ಆಶೆ ಬಿಡು ದಾನ ಕೊಡು ನೀ ತೃಪ್ತ ಅತ್ರಿಸೂನು

೬. ನಿವೃತ್ತ ಸೇನಾಧಿಕಾರಿ ಮೇಜರ್ ಜನರಲ್ ಎಸ್.ಜಿ. ವೊಂಬತ್ಕೆರೆಯವರು ಆಕಾಶವಾಣಿಯಲ್ಲಿ ಒಂದು ಇಂಗ್ಲಿಷ್ ಭಾಷಣವನ್ನು ಬಿತ್ತರಿಸಿದರು. ವಿಷಯ: ''ಪರಮಾಣು ಬಾಂಬ್ ಹನನ.'' ಈ ಆಕರ್ಷಕ, ಉಪಯುಕ್ತ ಮತ್ತು ವರ್ತಮಾನದಲ್ಲಿ ತೀವ್ರಪ್ರಸ್ತುತ ಲೇಖನದ ಕನ್ನಡಾನುವಾದ ನಮ್ಮ ''ಪುಸ್ತಕ ಪ್ರಪಂಚ''ದಲ್ಲಿ ಪ್ರಕಟವಾಗಬೇಕಷ್ಟೇ? ನಾನೇ ಮಾಡುವುದು ಮಧ್ಯಮ, ಇತರರಿಂದ ಮಾಡಿಸುವುದು ಉತ್ತಮ ಎಂಬ ಸರಳ ಸತ್ಯವನ್ನು ಜೀವನದಿಂದ ಮತ್ತೆ ಮತ್ತೆ ಕಂಡುಕೊಂಡಿದ್ದೇನೆ. ಮೊದಲನೆಯದು ಸ್ವಾರ್ಥಪೋಷಕ, ಎರಡನೆಯದಾದರೋ ಸಮಾಜೋತ್ಕರ್ಷಕ.

ನಮ್ಮ ಹಿರಿಯ ಲೇಖಕಿ ಮತ್ತು ಚಟುವಟಿಕೆಯ ಚಿಲುಮೆ ಟಿ.ಎಸ್. ಲಲಿತಾ ಅವರನ್ನು ಒಪ್ಪಿಸಿದ್ದಾಯಿತು. ''ತಾಂತ್ರಿಕ ಮಾಹಿತಿಗಳಿಂದ ಕೂಡಿರುವ ಈ ಲೇಖನದ ಅನುವಾದ ನನ್ನ ಅಳವಿಗೆ ಮೀರಿದ್ದು,'' ಅವರ ಪ್ರಾಮಾಣಿಕ ಆತಂಕ.

''ಮೂಕಂ ಕರೋತಿ ವಾಚಾಲಂ ಪಂಗುಂ ಲಂಘಯತೇ ಗಿರಿಂ ಯತ್ಕೃಪಾ ತಮಹಂ ವಂದೇ ಪರಮಾನಂದ ಮಾಧವಮ್ ಎಂಬ ಭಗವದ್ಗೀತೆಯ ಧ್ಯಾನ ಶ್ಲೋಕವನ್ನು ಜಪಿಸುವುದುಂಟೇ!''

''ಹೌದು''.

''ಅರ್ಥ ತಿಳಿದಿದ್ದೀರಿ?'' ''ಹೌದು''

''ಈಗ ಅಲ್ಲಿಯ 'ಮಾಧವ'ನ ಸ್ಥಾನದಲ್ಲಿ 'ಪುಸ್ತಕಪ್ರಪಂಚ' ಇದೆಯೆಂದು ಪರಿಭಾವಿಸಿ... ...''

''ಖಂಡಿತ ಪ್ರಯತ್ನ ಪಡುತ್ತೇನೆ.''

ಎಡೆಬಿಡದೆ ನಡೆವಾತ ತಲಪದಿಹ ನೆಲೆಯಿಲ್ಲ
ಎಡಹಿದರೆ ಕಾರಣವ ಶೋಧಿಪನು, ಹೊಸಹಾದಿ
ಸಡಗರದಿ ಕಾಣುವನು — ಜ್ಞಾನಮೇರುವನೇರು
ವೊಡೆ ಸತತ ಪಥಿಕನಾಗಿರು ನೀನು ಅತ್ರಿಸೂನು

ಲಲಿತಾ ಅವರು ಮಾಡಿಕೊಟ್ಟ ಆ ಅನುವಾದ ರಾಜ್ಯಮಟ್ಟದ ಪತ್ರಿಕೆಯಲ್ಲಿಯೂ ಪ್ರಕಟವಾಯಿತು.

೭. ಇಂದು ಕನ್ನಡ ವಾಚಕರಿಗೆ ಎ.ಪಿ. ಚಂದ್ರಶೇಖರ ಎಂದರೆ ಒಬ್ಬ ಪ್ರಾಯೋಗಿಕ ಪ್ರಾಮಾಣಿಕ ಪರಿಸರ-ಕೃಷಿ ತಜ್ಞ ಮತ್ತು ಈ ವಿಷಯ ಕುರಿತ ಉತ್ಕೃಷ್ಟ ಲೇಖಕ ಎಂದು

ತಿಳಿದಿದೆ. ಅಂತೆಯೇ ಡಾ. ಎ. ಪಿ. ರಾಧಾಕೃಷ್ಣ ಒಬ್ಬ ಶ್ರೇಷ್ಠಮಟ್ಟದ ಕನ್ನಡ ವಿಜ್ಞಾನ ಲೇಖಕ ಎಂದು ಕೂಡ ಗೊತ್ತಿದೆ. ಈ ತರುಣ ಧಮನಿಗಳು ''ಪುಸ್ತಕ ಪ್ರಪಂಚ'' ಎಂಬ ಹೊಲ ಹಡೆದ ಗಟ್ಟಿ ಕಾಳುಗಳು ಎನ್ನುವುದು ನಮಗೆ ಅಭಿಮಾನದ ಸಂಗತಿ. ಅಜ್ಞಾತ ಲೇಖಕ ಲೇಖಕಿಯರನ್ನು ಪತ್ತೆ ಹಚ್ಚಿ ಅವರನ್ನು ಬೆಳಕಿಗೆ ತರುವ ಪ್ರೀತಿಯ ಸೇವೆಯನ್ನು ''ಪುಸ್ತಕ ಪ್ರಪಂಚ'' ಸದಾ ಅರ್ಪಿಸುತ್ತಿದೆ.

-೩-

ಭೂರಿಮುದ್ರಣತಂತ್ರ, ಪ್ರಚಾರ ಧಾವಂತ, ಹೊಳಪು ಪತ್ರಿಕೆಗಳ ತೋರಣಾಕರ್ಷಣೆ, ಕ್ಷಿಪ್ರವಿತರಣ ಸೌಕರ್ಯ ಮುಂತಾದವು ಪತ್ರಿಕಾಮಾಧ್ಯಮವನ್ನೂ ಬರೆದದ್ದೆಲ್ಲವೂ ಸಾಹಿತ್ಯ, ಮಸಾಲೆ ವರ್ಧಿಸಿದಷ್ಟೂ ಜನಪ್ರಿಯತೆ ಹೆಚ್ಚು, ಸದಾ ಸುದ್ದಿಯಲ್ಲಿರುವುದೇ ಜೀವನಾದರ್ಶ, ನಿಷೇಧಾತ್ಮಕ ಧೋರಣೆಯೇ ವೈಚಾರಿಕತೆಯ ಮೂಲ ಮುಂತಾದವು ಲೇಖನಕಲೆಯನ್ನೂ ವಾಣಿಜ್ಯೋದ್ಯಮಗಳಾಗಿ (ಕಾರ್ಖಾನೆಗಳು : ಹೂಡಿದ ಬಂಡವಾಳಕ್ಕೆ ಹೇರಳ ಲಾಭ ತರುವ ಅಲ್ಲಾಉದ್ದೀನನ ವಿಚಿತ್ರ ದೀಪಗಳು) ಪರಿವರ್ತಿಸಿರುವ (ಅಪಮೌಲ್ಯೀಕರಿಸಿರುವ !) ಈ ತಂತ್ರವಿದ್ಯಾಯುಗದಲ್ಲಿ 'ಪುಸ್ತಕ ಪ್ರಪಂಚ' ೫೦ ವರ್ಷಗಳನ್ನು ದಾಟಿರುವುದು ಇದರ ಹೂರಣ ಸತ್ತ್ವಕ್ಕೆ ಪ್ರತ್ಯಕ್ಷ ಸಾಕ್ಷಿ. ಇದರದು ಚಿಗರೆ ಜಿಗಿತವಲ್ಲ, ಆನೆಯ ದೃಢ ಗತಿ. ''ಹೊಸ ಚಿಗುರು''ಗಳು ಸದಾ ಇದಕ್ಕೆ ಭರವಸೆಯ ಬೆಳಕು ನೀಡಿ ''ಹಳೆಬೇರು''ಗಳ ಪ್ರಸ್ತುತತೆಯನ್ನು ತೋರಿಸಿಕೊಡುತ್ತಿವೆ. ನಿಜ, ''ಹೊಸ ಚಿಗುರು ಹಳೆಬೇರು ಕೂಡಿದರೆ ಮರ ಸೊಬಗು.''

ಸಮಾರೋಪವಾಗಿ ಒಂದು ಮಾತು ಬರೆಯಲು ಅಪೇಕ್ಷಿಸುತ್ತೇನೆ. ಜ್ಞಾನದಾಸೋಹದಲ್ಲಿ ನಿಸ್ವಾರ್ಥಭಾವದಿಂದ ನೈಷ್ಠಿಕವಾಗಿ ಸೇವೆ ಸಲ್ಲಿಸುತ್ತಿರುವವವನಿಗೆ ಮುಪ್ಪಿನ ಅಂಜಿಕೆಯಿಲ್ಲ, ಅಹಂಕಾರಕ್ಕೆ ತಲೆಬಾಗುವ ದೈನ್ಯವಿಲ್ಲ, ಅಥವಾ ''ಮಾಡಿದೆನೆಂಬುದು ಮನದಲ್ಲಿ ಕೂಡ'' ಹೊಳೆಯುವ ಅಪಾಯವಿಲ್ಲ. ಏಕೆಂದರೆ ಅವನ ರಕ್ಷಣೆಗೆ ಸದಾ ಸಿದ್ಧವಾಗಿರುತ್ತದೆ ''ಶಿವನ ಡಂಗುರ.'' ಈ ನಿಷ್ಕಾಮ ಕರ್ಮದಲ್ಲಿ ಚತುರ್ವಿಧ ಪುರುಷಾರ್ಥಗಳು ಸಾಧಿತವಾಗುತ್ತವೆ : ಲೇಖಕನಿಗೆ ಕೃತಾರ್ಥತೆ, ಸಂಪಾದಕನಿಗೆ ಸಾರ್ಥಕತೆ, ''ಪುಸ್ತಕ ಪ್ರಪಂಚ''ಕ್ಕೆ ಪ್ರಸ್ತುತತೆ ಮತ್ತು ಕನ್ನಡ ಭಾಷೆಗೆ ಘನತೆ. ದೇಜಗೌ ನಮಗೆ ಕೊಟ್ಟಿರುವ ದೀಕ್ಷೆ ಅವರದೇ ವಚನದಲ್ಲಿ

ಕಾಯಕದಿ ಪಡೆದ ಶ್ರೀ ಭೋಗ ಪರಿಶುದ್ಧಮೆನೆ
ಮಾಯೆ ಮಿಥ್ಯೆಯೆ ದಿಟಂ ಭೋಗಯೋಗವದಾಗೆ
ಕಾಯಮೋಹದಿ ವಿಮೋಹವನು ಸಾಧಿಸಲು ತಿಳಿ
ಬೇಯವಾಗದು ಬಾಳು ಸಗ್ಗ ಮಗಳೆ

ಅಕ್ಷರದ ಮೂಲಕ ಬಿಡುಗಡೆ : ಪಾಲೊ ಫ್ರೇರೀಯ ಕೆಲವು ವಿಚಾರಗಳು

ಪ್ರೊ. ಸಿ. ನಾಗಣ್ಣ
ನಂ.೩.೧೯೫,೨೧/ಸಿ. ಮೆಯಿನ್,
ವಿಜಯನಗರ, ೨ನೇ ಹಂತ,
ಮೈಸೂರು.

-೧-

ಪ್ರಖ್ಯಾತ ಶಿಕ್ಷಣತಜ್ಞ ಪಾಲೊ ಫ್ರೇರೀ ತೀರಿಕೊಂಡದ್ದು ೧೯೯೭ರ ಜನವರಿ ಮಾಹೆಯಲ್ಲಿ. ೧೯೨೧ರಲ್ಲಿ ಬ್ರೆಜಿಲ್‌ನ ರೆಸೀಫೆ ಎಂಬಲ್ಲಿ ಜನಿಸಿದ ಫ್ರೇರಿ ಕೆಳಮಧ್ಯಮ ವರ್ಗದ ಸಾಧಾರಣ ಕುಟುಂಬದ ಕಷ್ಟಕೋಟಲೆಗಳನ್ನು ಕಂಡವರು; ಹಾಗಾಗಿ ನೊಂದವರ ನೋವು ಅವರಿಗೆ ಅರ್ಥವಾದದ್ದು ಅತ್ಯಂತ ಸಹಜ. ವಿಶೇಷವಾಗಿ ವಯಸ್ಕರ ಶಿಕ್ಷಣಕ್ಕಾಗಿ ಜೀವನವನ್ನೇ ಮುಡಿಪಿಟ್ಟ ಫ್ರೇರೀಯನ್ನು ಅಂತಾರಾಷ್ಟ್ರೀಯ ಸಾಕ್ಷರತಾ ವರ್ಷವಾದ ೧೯೯೦ರಲ್ಲಿ ಸಂದರ್ಶಕನೊಬ್ಬ ಕೇಳಿದ ಪ್ರಶ್ನೆಗೆ ಫ್ರೇರೀ ನೀಡಿದ ಉತ್ತರ ಬಹಳ ಮಾರ್ಮಿಕವಾಗಿದೆ.'' ಫ್ರೇರೀಯವರೆ, ಜೀವನದುದ್ದಕ್ಕೂ ನೀವು ವಯಸ್ಕರ ಸಾಕ್ಷರತೆಗಾಗಿ ಹೋರಾಟ ಮಾಡುತ್ತಾ ಬಂದಿದ್ದೀರಿ ಈ ವಿಶ್ವದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಸಾಕ್ಷರನಾದರೆ ಆ ನಂತರ ಏನು ?'' ಎಂಬುದು ಪ್ರಶ್ನೆ ಅದಕ್ಕೆ ಫ್ರೇರೀ ನೀಡಿದ ಉತ್ತರ: ''ಹಾಗೇನಾದರೂ ಆದರೂ ಸಹ ನಾನು ಯಾವ ದೊಡ್ಡ ಪವಾಡವನ್ನು ನಿರೀಕ್ಷಿಸಲಾರೆ. ಆದರೆ ಒಂದಂತೂ ನಿಜ; ಇಥಿಯೋಪಿಯಾದ ಹೆಣ್ಣು ಮಗಳೊಬ್ಬಳು ವೈದ್ಯ ನೀಡುವ ಚೀಟಿಯನ್ನು ಓದಿಕೊಂಡು ತನ್ನ ಮಗುವಿಗೆ ಮಾತ್ರೆ, ವಗೈರೆ ಕೊಡುವುದಾದರೆ ಅದಕ್ಕಿಂತ ದೊಡ್ಡ ಕ್ರಾಂತಿ ಬೇಕಾಗಿಲ್ಲ.''

ಇಂಥ ಅಂತಃಕರಣದ ಮಾತನಾಡಿದ ಪಾಲೊ ಫ್ರೇರೀಯವರ ಪ್ರಭಾವ ತೃತೀಯ ಜಗತ್ತಿನ ಎಲ್ಲ ರಾಷ್ಟ್ರಗಳ ಮೇಲೆ ಆದದ್ದು ಆಶ್ಚರ್ಯವಲ್ಲ. ಫ್ರೇರೀಯ ಚಿಂತನೆ ಕೇವಲ ಶಿಕ್ಷಣರಂಗಕ್ಕೆ ಮೀಸಲಾಗಲಿಲ್ಲ, ಬದಲಾಗಿ ರಾಷ್ಟ್ರೀಯ ಅಭಿವೃದ್ಧಿಯ ಒಟ್ಟು ಹೋರಾಟಕ್ಕೆ ಕೊಡುಗೆಯಾಯಿತು. ತಮ್ಮ ಪಾರಂಪರಿಕವಾದ ಆಲಸ್ಯವನ್ನು ಬಿಟ್ಟು ಲ್ಯಾಟಿನ್ ಅಮೆರಿಕದ ಜನರು ನಿಜವಾದ ಪ್ರಜೆಗಳಂತೆ ತಮ್ಮ ರಾಷ್ಟ್ರದ ಅಭಿವೃದ್ಧಿ ಕಾರ್ಯದಲ್ಲಿ ಭಾಗವಹಿಸಲು ತೊಡಗಿದ ಸಂದರ್ಭದಲ್ಲಿ ಪಾಲೊ ಫ್ರೇರೀ ಅನಕ್ಷರಸ್ಥರಿಗೆ ವಿದ್ಯೆ ಕಲಿಸುವ ಮಾರ್ಗವು ಈ ಪ್ರಕ್ರಿಯೆಗೆ ಬಹಳ ಪೂರಕವಾಗಿ ಒದಗಿಬಂದದ್ದು ಕುತೂಹಲಕರವಾಗಿದೆ. ಓದು, ಬರಹ ಕಲಿಯುತ್ತೊಡಗುವವರು ತಮ್ಮ ಸ್ವಂತಿಕೆಯ ಹೊಸ ಅರಿವನ್ನು ಪಡೆದುಕೊಂಡವರಾಗಿ ತಮ್ಮ ಸಾಮಾಜಿಕ ಪರಿಸ್ಥಿತಿಯ ಬಗ್ಗೆ ವಿಮರ್ಶಾತ್ಮಕವಾಗಿ ವಿವೇಚಿಸಲು ತೊಡಗುತ್ತಾರೆ; ಹಾಗಾಗಿ ಅನೇಕ ವೇಳೆ ಭಾಗವಹಿಸುವ ಅವಕಾಶವನ್ನು ತಮಗೆ ನೀಡದ ಸಮಾಜವನ್ನು ಪರಿವರ್ತಿಸಲೂ ಕೂಡ ಅವರು ಕಾರ್ಯಪ್ರವೃತ್ತರಾಗುತ್ತಾರೆ.

ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ವಯಸ್ಕರ ಶಿಕ್ಷಣದ ವಿಚಾರವನ್ನು ಕುರಿತು ಪಾಲೊ ಫ್ರೇರೀ ಪ್ರಧಾನವಾಗಿ ಚಿಂತಿಸಿದರೆಂದು ಹಲವರು ನಂಬಿದ್ದರು. ಆದರೆ ಫ್ರೇರೀಯವರ ಶೈಕ್ಷಣಿಕ ತತ್ವಜ್ಞಾನ ಮತ್ತು ಚಿಂತನವಿಧಾನ ಕೇವಲ ಬ್ರೆಜಿಲ್‌ನಂಥ ತೃತೀಯ ಜಗತ್ತಿನ ರಾಷ್ಟ್ರಗಳಿಗೇ ಅಲ್ಲದೆ ಅಮೆರಿಕದಂಥ ಮುಂದುವರಿದ ರಾಷ್ಟ್ರಗಳಿಗೂ ಅಗತ್ಯವಾಗಿರುವುದು ವೇದ್ಯವಾಗುತ್ತದೆ. ತಮ್ಮ ಸಮಾಜದ ಪರಿವರ್ತನೆಯಲ್ಲಿ ಬ್ರೆಜಿಲ್‌ನ ಪ್ರಜೆಗಳು ಭಾಗವಹಿಸುವಂತೆ ಫ್ರೇರೀ ಚಿಂತನೆಗಳು ಪ್ರಚೋದಿಸುವಂತೆಯೇ ಇನ್ನಿತರ ರಾಷ್ಟ್ರಗಳ ನೊಂದ ಜನರ ಬಿಡುಗಡೆಗೂ ಕೂಡ ನಾಂದಿಹಾಡುವುದನ್ನು ತಜ್ಞರು ಗುರ್ತಿಸಿದ್ದಾರೆ. ಆ ಕಾರಣದಿಂದ ಫ್ರೇರೀ ಅವರ 'ಪೆಡಗಾಜಿ ಆಫ್ ದ ಅಪ್ರೆಸ್ಡ್''(''ತುಳಿತಕ್ಕೊಳಗಾದವರ ಶಿಕ್ಷಣ ವಿಧಾನ'') ಒಂದು ಮಹತ್ವದ ಗ್ರಂಥ.

ತಮ್ಮ ಸುತ್ತಲಿ ಜನರ ನೋವನ್ನು ಬಹಳ ಸೃಜನಾತ್ಮಕವಾಗಿ ಅರ್ಥಮಾಡಿಕೊಂಡು ಫ್ರೇರೀ ಅನುಕಂಪ ವ್ಯಕ್ತಪಡಿಸಿರುವುದು ಸ್ಪಷ್ಟವಾಗಿದೆ.೧೯೨೧ರಲ್ಲಿ ಹುಟ್ಟಿದ ಫ್ರೇರೀ ೧೯೨೯ರ ವಿಶ್ವ ಆರ್ಥಿಕ ಮುಗ್ಗಟ್ಟಿನ ಸಮಯದಲ್ಲಿ ೮-೯ ವರ್ಷಗಳ ಕೂಸು. ಆ ವೇಳೆಗಾಗಲೇ ಆರ್ಥಿಕ ಮುಗ್ಗಟ್ಟಿನ ಬಿಸಿ ಕಾವಿನ ಸ್ಪರ್ಶ ಅವರಿಗಾಗಿ, ಜಗತ್ತಿನ ನಿರ್ಗತಿಕರ ಸ್ಥಿತಿಗತಿಯನ್ನು ಅವರು ನೇರವಾಗಿ ಅನುಭವಿಸುವಂತಾದರು. ಹಾಗಾಗಿ ಹಸಿವಿನ ಸಂಕಟವನ್ನು ಅರಿಯುವ ಅವಕಾಶವೇನೋ ಆಯಿತು; ಆದರೆ ಇದರಿಂದ ಬಳಲಿದ ಬಾಲಕ ಶಾಲೆಯಲ್ಲಿ ಉಳಿದವರಿಗಿಂತ ಹಿಂದೆ ಬೀಳಬೇಕಾದ ಪ್ರಮೇಯವುಂಟಾಯಿತು. ಹಸಿವಿನ ಆಘಾತದ ಪರಿಣಾಮವಾಗಿಯೇ ಫ್ರೇರೀ ತಮ್ಮ ಹನ್ನೊಂದನೇ ವಯಸ್ಸಿನಲ್ಲಿಯೇ ಜಗತ್ತಿನ ಹಸಿವಿನ ವಿರುದ್ಧ ಜೀವನ ಪರ್ಯಂತ ಸಮರ ಸಾರುವೆನೆಂದು ಸಂಕಲ್ಪ ಮಾಡಿದರು. ತನ್ನ ವಯಸ್ಸಿನ ಇತರ ಮಕ್ಕಳು ಮುಂದೆ ಹಸಿವಿನ ವಿರುದ್ಧ ಹೋರಾಡದಿರಲೆಂಬ ಬಯಕೆ ಆತನದಾಗಿತ್ತು.

ಬಡಜನರ ಬವಣೆಯನ್ನು ಫ್ರೇರೀ ಬಹಳ ಚಿಕ್ಕ ವಯಸ್ಸಿಗೇ ಹಂಚಿಕೊಂಡದ್ದರಿಂದಲೇ ನಿರ್ಗತಿಕರ ''ಮೌನ ಸಂಸ್ಕೃತಿ'' ಎಂಬ ಪರಿಕಲ್ಪನೆಯನ್ನು ಕಂಡು ಹಿಡಿಯಲು ಸಾಧ್ಯವಾದದ್ದು. ಬಡವರ ಅಜ್ಞಾನ ಮತ್ತು ಆಲಸ್ಯ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ದಬ್ಬಾಳಿಕೆಯ ನೇರ ಪರಿಣಾಮವೆಂದು ಫ್ರೇರೀ ಪ್ರತಿಪಾದಿಸಿದರು. ತಮ್ಮ ಜಗತ್ತಿನ ಮೂರ್ತ ವಾಸ್ತವಗಳನ್ನು ಅರ್ಥಮಾಡಿಕೊಂಡು ತಕ್ಕ ಉತ್ತರವನ್ನು ಕಂಡುಕೊಳ್ಳಲು ಬಡವರನ್ನು ಪ್ರೇರೇಪಿಸುವುದಕ್ಕೆ ಬದಲಾಗಿ ವಿವೇಚನೆಯಿಂದ ಕೂಡಿದ ಸ್ಪಂದನೆ ಅಸಾಧ್ಯವಾಗುವಂಥ ಪರಿಸ್ಥಿತಿಯಲ್ಲಿ ಅವರನ್ನು ಅದುಮಿಡುವ ಹುನ್ನಾರವಾಯಿತು. ಪ್ರಚಲಿತ ಶಿಕ್ಷಣ ಕೂಡ ಈ ಮೌನ ಸಂಸ್ಕೃತಿಯನ್ನು ಮುಂದುವರಿಸುವಂಥ ವ್ಯವಸ್ಥೆಯನ್ನು ನಿರಂತರಗೊಳಿಸಿದ್ದುದು ಫ್ರೇರಿಯ ಗಮನಕ್ಕೆ ಬಂದಿತ್ತು.

ಇಂಥ ಪರಿಸ್ಥಿತಿಯನ್ನು ಬದಲಾಯಿಸುವ ಸಲುವಾಗಿ ಫ್ರೇರೀ ತಮ್ಮ ಗಮನವನ್ನು ಶಿಕ್ಷಣ ಕ್ಷೇತ್ರಕ್ಕೆ ಕೇಂದ್ರೀಕರಿಸಿದರು. ತತ್ಫಲವಾಗಿ ಶೈಕ್ಷಣಿಕ ತತ್ವಜ್ಞಾನದಲ್ಲೇ ಹೊಸ ಬಗೆಯ ಆವಿಷ್ಕಾರವೆಂಬಂತೆ ಅವರ ಚಿಂತನೆಗಳು ಹೊಸ ಹೊಳಪಿನಿಂದ ಬೆಳಗುವಂತಾಗಿದೆ. ಹೊಸ ಜಗತ್ತಿನ ನಿರ್ಮಾಣದಲ್ಲಿ ಸ್ತ್ರೀ ಪುರುಷರನ್ನು ಬಿಡುಗಡೆ ಮಾಡುವ ನೇರ ಹೋರಾಟಕ್ಕೆ ಬದಲಾಗಿ ವಿಭಿನ್ನವಾದ ಸನ್ನಿವೇಶ ಹಾಗೂ ಚಿಂತನ ಮಾರ್ಗಗಳನ್ನು ಫ್ರೇರೀ ಅನುಸರಿಸಿರುವುದು ವೇದ್ಯವಾಗುತ್ತದೆ. ಹಾಗಾಗಿ ಫ್ರೇರೀ ಪ್ರೇರಣೆ ಪಡೆದ ಮೂಲಗಳನ್ನು ಗಮನಿಸುವಾಗ ಈ ಮಹನೀಯರು ಗೋಚರಿಸುತ್ತಾರೆ; 'ಸಾರ್ತ್ರೆ ಮತ್ತು ಮೂನಿಯರ್, ಎರಿಕ್ ಫ್ರಾಮ್ ಮತ್ತು ಲೂಯಿಸ್ ಆಲ್ತಸರ್, ಆರ್ಟಗಾ ಗ್ಯಾಸೆ ಮತ್ತು ಮಾವೋ, ಮಾರ್ಟಿನ್ ಲೂಥರ್ ಕಿಂಗ್ ಮತ್ತು ಚೆ ಗೆವಾರ, ಉನಮುನೊ ಮತ್ತು ಮಾರ್ಕ್ಯೂಸ್. ಈ ಎಲ್ಲ ಮಹನೀಯರ ಚಿಂತನೆಗಳನ್ನೂ ಅರಗಿಸಿಕೊಂಡು ತನ್ನದೇ ಆದ ಶೈಕ್ಷಣಿಕ ವಿಚಾರಗಳನ್ನು ಫ್ರೇರೀ ಆವಿಷ್ಕರಿಸಿಕೊಂಡಿರುವುದರಿಂದ ಅವು ಕೇವಲ ಲ್ಯಾಟಿನ್ ಅಮೆರಿಕವ ಸಮಸ್ಯೆಗೆ ಮಾತ್ರ ಉತ್ತರವಾಗಿರದೆ ಇಡೀ ತೃತೀಯ ಜಗತ್ತಿನ ಜನರ ಜೀವನಕ್ಕೆ ಹೊಸ ಬೆಳಕು ನೀಡಬಲ್ಲ ಮಾರ್ಗಸೂಚಿಗಳಾಗಿವೆ. ಪ್ರಪ್ರಥಮ ಬಾರಿಗೆ ಅವರ ಚಿಂತನೆಗಳು ರೆಸೀಫೆ ವಿಶ್ವವಿದ್ಯಾನಿಲಯಕ್ಕೆ ೧೯೫೯ರಲ್ಲಿ ಅವರು ಸಲ್ಲಿಸಿದ ಡಾಕ್ಟರೇಟ್ ಪ್ರಬಂಧದಲ್ಲಿ ಸ್ಪಷ್ಟವಾದವು; ಅನಂತರ ಅದೇ ವಿಶ್ವವಿದ್ಯಾನಿಲಯದಲ್ಲಿ ಅವರು ಇತಿಹಾಸ ವಿಭಾಗ ಮತ್ತು ಶೈಕ್ಷಣಿಕ ತತ್ವಜ್ಞಾನ ವಿಭಾಗಕ್ಕೆ

ಪ್ರಾಧ್ಯಾಪಕರಾಗಿ ಮಾಡಿದ ಆಲೋಚನೆಗಳಲ್ಲಿ ಮೈದೋರಿದವು; ಎಲ್ಲಕ್ಕಿಂತ ಮುಖ್ಯವಾಗಿ ಆ ನಗರದಲ್ಲೇ ಅವರು ಅನಕ್ಷರಸ್ಥರನ್ನು ಸಾಕ್ಷರರನ್ನಾಗಿ ಮಾಡಲು ಕೈಕೊಂಡ ಪ್ರಯೋಗಗಳಲ್ಲಿ ಇವು ಇನ್ನಷ್ಟು ಢಾಳಾಗಿ ಕಾಣತೊಡಗಿದವು. ಈಶಾನ್ಯ ಬ್ರೆಜಿಲ್‌ನಲ್ಲಿ ಫ್ರೇರೀ ಅವರ ಪ್ರಯೋಗವನ್ನು ಕ್ಯಾಥೊಲಿಕ್ಕರು ಮತ್ತು ಇತರರು ಅನುಷ್ಠಾನಗೊಳಿಸಿದಾಗ ತಮ್ಮ ಎಂದಿನ ದರ್ಬಾರಿಗೆ ಎರವಾಗುವುದೆಂದು ದಿಗಿಲುಗೊಂಡ ಆಳರಸರು ೧೯೬೪ರ ಕ್ಷೇತ್ರ ಕ್ರಾಂತಿಯ ತರುಣದಲ್ಲೇ ಅವರನ್ನು ಸೆರೆಯಲ್ಲಿಟ್ಟರು. ತರುವಾಯ ಫ್ರೇರೀ ಚಿಲೀದೇಶಕ್ಕೆ ಹೋದರು; ಅಲ್ಲಿ ಐದು ವರ್ಷಕಾಲ ಯುನೆಸ್ಕೊ ಮತ್ತು ವಯಸ್ಕರ ಶಿಕ್ಷಣ ಕಾರ್ಯ ಕ್ರಮಗಳಲ್ಲಿ ಸೇವೆ ಸಲ್ಲಿಸಿದರು. ಅಲ್ಲಿಂದ ಮುಂದೆ ಹಾರ್ವರ್ಡ್ ವಿಶ್ವವಿದ್ಯಾನಿಲಯದ ''ಸ್ಕೂಲ್ ಆಫ್ ಎಜುಕೇಶನ್''ನಲ್ಲಿ ಕೆಲಸ ಮಾಡುತ್ತಾ ಗ್ರಾಮಾಂತರ ಮತ್ತು ನಗರ ಪ್ರದೇಶದ ಶೈಕ್ಷಣಿಕ ಪ್ರಯೋಗಗಳಲ್ಲಿ ತೊಡಗಿರುವ ಹಲವು ತಂಡಗಳ ಜೊತೆ ತಮ್ಮ ಚಿಂತನೆಗಳನ್ನು ಹಂಚಿಕೊಂಡರು.

ಮೂಲತಃ ಫ್ರೇರೀ ಪೋರ್ಚುಗೀಸ್ ಮತ್ತು ಸ್ಪ್ಯಾನಿಷ್ ಭಾಷೆಗಳಲ್ಲಿ ಹಲವು ಮಹತ್ವದ ಲೇಖನಗಳನ್ನು ಬರೆದರು. ಫ್ರೇರೀಗೆ ಜಗತ್ಪ್ರಸಿದ್ಧಿಯನ್ನು ತಂದುಕೊಟ್ಟ ಪುಸ್ತಕ 'ಪೆಡಗಾಜಿ ಆಫ್ ದ ಅಪ್ರೆಸ್ಡ್'' (ಇಂಗ್ಲಿಷ್ ಅನುವಾದ: ಮೀರಾ ಬರ್ಗ್‌ಮನ್ ರ್‍ಯಾಮೋಸ್). ಇದು ಪ್ರಕಟವಾದದ್ದು ೧೯೭೦ರಲ್ಲಿ. ಅದೇ ವರ್ಷ ''ಕಲ್ಚರಲ್ ಆ್ಯಕ್ಷನ್ ಫಾರ್ ಫ್ರೀಡಮ್'' ಎಂಬ ಮತ್ತೊಂದು ಮಹತ್ವದ ಗ್ರಂಥವನ್ನು ಅವರು ಹೊರತಂದರು.

ಪಾಲೊ ಫ್ರೇರೀಯವರ ಚಿಂತನ ಸಾಮಗ್ರಿ ನಮಗೆ ಇಡಿಯಾಗಿ ಈ ಪುಸ್ತಕಗಳಲ್ಲಿ ದಕ್ಕಿಬಿಡುತ್ತದೆ. ಒಂದು ಪುಟ್ಟ ಲೇಖನಕ್ಕೆ ಸಿಕ್ಕದ ಸಮೃದ್ಧ ಚಿಂತನ ಮಂಥನ ಅದು ಎನ್ನುವುದನ್ನು ಓದುಗರ ಗಮನಕ್ಕೆ ತರಬಯಸುತ್ತೇನೆ. ಕೇವಲ ಬೌದ್ಧಿಕ ಕಸರತ್ತಿನ ಫಲಗಳನ್ನು ಗ್ರಂಥ ರೂಪದಲ್ಲಿ ಬುದ್ಧಿಜೀವಿಗಳು ಜಗತ್ತಿಗೆ ಪುಂಖಾನುಪುಂಖವಾಗಿ ಕೊಡುತ್ತಿರುವ ಸಂದರ್ಭದಲ್ಲಿ ಒಂದು ಚಾರಿತ್ರಿಕ ಸನ್ನಿವೇಶದಲ್ಲಿ ವಾಸ್ತವವಾಗಿ ಮಾಡಿದ ಪ್ರಯೋಗಗಳ ಫಲಿತಾಂಶವನ್ನು ಫ್ರೇರೀ ನಮ್ಮೊಂದಿಗೆ ಸಂವಾದದ ಮೂಲಕ ಹಂಚಿಕೊಳ್ಳುವುದು ಬಹಳ ವಿನೂತನವಾಗಿಯೂ ಆಕರ್ಷಣೀಯವಾಗಿಯೂ ತೋರುತ್ತದೆ. ಹಾಗಾಗಿ ಆ ಚಿಂತನೆಗಳು ಬರೀ ಸಿದ್ಧಾಂತವಾಗಿ ಉಳಿಯದೆ, ಕ್ರಿಯೆಗೆ ಪ್ರಚೋದಿಸುವುದರಿಂದ ಅವುಗಳ ಮಹತ್ವ ಹೆಚ್ಚಾಗುತ್ತದೆ.

ಪಾಲೊ ಫ್ರೇರೀ ಮಟ್ಟದ ಚಿಂತಕರು ಬುದ್ಧಿಜೀವಿಯ ಮಾನವೀಕರಣಗೊಳಿಸುವ ರೀತಿಯನ್ನು ಪುನಃ ನಮ್ಮ ಕಣ್ಮುಂದೆ ತೆರೆದು ತೋರುವುದರಿಂದ ಹೊಸ ಭವಿಷ್ಯತ್ತಿಗೆ ಅವರು ದಾರಿ ಮಾಡಿಕೊಡುತ್ತಿದ್ದಾರೆ ಎಂಬುದು ಸ್ಪಷ್ಟವಾಗಿದೆ. ಫ್ರೇರೀಅವರಿಗೆ ಇದು ಸಾಧ್ಯವಾಗಲು ಕಾರಣ ಅವರು ದೃಢವಾಗಿ ನಂಬಿರುವ ಒಂದು ಕಲ್ಪನೆಯಿಂದ : ಮನುಷ್ಯ ತನ್ನ ಪ್ರಪಂಚವನ್ನು ಬದಲಿಸಲು ಸಮರ್ಥನಾಗಿದ್ದರೆ, ಹಾಗೆ ಬದಲಿಸುತ್ತಾ ವಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಹೆಚ್ಚು ಪೂರ್ಣವಾದ, ಸಮೃದ್ಧವಾದ ಸಾಧ್ಯತೆಗಳೆಡೆಗೆ ಸಾಗುತ್ತಾನೆ. ತಾನು ಸಂಬಂಧ ಹೊಂದಿರುವ. ಈ 'ಪ್ರಪಂಚ' ಇದೆಯಲ್ಲ, ಅದು ತಟಸ್ಥವಾದ, ಮುಚ್ಚಿಕೊಂಡ ವಲಯವಲ್ಲ, ಮನುಷ್ಯ ಅದರ ನಡಾವಳಿಯನ್ನು ಸಂಪೂರ್ಣವಾಗಿ ಒಪ್ಪಿಕೊಂಡು ಹೊಂದಾಣಿಕೆ ಮಾಡಿಕೊಳ್ಳಬೇಕಾದ ಪ್ರಮೇಯವಿಲ್ಲ; ಬದಲಾಗಿ ಅರಿತುಕೊಂಡು, ಪರಿಹರಿಸಿಕೊಳ್ಳಬೇಕಾದ ಸಮಸ್ಯೆ ಅದು. ಮನುಷ್ಯ ಚರಿತ್ರೆಯನ್ನು ನಿರ್ಮಿಸಲು ಪಯೋಗಿಸುವಂಥ ಸಾಮಗ್ರಿ ಇದು. ಈ ಪ್ರಕ್ರಿಯೆಯಲ್ಲಿ ಅವನು ಅಮಾನವೀಯಗೊಳಿಸುವ ಎಲ್ಲ ತಂತ್ರವನ್ನೂ ಮೆಟ್ಟಿ ನಿಲ್ಲಿ

ತ್ತಾನೆ, ಅಷ್ಟೇ ಅಲ್ಲ ಗುಣಾತ್ಮಕವಾಗಿ' ಹೊಸದಾಗಿರುವುದರ ಸೃಷ್ಟಿಗೂ ಕೂಡ ಮುಂದಾಗುತ್ತಾನೆ. ವರ್ತಮಾನದಲ್ಲಿ ಈ ಸವಾಲನ್ನು ಎದುರಿಸಲು ತಂತ್ರಜ್ಞಾನದಲ್ಲಿ ಮುಂದುವರಿದಿರುವ ಪಾಶ್ಚಾತ್ಯ ಪ್ರಪಂಚದಿಂದ ಸಂಪನ್ಮೂಲ ಬರುವುದಾದರೂ ಪ್ರಸ್ತುತ ವ್ಯವಸ್ಥೆಯನ್ನು ನಿರಾಕರಿಸಿ ಇತಿಹಾಸ ಮುಗಿದಿಲ್ಲವೆಂದು ಸಾರುವ ಚೈತನ್ಯವು ತೃತೀಯ ಜಗತ್ತಿನ ನೊಂದ ಜನ ಸಮುದಾಯದ ಹೋರಾಟದಿಂದಲೇ ಬರಬೇಕೆಂಬ ಫ್ರೇರೀ ನಂಬುತ್ತಾರೆ.

ಫ್ರೇರೀಯ ಚಿಂತನೆಯ ಪ್ರಕಾರ 'ತಟಸ್ಥ' ವಾದ ಶೈಕ್ಷಣಿಕ ಪ್ರಕ್ರಿಯೆ ಎಂಬುದಿಲ್ಲ. ಒಂದೋ, ಅದು ಪ್ರಚಲಿತ ವ್ಯವಸ್ಥೆಯ ತರ್ಕಕ್ಕೆ ಹೊಸ ಜನಾಂಗದವರನ್ನು ಹೊಂದಿಸಲು ಹವಣಿಸುತ್ತದೆ, ಇಲ್ಲವೆ 'ಬಿಡುಗಡೆಯ ಮಾರ್ಗ'ವಾಗಿ ಅದು ಪರಿಣಮಿಸುತ್ತದೆ; ಬಿಡುಗಡೆಯ ಮಾರ್ಗವೆಂದರೆ ಸ್ತ್ರೀ-ಪುರುಷರು ವಿಮರ್ಶಾತ್ಮಕವಾಗಿ ಮತ್ತು ಸೃಜನಾತ್ಮಕವಾಗಿ ವಾಸ್ತವದೊಡನೆ ಸಂವಾದ ನಡೆಸಿ ತಮ್ಮ ಪ್ರಪಂಚವನ್ನು ಪರಿವರ್ತಿಸುವ ಕ್ರಮವನ್ನು ಕಂಡು ಹಿಡಿಯುವುದು ಎಂದರ್ಥ. ಹಾಗಾಗಿ ಈ ಪ್ರಕ್ರಿಯೆಯನ್ನು ಉತ್ತೇಜಿಸುವ ಶೈಕ್ಷಣಿಕ ವಿಧಾನದ ಆವಿಷ್ಕಾರದಿಂದ ನಮ್ಮ ಸಮಾಜದ ಒಳಗಡೆಯೇ ಒಂದು ಬಗೆಯ ಕರ್ಷಣ ಮತ್ತು ಸಂಘರ್ಷ ಉಂಟಾಗುವ ಸಾಧ್ಯತೆಯನ್ನು ತಳ್ಳಿ ಹಾಕಲಾಗುವುದಿಲ್ಲ. ಆದರೆ ಇದೇ ಸಂಘರ್ಷದಿಂದ ಹೊಸ ಮನುಷ್ಯನ ಉದಯವಾಗುವುದನ್ನೂ, ಹೊಸ ಚರಿತ್ರೆಯ ಉದ್ಘಾಟನೆಯನ್ನೂ ನಾವು ಕಾಣಬಹುದಾಗಿದೆ. ಆ ಮಾರ್ಗದಲ್ಲಿ ಅನ್ವೇಷಣೆ ನಡೆಸಿರುವವರು ಮತ್ತು ಹೊಸ ಪರಿಕಲ್ಪನೆಗಳಿಗಾಗಿ ಪ್ರಯೋಗದಲ್ಲಿ ತಲ್ಲೀನರಾಗಿರುವವರಿಗೆ ಪಾಲೊ ಫ್ರೇರೀಯ ಚಿಂತನೆಗಳು ಮುಂಬರುವ ಸಂವತ್ಸರಗಳಲ್ಲಿ ಮಹತ್ವದ ಪಾತ್ರ ವಹಿಸುವುದರಲ್ಲಿ ಅನುಮಾನವಿಲ್ಲ.

೨.

ಪಾಲೊ ಫ್ರೇರೀ ತನ್ನ ಆಲೋಚನೆಯಿಂದ ಜಗತ್ತಿಗೆ ಕೊಟ್ಟ ಅನೇಕ ಪರಿಕಲ್ಪನೆಗಳಲ್ಲಿ ಮುಖ್ಯವಾದ ಕೆಲವನ್ನು ಇಲ್ಲಿ ಸಂಕ್ಷಿಪ್ತವಾಗಿ ಪರಿಚಯಿಸಬಹುದು. ಫ್ರೇರೀ ಪರಿಕಲ್ಪನೆಗಳಲ್ಲಿ 'ಪ್ರಜ್ಞೀಕರಣ' ('ಕನ್ಸಂಟೈಜೇಷನ್') ಮುಖ್ಯವಾದುದು. ಇದರ ಪರಿಣಾಮವಾಗಿ ವ್ಯಕ್ತಿ ಒಬ್ಬ ಜವಾಬ್ದಾರಿ ಪ್ರಜೆಯಾಗಿ ಚಾರಿತ್ರಿಕ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾನೆಯೇ ಹೊರತು ಮೂಕ ಪ್ರೇಕ್ಷಕನಾಗಿ ನಿಲ್ಲುವುದಿಲ್ಲ. ಸಾಮೂಹಿಕ ಅತೃಪ್ತಿಯ ಸಕರಾತ್ಮಕ ಮುಖವನ್ನು ಫ್ರೇರೀ ದಾಖಲಿಸುವುದು ಹೀಗೆ: 'ತನ್ನೊಳಗೆ ಉದ್ಭವವಾದ ಪ್ರಜ್ಞೆಯಿಂದ ವ್ಯಕ್ತಿ ಸಾಮಾಜಿಕ ಅತೃಪ್ತಿಯನ್ನು ಅಭಿವ್ಯಕ್ತಗೊಳಿಸಲು ಸಾಧ್ಯವಾಗುವುದು; ಏಕೆಂದರೆ ಒಂದು ಶೋಷಕ ಸನ್ನಿವೇಶದಲ್ಲೇ ಇಂಥ ಸಾಮಾಜಿಕ ಅತೃಪ್ತಿ ಸ್ಪಷ್ಟವಾಗಿ ಗೋಚರವಾಗುವುದು.'

ಮಾನವೀಕರಣ ಮತ್ತು ಅಮಾನವೀಕರಣ ಪರಸ್ಪರ ವ್ಯತಿರಿಕ್ತವಾದ ಪರಿಕಲ್ಪನೆಗಳು. ಆದರೆ ಇವೆರಡರಲ್ಲಿ ಯಾವುದು ಮನುಷ್ಯನ ನಿಜವಾದ ನೆಲೆ ಎಂದರೆ ಮೊದಲನೆಯದು ಎಂದು ನಿಸ್ಸಂದಿಗ್ಧವಾಗಿ ಹೇಳಬೇಕು. ಮಾನವೀಕರಣವು ಮಾತ್ರ ಹೆಜ್ಜೆ ಹೆಜ್ಜೆಗೆ ಅನ್ಯಾಯ, ಶೋಷಣೆ, ದಮನ ಮತ್ತು ಶೋಷಕರ ಹಿಂಸೆ-ಇತ್ಯಾದಿಗಳಿಂದ ಮಸುಕಾಗುತ್ತಿರುತ್ತದೆ; ಶೋಷಿತರು ಬಿಡುಗಡೆ ಮತ್ತು ನ್ಯಾಯಕ್ಕೆ ತುಡಿಯುವಾಗ ಮತ್ತು ಕಳೆದು ಹೋದ ಮಾನವೀಯತೆಯನ್ನು ಮರಳಿ ಪಡೆಯಲು ಹೋರಾಡುವಾಗ ಮತ್ತೆ ಅದು ಮೇಲ್ಪದರಕ್ಕೆ ಬರುತ್ತದೆ. ಅಂದರೆ ಅಮಾನವೀಕರಣ ಎನ್ನುವುದು ಮನುಷ್ಯನ ನಿಜ ಸ್ವಭಾವವಲ್ಲ; ಇದು ಕೇವಲ ಶೋಷಕನ ಹಿಂಸೆಯ ಪರಿಣಾಮವಾಗಿ ಉದ್ಭವವಾಗುವ ಒಂದು ಅವಸ್ಥೆ. ಆದ್ದರಿಂದಲೇ, ತುಳಿತಕ್ಕೊಳ

ಗಾದ ವ್ಯಕ್ತಿ ತನ್ನ ಸ್ಥಿತಿಯಿಂದ ಬಿಡುಗಡೆ ಪಡೆಯಲು ಮತ್ತು ಹೆಚ್ಚು ಪೂರ್ಣ ಪ್ರಮಾಣದಲ್ಲಿ ಮನುಷ್ಯನಾಗಲು ತುಡಿಯುತ್ತಾನೆ. ಈ ಹೋರಾಟಕ್ಕೆ ಒಂದು ಅರ್ಥ ಬರಬೇಕಾದರೆ ಕಳೆದು ಹೋದ ತಮ್ಮ ಮಾನವೀಯತೆಯನ್ನು ಮರಳಿ ಪಡೆಯುವ ಪ್ರಕ್ರಿಯೆಯಲ್ಲಿ ಶೋಷಿತರು ಶೋಷಕರ ಶೋಷಕರಾಗಿ ಮಾರ್ಪಾಡಾಗಬಾರದು; ಇದಕ್ಕೆ ಬದಲಾಗಿ ಎರಡೂ ಕಡೆಯವರ ಮಾನವೀಯತೆಯನ್ನು ಪುನಃ ಪಡೆಯಲು ಪ್ರಯತ್ನಿಸಬೇಕು.

ತುಳಿತಕ್ಕೆ ಒಳಗಾದವರ ಮುಂದಿರುವ ದೊಡ್ಡ ಚಾರಿತ್ರಿಕ ಸವಾಲೆಂದರೆ ತಮ್ಮನ್ನೂ ಮತ್ತು ಶೋಷಕರನ್ನೂ ಬಿಡುಗಡೆ ಮಾಡುವುದು. ಶೋಷಣೆ, ದಬ್ಬಾಳಿಕೆ ಇತ್ಯಾದಿಗಳಲ್ಲಿ ಮುಳುಗುವ ಶೋಷಕರು ನೊಂದವರನ್ನು ಬಿಡುಗಡೆ ಮಾಡುವ ಸಾಮರ್ಥ್ಯವನ್ನು ಪಡೆದಿರುವುದೇ ಇಲ್ಲ. ಶೋಷಿತರ ಒಳಗಿನಿಂದ ಚಿಮ್ಮುವ ಶಕ್ತಿಗೆ ಮಾತ್ರ ಅವರನ್ನು ಬಿಡುಗಡೆ ಮಾಡುವ ಸಾಮರ್ಥ್ಯವಿರುವುದು.

ಆದ ಕಾರಣ ತಮ್ಮ ತಾವು ಬಿಡುಗಡೆ ಮಾಡಿಕೊಳ್ಳಲು ಅವರು ಸರ್ವದಾ ಪ್ರಯತ್ನಿಸಬೇಕು. ಅವರು ಕೇವಲ ನತದೃಷ್ಟರೆಂದು ಮರುಗುವ ಖಾಲಿ ಕನಿಕರದಿಂದ ಏನೂ ಆಗುವುದಿಲ್ಲ ; ಬದಲಾಗಿ ನೊಂದವರೇ ತಮ್ಮ ಬಿಡುಗಡೆಗೆ ಹೋರಾಟವನ್ನು ಆರಂಭಿಸಬೇಕು. ಈ ಸಂಘರ್ಷದಲ್ಲಿ ಎರಡು ಹಂತಗಳಿವೆ : ಮೊದಲನೆಯದು ತುಳಿತಕ್ಕೊಳಗಾದವರು ತಮ್ಮ ನಿಜವಾದ ಸ್ಥಿತಿಯ ಬಗ್ಗೆ ಮನವರಿಕೆ ಮಾಡಿಕೊಳ್ಳುವುದು ಮತ್ತು ಚಿಂತನೆಯ ಮೂಲಕ ಪರಿವರ್ತನೆಗೆ ಬದ್ಧರಾಗುವುದು; ಎರಡನೇ ಹಂತದಲ್ಲಿ ತುಳಿತಕ್ಕೊಳಗಾದ ಸ್ಥಿತಿ ಬದಲಾಗಿರುವ ಹಿನ್ನೆಲೆಯಲ್ಲಿ ಕೇವಲ ತುಳಿತಕ್ಕೊಳಗಾಗಿರುವವರ ಸಿಧಾನವಾಗಿ ಉಳಿಯದೆ ಎಲ್ಲರ ಬಿಡುಗಡೆಯ ಪ್ರಕ್ರಿಯೆಯಾಗಿ ಮಾರ್ಪಾಟಾಗುತ್ತದೆ.

ಜನರ ಪರವಾಗಿ ನಿಲ್ಲುವವರು ಅರೆ ಮನಸ್ಸಿನಲ್ಲಿ ಆ ಕಡೆ ವಾಲಿದರೆ ಪ್ರಯೋಜನವಿಲ್ಲ; ಏಕೆಂದರೆ ಜನರ ಪರವಾದ ಧೋರಣೆಯನ್ನು ಧರಿಸುವುದೆಂದರೆ ಸಂಪೂರ್ಣವಾದ ಬದ್ಧತೆ ಎಂದೇ ಅರ್ಥ. ಇಲ್ಲಿ ಅರ್ಧಮರ್ಧ ನಡವಳಿಕೆಗೆ, ವರ್ತನೆಗೆ ಅವಕಾಶವಿರುವುದಿಲ್ಲ. ಜನರ ಪರವಾಗಿ ಪರಿವರ್ತನೆಯಾಗುವುದು ಎಂದರೆ ಮತ್ತೆ ಹೊಸ ಜನ್ಮವನ್ನು ತಾಳಿದಷ್ಟು ಘನವಾದದ್ದೆಂದು ತಿಳಿಯಬೇಕು. ಜನರ ಪರವಾಗಿ ನಿಂತು ಅವರನ್ನು ಬಿಡುಗಡೆಗೊಳಿಸುವಾಗ ಅವರ ಪ್ರಪಂಚವನ್ನು ಪರಿವರ್ತಿಸಲು ಚಿಂತಿಸಿ, ಕ್ರಿಯೆಗಿಳಿಯುವುದೇ ಆಗಿದೆ. ''ಒಂದು ಶಬ್ದ ಉಚ್ಚರಿಸಿದರೆ ಪ್ರಪಂಚವನ್ನು ಪರಿವರ್ತಿಸಿದಂತೆ'' ಎಂಬ ಮಾತಿದೆ. ಒಂದು ಶಬ್ದದಲ್ಲಿಯೇ ಎರಡು ಆಯಾಮಗಳಿವೆ, ಮನನ ಮತ್ತು ಕ್ರಿಯೆ. ಮನನ ಮತ್ತು ಕ್ರಿಯೆಯ ಕಾರಣದಿಂದಾಗಿ ಯಾವ ವ್ಯಕ್ತಿಯನ್ನೂ ಸುಮ್ಮನಿರಿಸಲು ಆಗುವುದಿಲ್ಲ. ಹಾಗೆಯೇ ಸುಳ್ಳು ಶಬ್ದಗಳಿಂದ ಮನುಷ್ಯನ ಇರುವನ್ನು ಪೋಷಿಸಲಾಗುವುದಿಲ್ಲ. ಆದರೆ ನಿಜವಾದ ಶಬ್ದಗಳಿಂದ ಮಾತ್ರ ಜಗತ್ತನ್ನು ಪರಿವರ್ತಿಸಲು ಸಾಧ್ಯ. ಮಾನವೀಯವಾಗಿ ಬದುಕುವುದೆಂದರೆ, ಜಗತ್ತನ್ನು ನಾಮಕರಣ ಮಾಡಿದಂತೆ, ಅದನ್ನು ಬದಲಾಯಿಸಿದಂತೆ... ಜನರನ್ನು ಮೌನದಲ್ಲಿ ನಿರ್ಮಿಸಲಾಗುವುದಿಲ್ಲ, ಅವರು ಹುಟ್ಟುವುದೇ ಶಬ್ದದಲ್ಲಿ, ಊರ್ಜಿತವಾಗುವುದೂ ಕೂಡ ಶಬ್ದದಲ್ಲಿ, ದುಡಿಯುವುದು ಶಬ್ದದಲ್ಲಿ ; ಮನನ-ಕ್ರಿಯೆಗಳಾಗುವುದೂ ಶಬ್ದದಲ್ಲಿ. ಹಾಗೆಯೇ ಯಾವ ಒಬ್ಬ ವ್ಯಕ್ತಿಗೇ ನಿಜದ 'ನುಡಿ' (ಶಬ್ದ/ಪದ) ದಕ್ಕುವುದಿಲ್ಲ; ಇನ್ನೊಬ್ಬನ ಪರವಾಗಿಯೂ ಅವನಿಗೆ ಆಡಲು ಬರುವುದಿಲ್ಲ.

ಆದ ಕಾರಣ ನುಡಿಯುವುದರ ಬಗ್ಗೆ ಯಾರು ತಮ್ಮ ಆಜನ್ಮ ಹಕ್ಕನ್ನು ಕಳೆದುಕೊಂಡಿದ್ದಾರೋ ಅವರು ಮೊದಲು ತಮ್ಮ ನುಡಿಯುವ ಹಕ್ಕನ್ನು ಮರಳಿ ಪಡೆಯಲಿ, ಮತ್ತು ಅಮಾನವೀಕರಣಗೊಳಿಸುವ ಆಕ್ರಮಣದ ಮುಂದುವರಿಕೆಗೆ ಇತಿಶ್ರೀ ಹಾಡಲಿ.

ಸಂವಾದ ಮಾನವ ಬದುಕಿಗೆ ಅತ್ಯಂತ ಅವಶ್ಯಕವಾದುದು. ಈ ಜಗತ್ತಿನ ಬಗ್ಗೆ ಮತ್ತು ಇಲ್ಲಿನ ಮಾನವರ ಬಗ್ಗೆ ಘನವಾದ ಪ್ರೀತಿಯನ್ನು ಇರಿಸಿಕೊಂಡಾಗಲೇ ಸಂವಾದ ಸಾಧ್ಯವಾಗುವುದು. ಪ್ರೀತಿಯಿಲ್ಲದ ಪರಿಸ್ಥಿತಿಯಲ್ಲಿ ನಾವು ದಬ್ಬಾಳಿಕೆಯನ್ನು ನೋಡುತ್ತೇವೆ. ದಬ್ಬಾಳಿಕೆ ಮಾಡುವವನ ಹಿಂಸಾನಂದದ ಹುಚ್ಚಾಟವೇನು? ದಬ್ಬಾಳಿಕೆಗೆ ಒಳಗಾದವನ ಮಾನವ ದ್ವೇಷವೇನು? ವಿನಯವಿಲ್ಲದೆ ಸಂವಾದವಿಲ್ಲ ಎನ್ನುವುದನ್ನೂ ನಾವು ನೆನಪಿಡಬೇಕು. ಸಂವಾದಕ್ಕೆ ಬೇಕಾದ ಇನ್ನೊಂದು ಅತ್ಯಮೂಲ್ಯ ಸಾಮಗ್ರಿ ಎಂದರೆ ಮಾನವನ ಬಗ್ಗೆ ಉತ್ಕಟವಾದ ನಂಬಿಕೆ; ಸೃಷ್ಟಿಸುವ ಮತ್ತು ಪುನರ್‌ಸೃಷ್ಟಿಸುವ ಅವನ ಸಾಮರ್ಥ್ಯದಲ್ಲಿ ನಂಬಿಕೆ ; ಅವನು ಹೆಚ್ಚು ಪರಿಪೂರ್ಣವಾದ ಮಾನವನಾಗುವುದರಲ್ಲಿ ನಂಬಿಕೆ. ಹೆಚ್ಚು ಪೂರ್ಣ ಮಾನವರಾಗುವುದು ಕೇವಲ ಒಂದು ವರ್ಗದ ಏಕಸ್ವಾಮ್ಯವಲ್ಲ, ಬದಲಾಗಿ ಇದು ಎಲ್ಲರ ಆಜನ್ಮಸಿದ್ಧ ಹಕ್ಕು.

ಭರವಸೆ ಇಲ್ಲದೆ ಸಂವಾದವಿಲ್ಲ. ಅನ್ಯಾಯದ ವ್ಯವಸ್ಥೆಯಲ್ಲಿ ಉಂಟಾಗುವ ಅಮಾನವೀಯತೆಯು ನಿರಾಶೆಗೆ ಎಡೆ ಮಾಡಿಕೊಡಬೇಕಾಗಿಲ್ಲ, ಬದಲಾಗಿ ಭರವಸೆಗೆ ಅದು ನಾಂದಿ ಹಾಡಬೇಕು. ಅನ್ಯಾಯದಿಂದ ದುರ್ಲಭವಾಗಿರುವ ಮಾನವೀಯತೆಯ ನಿಲ್ಲದ ಹುಡುಕಾಟ ಇದರಿಂದ ಸಾಧ್ಯವಾಗಬೇಕು. ಆದರೆ ಕೈಕಟ್ಟಿ ಅಲಾಯಿದವಾಗಿ ನಿಲ್ಲುವುದರಿಂದ ಭರವಸೆ ಬರುವುದಿಲ್ಲ. 'ನಾನು ಹೋರಾಡುವ ತನಕ, ಭರವಸೆ ನನ್ನ ಬೆಂಗಾವಲಿಗಿದೆ ; ಭರವಸೆಯನ್ನು ಹೊತ್ತು ನಾನು ಹೋರಾಡಿದರೆ ನಾನು ನಿರಾತಂಕವಾಗಿ ಕಾಯಬಲ್ಲೆ.'

ಪರಿವರ್ತಿಸಬಲ್ಲ, ಸೃಷ್ಟಿಶೀಲ ಚೈತನ್ಯರಾಗಿ ವ್ಯಕ್ತಿಗಳು ಭೌತಿಕ ವಸ್ತುಗಳನ್ನಷ್ಟೇ ಅಲ್ಲದೆ ಸಾಮಾಜಿಕ ಸಂಸ್ಥೆಗಳನ್ನು, ಐಡಿಯಾಗಳನ್ನು ಮತ್ತು ಪರಿಕಲ್ಪನೆಗಳನ್ನು ನಿರ್ಮಾಣಮಾಡಬಲ್ಲರು. ತಮ್ಮ ನಿರಂತರ ಚಿಂತನೆ ಮತ್ತು ಕ್ರಿಯೆಯಿಂದಾಗಿ ವ್ಯಕ್ತಿಗಳು ಏಕಕಾಲದಲ್ಲಿ ಚರಿತ್ರೆಯನ್ನು ನಿರ್ಮಿಸಲೂ ಬಲ್ಲರು ಹಾಗೆಯೇ ಚಾರಿತ್ರಿಕ-ಸಾಮಾಜಿಕ ಮಂದಿಯಾಗಿಯೂ ರೂಪುಗೊಳ್ಳಬಲ್ಲರು. ಏಕೆಂದರೆ ಮನುಷ್ಯನ ವೈಶಿಷ್ಟ್ಯವಿರುವುದು ಆತ ಕಾಲವನ್ನು ಭೂತ, ವರ್ತಮಾನ ಮತ್ತು ಭವಿಷ್ಯತ್ತೆಂದು ತ್ರಿ-ಆಯಾಮಗೊಳಿಸುವ ತನ್ನ ಶಕ್ತಿಯಲ್ಲಿ.

ಪಾಲೊ ಫ್ರೇರೀ ಅವರ ಚಿಂತನೆಗಳ ಸ್ಥೂಲ ಪರಿಚಯ ಮಾಡಿಕೊಳ್ಳುವಾಗ ವಿದ್ಯೆಯಿಲ್ಲದ ಜನಸ್ತೋಮದ ಮೌನದ ಬಗ್ಗೆ ಅವರಾಡಿರುವ ಮಾತುಗಳನ್ನು ಮನನ ಮಾಡಬೇಕಾದದ್ದು ಅತಿ ಅವಶ್ಯಕವಾಗಿದೆ. ಅಗಾಧವಾದ ಜನಸ್ತೋಮ ಮೌನದಿಂದಿರುವುದೇಕೆಂದರೆ ಶಕ್ತಿವಂತ ಅಲ್ಪಸಂಖ್ಯಾತರು ಅವರನ್ನು ಬಾಯಿ ಮುಚ್ಚಿಸಿರುವುದರಿಂದ. ಆದರೆ ಶಕ್ತಿವಂತ ಈ ಅಲ್ಪಸಂಖ್ಯಾತರು ಉದ್ಭವವಾಗಿರುವುದು ಮೌನವ್ರತಿಗಳಾದ ಜನಸ್ತೋಮದಿಂದಲೇ. ತಾವು ಮೊದಲು ಕಾಣದಿದ್ದ ನಿಜವನ್ನು ಒಂದೇ ಏಟಿಗೆ ಜನಸ್ತೋಮ ಕಂಡುಕೊಳ್ಳುವಾಗ ಅವರಿಗೆ ಆಶ್ಚರ್ಯವಾಗುತ್ತದೆ; ಅದೇ ಪ್ರಕಾರ ಶಕ್ತಿವಂತ ಅಲ್ಪಸಂಖ್ಯಾತರೂ ಕೂಡ ಜನಸ್ತೋಮ ತಮ್ಮ ಮುಖವಾಡವನ್ನು ತೆಗೆವಾಗ ಆಶ್ಚರ್ಯಗೊಳ್ಳುತ್ತಾರೆ. ಈ ಇಬ್ಬಗೆಯ ಅನಾವರಣದಿಂದ ಜನಸ್ತೋಮ ಮತ್ತು ಶಕ್ತಿವಂತ ಶ್ರೀಮಂತರು ಆತಂಕಕ್ಕೊಳಗಾಗುತ್ತಾರೆ. ಜನಸ್ತೋಮಕ್ಕೆ ಬಿಡುಗಡೆ ಪಡೆಯಲು ಮತ್ತು ಯಾವತ್ತೂ ಅಂಟಿಕೊಂಡ ಮೌನವನ್ನು ಮುರಿದು ಮೇಲೇಳಲು ಆತಂಕವಾದರೆ ಅಲ್ಪಸಂಖ್ಯಾತ ಪ್ರತಿಷ್ಠಿತರಿಗೆ ಯಥಾಸ್ಥಿತಿಯನ್ನು ಮುಂದುವರಿಸುವಲ್ಲಿ ಆತಂಕ; ನಿಜವಾದ, ಆಮೂಲಾ

ಗ್ರವಾದ ಬದಲಾವಣೆಯನ್ನು ಅವರು ಎಂದೂ ಬಯಸುವುದಿಲ್ಲ; ಮೇಲು ಮೇಲಿನ ಪರಿವರ್ತನೆಯಷ್ಟೇ ಅವರ ಪರಿಪೇಕ್ಷದಲ್ಲಿ. ಕ್ರಾಂತಿಕಾರಕವಾದ ಆದರ್ಶ ರಾಜ್ಯವು ಚಲನಶೀಲವಾಗಿರುತ್ತದೆಯೇ ಹೊರತು ನಿಂತ ನೀರಾಗಿರುವುದಿಲ್ಲ; ಜೀವ ಪರವಾಗಿರುತ್ತದೆ, ಮರಣೋನ್ಮುಖವಾಗಿರುವುದಿಲ್ಲ; ವರ್ತಮಾನದ ಪುನರಾವರ್ತನೆಯಾಗಿರುವುದಿಲ್ಲ, ಮನುಷ್ಯನ ಸೃಷ್ಟಿಶೀಲತೆಗೆ ಸವಾಲಾಗಿ ಭವಿಷ್ಯಮುಖಿಯಾಗಿರುತ್ತದೆ, ಜೀವನದ ಭಾವನೆಯಾಗಿರುತ್ತದೆ, ತಣ್ಣನೆಯ ಅಮೂರ್ತತೆಯಾಗಿರುವುದಿಲ್ಲ; ಸೌಹಾರ್ದವಾಗಿ ಬಾಳುವುದಾಗಿರುತ್ತದೆ, ಕೇವಲ ಗುಂಪಿಗೆ ಹಾತೊರೆಯುವುದಿಲ್ಲ; ಸಂವಾದಕ್ಕೆಳೆಸುತ್ತದೆ. ಬಾಯಿಕಟ್ಟುವ ರೀತಿಯನ್ನಲ್ಲ; ಆಲೋಚನೆ ಮತ್ತು ಕ್ರಿಯೆಗೆ ಬದ್ಧವಾಗಿರುತ್ತದೆ, 'ಕಾನೂನು ಮತ್ತು ಶಿಸ್ತು' ಎಂಬ ಗೊತ್ತಿಗೆ ಕಟ್ಟಿ ಹಾಕಲ್ಪಡುವುದಿಲ್ಲ, ಸೃಜನಶೀಲವಾದ ಸಂವಹನ ಶಕ್ತಿಯುಳ್ಳ ಭಾಷೆಗೆ ತುಡಿಯುತ್ತದೆ. ಸೂಚ್ಯವಾದ ಸಂಕ್ಷಿಪ್ತ ಸಂಕೇತಗಳಿಗಲ್ಲ; ಬಾಳಿಗೆ ಅಳವಡುವ ಮೌಲ್ಯಗಳ ಸ್ವೀಕರಣೆಯೇ ಹೊರತು ಮೇಲಿಂದ ಹೇರಲ್ಪಟ್ಟ ಮಿಥಕಗಳ ಮೈತ್ರಿಯಲ್ಲ.

ನಮ್ಮನ್ನು ಅವಮಾನವೀಯಗೊಳಿಸುವ ರಚನೆಗಳನ್ನು ಧ್ವಂಸ ಮಾಡದೇ ಪ್ರಜ್ಞೀಕರಣವನ್ನು ನಾವು ಸಾಧಿಸಲಾರೆವು. ಪ್ರಜ್ಞೀಕರಣವನ್ನು ಸಾಧಿಸುವುದೆಂದರೆ ''ಸುಳ್ಳುಪ್ರಜ್ಞೆ''ಯನ್ನು ಮೆಟ್ಟಿ ನಿಲ್ಲುವ ವಿಧಾನ ಎಂಬರ್ಥ. ಆದ್ದರಿಂದಲೇ ಬಲಪಂಥೀಯರಿಗೆ ಈ ಸುಳ್ಳುಪ್ರಜ್ಞೆಯನ್ನು ಮೀರಲು ಆಗುವುದಿಲ್ಲ. ಹಾಗಾಗಿಯೇ ಬಲಪಂಥೀಯರು ಒಂದು ಆದರ್ಶರಾಜ್ಯದ ಕನಸು ಕಾಣಲು ಅಸಮರ್ಥರಾಗಿರುವುದು. ಈ ಪ್ರಜ್ಞೀಕರಣವನ್ನು ಸಾಂಸ್ಕೃತಿಕ ಕ್ರಿಯೆಯಿಂದ ಉಂಟು ಮಾಡಲು ಅವರಿಗೆ ಆಗುವುದಿಲ್ಲ. ಹೊಸ ವಾಸ್ತವವನ್ನು ನಿರ್ಮಿಸುವ ಸಾಮರ್ಥ್ಯವನ್ನು ಪ್ರಕಟಿಸುತ್ತಾ ಅಮಾನವೀಕರಣ ಎಲ್ಲ ರಚನೆಗಳನ್ನು ಇಲ್ಲವಾಗಿಸಬೇಕು. ಅನ್ಯಾಯದ ಶಿಲ್ಪಗಳನ್ನು ಕೆಡವದೆ ಪ್ರಜ್ಞೀಕರಣವಿಲ್ಲ ; ಇದು ಬಲಪಂಥೀಯರಿಗೆ ಖಂಡಿತವಾಗಿ ಸಾಧ್ಯವಾಗದ ಮಾತು. ಕೇವಲ ದಬ್ಬಾಳಿಕೆಗೆ ಮಾತ್ರ ಬಲಪಂಥ ಸಾಂಸ್ಕೃತಿಕ ಕ್ರಿಯೆಯ ಹೊಸ ರೂಪಗಳನ್ನು ಸೃಷ್ಟಿಸಿಕೊಳ್ಳಬಲ್ಲದು. ಬಿಡುಗಡೆಗಾಗಿ ಸಾಂಸ್ಕೃತಿಕ ಕ್ರಿಯೆ ಎನ್ನುವಾಗ ಸಂವಾದವೇ ಪ್ರಧಾನವಾಗುತ್ತದೆ; ಮತ್ತು ಸಂವಾದದಲ್ಲಿ ದಬ್ಬಾಳಿಕೆಯ ಲವಲೇಶವು ಇರುವುದಿಲ್ಲ. ದಬ್ಬಾಳಿಕೆಗೆ ಸಾಂಸ್ಕೃತಿಕ ಕ್ರಿಯೆ ಎಂದರೆ ಅಲ್ಲಿ ಸಂವಾದ ಪಲಾಯನವಾಗಿ ಬಿಟ್ಟು ಜನರನ್ನು ನಿಶ್ಚೇಷ್ಟಿತರನ್ನಾಗಿಸುವ ಹುನ್ನಾರ ಎದ್ದು ಕಾಣುತ್ತದೆ. ಪ್ರಜ್ಞೀಕರಣವನ್ನು ಹುಟ್ಟು ಹಾಕುವುದಕ್ಕೆ ಬದ್ಧರಾದವರು ಬಿಡುಗಡೆಯ ಚಿಂತನೆಯನ್ನು ಚಮತ್ಕಾರದಲ್ಲಿ ಮೂಡಿಸುವುದಲ್ಲ, ಬದಲಾಗಿ ತಮ್ಮ ಸಂಪೂರ್ಣ ಮನಸ್ಸಿನ ಗ್ರಹಣ ಶಕ್ತಿಯ ಸಹಾಯದಿಂದ ಅವರು ವಾಸ್ತವದ ಸತ್ಯವನ್ನು ಅರಿಯುವಂತೆ ಮಾಡುವುದು.

ಕ್ರಾಂತಿಕಾರಕನಾದ ವಾಸ್ತವದ ಉದ್ಘಾಟನೆಯಾದ ಬಳಿಕ 'ಪ್ರಜ್ಞೀಕರಣ' ಅನಿವಾರ್ಯವೆಂಬಂತಾಗುತ್ತದೆ. ಹೊಸ ವಾಸ್ತವದ ಅರಿವಿನಲ್ಲೂ ಕೂಡ ಜನರು ತಮ್ಮ ಎಂದಿನ ಮಿಥ್‌ಗಳಿಗೆ ಅಂಟಿಕೊಳ್ಳುವ ಸಾಧ್ಯತೆಯಿರುವುದರಿಂದ ಅದನ್ನು ನಿವಾರಿಸಲು 'ಪ್ರಜ್ಞೀಕರಣ'ದ ಅವಶ್ಯಕತೆಯಿರುತ್ತದೆ. ಈ 'ಪ್ರಜ್ಞೀಕರಣ' ಎಂಬುದು ಇನ್ನೊಂದು ದಿಗಿಲಿನ ವಿರುದ್ಧವೂ ನಮಗೆ ಅಗತ್ಯವಾಗಿ ಬೇಕಾದ ಗುರಾಣಿಯಾಗಿದೆ; ಆ ದಿಗಿಲಾವುದೆಂದರೆ ತನ್ನ ಹಿಂದುಳಿದಿರುವಿಕೆಯನ್ನು ಹೋಗಲಾಡಿಸಿಕೊಳ್ಳಲು ಸಮಾಜ ಅವಲಂಬಿಸುವ ತಂತ್ರಜ್ಞಾನ ಮಿಥಕೀಕರಣದ ದಿಗಿಲು.

ಈ 'ಪ್ರಜ್ಞೀಕರಣ' ಎಂಬುದು ಕ್ರಾಂತಿಕಾರಿಗಳು ಬಹಳ ಪರಿಣಾಮಕಾರಿಯಾಗಿ ಉಪಯೋಗಿಸುವ ಮಂತ್ರಶಕ್ತಿಯಲ್ಲ, ಬದಲಾಗಿ ಅವರ ಧ್ಯಾನಸ್ಥ ಕ್ರಿಯೆಗೆ ಒದಗಿ ಬರುವ ಒಂದು

ಮೂಲಭೂತ ಆಯಾಮ. ವ್ಯಕ್ತಿಗಳು 'ಪ್ರಜ್ಞೆಯಿಂದ ಕೂಡಿದವರಾಗಿ' ಇಲ್ಲದಿದ್ದ ಪಕ್ಷದಲ್ಲಿ 'ಪ್ರಜ್ಞೀಕರಣ' ಕ್ಕೆ ಅರ್ಥವೇ ಇರುತ್ತಿರಲಿಲ್ಲ. ವ್ಯಕ್ತಿಗಳು ನೋಡುವ, ಕ್ರಿಯೆಗಿಳಿಯುವ ಸಾಮರ್ಥ್ಯ ಹೊಂದಿದ್ದಾರೆ; ತಿಳಿಯುವ ಪ್ರತಿಕ್ರಿಯಿಸುವ ಶಕ್ತಿ ಇರುವಂತೆಯೇ ತಮ್ಮ ಮತ್ತು ಜಗತ್ತಿನ ಬಗ್ಗೆ ಕೂಡ ಅವರಿಗೆ ಅರಿವಿದೆ. ಅಪ್ಪಟವಾದ ಕ್ರಾಂತಿಗಳಾಗುವುದು ಜನರನ್ನು ಬಿಡುಗಡೆಗೊಳಿಸಲಿಕ್ಕಾಗಿ; ತುಳಿಯಲ್ಪಟ್ಟ ಸ್ಥಿತಿಯಲ್ಲಿ ತಾವಿರುವ ಸಿಜ ಅವರಿಗೆ ತಿಳಿಯುವ ಕಾರಣದಿಂದಲೇ ತಾವು ಜೀವಿಸುವ ದಬ್ಬಾಳಿಕೆಯ ವಾಸ್ತವದ ಬಗ್ಗೆ ಗಮನ ಇರುವುದರಿಂದಲೇ ಅವರನ್ನು ಬಿಡುಗಡೆಗೊಳಿಸಲು ಸಾಧ್ಯವಾಗುವುದು.

ಆದರೆ ಒಂದು ಮಾತನ್ನು ನಾವು ನೆನಪಿಡಬೇಕು : ವಾಸ್ತವದ ಕಾರಣ ವ್ಯಕ್ತಿಗಳ ಪ್ರಜ್ಞೆ ಮಿತಿಗೊಳ್ಳುವುದರಿಂದ 'ಪ್ರಜ್ಞೀಕರಣ' ವು ಮೊದಲು ಅವರನ್ನು ವಾಸ್ತವವನ್ನು ಸ್ಪಷ್ಟವಾಗಿ ಕಾಣಲಾಗದ ಅವರ ದೃಷ್ಟಿಯನ್ನು ತಿಳಿಗೊಳಿಸುವ ಕಡೆ ಮಿಡಿಯಬೇಕಾಗುತ್ತದೆ. ಅಪ್ಪಟತನವನ್ನು ಮೆರೆಯಬೇಕಾದರೆ, ಕ್ರಾಂತಿ ಎಂಬುದು ನಿರಂತರವಾಗಬೇಕು. ಹಾಗಲ್ಲದಿದ್ದರೆ ಅದು ಕ್ರಾಂತಿಯಾಗದೆ ಕೇವಲ ಅಧಿಕಾರಶಾಹಿಯಾಗಿ ಬಿಡುತ್ತದೆ.

'ಪ್ರಜ್ಞೀಕರಣ' ದಿಂದಲೇ ಬಿಡುಗಡೆ ಸಾಧ್ಯ; ಮತ್ತು ಆ ಮಾರ್ಗವಾಗಿಯೇ ಮುಳುಗದ ಸ್ಥಿತಿಯಿಂದ ಮೇಲೆ ಮಾಡಿ ಥಾಳಾಗಿ ಕಾಣಿಸಿಕೊಳ್ಳಲು ಸಾಧ್ಯ. ಮನುಷ್ಯರಲ್ಲಿ ನಮಗೆ ನಂಬಿಕೆ ಇದ್ದ ಪಕ್ಷದಲ್ಲಿ ಅವರು ಮನುಷ್ಯರೆಂದು ಕರೆದು ಸುಮ್ಮನಾಗುವುದರಲ್ಲಿ ಅರ್ಥವಿಲ್ಲ; ಅವರು ಮಾನವರಾಗಿ ಬದುಕುವತ್ತ ಪುನಃರೂ ಮೂರ್ತವಾದದ್ದನ್ನು ಕೈಕೊಂಡಾಗ ಮಾತ್ರ ನಮ್ಮ ಬದುಕು ಹೊಸ ಅರ್ಥದಲ್ಲಿ ಹೊಳೆಯುತ್ತದೆ.

-೩-

ಅಕ್ಷರ ಕಲಿಯಬೇಕಾದ ಮಹತ್ವವನ್ನು ಪಾಲೊ ಫ್ರೇರೀ ಪರೋಕ್ಷವಾಗಿ ತಮ್ಮ 'ಪ್ರಜ್ಞೀಕರಣ' ವೆಂಬ ಕ್ರಾಂತಿಕಾರಿ ಪರಿಕಲ್ಪನೆಯ ಮೂಲಕ ಹೀಗೆ ತಿಳಿಯಹೇಳಿದ್ದಾರೆ. ಅವರ ಚಿಂತನೆಯ ಕೇಂದ್ರದಲ್ಲಿರುವುದು ಮಾನವೀಕರಣದ ಜರೂರು. ಅಮಾನವೀಯಗೊಳಿಸುವ ದಬ್ಬಾಳಿಕೆಯಿಂದ ಮನುಷ್ಯ ಮನುಷ್ಯನಾಗದೆ ಮೃಗವಾಗಿ ಬಿಡುತ್ತಾನೆ. ಮೃಗೀಯಾವಸ್ಥೆಯಾದರೂ 'ಪರಿಮಿತ-ಸನ್ನಿವೇಶ'ವನ್ನು ಮೀರಲಾರದೆ ಬಡಪಶು ಪಂಕದಲ್ಲಿ ಬಿದ್ದ ಅವಸ್ಥೆಯನ್ನು ಸೂಚಿಸುತ್ತದೆ. ಇಂತ ಪರಿಸ್ಥಿತಿಯಲ್ಲಿ ಮನುಷ್ಯ ಕೇವಲ ವಸ್ತುವಾಗಿ ಬಿಡುತ್ತಾನೆ. ಇವನನ್ನು ಈ ಸ್ಥಿತಿಯಿಂದ ಮೇಲೆತ್ತಬೇಕಾದದ್ದೇ ಸವಾಲು; ಪರಿವರ್ತನೆಯ ಪರಿಕರಗಳನ್ನು ಇವನು ಹೊಂದಿರುವುದೂ ಕೂಡ ಇವನ ಉದ್ಧಾರಕ್ಕೆ ತುಡಿಯಲು ಕಾರಣವಾಗಿದೆ. ಫ್ರೇರೀ ಈ ಮಹತ್ವದ ಪರಿಕಲ್ಪನೆಗಳನ್ನು ನೀಡಿ ಹಲವು ದಶಕಗಳೇ ಕಳೆದಿದ್ದರೂ ತೃತೀಯ ಜಗತ್ತಿನಲ್ಲಿ ನಿರಕ್ಷರಿಗಳ ಪಡೆ ದಿನೇ ದಿನೇ ಹೆಚ್ಚುತ್ತಿರುವುದರಿಂದ ಆ ಚಿಂತನೆಗಳು ಹೊಸ ಕಾಂತಿಯಿಂದ ಮಿನುಗುತ್ತಿವೆ ಮತ್ತು ಅವುಗಳ ಬೆಳಕಿನಲ್ಲಿ ಮರೆತಿರುವ ಅಜ್ಞಾನ ಅಂಧಕಾರವನ್ನು ತಗ್ಗಿಸುವ ಸಾಧ್ಯತೆಗಳನ್ನು ಕಂಡುಕೊಳ್ಳಬಹುದಾಗಿದೆ.

ಗ್ರಂಥ ಋಣ:

೧. ಪಾಲೊ ಫ್ರೇರೀ : "ಪೆಡಗಜಿ ಆಫ್ ದಿ ಅಪ್ರೆಸ್ಡ್", ೧೯೭೨, ಪೆಂಗ್ವಿನ್ ಎಜುಕೇಶನ್

೨. ಪಾಲೊ ಫ್ರೇರಿ : "ಕಲ್ಚರಲ್ ಆಕ್ಷನ್ ಫಾರ್ ಫ್ರೀಡಂ", ೧೯೭೨, ಪೆಂಗ್ವಿನ್ ಎಜುಕೇಶನ್

೩. ಮಿತ್ರರಾದ ಶ್ರೀ ಲಿಂಗದೇವರು ಹಳೆಮನೆ ಹಾಗೂ ಶ್ರೀ ಎ.ಡಿ.ನಂಜುಂಡಸ್ವಾಮಿಯವರೊಡನೆ ನಡೆದ ಸಂಭಾಷಣೆಯಲ್ಲಿ ವ್ಯಕ್ತವಾದ ಅಭಿಪ್ರಾಯಗಳನ್ನು ಈ ಲೇಖನದಲ್ಲಿ ಅಳವಡಿಸಿಕೊಂಡಿದ್ದೇನೆ; ಈ ಮಿತ್ರದ್ವಯರಿಗೆ ಕೃತಜ್ಞತೆಗಳು.

ವಯಸ್ಕರ ಶಿಕ್ಷಣದ ಏಳುಬೀಳುಗಳು

ಲಿಂಗದೇವರು ಹಳೆಮನೆ
ಅಧ್ಯಾಪಕರು, ಭಾರತೀಯ ಭಾಷಾ ಸಂಸ್ಥಾನ
ಮಾನಸಗಂಗೋತ್ರಿ ಮೈಸೂರು-೫೭೦ ೦೦೬

ಭಾರತದ ಆಧುನಿಕ ಶೈಕ್ಷಣಿಕ ವ್ಯವಸ್ಥೆಯಲ್ಲಿ ವಯಸ್ಕರ ಶಿಕ್ಷಣಕ್ಕೆ ಬಹಳ ಪ್ರಮುಖವಾದ ಸ್ಥಾನ ಇದೆ. ಬ್ರಿಟಿಷರು ಆಧುನಿಕ ಶಿಕ್ಷಣ ಕ್ರಮವನ್ನು ಭಾರತದಲ್ಲಿ ಜಾರಿಗೆತಂದಾಗ ಕಲಿಕೆ ಬಗ್ಗೆ, ಶಿಕ್ಷಣದ ಮಹತ್ವ ಮತ್ತು ಪಾತ್ರದ ಬಗ್ಗೆ ಹೊಸ ಪರಿಕಲ್ಪನೆಗಳು ಜನರ ಮನಸ್ಸಿನಲ್ಲಿ ಬೇರೂರಲಾರಂಭಿಸಿದವು. ಅವುಗಳಲ್ಲಿ ವಯಸ್ಕರ ಶಿಕ್ಷಣವೂ ಒಂದು. ವಯಸ್ಕರ ಶಿಕ್ಷಣ ಪ್ರಾರಂಭವಾದದ್ದೇ ವಯಸ್ಕ ಕಲಿಯ ಬಲ್ಲನೇ ? ಎಂಬ ಜಿಜ್ಞಾಸೆಯಿಂದ. ಜೀವನದುದ್ದಕ್ಕೂ ತನ್ನ ಅನುಭವದ ಮೂಲಕವೇ ಹೊಸಹೊಸ ಅಂಶಗಳನ್ನು ಕಲಿಯುತ್ತಾ, ಮನನ ಮಾಡಿಕೊಳ್ಳುತ್ತಾ ಹೋಗುವ ವ್ಯಕ್ತಿ ಔಪಚಾರಿಕವಾಗಿ ಕಲಿಯುವ ಮಾತು ಬಂದಾಗ ಹಿಂದೇಟು ಹಾಕುವುದು ಮುಖ್ಯವಾಗಿ ಆತನ ಮಾನಸಿಕ ಸ್ಥಿತಿಗೆ ಸಂಬಂಧಿಸಿದ್ದು. ಆಧುನಿಕ ಶಿಕ್ಷಣ ವ್ಯವಸ್ಥೆಯು ಸಾಕಾರಗೊಳ್ಳುವುದು ಪಠ್ಯಪುಸ್ತಕ, ಬೋಧನೆ, ಮೌಲ್ಯಮಾಪನ ಮುಂತಾದ ಬಾಹ್ಯಗ್ರಹಿಕೆಗಳ ಮೂಲಕ. ಆದ್ದರಿಂದ ಪ್ರಾರಂಭದ ಹಂತದಲ್ಲಿ ವಯಸ್ಕರ ಶಿಕ್ಷಣ ಕಾರ್ಯಕ್ರಮ ಈ ರೀತಿಯ ಅನೇಕ ಒತ್ತಡಗಳನ್ನು ನಿವಾರಿಸಿಕೊಳ್ಳುವ ಅಗತ್ಯವಿತ್ತು.

ಅಕ್ಷರ ಒಂದು ತಂತ್ರಜ್ಞಾನ. ಜ್ಞಾನವನ್ನು ಪಡೆದುಕೊಳ್ಳುವುದಕ್ಕೆ ಅದೊಂದು ಸ್ವಾವಲಂಬೀ ಮಾಧ್ಯಮ. ಓದು, ಬರಹ, ಲೆಕ್ಕಾಚಾರ ಈ ಮೂರೂ ಕೌಶಲಗಳನ್ನು ಸ್ವತಂತ್ರವಾಗಿ ಬಳಸುವುದನ್ನು ಕಲಿತ ವ್ಯಕ್ತಿ ಆತ್ಮ ವಿಶ್ವಾಸವನ್ನು ಪಡೆದುಕೊಳ್ಳುತ್ತಾನೆ. ಯಾವುದೇ ಸಂದರ್ಭದಲ್ಲಿ ಬೇರೆಯವರ ಅವಲಂಬನೆಯಿಲ್ಲದೆ ತನ್ನ ವ್ಯವಹಾರವನ್ನು ತಾನೇ ಮಾಡಿಕೊಳ್ಳಲು ಸಮರ್ಥನಾಗುತ್ತಾನೆ. ಅಕ್ಷರದಂತಹ ತಂತ್ರಜ್ಞಾನ ಸಾಮೂಹಿಕವಾಗಿ ಪ್ರತಿಯೊಬ್ಬರಿಗೂ ಲಭ್ಯವಾಗಬೇಕಿತ್ತು. ಆದರೆ ಇತಿಹಾಸದ ಅನೇಕ ತಪ್ಪುಗಳಿಂದಾಗಿ ಇದು ಕೆಲವೇ ಕೆಲವು ಜನರ ಕೈಗೆ ದಕ್ಕುವಂತಾಯಿತು. ಅಕ್ಷರದ ರುಚಿ ಕಂಡವರು ಅದರ ಸೌಲಭ್ಯಗಳನ್ನು ಅನುಭವಿಸ ತೊಡಗಿದರು. ಅದರ ಸೌಲಭ್ಯದಿಂದ ವಂಚಿತರಾದವರು ತಮ್ಮದೇ ಆದ ಮೌಖಿಕ ಪರಂಪರೆಯೊಂದನ್ನು ಕಂಡುಕೊಂಡರು, ಅದನ್ನು ಬೆಳೆಸಿದರು. ಅಕ್ಷರದ ಸೌಲಭ್ಯ ಇಲ್ಲದೆಯೂ ತಾವು ಮೌಖಿಕ ಪರಂಪರೆಯ ನೆಲೆಯಲ್ಲಿ ನೆಮ್ಮದಿಯಾಗಿ ಬದುಕಬಲ್ಲೆವು ಎಂದು ತಿಳಿದರು.

ಆದರೆ ಆಧುನಿಕ ಕಾಲ ಹೇಳಿ ಕೇಳಿ ವ್ಯವಹಾರದ ಕಾಲ. ಇಲ್ಲಿ ಮೌಲ್ಯಕ್ಕಿಂತ ದಾಖಲೆಗಳಿಗೆ ಬೆಲೆ ಹೆಚ್ಚು. ಮಾತಿಗಿಂತ ಸಾಕ್ಷಿಗೆ ತೂಕ. ಹೆಬ್ಬೆಟ್ಟಿಗಿಂತ ರುಜುವಿಗೆ ಮಹತ್ವ. ಆದ್ದರಿಂದಲೇ ವಯಸ್ಕರ ಶಿಕ್ಷಣದ ಮೊದಲ ಗುರಿ ಹೆಬ್ಬೆಟ್ಟಿನ ಬದಲು ರುಜು ಹಾಕುವುದನ್ನು ಕಲಿಯಬೇಕು ಎಂಬುದು. ಇದೊಂದು ಸಾಂಕೇತಿಕ ವರ್ಗಾವಣೆ ಅಷ್ಟೇ. ಇಂದೂ ಕೂಡ ರುಜು ಹಾಕುವುದನ್ನು ಮಾತ್ರ ಕಲಿತವರೂ ಇದ್ದಾರೆ. ರುಜು ಹಾಕುವುದರ ಮೂಲಕ ವ್ಯಕ್ತಿಯೊಬ್ಬನನ್ನು ಅಕ್ಷರ ಸಂಸ್ಕೃತಿಗೆ ಪರಿಚಯಿಸುವುದು ಇದರ ಉದ್ದೇಶವಾಗಿತ್ತು.

ಸ್ವಾತಂತ್ರ್ಯಪೂರ್ವದ ಅವಧಿಯಲ್ಲಿ ಅನೇಕ ರಾಜರ ಸಂಸ್ಥಾನಗಳಲ್ಲಿ ವಯಸ್ಕರ ಶಿಕ್ಷಣದ ಚಟುವಟಿಕೆಗಳು ಆರಂಭವಾಗಿದ್ದವು. ಅಲ್ಲೆಲ್ಲಾ ಇದು ಸ್ವಯಂ ಸೇವಾ ಸಂಸ್ಥೆಗಳ ಮೂಲಕ, ಸ್ಥಳೀಯ ಜನಾಡಳಿತ ವ್ಯವಸ್ಥೆಗಳ ಮೂಲಕ ನಡೆಯುತ್ತಿದ್ದವು. ಮೈಸೂರು, ಬರೋಡ, ತಿರುವಾಂಕೂರು ಮುಂತಾದ ಸಂಸ್ಥಾನಗಳು ವಿಶೇಷವಾಗಿ ವಯಸ್ಕರ ಶಿಕ್ಷಣಕ್ಕೆ ಒತ್ತುಕೊಟ್ಟಿದ್ದವು. ಸ್ವಾತಂತ್ರ್ಯಪೂರ್ವ ವಯಸ್ಕರ ಶಿಕ್ಷಣ ಕಾರ್ಯಕ್ರಮಕ್ಕೆ ಒಂದು ನಿರ್ದಿಷ್ಟ ಸ್ವರೂಪ ಎನ್ನುವುದು ಇರಲಿಲ್ಲ. ಆಗ ವಯಸ್ಕರ ಶಿಕ್ಷಣ ಕಾರ್ಯಕ್ರಮದಲ್ಲಿ ಆಸಕ್ತಿ ತಳೆದವರು, ಆಗಲೇ

ಆಧುನಿಕ ಶಿಕ್ಷಣದ ಪರಿಚಯವಿದ್ದವರು, ಶಾಲಾ ಕಾಲೇಜುಗಳಲ್ಲಿ ಪಾಠಮಾಡುತ್ತಿದ್ದವರು. ಅವರಿಗೆ ಹೊಸದೊಂದು ಚಿಂತನಾಕ್ರಮ ಈ ದೇಶಕ್ಕೆ ಬರುತ್ತಿದೆ. ಅದು ನಮ್ಮ ಸಾಮಾನ್ಯ ಜನರಿಗೂ ತಿಳಿಯುವಂತಾಗಬೇಕು ಎನ್ನುವ ಒಲವು ಒಂದುಕಡೆ. ಹಾಗೆಯೇ ಅಕ್ಷರ ಜ್ಞಾನವನ್ನು ಪಡೆಯಬೇಕು. ಹೆಬ್ಬೆಟ್ಟಿನ ಸಹಿ ಬದಲು ತಮ್ಮ ತಮ್ಮ ಹೆಸರನ್ನೇ ಬರೆಯುವಂತಾಗಬೇಕು ಎಂಬ ಆಸೆ ಇನ್ನೊಂದು ಕಡೆ. ಹೀಗಾಗಿ ವಯಸ್ಕರಿಗೆ ಅಕ್ಷರ ಕಲಿಸಲು ರಾತ್ರಿ ಶಾಲೆಗಳು ಆರಂಭವಾದವು. ವಯಸ್ಕರಿಗೆ ಕಲಿಸುವ ಅನೇಕ ವಿಧಾನಗಳು ಹುಟ್ಟಿಕೊಂಡವು. ಜೊತೆ ಜೊತೆಗೆ ಹೊಸದಾಗಿ ಅಕ್ಷರ ಕಲಿಯುವವರಿಗೆ ಅನುಕೂಲವಾಗಲೆಂದು ಅಲ್ಲಲ್ಲಿ ಗ್ರಂಥಾಲಯಗಳನ್ನು ತೆರೆಯಲಾಯಿತು. ಕರ್ನಾಟಕದಲ್ಲಿ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಪ್ರಾರಂಭವಾದ್ದು ಹೀಗೆ. ಇದೇ ರೀತಿಯ ಸ್ವಯಂ ಸೇವಾ ಸಂಸ್ಥೆಗಳು ಬೇರೆ ಬೇರೆ ರಾಜ್ಯಗಳಲ್ಲಿ ಹುಟ್ಟಿ ಕೊಂಡವು. ಈ ಸಂಸ್ಥೆಗಳ ಮುಖ್ಯ ಗುರಿ ಅಕ್ಷರ ಕಲಿಕೆಯ ಜೊತೆ ಜೊತೆಗೆ ಗುಣಾತ್ಮಕವಾದ ಬದಲಾವಣೆಯನ್ನು ವ್ಯಕ್ತಿಯ ಜೀವನದಲ್ಲಿ ತರಬೇಕು ಎಂಬುದೂ ಆಗಿತ್ತು.

ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರದ ಕಾಲದಲ್ಲಿ ವಯಸ್ಕರ ಶಿಕ್ಷಣಕ್ಕೆ ಸಿಗಬೇಕಾದ ಪ್ರಾಧಾನ್ಯತೆ ಸಿಗಲಿಲ್ಲ ಎಂಬುದು ನಿಜ. ಭಾರತ ಸರ್ಕಾರ ಇದನ್ನೊಂದು ರಾಷ್ಟ್ರೀಯ ಕಾರ್ಯಕ್ರಮ ಎಂದು ಪರಿಗಣಿಸಿ ಜಾರಿಗೆ ತರುವುದಕ್ಕೇ ಅನೇಕ ವರ್ಷಗಳು ಹಿಡಿದವು. ಆದರೆ ಆಗಲೇ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮ್ಮಿಕ್ಕಿದ್ದ ಅನೇಕ ಸ್ವಯಂ ಸೇವಾಸಂಸ್ಥೆಗಳು ಸ್ವಾತಂತ್ರ್ಯಾನಂತರ ಜನರಲ್ಲಿ ಜಾಗೃತಿ ಮೂಡಿಸಲು ಅನೇಕ ಶೈಕ್ಷಣಿಕ ಕಾರ್ಯಕ್ರಮದ ಕಡೆ ಗಮನಕೊಟ್ಟವು. ೧೯೫೧ರಲ್ಲಿ ನಡೆದ ಜನಗಣತಿಯ ಪ್ರಕಾರ ನಮ್ಮಲ್ಲಿದ್ದ ಅಕ್ಷರಸ್ಥರ ಸಂಖ್ಯೆ ಶೇಕಡಾ೧೮.೩೩. ಅದರಲ್ಲಿ ಅಕ್ಷರಸ್ಥ ಗಂಡಸರು ೨೭.೧೬ ಮತ್ತು ಅಕ್ಷರಸ್ಥಮಹಿಳೆಯರು ೮.೮೬ . ಇಷ್ಟೊಂದು ಕಡಿಮೆ ಮಟ್ಟದ ಅಕ್ಷರಸ್ಥರನ್ನು ಇಟ್ಟುಕೊಂಡು, ಹೊಸದಾಗಿ ಸ್ವಾತಂತ್ರ್ಯಗಳಿಸಿಕೊಂಡ ರಾಷ್ಟ್ರವೊಂದು, ಹೊಸದಾಗಿ ತನ್ನ ಕಲ್ಪನೆಯ ರಾಷ್ಟ್ರವೊಂದನ್ನು ಕಟ್ಟುವ ಕೆಲಸಕ್ಕೆ ಮುಂದಾಗಬೇಕಿತ್ತು. ಆಗ ಭಾರತದ ಮುಂದೆ ಇದ್ದ ಮುಖ್ಯ ಸವಾಲುಗಳಲ್ಲಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ಸಾಧಿಸಬೇಕು ಎಂಬುದು. ಪ್ರಾಥಮಿಕ ಶಿಕ್ಷಣದಲ್ಲಿ ಸಾರ್ವತ್ರಿಕತೆಯನ್ನು ಸಾಧಿಸುವುದಕ್ಕೆ ಪೂರಕವಾಗಿ ವಯಸ್ಕರ ಶಿಕ್ಷಣ ಕೆಲಸಮಾಡಬೇಕು. ಯಾಕೆಂದರೆ ತಂದೆತಾಯಿಗಳು ಅಕ್ಷರಸ್ಥರಾದರೆ, ಅಕ್ಷರದ ಮಹತ್ವವನ್ನು ಕಂಡುಕೊಂಡರೆ, ಖಂಡಿತಾ ಅವರು ತಮ್ಮ ಮಕ್ಕಳುಗಳನ್ನು ಶಾಲೆಗೆ ಕಳಿಸಿಯೇ ಕಳಿಸುತ್ತಾರೆ ಎಂಬ ದೃಢ ನಿಲುವು ಇದರ ಹಿಂದೆ ಇತ್ತು. ಆದರೆ ದೇಶ ಎದುರಿಸಿದ ಅನೇಕ ಆಂತರಿಕ ಮತ್ತು ಬಾಹ್ಯ ಒತ್ತಡಗಳಿಂದಾಗಿ ಪ್ರಾರಂಭದ ಮೂರು ದಶಕಗಳಲ್ಲಿ ವಯಸ್ಕರ ಶಿಕ್ಷಣ ನಿರೀಕ್ಷಿಸಿದ ಚಟುವಟಿಕೆಗಳನ್ನು ಪ್ರಾರಂಭಿಸಲು ಸಾಧ್ಯವಾಗಲೇ ಇಲ್ಲ.

೧೯೬೦ರ ದಶಕದಲ್ಲಿ ವಯಸ್ಕರ ಶಿಕ್ಷಣಕ್ಕೆ ಕೊಂಚ ಜೀವ ಬಂದಂತಾಯಿತು. ಯುನೆಸ್ಕೋ ತನ್ನ ಶೈಕ್ಷಣಿಕ ಚಟುವಟಿಕೆಯಲ್ಲಿ ವಯಸ್ಕರ ಶಿಕ್ಷಣಕ್ಕೆ ಆದ್ಯತೆ ಕೊಡಲಾರಂಭಿಸಿತು. ವಯಸ್ಕರ ಶಿಕ್ಷಣವನ್ನು ಒಂದು ವ್ಯವಸ್ಥಿತ ಶೈಕ್ಷಣಿಕ ಚಟುವಟಿಕೆ ಎಂದು ಗುರುತಿಸಿತು. ಅಷ್ಟೇ ಅಲ್ಲ ಅದಕ್ಕೆ ಅದರದೇ ಆದ ವಿಧಿ, ವಿಧಾನಗಳಿವೆ ಎಂದು ಗುರುತಿಸಿತು. ಇದರಿಂದ ವಯಸ್ಕರ ಕಲಿಕಾ ಸಾಮಗ್ರಿಗಳ ತಯಾರಿಕೆ, ವಯಸ್ಕರ ಶಿಕ್ಷಣದ ಬೋಧಕರ ತರಬೇತಿ, ಮೌಲ್ಯಮಾಪನ ಮುಂತಾದ ಶೈಕ್ಷಣಿಕ ಅಂಶಗಳ ಕಡೆ ಹೆಚ್ಚಿನ ಗಮನ ಹರಿಯಲಾರಂಭಿಸಿತು. ಯುನೆಸ್ಕೋ ಅನೇಕ ಕಡೆ ಕಾರ್ಯಾಗಾರಗಳನ್ನು ನಡೆಸಿ, ತಜ್ಞರನ್ನು ಗುರುತಿಸುವ ಕೆಲಸಮಾಡಿತು. ಕರ್ನಾಟಕದಲ್ಲಿ ವಯಸ್ಕರ ಶಿಕ್ಷಣ ಸಮಿತಿ ೬೦ರ ದಶಕಕ್ಕಾಗಲೇ ಬಹಳ ದೊಡ್ಡ ಸಾಧನೆಯನ್ನುಮಾಡಿತ್ತು. ಯುನೆಸ್ಕೋ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯನ್ನು ವಯಸ್ಕರ

ಶಿಕ್ಷಣದ ಕೆಲಸವನ್ನು ಮಾಡುತ್ತಿರುವ ಪ್ರಧಾನ ಸಂಸ್ಥೆಯೆಂದು ಗುರುತಿಸಿತ್ತು. ಇಲ್ಲಿಂದ ಅನೇಕ ತಜ್ಞರನ್ನು ಯುನೆಸ್ಕೋ ಪರಿಣಿತರೆಂದು ಆರಿಸಿ ಬೇರೆ ಬೇರೆ ದೇಶಗಳಿಗೆ ಕೂಡ ಕಳಿಸಿಕೊಟ್ಟಿತ್ತು.

ವಯಸ್ಕರ ಶಿಕ್ಷಣ ಈ ಘಟ್ಟದಲ್ಲಿ ಎರಡು ರೀತಿಯ ಪರಿಕಲ್ಪನೆಗಳಲ್ಲಿ ಜಗತ್ತಿನಾದ್ಯಂತ ವಿಭಜನೆಗೊಂಡಿತು. ಮೊದಲನೆಯ ಪರಿಕಲ್ಪನೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳದು, ಎರಡನೆಯ ಪರಿಕಲ್ಪನೆ ಅಭಿವೃದ್ಧಿ ಹೊಂದಲು ಯತ್ನಿಸುತ್ತಿದ್ದ ರಾಷ್ಟ್ರಗಳದ್ದು. ಅಭಿವೃದ್ಧಿಹೊಂದಿದ ರಾಷ್ಟ್ರಗಳ ಪ್ರಕಾರ ವಯಸ್ಕರ ಶಿಕ್ಷಣ ಎಂಬುದು ಒಂದು ಶೈಕ್ಷಣಿಕ ಸಿದ್ಧಾಂತ. ಅದು ಜ್ಞಾನ ಗ್ರಹಿಕೆಯ ಇನ್ನೊಂದು ಅವಕಾಶ. ಅದನ್ನು ಆಳವಾಗಿ ಅಧ್ಯಯನ ಮಾಡುತ್ತಾ ಸೈದ್ಧಾಂತಿಕ ಚೌಕಟ್ಟಿನಲ್ಲಿ ಅದನ್ನು ನಿರೂಪಿಸುವ ಕೆಲಸವನ್ನು ಅವರು ಮಾಡಿದ್ದಾರೆ. ಇನ್ನೊಂದು ಕಲ್ಪನೆ ಅಭಿವೃದ್ಧಿ ಪರವಾದದ್ದು. ಇದು ಹೆಚ್ಚು ಅಭಿವೃದ್ಧಿ ಹೊಂದುತ್ತಿರುವ ತೃತೀಯ ರಾಷ್ಟ್ರಗಳ ಹಿನ್ನೆಲೆಯಿಂದ ಹುಟ್ಟಿಕೊಂಡದ್ದು. ಈ ರಾಷ್ಟ್ರಗಳು ವಯಸ್ಕರ ಶಿಕ್ಷಣವನ್ನು ಅಭಿವೃದ್ಧಿಪರ ಚಟುವಟಿಕೆ ಎಂದೇ ಪರಿಗಣಿಸಿವೆ. ಯುನೆಸ್ಕೋ ಸಹ ಈ ಸ್ಥಿತಿಯನ್ನು ಮಾನ್ಯಮಾಡಿದೆ. ೧೯೬೬ರಲ್ಲಿ ಇರಾನಿನ ಟೆಹಾರಾನ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಶಿಕ್ಷಣ ಸಚಿವರ ಸಮ್ಮೇಳನದಲ್ಲಿ ಈ ಅಂಶವನ್ನು ಸ್ಪಷ್ಟಪಡಿಸಲಾಗಿದೆ. ಅಲ್ಲದೆ ಆ ಸಮ್ಮೇಳನದಲ್ಲಿ ಯುನೆಸ್ಕೋ ವಯಸ್ಕರ ಶಿಕ್ಷಣವನ್ನು ರಾಷ್ಟ್ರೀಯ ಕಾರ್ಯಕ್ರಮವಾಗಿ ಜಾರಿಗೆ ತರಬೇಕೆಂದು ತನ್ನ ಸದಸ್ಯ ರಾಷ್ಟ್ರಗಳನ್ನು ಆಗ್ರಹಿಸಿತು. ವಯಸ್ಕರ ಶಿಕ್ಷಣ ಬರೀ ಅಕ್ಷರ ಕಲಿಯುವ, ರುಜು ಹಾಕಲು ಕಲಿಯುವ ಚಟುವಟಿಕೆ ಅಷ್ಟೇ ಅಲ್ಲ. ಅದು ಅರಿವು ಮೂಡಿಸುವ ಕ್ರಿಯಾತ್ಮಕ ಚಟುವಟಿಕೆ ಎಂಬುದನ್ನೂ ಈ ಸಮ್ಮೇಳನ ಒಪ್ಪಿಕೊಂಡಿತು. ವಯಸ್ಕರ ಎಂಬ ವ್ಯಕ್ತಿ ೧೫ ರಿಂದ ೩೫ ವರ್ಷ ವಯಸ್ಸಿನವನು. ಈ ವಯಸ್ಸಿನವರು ಅತ್ಯಂತ ಸಮರ್ಥಶಾಲಿ ವ್ಯಕ್ತಿಗಳಾಗಿರುತ್ತಾರೆ. ಇಂಥವರಿಗೆ ಅಕ್ಷರ ಜ್ಞಾನದ ಅವಶ್ಯಕತೆ ಇದೆ ಎಂದು ತಿಳಿಯಲಾಯಿತು. ಅಲ್ಲದೆ ಈ ಸಮ್ಮೇಳನದಲ್ಲಿ ಒಂದು ಇತಿಹಾಸಿಕ ನಿರ್ಣಯವನ್ನು ತೆಗೆದುಕೊಳ್ಳಲಾಯಿತು. ಈ ಭೂಗೋಳದಲ್ಲಿ ಕಟ್ಟಕಡೆಯ ಅನಕ್ಷರಸ್ಥ ಇರುವವರೆಗೆ ಸೆಪ್ಟೆಂಬರ್ ೮ನೇ ತಾರೀಕನ್ನು ಅಂತಾರಾಷ್ಟ್ರೀಯ ಸಾಕ್ಷರತಾ ದಿನವನ್ನಾಗಿ ಆಚರಿಸಬೇಕೆಂಬ ನಿರ್ಧಾರ ಅದು. ಈಗ ಪ್ರತಿವರ್ಷ ಸೆಪ್ಟೆಂಬರ್ ೮ಅನ್ನು ಅಂತಾರಾಷ್ಟ್ರೀಯ ದಿನಾಚರಣೆಯನ್ನಾಗಿ ಆಚರಿಸಲಾಗುತ್ತದೆ. ಆ ದಿನದಂದು ಸಾಕ್ಷರತಾ ಕಾರ್ಯಕರ್ತರು ತಮ್ಮ ಸಾಧನೆಗಳನ್ನು ಪರಿಶೀಲಿಸುವುದರ ಜೊತೆಗೆ ಮುಂದಿನ ಸವಾಲುಗಳನ್ನು ಕುರಿತು ಚಿಂತಿಸುತ್ತಾರೆ. ಹೊಸ ಹುರುಪಿನಿಂದ ಮುಂದಿನ ಕಾರ್ಯಕ್ಕೆ ಅಣಿಯಾಗುತ್ತಾರೆ.

ಭಾರತದಲ್ಲಿ ವಯಸ್ಕರ ಶಿಕ್ಷಣ ಒಂದು ಬೃಹತ್ ಯೋಜನೆಯಾಗಿ ಪ್ರಾರಂಭವಾದದ್ದು ೧೯೭೮ರಲ್ಲಿ. ಟೆಹರಾನ್ ಸಮ್ಮೇಳನದಲ್ಲಿ ಭಾರತ ಮಾಡಿದ ನಿರ್ಣಯಕ್ಕೂ, ತಾನು ಕಾರ್ಯಕ್ರಮ ಆರಂಭಿಸಿದ್ದಕ್ಕೂ ಮಧ್ಯೆ ಇದ್ದ ಅಂತರ ಹತ್ತು ವರ್ಷ. ಅಂದರೆ ಭಾರತ ಸರ್ಕಾರ ವಯಸ್ಕರ ಶಿಕ್ಷಣಕ್ಕೆ ಕೊಟ್ಟ ಪ್ರಾಮುಖ್ಯತೆ ಇದರಿಂದ ತಿಳಿಯುತ್ತದೆ. ೧೯೭೮ರಲ್ಲಿ ಆಗಿನ ಜನತಾ ಸರ್ಕಾರ ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮವೊಂದನ್ನು ಜಾರಿಗೆ ತಂದಿತು. ಇದನ್ನು ರಾಷ್ಟ್ರೀಯ ಕಾರ್ಯಕ್ರಮ ಎಂದು ಪರಿಗಣಿಸಲಾಯಿತು. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಮಟ್ಟದಲ್ಲಿ ಪ್ರತ್ಯೇಕ ಇಲಾಖೆಗಳು ಕೆಲಸ ಮಾಡಲಾರಂಭಿಸಿದವು. ಜೊತೆಗೆ ಈಗಾಗಲೇ ಅಲ್ಲಲ್ಲಿ ಕೆಲಸ ಮಾಡುತ್ತಿದ್ದ ಸ್ವಯಂಸೇವಾ ಸಂಸ್ಥೆಗಳನ್ನೂ ಈ ಕಾರ್ಯಕ್ರಮದಲ್ಲಿ ಒಳಗೊಳ್ಳಲಾಯಿತು. ಯು. ಜಿ. ಸಿ. ಮೂಲಕ ಕಾಲೇಜುಗಳೂ ಕೂಡ ಈ ಕಾರ್ಯಕ್ರಮದಲ್ಲಿ ಭಾಗಿಯಾದವು. ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮ ಇಡೀ ದೇಶದಾದ್ಯಂತ 'ಗ್ರಾಮೀಣ ಕ್ರಿಯಾತ್ಮಕ ಸಾಕ್ಷರತಾ ಯೋಜನೆ' ಎಂಬ ಕಾರ್ಯಕ್ರಮವನ್ನು ಜಾರಿ

ಗೊಳಿಸಿತು. ಇದರ ಜೊತೆ ಜೊತೆಗೇ ರಾಜ್ಯ ಸರ್ಕಾರಗಳು ರಾಜ್ಯಯೋಜನೆಯಡಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡವು. ಈ ರಾಷ್ಟ್ರೀಯ ಯೋಜನೆಯ ಬಗ್ಗೆ ಇದ್ದ ಭರವಸೆಗಳು ಹಲವಾರು. ಆದರೆ ಬಹಳಷ್ಟು ಭರವಸೆಗಳು ಈಡೇರಲೇ ಇಲ್ಲ. ಮೊದಲಿಗೆ ವಯಸ್ಕರ ಶಿಕ್ಷಣ ಕಾರ್ಯಕ್ರಮವೂ ಒಂದು ಜಡತ್ವದ ಸರ್ಕಾರಿ ಕಾರ್ಯಕ್ರಮವಾಗಿ ಬದಲಾಯಿತು. ಗ್ರಾಮೀಣ ಪ್ರದೇಶದಲ್ಲಿ ಕಾರ್ಯಕ್ರಮವನ್ನು ಜನಪ್ರಿಯಗೊಳಿಸುವುದಕ್ಕೆ ಬೇಕಾದ ವಾತಾವರಣ ಸೃಷ್ಟಿಯಾಗಲಿಲ್ಲ. ಈ ಕಾರ್ಯಕ್ರಮವನ್ನು ನಿರುದ್ಯೋಗಿಗಳಿಗೆ ಉದ್ಯೋಗ ಕೊಡುವ ಕೆಲಸವಾಗಿ ಅಷ್ಟೇ ನೋಡಲಾಯಿತು. ಭ್ರಷ್ಟಾಚಾರ ಎಲ್ಲೆಡೆ ನುಸುಳಿತು. ಅನಕ್ಷರಸ್ಥ ಮಹಿಳೆಯರೇ ಜಾಸ್ತಿ ಇದ್ದರೂ ಅವರಿಗೆ ವಿಶೇಷ ಕಾರ್ಯಕ್ರಮವೊಂದನ್ನು ರೂಪಿಸಲಾಗಲಿಲ್ಲ. ಇವೆಲ್ಲಾ ಸಮಸ್ಯೆಗಳೂ ಒಟ್ಟಿಗೇ ಸೇರಿಕೊಂಡು ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮ ಸಾಧಿಸಿದ್ದಕ್ಕಿಂತ ಹೆಚ್ಚಾಗಿ ತನ್ನ ಮೌಲ್ಯವನ್ನು ಕಳೆದುಕೊಂಡದ್ದೇ ಹೆಚ್ಚು. ಹೆಚ್ಚುತ್ತಿರುವ ಜನಸಂಖ್ಯೆ ಕುಸಿಯುತ್ತಿರುವ ಜೀವನಮಟ್ಟ ಹಾಗೂ ಏರುತ್ತಿರುವ ಅನಕ್ಷರಸ್ಥರ ಸಂಖ್ಯೆ ಇವುಗಳ ಮಧ್ಯೆ ತತ್ತರಿಸಿ ಹೋದ ಭಾರತ ಎಂಬತ್ತರ ದಶಕದಲ್ಲಿ ವಯಸ್ಕರ ಶಿಕ್ಷಣ ಕಾರ್ಯಕ್ರಮವನ್ನು ಅತ್ಯಂತ ಗಂಭೀರವಾಗಿ ತೆಗೆದುಕೊಳ್ಳಲಾರಂಭಿಸಿತು. ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಬೇಕಾದರೆ ಮೊದಲು ವಯಸ್ಕರ ಶಿಕ್ಷಣ ಬಲವಾಗಬೇಕು. ವಯಸ್ಕರ ಶಿಕ್ಷಣದಲ್ಲಿ ಸಾಧಿಸುವ ಪ್ರಗತಿ, ಪ್ರಾಥಮಿಕ ಶಿಕ್ಷಣದಲ್ಲಿ ಪ್ರತಿಫಲನಗೊಳ್ಳುತ್ತದೆ ಎಂದು ಭಾವಿಸಲಾಯಿತು. ೧೯೮೫ರ ಹೊತ್ತಿಗೆ ರಾಷ್ಟ್ರಾದ್ಯಂತ ವಯಸ್ಕರ ಶಿಕ್ಷಣದ ಬಗ್ಗೆ ವ್ಯಾಪಕ ಮೌಲ್ಯಮಾಪನಗಳು ನಡೆದವು. ಈ ಮೌಲ್ಯಮಾಪನಗಳು ವಯಸ್ಕರ ಶಿಕ್ಷಣದ ಇತ್ಯಾತ್ಮಕ ಕೊಡುಗೆಯ ಬಗ್ಗೆ ಪಟ್ಟಿ ಮಾಡಿದ ಅಂಶಗಳು ಇವು.

೧. ವಯಸ್ಕರ ಶಿಕ್ಷಣದ ಯಶಸ್ಸು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಗೆ ಸೇರಲು ಪ್ರೇರಣೆ ನೀಡುತ್ತದೆ.

೨. ಮಹಿಳಾ ಸಾಕ್ಷರತೆಯಿಂದ ಜೀವನಮಟ್ಟ, ಕೌಟುಂಬಿಕ ಸ್ಥಿತಿಗತಿ, ಮಕ್ಕಳ ಆರೋಗ್ಯ ಉತ್ತಮಗೊಳ್ಳುತ್ತದೆ.

೩. ಸಾಕ್ಷರತೆಯ ಯಶಸ್ಸಿನಿಂದ ಜನನ ಮತ್ತು ಮರಣದ ಸಂಖ್ಯೆಯಲ್ಲಿ ಇಳಿಮುಖವಾಗುತ್ತದೆ. ಮಕ್ಕಳ ಆರೋಗ್ಯ ಸುಧಾರಿಸುತ್ತದೆ.

ಶಿಕ್ಷಣದ ಈ ಸಾಧನೆಯನ್ನೇ ಯುನೆಸ್ಕೊ 'ಸಾಮಾಜಿಕ ಸುರಕ್ಷಿತಾ ಬಲೆ' ಎಂದು ಕರೆದಿರುವುದು.

ಭಾರತ ಸರ್ಕಾರ ತಾನು ಜಾರಿಗೆ ತಂದಿರುವ ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮದ ಮೂಲಕ ಬಹುಸಂಖ್ಯೆಯಲ್ಲಿ ಇರುವ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವ ಸಾಧ್ಯತೆ ಇಲ್ಲ ಎಂದೇ ಪರಿಗಣಿಸಿತು. ಅದಕ್ಕಾಗಿ ಹೊಸಮಾರ್ಗಗಳನ್ನು ಹುಡುಕಲಾರಂಭಿಸಿತು. ಈ ಶತಮಾನದ ಕಡೆಯ ಹೊತ್ತಿಗಾದರೂ ಶೇಕಡಾ ೮೦ರಷ್ಟು ಸಾಕ್ಷರತೆಯನ್ನು ಸಾಧಿಸುವ ಯೋಜನೆ ಹಾಕತೊಡಗಿತು. ಇದೆಲ್ಲದರ ಫಲವಾಗಿ ೧೯೮೮ರಲ್ಲಿ 'ರಾಷ್ಟ್ರೀಯ ಸಾಕ್ಷರತಾ ಮಿಷನ್' ಜಾರಿಗೆ ಬಂದಿತು. ಇದನ್ನು 'ಸಾಮಾಜಿಕ ಮಿಷನ್' ಎಂದು ಕರೆಯಲಾಯಿತು. ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮದ ವೈಫಲ್ಯಗಳನ್ನೆಲ್ಲಾ ಮನಗಂಡು ಇಲ್ಲಿ ಹೆಚ್ಚು ಸುಧಾರಣೆಗಳನ್ನು ಮಾಡಲಾಯಿತು. ವಯಸ್ಕರ ಶಿಕ್ಷಣದ ಕಾರ್ಯಕ್ರಮಕ್ಕೆ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲಾಯಿತು.

ರಾಷ್ಟ್ರೀಯ ಸಾಕ್ಷರತಾ ಮಿಷನ್ ತನ್ನ ಮುಂದೆ ಇಟ್ಟುಕೊಂಡ ಗುರಿಗಳು ಇವು.

೧೯೯೫ರ ಒಳಗೆ ೮೦ ಮಿಲಿಯ ಜನಕ್ಕೆ ಕ್ರಿಯಾತ್ಮಕ ಸಾಕ್ಷರತೆಯನ್ನು ಕಲಿಸುವುದು.

ಕ್ರಿಯಾತ್ಮಕ ಸಾಕ್ಷರತೆಯನ್ನು ಹೀಗೆ ವ್ಯಾಖ್ಯಾನಿಸಲಾಗಿದೆ.

- ಓದು, ಬರಹ, ಲೆಕ್ಕಾಚಾರಗಳಲ್ಲಿ ಸ್ವಾವಲಂಬನೆ
- ತನ್ನ ಸ್ಥಿತಿಗತಿಗಳ ಬಗ್ಗೆ ಅರಿವು ಪಡೆದುಕೊಳ್ಳುವುದು.
- ಸಂಘಟಿತರಾಗಿ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ

ಪಾಲ್ಗೊಳ್ಳುವುದು.

* ತನ್ನ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಳ್ಳುವುದಕ್ಕೆ ಬೇಕಾದ ಕೌಶಲಗಳನ್ನು ಅಭಿವೃದ್ಧಿ ಪಡಿಸಿಕೊಳ್ಳುವುದು.
* ರಾಷ್ಟ್ರೀಯ ಮೌಲ್ಯಗಳಾದ -ರಾಷ್ಟ್ರೀಯ ಭಾವೈಕ್ಯತೆ,-ಪರಿಸರ ಸಂರಕ್ಷಣೆ,-ಮಹಿಳಾ ಸಮಾನತೆ -ಚಿಕ್ಕಕುಟುಂಬದ ಪರಿಕಲ್ಪನೆ ಇವುಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು.

೧೯೯೫ರ ಒಳಗೆ ೮೦ ಮಿಲಿಯ ಜನರನ್ನು ಕ್ರಿಯಾತ್ಮಕ ಅಕ್ಷರಸ್ಥರನ್ನಾಗಿ ಮಾಡಬೇಕೆಂಬ ಗುರಿಯೇ ಅತ್ಯಂತ ಮಹತ್ವದ ಆಕಾಂಕ್ಷೆಯುಳ್ಳದ್ದಾಗಿತ್ತು. ಹಿಂದೆಂದೂ ವಯಸ್ಕರ ಶಿಕ್ಷಣ ಕಾರ್ಯಕ್ರಮ ತಾನು ಹಾಕಿಕೊಂಡ ಗುರಿಯ ಅರ್ಧದಷ್ಟು ಜನರನ್ನೂ ಅಕ್ಷರಸ್ಥರನ್ನಾಗಿ ಮಾಡಲು ಸಾಧ್ಯವಾಗಿರಲಿಲ್ಲ. ತಾನು ಹಾಕಿಕೊಂಡ ಉದ್ದೇಶಗಳನ್ನು ಈಡೇರಿಸಲು ಸಾಕ್ಷರತಾ ಮಿಷನ್ ತನ್ನ ಮಾರ್ಗೋಪಾಯಗಳನ್ನೂ ಬದಲಾಯಿಸಿಕೊಳ್ಳಬೇಕಾಯಿತು. ಇಷ್ಟಾದರೂ ಅದು ತಾನು ಹಾಕಿಕೊಂಡ ಗುರಿಯನ್ನು ಸಾಧಿಸಿತೆಂದು ಹೇಳಲು ಸಾಧ್ಯವಿಲ್ಲ. ೧೯೯೫ಕ್ಕೆ ೮೦ಮಿಲಿಯ ಜನರನ್ನು ಅಕ್ಷರಸ್ಥರನ್ನಾಗಿ ಮಾಡಬೇಕೆಂದು ಕೊಂಡಿದ್ದ ಮಿಷನ್ ಅದು ಸಾಧ್ಯವಾಗದೆ ತನ್ನ ಗುರಿಯನ್ನು ಪುನರ್ ಘೋಷಿಸಿಕೊಳ್ಳಬೇಕಾಯಿತು. ೧೯೯೯ರ ಒಳಗೆ ೧೧೦ ಮಿಲಿಯ ಜನರನ್ನು ಅಕ್ಷರಸ್ಥರನ್ನಾಗಿ ಮಾಡುವ ಗುರಿಯನ್ನು ಹೇಳಿಕೊಂಡಿತು. ಆದರೆ ೧೯೯೯ರ ಕಡೆಯಲ್ಲಿ ತನ್ನ ಸಾಧನೆಯನ್ನು ವಿಶ್ಲೇಷಿಸಿಕೊಂಡ ರಾಷ್ಟ್ರೀಯ ಸಾಕ್ಷರತಾ ಮಿಷನ್ ಹೆಚ್ಚೂ ಕಡಿಮೆ ೬೦ಮಿಲಿಯ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡಿರುವುದಾಗಿ ಒಪ್ಪಿಕೊಂಡು, ಮಿಕ್ಕ ೫೦ಮಿಲಿಯ ಜನರನ್ನು ೨೦೦೫ರ ಒಳಗೆ ಅಕ್ಷರಸ್ಥರನ್ನಾಗಿ ಮಾಡುತ್ತೇನೆಂದು ಹೇಳಿಕೊಂಡಿದೆ. ಇಷ್ಟಾದರೆ ಸರಿಸುಮಾರು ಪ್ರತಿಶತ ಎಂಬತ್ತರಷ್ಟು ಜನ ಅಕ್ಷರಸ್ಥರಾಗಿದ್ದಾರೆಂದು ಹೇಳಿಕೊಳ್ಳಬಹುದು.

ವಯಸ್ಕರ ಶಿಕ್ಷಣದ ಗುರಿ ತಾನು ಹಾಕಿಕೊಂಡ ಅವಧಿಯ ಒಳಗೇ ಈಡೇರಲು ಸಾಧ್ಯವಾಗದೇ ಇರುವುದಕ್ಕೆ ಅನೇಕ ಕಾರಣಗಳು ಇವೆ. ಆ ಎಲ್ಲಾ ಕಾರಣಗಳನ್ನೂ ನಾನು ಇಲ್ಲಿ ವಿಶ್ಲೇಷಿಸಲು ಹೋಗುವುದಿಲ್ಲ. ಆದರೆ ಇಡೀ ಸಮಾಜ ಒಂದು ರೀತಿಯ ದಿವ್ಯ ನಿರ್ಲಕ್ಷ್ಯ ಹಾಗೂ ತಿರಸ್ಕಾರದ ಮನೋಭಾವವನ್ನು ಈ ಕಾರ್ಯಕ್ರಮದ ಬಗ್ಗೆ ಹೊಂದಿತ್ತು ಎಂಬುದರಲ್ಲಿ ಸಂಶಯವಿಲ್ಲ. ಮೂಲತಃ ಈ ರೀತಿಯ ನೇತ್ಯಾತ್ಮಕ ಧೋರಣೆಯನ್ನು ಹೋಗಲಾಡಿಸಿ ಕಾರ್ಯಕ್ರಮವನ್ನು ಮುಂದಕ್ಕೆ ಕೊಂಡೊಯ್ಯುವ ಕೆಲಸವನ್ನು ರಾಷ್ಟ್ರೀಯ ಸಾಕ್ಷರತಾ ಮಿಷನ್ ಮಾಡಬೇಕಿತ್ತು. ಅದಕ್ಕಾಗಿ ತನ್ನ ಮಾರ್ಗೋಪಾಯಗಳಲ್ಲೇ ಮೂಲಭೂತವಾದ ಬದಲಾವಣೆಗಳನ್ನು ಮಾಡಿಕೊಳ್ಳಬೇಕಿತ್ತು. ಅಲ್ಲಿಯವರೆಗೆ ವಯಸ್ಕರ ಶಿಕ್ಷಣದ ಕಾರ್ಯಕ್ರಮ 'ರಾತ್ರಿಶಾಲೆಗಳು' ಎಂಬ 'ಕೇಂದ್ರಾಧಾರಿತ' ಕಾರ್ಯಕ್ರಮವಾಗಿತ್ತು. ಈ ಕಾರ್ಯಕ್ರಮ ಕೆಳಕಂಡ ಕಾರಣಗಳಿಂದಾಗಿ ತನ್ನ ಅರ್ಥವಂತಿಕೆಯನ್ನು ಕಳೆದುಕೊಂಡಿತ್ತು.

* ಸಮುದಾಯ ಈ ಕಾರ್ಯಕ್ರಮಕ್ಕೆ ಸ್ಪಂದಿಸುತ್ತಿರಲಿಲ್ಲ.
* ಕಲಿಯುವವರಿಗೆ ಮತ್ತು ಕಲಿಸುವವರಿಗೆ ಪ್ರೇರಣೆ ಇಲ್ಲದಿದ್ದುದು
* ಪ್ರಮಾಣೀಕೃತವಲ್ಲದ, ಅತೃಪ್ತಿಕರ ಬೋಧನಾ ಮತ್ತು ಕಲಿಕಾ ಸಾಮಗ್ರಿಗಳು
* ಪರಿವೀಕ್ಷಣಾ ವ್ಯವಸ್ಥೆ ಸರಿಯಾಗಿಲ್ಲದಿದ್ದುದು.
* ಕಲಿಕೆಯ ಅವಧಿ ದೀರ್ಘವಾಗಿದ್ದುದು.
* ಪ್ರತಿಯೊಬ್ಬ ಕಲಿಯುವವನ ವೆಚ್ಚ ಅಧಿಕವಾಗಿದ್ದುದು.

ಈ ಹಿನ್ನೆಲೆಯಲ್ಲಿ ಕೇಂದ್ರಾಧಾರಿತ ಕಾರ್ಯಕ್ರಮದಿಂದ ಆಂದೋಲನಾಧಾರಿತ ಕಾರ್ಯಕ್ರಮಕ್ಕೆ ಬದಲಾಗಬೇಕಾಯಿತು. ಅಲ್ಲದೆ ಇಡೀ ಜಗತ್ತಿನ ಸಾಕ್ಷರತಾ ಕಾರ್ಯಕ್ರಮದ ಯಶಸ್ಸಿನ ಕಥೆಯನ್ನು ಗಮನಿಸಿದರೆ, ಯಾವ ಯಾವ ದೇಶದಲ್ಲಿ ವಯಸ್ಕರ ಶಿಕ್ಷಣ ಹೆಚ್ಚಿನ ಸಾಧನೆಯನ್ನು ಮಾಡಿದೆಯೋ ಅಲ್ಲೆಲ್ಲಾ

ಅದು ಸಾಧಿತವಾಗಿರುವುದು ಆಂದೋಲನಗಳ ಮೂಲಕ ಮಾತ್ರ. ಕ್ಯೂಬಾ, ರಷ್ಯಾ, ನಿಕರಾಗುವಾ, ಚೀನಾ ಮುಂತಾದ ದೇಶಗಳು ಸಾಕ್ಷರತಾ ಆಂದೋಲನವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿವೆ. ಈ ಚಿಂತನೆಯ ನೆಲೆಯಲ್ಲಿ ೧೯೮೯ರ ಜನವರಿಯಲ್ಲಿ ಕೇರಳದ ಎರ್ನಾಕುಲಂ ಜಿಲ್ಲೆಯಲ್ಲಿ ಸಂಪೂರ್ಣ ಸಾಕ್ಷರತಾ ಆಂದೋಲನವನ್ನು ಪ್ರಾರಂಭಿಸಲಾಯಿತು. ಇಡೀ ಜಿಲ್ಲೆಯ ಜನ, ಸಂಘ ಸಂಸ್ಥೆಗಳು, ಜಿಲ್ಲಾ ಮತ್ತು ಸ್ಥಳೀಯ ಆಡಳಿತ ಅತ್ಯಂತ ಸಡಗರದಿಂದ ಈ ಕಾರ್ಯಕ್ರಮದಲ್ಲಿ ಭಾಗಿಯಾದವು. ಒಂದು ವರ್ಷದ ನಂತರ ಅಂದರೆ ೧೯೯೦ರ ಫೆಬ್ರವರಿ ೪ನೇ ತಾರೀಕು ಎರ್ನಾಕುಲಂ ಜಿಲ್ಲೆಯನ್ನು ಸಂಪೂರ್ಣ ಸಾಕ್ಷರತಾ ಜಿಲ್ಲೆಯೆಂದು ಘೋಷಿಸಲಾಯಿತು. ೧೯೯೧ರಲ್ಲಿ ಇಡೀ ಕೇರಳವನ್ನು ಪ್ರಪ್ರಥಮ ಸಾಕ್ಷರತಾ ರಾಜ್ಯವೆಂದು ಘೋಷಿಸಲಾಯಿತು. ಕೇರಳದ ಎರ್ನಾಕುಲಂ ಜಿಲ್ಲೆ ಹಾಗೂ ಕೊಟ್ಟಾಯಂ ಜಿಲ್ಲೆಗಳಲ್ಲಿ ಕಂಡ ಆಂದೋಲನದ ಯಶಸ್ಸಿನಿಂದ ಉತ್ತೇಜಗೊಂಡ ರಾಷ್ಟ್ರೀಯ ಸಾಕ್ಷರತಾ ಮಿಷನ್ ಅದೇ ಮಾರ್ಗೋಪಾಯವನ್ನು ದೇಶದಾದ್ಯಂತ ಜಾರಿಗೆ ತರುವ ಮನಸ್ಸು ಮಾಡಿತು. ಹಾಗಾದರೆ ಆಂದೋಲನದ ಪ್ರಮುಖ ಲಕ್ಷಣಗಳು ಏನು?

ಅ. ಸ್ಪಷ್ಟವಾಗಿ ತನ್ನ ಗುರಿಗಳನ್ನು ಗುರುತಿಸಿಕೊಳ್ಳುವುದು. ಈ ಗುರಿಗಳು ಪ್ರಯೋಗಾತ್ಮಕವಾಗಿ ಇರಬೇಕು, ಸಾಧಿಸಲು ಕೈಗೆ ದಕ್ಕುವಂತಿರಬೇಕು. ಆ ದೃಷ್ಟಿಯಿಂದ ಅವು,

-ನಿರ್ದಿಷ್ಟ ಭೌಗೋಳಿಕ ಪ್ರದೇಶವಾಗಿರಬೇಕು.
-ನಿರ್ದಿಷ್ಟ ಅವಧಿಯದ್ದಾಗಿರಬೇಕು.
-ನಿರ್ದಿಷ್ಟ ವಯೋಮಾನದ ವ್ಯಕ್ತಿಗಳನ್ನು ಪೂರ್ಣವಾಗಿ ಒಳಗೊಳ್ಳಬೇಕು.

ಆ. ಸ್ವಯಂಸೇವಾ ನೆಲೆಯಲ್ಲಿ ಕಾರ್ಯಕ್ರಮವನ್ನು ಜಾರಿಗೆ ತರಬೇಕು.

-ಜಿಲ್ಲಾ ಸಾಕ್ಷರತಾ ಸಮಿತಿ ಅಸ್ತಿತ್ವಕ್ಕೆ ಬರುವ ಅನಿವಾರ್ಯತೆ.
-ಸಮಾಜದ ಎಲ್ಲಾ ವರ್ಗದ ಜನರ ಭಾಗವಹಿಸುವಿಕೆ.
-ಸ್ವಯಂ ಸೇವಾ ಸಂಸ್ಥೆಗಳ ಭಾಗವಹಿಸುವಿಕೆ.

ಇ. ಆಂದೋಲನಕ್ಕೆ ಬೇಕಾದ ಪರಿಸರ ನಿರ್ಮಾಣ ಮತ್ತು ಜನರ ಮಧ್ಯೆ ಚಲನಶೀಲತೆಯನ್ನು ಸೃಷ್ಟಿಸುವುದು

-ಜಾಥಾಗಳ ಮೂಲಕ, -ಜಾನಪದ ಮತ್ತು ವಿದ್ಯುನ್ಮಾನ ಮಾಧ್ಯಮಗಳ ಮೂಲಕ ಪ್ರಚಾರ
-ವ್ಯಕ್ತಿ ವ್ಯಕ್ತಿಗಳ ಮಧ್ಯದ ಸಂಬಂಧದ ಬೆಳವಣಿಗೆ
-ಸಭೆ, ಸಮಾರಂಭ ಇತ್ಯಾದಿ.

ಈ. ಬೋಧನಾ ಸಾಮಗ್ರಿಗಳ ಪುನರ್ ಪರಿಶೀಲನೆ ಮತ್ತು ಅವುಗಳನ್ನು ಉದ್ದೇಶಕ್ಕೆ ತಕ್ಕಂತೆ ಪುನರ್ ರೂಪಿಸುವುದು.

-ಒಬ್ಬೊಬ್ಬ ಕಲಿಯುವವನಿಗೆ ೫೦ರಿಂದ ೧೦೦ರೂ ವರೆಗೆ ಸಾಮಗ್ರಿಗಳು ಆಂದೋಲನದ ಸಮಯದಲ್ಲಿ
-೪೦ ರಿಂದ ೫೦ರೂ ಸಾಕ್ಷರೋತ್ತರ ಸಂದರ್ಭದಲ್ಲಿ.

ಆಂದೋಲನದ ಕಡೆಯ ಹೊತ್ತಿಗೆ ಸಾಕ್ಷರೋತ್ತರ ಕಾರ್ಯಕ್ರಮ ಮತ್ತು ನಿರಂತರ ಶಿಕ್ಷಣದ ಬಗ್ಗೆ ಹೆಚ್ಚಿನ ಒತ್ತು ಕೊಡಲಾಗಿದೆ. ಆಂದೋಲನದ ಕಲಿಕಾ ಅವಧಿ ಕಡಿಮೆ ಇರುವುದರಿಂದ ಹಾಗೂ ಆಂದೋಲನದ ಅವಧಿಯಲ್ಲಿ ಕಲಿತದ್ದು ದೃಢವಾಗಿ ಕಲಿತವರ ಮನಸ್ಸಿನಲ್ಲಿ ನಿಲ್ಲದೇ ಇರುವ ಸಾಧ್ಯತೆ ಇರುವುದರಿಂದ, ತಕ್ಷಣ ಸಾಕ್ಷರೋತ್ತರ ಕಾರ್ಯಕ್ರಮವನ್ನು ಜಾರಿಗೊಳಿಸಿ ಕಲಿಕೆಯನ್ನು ಗಟ್ಟಿಗೊಳಿಸಬೇಕೆಂಬ ಚಿಂತನೆ ಇದರ ಹಿಂದೆ ಇದೆ.

ಸಂಪೂರ್ಣ ಸಾಕ್ಷರತಾ ಆಂದೋಲನಗಳು ಒಂದು ವ್ಯವಸ್ಥಿತ ಜಾಡಿನಲ್ಲಿ ಕೆಲಸ ಮಾಡಬೇಕೆನ್ನುವ ದೃಷ್ಟಿಯಿಂದ ಕೆಲವು ರೂಪು ರೇಷೆಗಳನ್ನು ಅದಕ್ಕಾಗಿ ವಿಧಿಸಲಾಗಿದೆ. ಈ ಕಾರ್ಯಕ್ರಮ ರಾಷ್ಟ್ರೀಯ ಸಾಕ್ಷರತಾ ಮಿಷನ್ ಮತ್ತು ರಾಜ್ಯ ಸರ್ಕಾರಗಳ ಸಹಯೋಗದಿಂದ ಜಾರಿಗೆ ಬರತಕ್ಕದ್ದು. ಆದರೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಾಕ್ಷರತಾ ಸಮಿತಿಯೊಂದನ್ನು ರೂಪಿಸಬೇಕು. ಈ ಜಿಲ್ಲಾ ಸಾಕ್ಷರತಾ ಸಮಿತಿ ಸೊಸೈಟಿ ರಿಜಿಸ್ಟ್ರೇಷನ್

ನಿಬಂಧನೆಯ ಪ್ರಕಾರ ನೋಂದಾಯಿತ ಸಂಸ್ಥೆಯಾಗಿರುತ್ತದೆ. ಇದರ ಸದಸ್ಯರಾಗಿ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಕಾರ್ಯದರ್ಶಿಗಳು ಇರುತ್ತಾರೆ. ಜಿಲ್ಲೆಯ ವಿವಿಧ ಇಲಾಖೆಗಳ ಅಧಿಕಾರಿಗಳು, ಸ್ವಯಂ ಸೇವಾ ಪ್ರತಿನಿಧಿಗಳು, ಪ್ರಮುಖ ವ್ಯಕ್ತಿಗಳು, ಶಿಕ್ಷಣ ತಜ್ಞರು ಇರುತ್ತಾರೆ. ಎನ್.ಎಲ್.ಎಂ. ಬಿಡುಗಡೆ ಮಾಡುವ ಹಣ ನೇರವಾಗಿ ಈ ಜಿಲ್ಲಾ ಸಮಿತಿಗೇ ಬರುತ್ತದೆ. ರಾಜ್ಯ ಸರ್ಕಾರ ಇದರಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ. ಅಷ್ಟರಮಟ್ಟಿಗೆ ಇದು ಸ್ವಾಯತ್ತ ಸಂಸ್ಥೆ. ಇದರ ಕಾರ್ಯದರ್ಶಿಯಾಗಿ ಸರ್ಕಾರೇತರ ವ್ಯಕ್ತಿಯೊಬ್ಬ ಕೆಲಸ ಮಾಡಬೇಕೆಂಬ ನಿರೀಕ್ಷೆ ಇದೆ. ಅಂದರೆ ಸರ್ಕಾರ ಮತ್ತು ಸಮಾಜದ ಸಹಭಾಗಿತ್ವ ಈ ಸಂಸ್ಥೆಯ ಗಟ್ಟಿ ಕವಚ.

ಜಿಲ್ಲಾ ಸಾಕ್ಷರತಾ ಸಮಿತಿ ಆಂದೋಲನವನ್ನು ಜಾರಿಗೊಳಿಸುವುದಕ್ಕೆ ಅನುಸರಿಸಬೇಕಾದ ಹೆಜ್ಜೆಗಳಿವು.

೧. ಪೂರ್ವಭಾವಿ ಜಾಥಾ: ಅ. ಜನಾಭಿಪ್ರಾಯ ಸಂಗ್ರಹಿಸುವುದು. ರಾಜಕೀಯ ಪಕ್ಷಗಳ, ಅಧ್ಯಾಪಕರ, ವಿದ್ಯಾರ್ಥಿಗಳ, ಸಾಂಸ್ಕೃತಿಕ ತಂಡಗಳ ಹಾಗೂ ಇನ್ನಿತರ ಪ್ರಭಾವಿತ ವ್ಯಕ್ತಿ ಮತ್ತು ಸಂಸ್ಥೆಗಳ ಜೊತೆ ಸಮಾಲೋಚನೆ.

ಆ. ಆಂದೋಲನ ಜಾರಿಗೊಳಿಸಲು ಬೇಕಾದ ಪ್ರಮುಖ ವ್ಯಕ್ತಿಗಳನ್ನು ಗುರುತಿಸುವುದು.

ಇ. ಯೋಜನೆಯನ್ನು ಸಿದ್ಧಪಡಿಸುವುದು.

೨. ಸಾಂಸ್ಥಿಕ ರಚನೆಯನ್ನು ಸೃಷ್ಟಿಸುವುದು:

ಅ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಾಕ್ಷರತಾ ಸಮಿತಿ.

ಆ. ತಾಲ್ಲೂಕು, ಪಂಚಾಯಿತಿ ಮಟ್ಟದಲ್ಲಿ ಸಮಿತಿಗಳು

ಇ. ಸಾಕ್ಷರತಾ ಕಾರ್ಯಕರ್ತರಿಗೆ ತರಬೇತಿ.

ಈ. ಯೋಜನಯನ್ನು ಎನ್.ಎಲ್. ಎಂ. ಗೆ ಒಪ್ಪಿಸಿ, ಒಪ್ಪಿಗೆ ಪಡೆಯುವುದು.

೩. ಸರ್ವೆ:

ಅ. ಅನಕ್ಷರಸ್ಥರನ್ನು ಗುರುತಿಸಲು.

ಆ. ತರಬೇತುದಾರರನ್ನು ಮತ್ತು ಸ್ವಯಂಸೇವಕರನ್ನು ಗುರುತಿಸಲು.

೪. ಜಾಥಾ :

ಅ. ಸಾಂಸ್ಕೃತಿಕ ತಂಡಗಳು ಪ್ರತಿ ಪಟ್ಟಣ ಮತ್ತು ಹಳ್ಳಿಗಳಲ್ಲಿ ಕಾರ್ಯಕ್ರಮ ನೀಡುವುದು.

ಆ. ಎಲ್ಲೆಲ್ಲಿ ಅವಶ್ಯವೋ ಅಂತ ಕಡೆ ಮತ್ತೆ ಮತ್ತೆ ಕಾರ್ಯಕ್ರಮ ಕೊಡುವುದು.

೫. ಬೋಧನಾ ಸಾಮಗ್ರಿಗಳ ತಯಾರಿ:

ಅ. ಸ್ಥಳೀಯ ಅಗತ್ಯತೆಗನುಗುಣವಾಗಿ ಬೋಧನಾ ಸಾಮಗ್ರಿಗಳ ತಯಾರಿ.

ಆ. ಉತ್ತಮವೇಗ ಮತ್ತು ಕಲಿಕೆಯ ವಿಷಯಕ್ಕನುಗುಣವಾಗಿ ಸಾಮಗ್ರಿಗಳ ತಯಾರಿಕೆ.

ಇ. ರಾಷ್ಟ್ರೀಯ ಮೌಲ್ಯಗಳನ್ನು ಪಠ್ಯಪುಸ್ತಕಗಳಲ್ಲಿ ಅಳವಡಿಸುವುದು.

೬. ತರಬೇತಿ :

ಅ. ಬೇರೆ ಬೇರೆ ಹಂತಗಳಲ್ಲಿ ತರಬೇತಿ ಯೋಜನೆ.

ಆ. ಗುಣಮಟ್ಟ ಕಾಪಾಡಿ ಕೊಳ್ಳುವುದು.

ಇ. ಪಠ್ಯಪುಸ್ತಕಗಳನ್ನು ವ್ಯವಸ್ಥಿತವಾಗಿ ಮತ್ತು ಪರಿಣಾಮಕಾರಿಯಾಗಿ ಬೋಧಿಸುವುದಕ್ಕೆ ಸ್ವಯಂಸೇವಕರನ್ನು ತಯಾರುಮಾಡುವುದು.

೭. ಬೋಧನೆ:

ಅ. ಬೋಧನಾ ಅವಧಿ ೨೦೦ ಗಂಟೆಗಳು.

ಆ. ಒಬ್ಬ ಸ್ವಯಂ ಸೇವಕ ಹತ್ತು ಜನಕ್ಕೆ ಕಲಿಸುವುದು.

ಇ. ಸಮುದಾಯದ ಉಸ್ತುವಾರಿ.

೮. ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ:

ಅ. ನಿಯತವಾದ ಮೇಲ್ವಿಚಾರಣೆ ಮತ್ತು ಪರಿಶೀಲನೆ.

ಆ. ನಿಯತವಾದ ಸಭೆಗಳು ಎಲ್ಲಾ ಹಂತದಲ್ಲಿ

ಇ. ಆಂತರಿಕ ಮೌಲ್ಯಮಾಪನ.

ಈ. ಬಾಹ್ಯ ಮೌಲ್ಯಮಾಪನ.

ಸಾಕ್ಷರತಾ ಆಂದೋಲನಗಳು ದೇಶದಾದ್ಯಂತ ಸ್ವಯಂಸೇವಾ ಪ್ರಜ್ಞೆಯನ್ನು ಮೂಡಿಸುವಲ್ಲಿ ಸಫಲವಾಗಿವೆ. ಜಿಲ್ಲಾ ಸಾಕ್ಷರತಾ ಸಮಿತಿಗಳು ಸ್ವತಂತ್ರವಾಗಿ ಕೆಲಸ ಮಾಡಲು ಬೇಕಾದ ವ್ಯವಸ್ಥೆಯನ್ನು ರೂಪಿಸಿಕೊಂಡದ್ದೇ ಆಂದೋಲನದ ಬಹುತೇಕ ಯಶಸ್ಸಿಗೆ ಕಾರಣ.

ಆಂದೋಲನದ ಯಶಸ್ಸನ್ನು ಹೀಗೆ

ಗುರುತಿಸಬಹುದು.

೧. ಮಹಿಳೆಯರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಅಕ್ಷರಸ್ಥರಾಗಿರುವುದು.
೨. ಪ್ರಾಥಮಿಕ ಶಾಲೆಗಳ ಪ್ರವೇಶ ಮತ್ತು ಹಾಜರಾತಿ ಹೆಚ್ಚಾಗಿರುವುದು.
೩. ಕುಟುಂಬ ಕಲ್ಯಾಣ ಕಾರ್ಯಕ್ರಮದಲ್ಲಿ ಹೆಣ್ಣು ಗಂಡುಗಳ ಭಾಗವಹಿಸುವಿಕೆ ಹೆಚ್ಚಿರುವುದು.
೪. ಸಾಮಾಜಿಕ, ಸಾಂಸ್ಕೃತಿಕ ಮತ್ತು ಭಾಷಿಕ ಸಮನ್ವಯತೆಯ ಬಗ್ಗೆ ಸಾಮಾನ್ಯ ಜನರೂ ಆಸಕ್ತಿ ವಹಿಸಿರುವುದು.
೫. ವರದಕ್ಷಿಣೆ, ಬಾಲ್ಯವಿವಾಹ, ಮದ್ಯಪಾನ, ಜೂಜುಗಾರಿಕೆ ಮುಂತಾದ ಸಾಮಾಜಿಕ ಪಿಡುಗುಗಳ ಬಗೆಗೆ ಹೆಚ್ಚಿನ ಅರಿವು ಮತ್ತು ಪ್ರತಿಭಟನೆ.
೬. ಶಿಕ್ಷಣ ವ್ಯವಸ್ಥೆಯಲ್ಲಿ ಗ್ರಾಮ ಶಿಕ್ಷಣ ಸಮಿತಿಗಳು ಪ್ರಮುಖಪಾತ್ರ ವಹಿಸುತ್ತಿರುವುದು.
೭. ಪರಿಸರ, ನೈರ್ಮಲ್ಯ, ವೈಯಕ್ತಿಕ ಶುಚಿತ್ವದ ಕಡೆ ಹೆಚ್ಚು ಗಮನ ಕೊಡುತ್ತಿರುವುದು.
೮. ನವಸಾಕ್ಷರರಲ್ಲಿ ಆತ್ಮವಿಶ್ವಾಸ ಮೂಡಿ, ಅವರು ಸಂಘಟಿತರಾಗುತ್ತಿರುವುದು.

೧೯೯೧ರ ಜನಗಣತಿ ಪ್ರಕಾರ ಭಾರತದ ಅಕ್ಷರಸ್ಥರ ಸರಾಸರಿ ಸಂಖ್ಯೆ ಪ್ರತಿಶತ ೫೨.೨. ಸಾಕ್ಷರತಾ ಆಂದೋಲನಗಳನ್ನು ಪ್ರಾರಂಭಿಸಿದ ಮೇಲೆ ಗಣನೀಯ ಪ್ರಮಾಣದಲ್ಲಿ ಅಕ್ಷರಸ್ಥರ ಸಂಖ್ಯೆ ಹೆಚ್ಚಾಗಿದೆ. ೨೦೦೧ರ ಜನಗಣತಿ ಇನ್ನೂ ಆಗಬೇಕಿದೆ. ಆದರೆ ಈಗಾಗಲೇ ನ್ಯಾಷನಲ್ ಲಿಟರಸಿ ಮಿಷನ್ ಪ್ರಕಾರ ೨೦೦೦ ದ ಇಸವಿಯ ಹೊತ್ತಿಗೆ ಭಾರತದ ಸಾಕ್ಷರತೆ ಶೇಕಡಾ ೬೪ಕ್ಕೆ ಏರಿದೆ. ಅಂದರೆ ೧೯೯೧ ರಿಂದ ೨೦೦೦ದ ಒಳಗೆ ಶೇಕಡ ೧೧.೮ ರಷ್ಟು ಸಾಕ್ಷರತಾ ಸಂಖ್ಯೆ ಹೆಚ್ಚಿದೆ. ಸಾಕ್ಷರತಾ ಹೆಚ್ಚಳದಲ್ಲಿ ಗಣನೀಯ ಸಾಧನೆ ತೋರಿರುವ ರಾಜ್ಯಗಳೆಂದರೆ ದಕ್ಷಿಣ ಭಾರತದ ರಾಜ್ಯಗಳು. ಪೂರ್ವ ಮತ್ತು ಪಶ್ಚಿಮದ ರಾಜ್ಯಗಳು. ಉತ್ತರ ಭಾರತದ ಹಿಂದೀ ಮಾತನಾಡುವ ರಾಜ್ಯಗಳು ನಿರೀಕ್ಷಿಸಿದ ಪ್ರಮಾಣದಲ್ಲಿ ಯಶಸ್ಸನ್ನು ಕಂಡಿಲ್ಲ.

ಈ ಶತಮಾನದ ಕಡೆಯ ದಶಕವನ್ನು 'ಸಾಕ್ಷರತಾ ದಶಕವೆಂದೇ 'ಕರೆಯಬಹುದು. ೧೯೯೦ಅನ್ನು ಯುನೆಸ್ಕೊ ಅಂತಾರಾಷ್ಟ್ರೀಯ ಸಾಕ್ಷರತಾ ವರ್ಷ ಒಂದು ಘೋಷಿಸಿತು. ಹೆಚ್ಚೂ ಕಡಿಮೆ ಒಂದು ವರ್ಷದ ಹಿಂದೆ ಪ್ರಾರಂಭವಾದ ಭಾರತದ ಸಂಪೂರ್ಣ ಸಾಕ್ಷರತಾ ಆಂದೋಲನಗಳು ಯಶಸ್ವೀ ಸಾಮಾಜಿಕ ಚಳುವಳಿಗಳಾಗಿ ಪರಿವರ್ತನೆಗೊಂಡು ಸಾಕ್ಷರತೆಯ ಜೊತೆ ಜೊತೆಗೇ ಅನೇಕ ಸಾಮಾಜಿಕ ಸಮಸ್ಯೆಗಳ ಪರಿಚಯವನ್ನು ಜನರಿಗೆ ಮಾಡಿಕೊಡುವಲ್ಲಿ ಸಫಲವಾಗಿವೆ. ಆ ದೃಷ್ಟಿಯಿಂದ ಹಿಂದೆ ಜಾರಿಯಲ್ಲಿದ್ದ ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮಕ್ಕಿಂತ ಭಿನ್ನವಾದ, ತುಂಬಾ ತೀಕ್ಷ್ಣ ಹಾಗೂ ಮಿಲಿಟೆಂಟ್ ಆದ ಕಾರ್ಯಕ್ರಮ ಆಂದೋಲನದ ರೂಪದಲ್ಲಿ ಅನುಷ್ಠಾನಗೊಂಡಿದೆ. ಸಾಕ್ಷರತಾ ಮಿಷನ್ ಈ ದೃಷ್ಟಿಯಿಂದ ಅತ್ಯಂತ ಯಶಸ್ವೀ ಕಾರ್ಯಕ್ರಮವಾಗಿದೆ. ವಯಸ್ಕರ ಶಿಕ್ಷಣ ಈ ದೇಶದಲ್ಲಿ ಖಾಯಂ ಆಗಿ ಅಕ್ಷರ ಕಲಿಸುವ ಯೋಜನೆಯನು ನಡೆಸಿಕೊಂಡು ಹೋಗುವ ಪರಿಸ್ಥಿತಿ ಉದ್ಭವವಾಗಬಹುದೆಂಬ ಭೀತಿಯನ್ನು ಸ್ವಲ್ಪ ಮಟ್ಟಿಗಾದರೂ ಹೋಗಲಾಡಿಸುವಲ್ಲಿ ಇತ್ತೀಚಿನ ಆಂದೋಲನ ಯಶಸ್ವಿಯಾಗಿದೆ.

ದೇಶವು ಆ ದೇಶದಲ್ಲಿ ವಾಸಿಸತಕ್ಕ ಜನರದು. ಅದನ್ನು ಆಳುವ ಸರಕಾರವನ್ನು ತಿದ್ದಲು ಅವರೇ ನಿಜವಾದ ಹಕ್ಕುಳ್ಳವರು.

ನೇತಾಜಿ

ಜಿ. ಹನುಮಂತರಾಯರು - ಒಂದು ನೆನಪು

ಎಂ.ಎನ್. ಲಿಂಗಪ್ಪ
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಮೈಸೂರು

ಜಿ. ಹನುಮಂತರಾಯರು ತತ್ತ್ವಶಾಸ್ತ್ರದ ಪ್ರಾಧ್ಯಾಪಕರು. ರಾಯರ ಬದುಕಿನ ಬಹುಭಾಗ ಅಧ್ಯಯನಕ್ಕೆ, ಚಿಂತನೆಗೆ ಬರವಣಿಗೆಗೆ ಮೀಸಲು. ಬಹುಮುಖ ಪ್ರತಿಭೆಯುಳ್ಳ ಹನುಮಂತರಾಯರು ಅಧ್ಯಾಪಕ ವೃತ್ತಿಯ ಜೊತೆಗೆ ಹತ್ತು ಹಲವು ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅವರ ಬಹುಮುಖ ಪ್ರತಿಭೆಯ ಕಿರುಪರಿಚಯ ಈ ಲೇಖನದ ಉದ್ದೇಶ.

ಹನುಮಂತರಾಯರು ತತ್ತ್ವಶಾಸ್ತ್ರದಲ್ಲಿ ಆಳವಾದ ಪಾಂಡಿತ್ಯವನ್ನು ಪಡೆದಿದ್ದರು. ಪಾಶ್ಚಾತ್ಯ ನಿಯತಕಾಲಿಕೆಗಳಿಗೆ ಲೇಖನ ಬರೆಯುವ ಮೂಲಕ ಹೊಸ ಹೊಸ ವಿಚಾರಗಳನ್ನು ಪ್ರಕಟಿಸುತ್ತಿದ್ದರು. ಅಧ್ಯಾಪಕ ವೃತ್ತಿ ಅವರಿಗೆ ಪ್ರಿಯವಾಗಿತ್ತು. ಯೋಚನೆ ಮಾಡಿದ್ದನ್ನು ಮಾತ್ರ ಅವರು ಪಾಠ ಹೇಳುತ್ತಿರಲಿಲ್ಲ. ಪಾಠಮಾಡುವಾಗಲೂ ಯೋಚನೆ ಮಾಡಿ ಚರ್ಚಿಸುತ್ತಿದ್ದರು. ಇದರಿಂದಾಗಿ ಅವರ ತರಗತಿಗಳು ಒಮ್ಮೊಮ್ಮೆ ಕಳೆಕಟ್ಟುತ್ತಿರಲಿಲ್ಲ ಎಂಬುದಾಗಿ ಅವರ ಕೆಲವು ಶಿಷ್ಯರ ಅಂಬೋಣ. ಅಂದ ಮಾತ್ರಕ್ಕೆ ಅವರ ವಿದ್ವತ್ತನ್ನು ಮಾತ್ರ ಯಾರೂ ಪ್ರಶ್ನಿಸುವಂತಿಲ್ಲ.

ಆದರೆ ಎಂ.ಎ. ತರಗತಿಯ ವಿದ್ಯಾರ್ಥಿಗಳಿಗೆ ರಾಯರ ಪಾಠ ಅಚ್ಚುಮೆಚ್ಚು. ಅಲ್ಲಿನ ವಿದ್ಯಾರ್ಥಿಗಳಿಗೆ ರಾಯರ ಆಲೋಚನೆಗಳನ್ನು ಅನುಸರಿಸುವುದು ಕಷ್ಟವಾಗುತ್ತಿರಲಿಲ್ಲ. ''ಹನುಮಂತರಾಯರು ವಿಚಾರಗಳನ್ನು ನೇರವಾಗಿ ವಿದ್ಯಾರ್ಥಿಗಳ ತಲೆಗೆ ತುರುಕುವ ಪ್ರಯತ್ನ ಮಾಡುತ್ತಿರಲಿಲ್ಲ. ಅವರಲ್ಲೇ ಆಲೋಚನೆ ಕುದುರುವಂತೆ ಪಾಠ ಮಾಡುತ್ತಿದ್ದರು.'' ಎಂಬ ಮೆಚ್ಚುಗೆಯ ಮಾತುಗಳನ್ನು ಅವರ ಎಂ.ಎ. ತರಗತಿಯ ವಿದ್ಯಾರ್ಥಿಗಳು ಹೇಳುತ್ತಿದ್ದರು. ಎಂಬುದಾಗಿ ಎ.ಎನ್. ಮೂರ್ತಿರಾಯರು ತಮ್ಮ ಆತ್ಮಕತೆಯಲ್ಲಿ ದಾಖಲಿಸಿದ್ದಾರೆ.

ಹನುಮಂತರಾಯರು ಮೊದಲು ಪ್ರಬಂಧಗಳನ್ನು ಇಂಗ್ಲೀಷಿನಲ್ಲಿ ಬರೆದು ಆಂಗ್ಲ ಪತ್ರಿಕೆಗಳಲ್ಲಿ ಪ್ರಕಟಿಸಿದರು. ಬಹುಬೇಗ ನಾನು ಬರೆಯಬೇಕಾದ್ದು ನಮ್ಮ ಜನಗಳನ್ನು ಕುರಿತು ಎಂದು ಅರಿತು ಕನ್ನಡದಲ್ಲಿ ಬರೆಯಲಾರಂಭಿಸಿದರು. ಅವರ ಬರವಣಿಗೆಗಳನ್ನು ಓದಿದಾಗ ಅವರು ಶ್ರದ್ಧೆಯಿಂದ ಮಾಡಿದ ಅಧ್ಯಯನದ ಫಲ ಇವುಗಳು ಎಂಬುದು ಸ್ಪಷ್ಟವಾಗುತ್ತದೆ. ಸರಳತೆ, ಸ್ಪಷ್ಟತೆ ಅವರ ಬರವಣಿಗೆಯ ಮುಖ್ಯ ಗುಣ. ವಿಜ್ಞಾನ ಅವರ ಆಸಕ್ತಿಯ ಕ್ಷೇತ್ರ. ಅವರು ರಚಿಸಿದ ಕೃತಿಗಳು ಅವರನ್ನು ಅಮರರನ್ನಾಗಿಸಿವೆ.

ಹನುಮಂತರಾಯರು ವಯಸ್ಕರ ಶಿಕ್ಷಣ ಕ್ಷೇತ್ರದಲ್ಲೂ ಕೆಲಸ ಮಾಡಿದ್ದಾರೆ. ವಯಸ್ಕರ ಶಿಕ್ಷಣಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳು ಅವರನ್ನು ಸೂಜಿಗಲ್ಲಿನಂತೆ ಸೆಳೆಯುತ್ತವೆ. ವಿದ್ಯೆ ನಗರವಾಸಿಗಳಿಗೆ ದೊರೆತರೆ ಮಾತ್ರ ಸಾಲದು. ವಿದ್ಯೆ ಸರ್ವರ ಸೊತ್ತಾಗಬೇಕು ಎಂಬ ಅವರ ನಿಲುವು ಇಲ್ಲಿ ಸ್ಪಷ್ಟರೂಪ ಪಡೆಯುತ್ತವೆ. ಪುಸ್ತಕ ಪ್ರಪಂಚ ಪತ್ರಿಕೆಗೆ ತಾವು ಬರೆಯುವುದಲ್ಲದೆ ನೂರಾರು ಮಂದಿ ಹೊಸ ಲೇಖಕರನ್ನು ತಯಾರು ಮಾಡುತ್ತಾರೆ. ಪುಸ್ತಕ ಪ್ರಪಂಚದ ಕರಡು ತಿದ್ದುವುದರಿಂದ ಹಿಡಿದು ಹೊಸ ಲೇಖಕರನ್ನು ತಯಾರು ಮಾಡುವವರೆಗೆ ಹನುಮಂತರಾಯರು ಶ್ರಮಿಸುತ್ತಾರೆ. ಪುಸ್ತಕ ಪ್ರಪಂಚ ಪತ್ರಿಕೆಯ ಸಂಪಾದಕರಾಗಿ ಅದಕ್ಕೊಂದು ದಿಕ್ಕನ್ನು ತೋರಿಸುತ್ತಾರೆ. ಇಂದು ಪ್ರೊ. ದೇಜಗೌ ಅವರ ಪ್ರಧಾನ ಸಂಪಾದಕತ್ವದಲ್ಲಿ ಪುಸ್ತಕ ಪ್ರಪಂಚ ಶಾಶ್ವತ ಸ್ಥಾನ ಪಡೆದುಕೊಂಡು ಮುನ್ನಡೆಯುತ್ತಿದೆ.

ಹನುಮಂತರಾಯರು ಪುಸ್ತಕ ಪ್ರಪಂಚ ಪತ್ರಿಕೆಗಳನ್ನು ಚೆನ್ನಾಗಿ ಬೆಳೆಸಿ ಆ ಮೂಲಕ ವಯಸ್ಕರ ಶಿಕ್ಷಣಕ್ಕೆ ಅಪಾರ ಸೇವೆ ಸಲ್ಲಿಸಿದ್ದಾರೆ. ಈ ಕಾರ್ಯಕ್ಕಾಗಿ ಹಲವರನ್ನು ತೊಡಗಿಸಿದ್ದಾರೆ.

ಹುರಿದುಂಬಿಸಿ ಲೇಖನಗಳನ್ನು ಬರೆಸಿದ್ದಾರೆ. ಲೇಖನ ಸಕಾಲದಲ್ಲಿ ದೊರೆಯದಿದ್ದಾಗ ಬೇಸರಗೊಳ್ಳದೆ ತ್ರಿವಿಕ್ರಮನಂತೆ ಅವರಿಂದ ಬರೆಸಿದ್ದಾರೆ. ಅವರ ಒತ್ತಾಸೆಯಿಂದ ಲೇಖನ ವೃತ್ತಿ ಪ್ರಾರಂಭಿಸಿದ ಹಲವರು ಮುಂದೆ ಪ್ರಸಿದ್ಧ ಲೇಖಕರಾಗುತ್ತಾರೆ. ಹೀಗೆ ಹನುಮಂತರಾಯರು ತಾವು ಬೆಳೆಯುವುದರ ಜೊತೆಗೆ ಇತರರನ್ನು ಬೆಳೆಸಿದ್ದಾರೆ.

ಹನುಮಂತರಾಯರು ಸ್ನೇಹಜೀವಿ. ಬಹುಬೇಗ ಎಂಥವರ ಸ್ನೇಹವನ್ನಾದರೂ ಸಂಪಾದಿಸುತ್ತಿದ್ದರು. ಅವರ ಕಷ್ಟ ಕಾರ್ಪಣ್ಯಗಳಿಗೆ ಸಹಾಯಮಾಡುತ್ತಿದ್ದರು. ತಾವು ಸುಖವಾಗಿದ್ದರೆ ಸಾಲದು ಜೊತೆಯವರು ಸುಖವಾಗಿರಬೇಕು ಎಂಬುದು ಅವರ ನಿಲುವಾಗಿತ್ತು. ''ಹನುಮಂತರಾಯರು ತಾವೇ ಸ್ವತಃ ಅರ್ಜಿ ತಂದು ನನ್ನಿಂದ ರುಜುಹಾಕಿಸಿಕೊಂಡು ಹೋಗಿ ಸೈಟು ಕೊಡಿಸಿದರು. ಸೈಟಿನ ವಿಸ್ತಾರ ೧೦೦ x ೧೪೦. ರಾಯರು ನನಗೆ ಸೈಟು ಕೊಡಿಸಿದ ಹಾಗೆ ಸಿ.ವಿ.ಶ್ರೀನಿವಾಸಮೂರ್ತಿಯವರಿಗೂ ಕೊಡಿಸಿದರು. ನಮ್ಮ ಮನೆ ಕಟ್ಟುವ ಕೆಲಸ ಪ್ರಾರಂಭವಾದಾಗ ಬೆಳಿಗ್ಗೆ ಎದ್ದೊಡನೆ ನಂಜನಗೂಡು ರಸ್ತೆಯ ಉಕ್ಕಡಕ್ಕೆ ಹೋಗಿ, ಇಟ್ಟಿಗೆ, ಗಾಡಿ, ಸುಣ್ಣದ ಗಾಡಿಗಳನ್ನು ಹಿಡಿದು, ಗಾಡಿಯವರಿಗೆ ಇಂಥ ಕಡೆ ತನ್ನಿ ಎಂದು ಹೇಳಿ, ಮನೆಗೆ ವಾಪಸಾಗಿ ಸ್ನಾನ ಉಪಾಹಾರಗಳನ್ನು ತೀರಿಸಿಕೊಂಡು , ಎಂಟು ಗಂಟೆಗೆ ಹೊತ್ತಿಗೆ ಮೂರು ಮೈಲಿ ದೂರದ ಒಂಟಿಕೊಪ್ಪಲಿಗೆ ಬರುತ್ತಿದ್ದರು. ಯಾವುದೊಂದು ಕೆಲಸವೂ ಅವರ ಮೇಲುವಿಚಾರಣೆಯಿಲ್ಲದೆ ನಡೆಯಲಿಲ್ಲ. ಸತತವಾಗಿ ನಾಲ್ಕು ತಿಂಗಳು ಕೆಲಸ ನಡೆದು ಮನೆಪೂರ್ಣಗೊಂಡವು. ರಾಯರಿಂದ ನಮ್ಮ ಖರ್ಚು ಶೇಕಡಾ ೩೦ಕರಷ್ಟಾದರೂ ಕಡಿಮೆಯಾಗಿದ್ದಿರಬೇಕು'' ಎಂಬುದಾಗಿ ಎ.ಎನ್. ಮೂರ್ತಿರಾಯರು ಹನುಮಂತರಾಯರ ಸಹಕಾರಬುದ್ಧಿಯನ್ನು ತಮ್ಮ ಆತ್ಮಚರಿತ್ರೆಯಲ್ಲಿ ದಾಖಲಿಸಿದ್ದಾರೆ. ಇದು ಹನುಮಂತರಾಯರ ವ್ಯಕ್ತಿತ್ವದ ಇನ್ನೊಂದು ಮುಖ. ನಂ.ಶಿವರಾಮ ಶಾಸ್ತ್ರಿಗಳು, ಎಚ್.ಎಂ. ಶಂಕರನಾರಾಯಣ ರಾಯರು, ಎಸ್.ವಿ. ಪರಮೇಶ್ವರ ಭಟ್ಟರ ಮನೆಗಳೂ ರಾಯರ ಮೇಲುಸ್ತುವಾರಿಯಲ್ಲಿ ನಿರ್ಮಾಣಗೊಂಡದ್ದನ್ನು ಮೂರ್ತಿರಾಯರು ದಾಖಲಿಸಿದ್ದಾರೆ. ಇವೆಲ್ಲ ಪುಕ್ಕಟೆ ಕೆಲಸಗಳೆ.

ಹನುಮಂತರಾಯರ ಮಾತು ಸಾಮಾನ್ಯವಾಗಿ ಗಂಭೀರ. ಚರ್ಚೆ ಎಂದೂ ಲಘುವಾಗುತ್ತಿರಲಿಲ್ಲ. ತಮ್ಮ ಮಾತನ್ನು ಹೇಗಾದರೂ ಸಮರ್ಥಿಸಿಕೊಳ್ಳಬೇಕೆಂಬ ಹಟ ಅವರಲ್ಲಿ ಕಾಣುವುದಿಲ್ಲ. ತಮ್ಮ ನಿಲುವಿನಲ್ಲಿ ಸತ್ಯಾಂಶ ಇಲ್ಲವೆಂದು ತಿಳಿದಾಗ ತಮ್ಮ ಅಭಿಪ್ರಾಯವನ್ನು ಬದಲಾಯಿಸಿಕೊಳ್ಳುವ ಸ್ವಭಾವ ರಾಯರದಾಗಿತ್ತು. ''ನಮಗೆ ಬೇಕಾದ್ದು ಸತ್ಯ, ಅದು ನಮಗೆ ಇಷ್ಟವಾಗಲಿ ಆಗದಿರಲಿ, ಒಪ್ಪಬೇಕಾದ್ದು ಅದನ್ನೇ. ಮುಂದೆ ಎಂದಾದರೂ ನಾವು ಹಿಡಿದ ದಾರಿ (ಮಂಡಿಸಿದ ವಾದ) ಸರಿಯಲ್ಲ ಎನ್ನಿಸಿದರೆ ಮೊದಲು ಎಲ್ಲಿಂದ ಹೊರಟವೋ ಅಲ್ಲಿಗೆ ಹಿಂದಿರುಗಿ ಹೊಸದಾರಿ ಹಿಡಿಯೋಣ'' ಇದು ಹನುಮಂತರಾಯರ ಸತ್ಯನಿಷ್ಠ ಅನ್ವೇಷಕ ವೃತ್ತಿ. ಇಂದು ಎಲ್ಲ ಕ್ಷೇತ್ರಗಳಲ್ಲಿಯೂ ಈ ಬಗೆಯ ನಿಲುವು ಅತ್ಯಗತ್ಯ. ಸಾಕ್ರಟೀಸನ ಮನೋವೃತ್ತಿಯನ್ನು ಹನುಮಂತರಾಯರಲ್ಲಿ ಕಾಣಬಹುದು.

ಸಂಸ್ಥೆಯೊಂದನ್ನು ಸ್ಥಾಪಿಸಿ, ಪ್ರತಿಯೊಂದು ವಿವರಕ್ಕೂ ಗಮನಕೊಟ್ಟು, ಮುಂದೆ ಬರಬಹುದಾದ ಸಮಸ್ಯೆಗಳನ್ನು ಮೊದಲೇ ಊಹಿಸಿ, ಅದನ್ನು ಬಿಡಿಸಲು ಬೇಕಾದ ಏರ್ಪಾಟುಮಾಡಿಕೊಂಡು , ಸಂಸ್ಥೆಯನ್ನು ಯಶಸ್ವಿಯಾಗಿ ನಡೆಸಲು ಬೇಕಾದ ಚಾತುರ್ಯ ಹನುಮಂತರಾಯರ ಇನ್ನೊಂದು ಬಹುಮುಖ್ಯ ಗುಣ. ವಿಶ್ವವಿದ್ಯಾನಿಲಯದ ಆವರಣದಲ್ಲೇ ಹೊಸದೊಂದು ಸಂಸ್ಥೆಯನ್ನು ಕಟ್ಟಿ ದೊಡ್ಡದೊಂದು ಸಂಪ್ರದಾಯವನ್ನು ಬೆಳೆಸಿದ ಹೆಗ್ಗಳಿಕೆ ಹನುಮಂತರಾಯರದು.

ಸಾಮಾನ್ಯ ಜನರನ್ನು ಕುರಿತಂತೆ ವಿಶ್ವವಿದ್ಯಾನಿಲಯ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಿಲ್ಲ. ಜ್ಞಾನಗಂಗೆ ನಗರ ಪ್ರವೇಶಗಳಲ್ಲಿ ಮಾತ್ರ

ಹರಿದರೆ ಸಾಲದು ಗ್ರಾಮೀಣ ಪ್ರದೇಶಗಳಿಗೂ ಪ್ರಸರಿಸಬೇಕು. ಈ ನ್ಯೂನ್ಯತೆಯನ್ನು ಹೇಗಾದರೂ ಮಾಡಿ ಸರಿಪಡಿಸಬೇಕು ಎಂಬ ಆಲೋಚನೆ ಹನುಮಂತರಾಯರಿಗೆ ಹೊಳೆಯುತ್ತದೆ. ತಮ್ಮ ಯೋಚನೆಯನ್ನು ವಿಶ್ವವಿದ್ಯಾನಿಲಯದ ಪರಿಶೀಲನೆಗಾಗಿ ಕಳಿಸುತ್ತಾರೆ. ಒಪ್ಪಿಗೆ ಬರುವವರೆವಿಗೂ ಕಾಯುವುದಿಲ್ಲ. ಕಾರ್ಯೋನ್ಮುಖರಾಗುತ್ತಾರೆ. 'ಯೂನಿವರ್ಸಿಟಿ ಟೀಚರ್ಸ್ ಅಸೋಸಿಯೇಷನ್' ಎಂಬ ಸಂಸ್ಥೆಯನ್ನು ಸ್ಥಾಪಿಸುತ್ತಾರೆ. ತಾವು ಕಾರ್ಯದರ್ಶಿಯಾಗಿ ಪ್ರೊ. ರಾಲೊ ಅವರನ್ನು ಸಂಘದ ಅಧ್ಯಕ್ಷರನ್ನಾಗಿಸುತ್ತಾರೆ. ಸಂಘದ ಮುಖ್ಯ ಉದ್ದೇಶ ಜ್ಞಾನ ಜ್ಯೋತಿಯನ್ನು ನಾಡಿನ ಮೂಲೆ ಮೂಲೆಗೆ ತೆಗೆದುಕೊಂಡು ಹೋಗಿ ಬೆಳಗಿಸುವುದು. ಈ ಕಾರ್ಯಕ್ಕಾಗಿ ಹನುಮಂತರಾಯರು ಹಗಲಿರುಳು ದುಡಿಯುತ್ತಾರೆ. ಅನೇಕ ಊರುಗಳಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸುತ್ತಾರೆ.

ಉಪನ್ಯಾಸಗಳನ್ನು ಬರಹಕ್ಕೆ ಇಳಿಸಿ ಸಣ್ಣಪುಸ್ತಕಗಳಾಗಿ ಪ್ರಕಟಿಸುವ ಯೋಜನೆಯನ್ನು ಹನುಮಂತರಾಯರು ಕೈಗೊಂಡರು. ಜನಸಾಮಾನ್ಯರಿಗೆ ನಿಲುಕುವ ಬೆಲೆಗೆ ಅವುಗಳನ್ನು ಮುದ್ರಿಸಿದರು. ಲಕ್ಷಾಂತರ ಪ್ರತಿಗಳು ಮಾರಾಟವಾದವು. ಹನುಮಂತರಾಯರು ಸ್ಥಾಪಿಸಿದ ಅಧ್ಯಾಪಕರ ಸಂಘದ ಕೀರ್ತಿ ಯುರೋಪಿನವರೆಗೂ ಪ್ರಸರಿಸುತ್ತದೆ. ಅಂದಿನ ಯೂನಿವರ್ಸಿಟಿ ಟೀಚರ್ಸ್ ಅಸೋಸಿಯೇಷನ್ ದೊಡ್ಡ ಸಂಸ್ಥೆಯಾಗಿ ಬೆಳೆದು ಈಗ ಪ್ರಸಾರಾಂಗವಾಗಿದೆ.

ಪ್ರಸಾರಾಂಗದ ರೂವಾರಿ ಹನುಮಂತರಾಯರು ಎಂದರೆ ತಪ್ಪಾಗಲಾರದು. ಹನುಮಂತರಾಯರ ಸೇವೆಯನ್ನು ಮೈಸೂರು ವಿಶ್ವವಿದ್ಯಾ ನಿಲಯವು ಮರೆತಿಲ್ಲ. ಮಾನಸಗಂಗೋತ್ರಿಯಲ್ಲಿ ಪ್ರಸಾರಾಂಗದ ಕಟ್ಟಡವನ್ನು ಪ್ರವೇಶಿಸಿದವರೆಲ್ಲರಿಗೂ ಕಾಣುವಂತೆ ಹನುಮಂತರಾಯರ ಭಾವಚಿತ್ರವನ್ನು ತೂಗುಹಾಕಿದ್ದಾರೆ. ಪ್ರಸಾರಾಂಗ ಯಾವ ಕರ್ತವ್ಯದ ನಿರ್ವಹಣೆಗಾಗಿ ಏರ್ಪಟ್ಟಿತೋ ಆ ಕರ್ತವ್ಯವನ್ನು ಸ್ಫುಟವಾಗಿ ರೂಪಿಸಿಕೊಂಡು ನಿರ್ವಹಿಸಿದವರು ಹನುಮಂತರಾಯರು. ಅವರ ಸೇವೆಯನ್ನು ವಿಶ್ವವಿದ್ಯಾನಿಲಯ ನೆನಪಿಸಿಕೊಂಡಿರುವುದು ಅವರನ್ನು ಬಲ್ಲ ಎಲ್ಲರಿಗೂ ಸಂತೋಷವನ್ನು ಉಂಟುಮಾಡಿದೆ.

ಹನುಮಂತರಾಯರು ತತ್ತ್ವಶಾಸ್ತ್ರದ ಪ್ರಾಧ್ಯಾಪಕರಾದರೂ ಒಂದೇ ಜನ್ಮದಲ್ಲಿ ನಾಲ್ಕಾರು ಅವತಾರಗಳನ್ನು ಎತ್ತಿದವರು. ಮನೆಕಟ್ಟುವ ಕಂಟ್ರಾಕ್ಟರ್, ಬುದ್ಧಿಜೀವಿ ಅಧ್ಯಾಪಕ, ಸಂಸ್ಥೆಗಳ ವ್ಯವಸ್ಥಾಪಕ, ಬೇಸಾಯಗಾರ, ಪ್ರತಿಕೋದ್ಯೋಗಿ, ಕೈಗಾರಿಕೆಗಳ ಕ್ಯಾಪ್ಟನ್ ಇತ್ಯಾದಿ. ಸ್ವಲ್ಪ ಕಾಲ ಯೂನಿವರ್ಸಿಟಿ ಯೂನಿಯನ್ನಿನ ಹೋಟಲಿನಲ್ಲಿ ಮ್ಯಾನೇಜರಾಗಿದ್ದದ್ದೂ ಉಂಟು. ಇವೆಲ್ಲಾ ಹಣ ಸಂಪಾದನೆಗಾಗಿ ಅಲ್ಲ. ಜನ ಕಲ್ಯಾಣಕ್ಕಾಗಿ ಮಾಡಿದ ಕೆಲಸಗಳು.

ಹನುಮಂತರಾಯರು ಹಿಡಿದ ಕೆಲಸವನ್ನು ಪೂರೈಸುವವರೆಗೆ ಬಿಡುವವರಲ್ಲ. ಅವರ ತಲೆಗೆ ಒಂದು ಯೋಚನೆ ಬಂದರೆ ಆ ಕ್ಷಣವೇ ಅದನ್ನು ಕಾರ್ಯರೂಪಕ್ಕೆ ತರಬೇಕು. ಸೋಮಾರಿತನ ಅವರ ಬಳಿಗೆ ಎಂದಿಗೂ ಸುಳಿಯಲಿಲ್ಲ. ಬಿಡುವು ಎಂದರೆ ಒಂದು ಕೆಲಸವನ್ನು ನಿಲ್ಲಿಸಿ ಇನ್ನೊಂದು ಕೆಲಸವನ್ನು ಪ್ರಾರಂಭಿಸುವುದೇ ಹೊರತು ವಿಶ್ರಾಂತಿಯಲ್ಲ. ಎ.ಎನ್. ಮೂರ್ತಿರಾಯರು ಹನುಮಂತರಾಯರ ಬಿಡುವಿಲ್ಲದ ದುಡಿಮೆಯ ಬಗ್ಗೆ ತಮ್ಮ ಆತ್ಮಚರಿತ್ರೆಯಲ್ಲಿ ಮೆಚ್ಚುಗೆಯ ಮಾತುಗಳನ್ನಾಡಿರುವುದನ್ನು ಗಮನಿಸಬಹುದು.

ಊಟ ಉಪಚಾರದಲ್ಲೂ ಹನುಮಂತರಾಯರು ರಸಿಕರು. ತಮ್ಮ ಮನೆಗೆ ಆಹ್ವಾನಿಸಿದ ಅತಿಥಿಗಳಿಗೆ ಭೂರಿಭೋಜನ ಏರ್ಪಡಿಸುತ್ತಿದ್ದರು. ''ಹಿಂದಿನ ಜನ್ಮದಲ್ಲಿ ಅವರು ನಳಮಹಾರಾಜನಾಗಿದ್ದಿರಬೇಕು. ಅವರು ಸಿದ್ಧಪಡಿಸುತ್ತಿದ್ದ ಅಡುಗೆ ನಳಪಾಕವೇ ಸೈ'' ಎನ್ನುತ್ತಾರೆ ಮೂರ್ತಿರಾಯರು.

ಹನುಮಂತರಾಯರು ಇಂದು ನಮ್ಮೊಡನಿಲ್ಲ. ಆದರೆ ಅವರ ಆದರ್ಶಗಳು, ಅವರ ವಿಚಾರಗಳು, ನಮ್ಮೊಡನಿವೆ. ಅವರನ್ನು ಜೀವಂತವನ್ನಾಗಿಸಿವೆ. ಅವರ ನೆನಪಿಗಾಗಿ ಈ ಲೇಖನ.

ಕೊಂಡಿರುವುದನ್ನು ಕಾಣಬಹುದಾಗಿದೆ. ಪ್ರಾಸ್ತಾವಿಕವಾಗಿ ಕೆಲವರ ಹೆಸರನ್ನು ಹೀಗೆ ಪಟ್ಟಿಮಾಡಬಹುದು: ಕುವೆಂಪು, ವಿ.ಸೀ., ಎಸ್. ಮಂಜುನಾಥ್, ಮಾಸಪ್ಪ, ಸ್ವಾಮಿ ವಿಶ್ವಾನಂದ, ಕೆ. ಶಿವರಾಮ ಕಾರಂತ, ಎಂ.ವಿ ಕೃಷ್ಣಸ್ವಾಮಿ, ಎಂ.ಇ. ಭರತರಾಜ್ ಸಿಂಗ್, ಎಚ್. ವೈ. ಶಾರದಾ ಪ್ರಸಾದ್, ಬಾದರಾಯಣ ಮೂರ್ತಿ, ಉದ್ದವನಹಳ್ಳಿ ಕೃಷ್ಣಶರ್ಮ, ಎಸ್.ವಿ. ಕೃಷ್ಣ ಮೂರ್ತಿ, ಎ.ಎನ್. ಮೂರ್ತಿ ರಾವ್, ದೇಜಗೌ, ಬಿ.ಪಿ. ರಾಧಾಕೃಷ್ಣ ಇತ್ಯಾದಿ ಈ ಎಲ್ಲ ಮಹನೀಯರು ಸಮಿತಿಯ ಪ್ರತಿಷ್ಠಿತ ಪತ್ರಿಕೆಗಳಾದ 'ಬೆಳಕು' ಮತ್ತು 'ಪುಸ್ತಕ ಪ್ರಪಂಚ' ಗಳಿಗೆ ಲೇಖಕರಾಗಿ, ನವಸಾಕ್ಷರರಿಗೆ ಅಗತ್ಯವಾದ ಸಾಹಿತ್ಯದ ಕೃತಿಕಾರರಾಗಿ ಉತ್ತರೋತ್ತರ ದುಡಿಯುತ್ತಾ ಬಂದಿದ್ದಾರೆ. ಕುವೆಂಪುರಂತಹ ಮಹಾಕವಿ, ನಾ. ಕಸ್ತೂರಿ, ಎ.ಎನ್. ಮೂರ್ತಿರಾಯರಂಥ ಗಣ್ಯರು ವಯಸ್ಕರ ಶಿಕ್ಷಣ ಸಮಿತಿ ಅನಾವರಣಗೊಳಿಸಿದ ಕೃತಿಗಳ ಲೇಖಕರಾಗಿ ಬಂದದ್ದು ಒಂದು ಅಪೂರ್ವ ದಾಖಲೆ. ಭಾರತದ ಶ್ರೇಷ್ಠ ವ್ಯಂಗಚಿತ್ರಕಾರರಲ್ಲಿ ಒಬ್ಬರಾದ ಆರ್. ಕೆ. ಲಕ್ಷ್ಮಣ್ ಹಾಗೂ ಖ್ಯಾತ ರೇಖಾಚಿತ್ರಕಾರರಾದ ಸೂಫಿ ಯವರು ಸಮಿತಿಯ ಪ್ರಕಟನೆಯ ಕಲಾವಿನ್ಯಾಸಕ್ಕೆ ಸಹಕರಿಸಿರುವುದನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ.

ಬೆಳಕು ವಾರಪತ್ರಿಕೆ ನವಸಾಕ್ಷರರಿಗಾಗಿ ಮೀಸಲಾದ ಪತ್ರಿಕೆ, ಅದರ ಪ್ರಕಟಣೆ ದೀಪಾವಳಿ ಹಬ್ಬದ ದಿನ (೭.೧೧.೪೨) ಬಂತು. ೧೯೭೫ರಲ್ಲಿ ಇಡೀ ಭಾರತದಲ್ಲಿ ಪ್ರಕಟವಾಗುತ್ತಿದ್ದ ನವ ಸಾಕ್ಷರರ ಸಾಪ್ತಾಹಿಕಗಳು ಕೇವಲ ಎರಡು. ಮಲೆಯಾಳ ಮತ್ತು ಕನ್ನಡ. ಒಂದು ಕಾಲಕ್ಕೆ 'ಬೆಳಕು' ಭಾಷೆ ಮತ್ತು ನಿರೂಪಣೆಗೆ ಹೆಸರಾಗಿತ್ತು. ಅದನ್ನು ಯುನೆಸ್ಕೊ ಮೆಚ್ಚಿಕೊಂಡಿತ್ತು. ಅದರ ಪ್ರಸಾರ ಸಂಖ್ಯೆ ೧೦,೦೦೦ದವರೆಗೆ ಇತ್ತು. ಅದರದೆ ಆದ ಅಭಿಮಾನಿಗಳನ್ನು ಪಡೆದಿದೆ. ಶಾಲಾ ವಿದ್ಯಾರ್ಥಿಗಳ ಮುಂದುವರಿಕೆ ಶಿಕ್ಷಣಕ್ಕೆ ಅದರ ಕೊಡುಗೆ ಅಪಾರವಾದುದು.

ವಯಸ್ಕರ ಶಿಕ್ಷಣ ಸಮಿತಿ ತನ್ನ ಸೇವಾ ಕಾರ್ಯಗಳನ್ನು ವಿಸ್ತರಿಸಿಕೊಂಡಂತೆ ಪ್ರಕಟನೆ ಶಾಖೆ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಸಮರ್ಥರಾದ 'ಸಂಪಾದಕರ' ಅಗತ್ಯತೆಯನ್ನು ಕಂಡುಕೊಂಡು, ಕಾರ್ಯೋನ್ಮುಖವಾಯ್ತು. ರಾ. ವೆಂ. ಶ್ರೀ, ಐ. ಶ್ರೀ. ಪ್ರಸಾದ್, ಎಸ್. ವಿ. ಕುಮಾರ್, ರಜತಾದ್ರಿ, ಟಿ. ಆರ್. ನಾಗಪ್ಪ, ರಾ. ಬೋರಯ್ಯ , ಚಂದ್ರಶೇಖರಾರಾಧ್ಯ ಇವರುಗಳು ಸಮಿತಿಯ ಸಂಪಾದಕರಾಗಿ ಅದರ ಸರ್ವಾಂಗೀಣ ಬೆಳವಣಿಗೆಗೆ ದುಡಿದಿದ್ದಾರೆ.

ರಾ. ವೆಂ. ಶ್ರೀ. ಯವರು ಲೇಖಕರಾಗಿ, ಪತ್ರಕರ್ತರಾಗಿ, ಮುದ್ರಕ ಪ್ರಕಟಣ ಕಾರ್ಯದ ಒಳಹೊರಗನ್ನು ಚೆನ್ನಾಗಿ ಬಲ್ಲವರು. ನವ ಸಾಕ್ಷರರಿಗೆ ಸಂಬಂಧಿಸಿದ ಸಾಹಿತ್ಯ ರಚನಾಲಯಗಳಲ್ಲಿ ಭಾಗವಹಿಸಿ, ದೇಶ- ವಿದೇಶಗಳಲ್ಲಿ ಪರ್ಯಾಟನೆ ಮಾಡಿ ಅಪಾರ ಅನುಭವ ಪಡೆದವರು. ವಯಸ್ಕರ ಶಿಕ್ಷಣ ಸಮಿತಿಯ ಜಿಲ್ಲಾಮಟ್ಟದ ವ್ಯವಸ್ಥಾಪಕರಾಗಿ ದುಡಿದು ಅಗತ್ಯ ಸಾಹಿತ್ಯ ಚಿಂತನೆ ನಡೆಸಿದವರು. ಇಂದಿಗೂ ವಯಸ್ಕರ ಶಿಕ್ಷಣ ಸಮಿತಿಯ ಪ್ರಕಟನೆಗೆ ಸಂಬಂಧಿಸಿದ ಚಟುವಟಿಕೆಗಳಿಗೆ ಮುಕ್ತ ಮನಸ್ಸಿನಿಂದ ರಾ. ವೆಂ.ಶ್ರೀ ಸಹಕರಿಸುತ್ತಿದ್ದಾರೆ. 'ಪುಸ್ತಕ ಪ್ರಪಂಚ' ಸಂಪಾದಕೀಯ ಮಂಡಲಿಯ ಸದಸ್ಯರಾಗಿ ಮುದ್ರಣ ವಿನ್ಯಾಸದ ಬಗೆಗೆ ಅಗತ್ಯ ಸಲಹೆಗಳನ್ನು ನೀಡುತ್ತಿರುವುದು ಸಮಿತಿಯ ಕುರಿತಾದ ಅವರ ಅಭಿಮಾನಕ್ಕೆ ಸಾಕ್ಷಿ. ೭೮ರ ಹಿರಿಯಜೀವ ರಾವೆಂಶ್ರೀ ಉತ್ತಮ ಸಾಹಿತಿಗಳು ಹೌದು.

ಐ. ಶ್ರೀ. ಪ್ರಸಾದ್‌ರವರು ಸಮಿತಿಯ ಸಂಪಾದಕರಾಗಿ ಅಮೋಘ ಸೇವೆ ಸಲ್ಲಿಸಿದ್ದಾರೆ. ಸ್ವತಃ ಸಾಹಿತಿಗಳು. ಉತ್ತಮ ಆಡಳಿತಗಾರರು ಆಗಿದ್ದ ಮಾನ್ಯ ಪ್ರಸಾದ್‌ರವರು 'ಪುಸ್ತಕ ಪ್ರಪಂಚ' ಮತ್ತು 'ಬೆಳಕು' ಪತ್ರಿಕೆಗಳ ಗುಣಮಟ್ಟ

ಹಾಗೂ ಅದರ ಪ್ರಸಾರ ಸಂಖ್ಯೆಯು ಹೆಚ್ಚಳಕ್ಕೆ ದುಡಿದವರು. ಇದೇ ಪರಂಪರೆಯಲ್ಲಿ ಬಂದ ಎಸ್.ವಿ.ಕುಮಾರ್ ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಬೆಂಗಳೂರು, ಶಿವಮೊಗ್ಗ ಮುಂತಾದ ಕಡೆ ಜಿಲ್ಲಾ ವ್ಯವಸ್ಥಾಪಕರಾಗಿ ಅದರ ಆರಂಭ ದಿನಗಳಿಂದ ಗುರುತಿಸಿಕೊಂಡವರು. ವಿಪುಲ ಕ್ಷೇತ್ರಾನುಭವ, ಅಚ್ಚುಕಟ್ಟುತನ, ಶಿಸ್ತಿನ ದುಡಿಮೆಗಳಿಂದ ಎಸ್.ವಿ.ಕುಮಾರ್ ಸಮಿತಿಯ ಸಂಪಾದಕರಾಗಿ ದುಡಿದಿದ್ದಾರೆ. ತಮ್ಮಲ್ಲಿದ್ದ ಕಿರಿಯ ಕೆಲಸಗಾರರನ್ನು ಹುರಿದುಂಬಿಸುತ್ತಾ ಎಸ್.ವಿ.ಕುಮಾರ್ ದುಡಿದಿದ್ದಾರೆ.

ಜಿಲ್ಲಾಮಟ್ಟದ ವ್ಯವಸ್ಥಾಪಕರಾಗಿ, ವಯಸ್ಕರ ಪಠ್ಯಪುಸ್ತಕದ ರಚನಾಕಾರರಾಗಿ, ನವಸಾಕ್ಷರ ಸಾಹಿತ್ಯದ ನಿರ್ಮಾತೃವಾಗಿ , ಅನೇಕಾ ರಾಷ್ಟ್ರ ಅಂತರಾಷ್ಟ್ರಮಟ್ಟದ ಸಾಹಿತ್ಯ ರಚನಾಲಯಗಳಲ್ಲಿ ಭಾಗವಹಿಸಿ ತಮ್ಮ ನಿವೃತ್ತ ಜೀವನದಲ್ಲಿ ವಯಸ್ಕರ ಶಿಕ್ಷಣದ ಬಗ್ಗೆ ಅಭಿಮಾನವಿರಿಸಿಕೊಂಡಿದ್ದ ಬಹುಮುಖ ವ್ಯಕ್ತಿ ಟಿ.ಆರ್.ನಾಗಪ್ಪನವರು. ಸಂಪಾದಕರಾಗಿ ಸಮಿತಿಯಲ್ಲಿ ದುಡಿದಿದ್ದಾರೆ. ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ವಯಸ್ಕರ ಶಿಕ್ಷಣ ಕುರಿತು ಸರಿಸುಮಾರು ೮೦ ಗ್ರಂಥಗಳನ್ನು ಬರೆದಿದ್ದಾರೆ. ನಾಡಿನ ಪತ್ರಿಕೆಗಳಲ್ಲಿ ನೂರಾರು ಲೇಖನಗಳನ್ನು ಪ್ರಕಟಿಸಿದ್ದಾರೆ. ವಯಸ್ಕರ ಶಿಕ್ಷಣ ಸಮಿತಿಯ ಕಾಯಕಲ್ಪಕ್ಕೆ ಪ್ರತ್ಯೇಕ್ಷ ಪರೋಕ್ಷವಾಗಿ ಶ್ರಮಿಸುತ್ತಿದ್ದವರಲ್ಲಿ ಟಿ.ಆರ್.ನಾಗಪ್ಪನವರು ಒಬ್ಬರು.

ಉಚ್ಚ ಶಿಕ್ಷಣ ಪಡೆದು, ಭೌತಿಕಲಾಭದತ್ತ ಹೆಚ್ಚು ವಾಲದೆ; ಸಮಿತಿಯ ವಿವಿಧ ಶಾಖೆಗಳಲ್ಲಿ ಕಾರ್ಯನಿರ್ವಹಿಸಿ ಸಂಪಾದಕರಾಗಿ ದುಡಿದವರಲ್ಲಿ ಶ್ರೀ ಎಸ್.ರಜತಾದ್ರಿಯವರು ಒಬ್ಬರು. ವಯಸ್ಕರ ಶಿಕ್ಷಣ ಸಮಿತಿಯ ಆರಂಭ ದಿನಗಳಲ್ಲಿ ರಜತಾದ್ರಿಯವರು ಜಿಲ್ಲಾಮಟ್ಟದ ವ್ಯವಸ್ಥಾಪಕರಾಗಿ, ವಿದ್ಯಾಪೀಠದ ಆಚಾರ್ಯರಾಗಿ ದುಡಿದವರು. ಡೆನ್ಮಾರ್ಕ್‌ಗೆ ಹೋಗಿ ಅಲ್ಲಿನ ಜನತಾ ಶಿಕ್ಷಣ ಕೇಂದ್ರಗಳ ಅಧ್ಯಯನ ನಡೆಯಿಸಿ, ಸಮಿತಿಯ ವಿದ್ಯಾಪೀಠದ ಅಭಿವೃದ್ಧಿಗೆ ದುಡಿದವರು, ಉತ್ತಮ ಬರಹಗಾರರಾಗಿ ನವಸಾಕ್ಷರರಿಗಾಗಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಅವರ ಡೆನ್ಮಾರ್ಕ್, 'ಕ್ರಿಶ್ಚಿಯನ್ನ ಅಂಡರ್‌ಸನ್ನನ ಕಥೆಗಳು' 'ಪಶ್ಚಿಮದ ಹೊಂಬೆಳಗು' 'ವಯಸ್ಕ ಶಿಕ್ಷಣ ವಿಚಾರಧಾರೆ ''ಅಕ್ಷರವೈದ್ಯ' ಇತ್ಯಾದಿ ಕೃತಿಗಳನ್ನು ಬರೆದಿದ್ದಾರೆ. ನಾಡಿನ ಪ್ರಸಿದ್ಧ ಪತ್ರಿಕೆಗಳಲ್ಲಿ 'ವಯಸ್ಕರ ಶಿಕ್ಷಣ' ಕುರಿತಂತೆ ಸಾಕಷ್ಟು ಲೇಖನಗಳು ರಜತಾದ್ರಿಯವರ ಹೆಸರಿನಲ್ಲಿ ಪ್ರಕಟವಾಗಿವೆ. ನಿವೃತ್ತರಾದ ಮೇಲು ವಯಸ್ಕರ ಶಿಕ್ಷಣ ಕಾರ್ಯಕ್ರಮವನ್ನು ನಡೆಸಿಕೊಂಡು ಬಂದಿದ್ದಾರೆ. ಇಂಥ ಹಿರಿಯ ಚೇತನ ಶಕ್ತಿಯಂತೆ ಸಮಿತಿಯ ಸಂಪಾದಕರಾಗಿ ಸಾರಸ್ವತ ಲೋಕಕ್ಕೆ ತಮ್ಮಸೇವೆ ಸಲ್ಲಿಸಿದ್ದಾರೆ. ಬೆಳಕು ಮತ್ತು ಪುಸ್ತಕ ಪ್ರಪಂಚ ಪ್ರಸಾರ ಸಂಖ್ಯೆ ಹೆಚ್ಚಳಕ್ಕೆ ಶ್ರಮಿಸಿದವರಲ್ಲಿ ರಜತಾದ್ರಿ ಗಣ್ಯರು.

ಎಪ್ಪತ್ತರ ಅಂತಿಮ, ಎಂಭತ್ತರ ದಶಕದ ಉದ್ದಕ್ಕೂ ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯಚಟುವಟಿಕೆಗಳು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ವ್ಯಾಪಕವಾಗಿ ನಡೆಯುತ್ತಿದ್ದವು. ಇಂತಹ ಸಂಕ್ರಮಣ ಕಾಲದಲ್ಲಿ ಸಾಕ್ಷರತಾ ಕಾರ್ಯಕ್ರಮಕ್ಕೆ ಅಗತ್ಯವಾದ ಕಲಿಕೆ ಸಾಮಗ್ರಿಗಳು, ಗ್ರಾಮೀಣ ಗ್ರಂಥಾಲಯಗಳಿಗೆ ನವಸಾಕ್ಷರರಿಗೆ ಅಗತ್ಯವಾದ ಪುಸ್ತಕಗಳು ಹಾಗೂ ಪ್ರಚಾರ ಸಾಮಗ್ರಿಗಳನ್ನು ಒದಗಿಸುವುದಾಗಲಿ, ಬೆಳಕು ಮತ್ತು ಪುಸ್ತಕಪ್ರಪಂಚ ಪತ್ರಿಕೆಗಳ ಗುಣಮಟ್ಟ ಕಾಯ್ದುಕೊಂಡು, ಅವುಗಳ ಪ್ರಸಾರ ಸಂಖ್ಯೆಯನ್ನು ಹೆಚ್ಚಿಸುವ ಕಾರ್ಯ ಸುಲಭದಲ್ಲ. ಅಂದು ದಕ್ಷರಾದ ಸಂಪಾದಕರನ್ನು ಸಮಿತಿ ನಿರೀಕ್ಷಿಸಿತ್ತು. ಈ ನಡುವೆ. ರಾಷ್ಟ್ರ ಮಟ್ಟದಲ್ಲಿ ವಯಸ್ಕರ ಶಿಕ್ಷಣ ಕುರಿತಂತೆ ಕ್ರಿಯಾ ಯೋಜನೆ ಜಾರಿಗೆ ಬಂದು ಸಮಿತಿಯ ಪ್ರಕಟಣಾವಲಯಕ್ಕೆ ಹೆಚ್ಚಿನ ಬೇಡಿಕೆ ಬಂತು. ಅಂತಹ ಸಂಕೀರ್ಣ ಸನ್ನಿವೇಶದಲ್ಲಿ ರಾ.ಬೋರಯ್ಯನವರು ಸಮಿತಿಯ

ಸಾಹಿತಿ, ಶಿಕ್ಷಣತಜ್ಞ ಶ್ರೀ ರಾ. ವೆಂ. ಶ್ರೀನಿವಾಸಮೂರ್ತಿ

ಎಚ್. ಎಸ್. ಹರಿಶಂಕರ್
೧೪೯೮/೨೫ ಶಾರದಾ ಮಂದಿರ
ರಾಮಯ್ಯರ್ ರಸ್ತೆ, ಕೆ. ಎಂ. ಪುರಂ,
ಮೈಸೂರು-೫೭೦ ೦೦೪

ರಾಜೋಪಂತ ವೆಂಕೋಬರಾವ್ ಶ್ರೀನಿವಾಸಮೂರ್ತಿಗಳಿಗೆ ಈಗ ೭೮ರ ಪ್ರಾಯ. ಇವರ ಪೂರ್ವಜರು ಮಹಾರಾಷ್ಟ್ರ ಕಡೆಯಿಂದ ವಲಸೆ ಬಂದು ಮಲೆನಾಡಿನ ಸೌಂದರ್ಯಸಿರಿಗೆ ಮನಸೋತು ವಿದ್ಯಾಭ್ಯಾಸ ಮುಗಿಸಿ ಮುಂದಿನ ಓದಿಗಾಗಿ ಮೈಸೂರು ನಗರಕ್ಕೆ ಬಂದರು. ಪ್ರೊ. ಎಸ್. ವಿ. ಪರಮೇಶ್ವರ ಭಟ್ಟರು ಮತ್ತು ಪ್ರೊ. ಟಿ. ಎಸ್. ಶಾಮರಾಯರು ಇವರ ಗುರುಗಳು. ಎಳವೆಯಲ್ಲಿಯೇ ಇವರಿಗೆ ಸಾಹಿತ್ಯ ರಚನೆಯಲ್ಲಿ ಒಲವಿದ್ದುದರಿಂದ ಸಣ್ಣಪುಟ್ಟ ಕತೆಗಳನ್ನು ರಚಿಸಿದ್ದರು. ಮೈಸೂರಿಗೆ ಬಂದಮೇಲೆ ತಮ್ಮ ಪ್ರಥಮ ಕಾದಂಬರಿ 'ಮಲಮಗಳು' ಕೃತಿಯನ್ನು ಬರೆದು ಅದನ್ನು ಗುರುಗಳಾದ ಪ್ರೊ. ಎಸ್. ವಿ. ಪಿ. ಅವರಿಗೆ ತೋರಿಸಿದರು. ಅವರು ಅದನ್ನು ಓದಿ ಮೆಚ್ಚುಗೆ ಸೂಸಿ ಇನ್ನೂ ಹೆಚ್ಚು ಹೆಚ್ಚು ಬರೆಯುವಂತೆ ಪ್ರೋತ್ಸಾಹಿಸಿದರು. ಈ ಕೃತಿಯನ್ನು ಶ್ರೀ ಶಿವರಾಮ ಕಾರಂತರಿಗೆ ತೋರಿಸಿದಾಗ ಅವರಿಂದಲೂ ಮೆಚ್ಚುಗೆ ಸಿಕ್ಕಿತು. ಅಷ್ಟೇ ಅಲ್ಲ ಈ ಕೃತಿಗೆ ಮುನ್ನುಡಿಯನ್ನೂ ಬರೆದು ಕೊಟ್ಟರು. ಮುಂದೆ ಅದು ಉಷಾ ಸಾಹಿತ್ಯ ಮಾಲೆಯಲ್ಲಿ ಪ್ರಕಟಗೊಂಡಿತು.

ಇವರು ಉನ್ನತ ಶಿಕ್ಷಣವನ್ನು ಅಭ್ಯಾಸ ಮಾಡುತ್ತಿರುವಾಗಲೇ ರಾಷ್ಟ್ರೀಯ ಯುವಜನ ಸಂಘದಂಥ ಸಂಸ್ಥೆಯಲ್ಲಿ ಸಕ್ರಿಯವಾಗಿ ಭಾಗವಹಿಸತೊಡಗಿದರು. ಮುಂದೆ ರಾಷ್ಟ್ರೀಯ ಆಂದೋಲನದಲ್ಲೂ ಪಾಲ್ಗೊಂಡರು. ಜೈಲಿಗೆ ಹೋಗದಿದ್ದರೂ ಗಾಂಧೀಜಿಯವರು ನೀಡಿದ್ದ ರಾಷ್ಟ್ರೀಯಕರೆಗೆ ಓಗೊಟ್ಟು ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

ಶಿವಮೊಗ್ಗೆಯಲ್ಲಿದ್ದಾಗ ಶ್ರೀಮಾನ್ ಎಸ್. ವಿ. ಕೃಷ್ಣಮೂರ್ತಿರಾಯರು ಶ್ರೀ ಕೂಡಲಿ ಚಿದಂಬರಂ ಮೊದಲಾದಂಥ ಹಿರಿಯ ವ್ಯಕ್ತಿಗಳ ಸಂಪರ್ಕ ಇವರಿಗಿತ್ತು. ಶಿವಮೊಗ್ಗೆಯ ಕರ್ನಾಟಕ ಸಂಘ ಈ ವೇಳೆಗೆ ಸಾಕಷ್ಟು ಹೆಸರು ಗಳಿಸಿತ್ತು. ಶ್ರೀ ರಾ. ವೆಂ. ಶ್ರೀನಿವಾಸಮೂರ್ತಿಗಳು ತಮ್ಮ ಶಿಕ್ಷಣವನ್ನು ಪೂರೈಸಿ ಶಿವಮೊಗ್ಗೆಗೆ ಹಿಂದಿರುಗಿ ವಿದ್ಯಾಪ್ರಚಾರದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಹಳ್ಳಿಹಳ್ಳಿಗೆ ಹೋಗಿ ವಯಸ್ಕರಿಗೆ ಬೋಧಿಸಿದರು. ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿಗಳು ಬರೆದಿದ್ದ 'ವಯಸ್ಕರಿಗಾಗಿ ಬರೆದ ಪುಸ್ತಕ'' ಇವರಿಗೆ ತುಂಬ ಪ್ರಯೋಜನವಾಯಿತು. ಮೈಸೂರಿನಲ್ಲಿ ಈ ಹೊತ್ತಿಗೆ 'ಸ್ಟೇಟ್ ಲಿಟರೆಸಿ ಕೌನ್ಸಿಲ್' ಎಂಬ ಸಂಸ್ಥೆಯೊಂದು ಆರಂಭವಾಗಿತ್ತು. ಮುಂದೆ ಇದೇ 'ವಯಸ್ಕರ ಶಿಕ್ಷಣ ಸಮಿತಿ'ಯಾಯಿತು. ಶ್ರೀ ಎಸ್. ವಿ. ಶ್ರೀನಿವಾಸರಾಯರಂಥ ಹಿರಿಯರು ಇದರ ಮುಂಚೂಣಿಯಲ್ಲಿದ್ದರು. ಪ್ರೊಫೆಸರ್ ಈಗಲ್‌ಟನ್ ಎಂಬ ಆಂಗ್ಲ ವಿದ್ವಾಂಸರು ಈ ಸಂಸ್ಥೆಯ ಆಶ್ರಯದಲ್ಲಿ ನಡೆಸಿದ ಮೂರು ತಿಂಗಳ ಶಿಬಿರಕ್ಕೆ ಶ್ರೀ ರಾವೆಂಶ್ರೀ ಅವರಿಗೆ ಆಹ್ವಾನ ಬಂತು. ಅಲ್ಲಿ ತರಪೇತಿ ಪಡೆದು ಶಿವಮೊಗ್ಗೆಗೆ ಹಿಂದಿರುಗಿದರು. ಶಿವಮೊಗ್ಗ ಜಿಲ್ಲೆಯ ಲಿಟರೆಸಿ ಕೌನ್ಸಿಲ್‌ನ ಸಂಘಟಕರಾದರು.

ಶ್ರೀ ರಾವೆಂಶ್ರೀ ಅವರಿಗೆ ಮೈಸೂರಿನ ನಂಟನ್ನು ಸುಲಭವಲ್ಲಿ ಕಳಚಿಕೊಳ್ಳಲಾಗಲಿಲ್ಲ. ಮೈಸೂರಿನಲ್ಲೇ ಸಂಬಂಧ ಬೆಳೆದು ಇಲ್ಲಿಯೇ ವಿವಾಹವಾದ್ದರಿಂದ ಅವರು ತಮ್ಮ ಕಾರ್ಯಕ್ಷೇತ್ರವನ್ನು ಶಿವಮೊಗ್ಗೆಯಿಂದ ಮೈಸೂರಿಗೆ

ವರ್ಗಾಯಿಸಿ, ಮೈಸೂರಿನಲ್ಲಿಯೇ ನೆಲೆ ನಿಂತರು. ವಯಸ್ಕರ ಶಿಕ್ಷಣ ಸಮಿತಿಯ ವತಿಯಿಂದ ''ಬೆಳಕು' ಮಾಸಪತ್ರಿಕೆ ಹೊರಡುತ್ತಿತ್ತು. ಅದರ ಸಂಪಾದಕರು ಶ್ರೀಮತಿ ಎಂ.ಆರ್. ಲಕ್ಷ್ಮಮ್ಮನವರು. ಅವರಿಗೆ ಆರಂಭದಲ್ಲಿ ಸಹಾಯಕರಾಗಿದ್ದು ಆಮೇಲೆ ಇವರೇ ಆ ಪತ್ರಿಕೆಯ ಸಂಪಾದಕರಾದರು. ಮುಂದೆ ''ಪುಸ್ತಕ ಪ್ರಪಂಚ'' ಪ್ರಕಟವಾಗತೊಡಗಿತು. ಅದಕ್ಕೂ ಇವರೇ ಸಂಪಾದಕರಾದರು. ಇವರು ಆರಂಭಿಸಿದ್ದ 'ನಿರ್ಮಲ'. ನಿಯತಕಾಲಿಕ ಪತ್ರಿಕೆಯ ಕಥೆಯೂ ಹೀಗೇ. ಅಷ್ಟೊಂದು ಜನಪ್ರಿಯವಾಗಿದ್ದ ಆ ಪತ್ರಿಕೆ ೧೩ ನಿಯತ ಕಾಲಿಕೆಗಳನ್ನು ಪ್ರಕಟಿಸಿ ಆಮೇಲೆ ಕಾರಣಾಂತರ ೧೯೫೭ರಲ್ಲಿ ಯುನೆಸ್ಕೊ ಸಂಸ್ಥೆಯ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ವಯಸ್ಕರ ಶಿಕ್ಷಣವನ್ನು ವ್ಯಾಪಕವಾಗಿ ತರಲು ಒಂದು ಯೋಜನೆಯನ್ನು ರೂಪಿಸಿಕೊಂಡು ಅದರಡಿ ಕೆಲವೊಂದು ಶಿಷ್ಯವೇತನಗಳನ್ನು ನೀಡಲು ನಿರ್ಧರಿಸಿತು. ಭಾರತಕ್ಕೆ ಎರಡು ಶಿಷ್ಯ ವೇತನಗಳನ್ನು ನೀಡಲಾಗಿತ್ತು. ಸ್ಪರ್ಧಾಳುಗಳಾದರೊ ಅಸಂಖ್ಯಾತ ಮಂದಿ. ಅವರಲ್ಲಿ ರಾವೆಂಶ್ರೀ ಅವರು ಒಬ್ಬರು. ಕಚೇರಿಯ ವಿಳಂಬಗತಿಯಿಂದಾಗಿ ಇವರ ಅಭ್ಯರ್ಥಿವೇತನ ಪತ್ರ ದಿಲ್ಲಿಯನ್ನು ಹೇಗೊ ಅಂತು ತಲುಪಿತು. ಈ ಸಂದರ್ಭದಲ್ಲಿ ಅವರಿಗೆ ಸಂದರ್ಶನದ ಕರೆಯೂ ಬಂತು. ತಮ್ಮ ಉತ್ತರಗಳಿಂದ ಆಯ್ಕೆದಾರರನ್ನು ಸಂತೃಪ್ತಿಪಡಿಸಿದ್ದರಿಂದ ಒಂದು ಶಿಷ್ಯವೇತನ ಇವರಿಗೆ ಸಿಕ್ಕಿತು. ವಿದೇಶದಿಂದ ತರಪೇತಿ ಪಡೆದು ಬಂದಮೇಲೆ ಐದು ವರ್ಷಗಳ ಕಾಲ ವಯಸ್ಕರ ಶಿಕ್ಷಣ ಸಮಿತಿಯನ್ನು ಬಿಟ್ಟುಹೋಗಬಾರದೆಂಬ ನಿಬಂಧನೆಯೂ ಅದರಲ್ಲಿತ್ತು.

ಈ ತರುಣದಲ್ಲಿಯೇ ರಾವೆಂಶ್ರೀ ಅವರು ಪಶ್ಚಿಮ ಪಾಕಿಸ್ತಾನದ ಮರಿ ಎಂಬ ಸ್ಥಳದಲ್ಲಿ ನಡೆದ ವಯಸ್ಕರ ಶಿಕ್ಷಣ ಕುರಿತಂತೆ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಪಾಲ್ಗೊಂಡರು. ಅನಂತರ ಯುನೆಸ್ಕೊ ಶಿಷ್ಯವೃತ್ತಿಯನ್ನು ಅಂಗೀಕರಿಸಿ ಅಮೆರಿಕೆಗೆ ೧೯೫೭ರಲ್ಲಿ ಹೋದರು. ಕೊಲಂಬಿಯ ವಿಶ್ವವಿದ್ಯಾನಿಲಯದ ಶಿಕ್ಷಣ ಮನೋವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ಇರ್ವಿಂಗ್ ಲಾರ್ಜ್ ಅವರ ಬಳಿ ಕೆಲಸಮಾಡತೊಡಗಿದರು. 'ಪದ ನಿಯಂತ್ರಣ ಮತ್ತು ಪದ ಸಂಪತ್ತಿನ ನಿಯಂತ್ರಣ'ವನ್ನು ಕುರಿತು ಅಧ್ಯಯನ ನಡೆಸಿದರು. ಇದು ಅವರಿಗೆ ಪುಸ್ತಕಗಳನ್ನು ಶ್ರೇಣೀಕರಿಸಲು ಪ್ರಯೋಜನವಾಯಿತು. ಅಲ್ಲಿಂದ ಅವರು ಒಹಾಯೊ ವಿಶ್ವವಿದ್ಯಾನಿಲಯಕ್ಕೆ ಹೋದರು. ಡಾ. ಎಡ್ಗರ್ ಡೇಲ್ ಅವರು 'ಬರೆವಣಿಗೆ ಮತ್ತು ಓದು' ಎಂಬ ಬಗ್ಗೆ ತರಪೇತಿ ಕೊಟ್ಟರು. ಇದಾದನಂತರ ಸಿರಾಕ್ಯೂಸ್‌ಗೆ ಹೋದರು. ಅಲ್ಲಿ ಪತ್ರಿಕೋದ್ಯಮದಲ್ಲಿ ಪರಿಣತಿ ಪಡೆದರು. ಪತ್ರಿಕೋದ್ಯಮದಲ್ಲಿ ಡಿಪ್ಲೊಮಾ ಪಡೆದರು. ಆಮೇಲೆ ಅಲ್ಲಿಂದ ಕ್ಷೇತ್ರಕಾರ್ಯಕ್ಕಾಗಿ ಇವರು ವೆಸ್ಟ್ಇಂಡೀಸ್‌ನ ಪೊರ್ಟೊರಿಕೊಗೆ ಹೋದರು. ಆ ತರಪೇತಿಯನ್ನು ಪೂರೈಸಿಕೊಂಡು ಮರಳಿ ಅಮೆರಿಕಾಕ್ಕೆ ಬಂದರು. ಈ ಬಾರಿ ಪ್ರಸಿದ್ಧ ಪತ್ರಿಕೆ 'ನ್ಯೂಯಾರ್ಕ್ ಟೈಮ್ಸ್' ನಲ್ಲಿ ಐದು ದಿನ ತರಪೇತಿ ಪಡೆದರು. ಪ್ರಸಿದ್ಧ ನಿಯತಕಾಲಿಕೆ 'ರೀಡರ್ಸ್ ಡೈಜೆಸ್ಟ್' ಪತ್ರಿಕೆಯಲ್ಲಿ ಹತ್ತುದಿನಗಳ ತರಪೇತಿ ಪಡೆದರು. ಅನಂತರ ಲಂಡನ್‌ಗೆ ಬಂದರು. ಅಲ್ಲಿ ಬ್ರಿಟಿಷ್ ಕೌನ್ಸಿಲ್ ಅತಿಥಿಗಳಾಗಿ ಪುಸ್ತಕ ಪ್ರಕಟಣೆಯ ಬಗ್ಗೆ ಮಾಹಿತಿ ಪಡೆದರು. ಪ್ಯಾರಿಸ್‌ಗೆ ಬಂದು ಯುನೆಸ್ಕೊ ಕಚೇರಿಯಲ್ಲೂ ಕೆಲದಿನಗಳು ಕೆಲಸಮಾಡಿ ಆಮೇಲೆ ಭಾರತಕ್ಕೆ ವಾಪಸಾದರು.

ಮೈಸೂರಿಗೆ ಹಿಂದಿರುಗಿದ ಮೇಲೆ ವಯಸ್ಕರ ಶಿಕ್ಷಣ ಸಮಿತಿಯ ಕೆಲಸಕಾರ್ಯ

ಗಳಲ್ಲಿ ಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡರು. 'ಪುಸ್ತಕ ಪ್ರಪಂಚ' ಮತ್ತು 'ಬೆಳಕು' ಪತ್ರಿಕೆಗಳು ಸರ್ವಾಂಗ ಸುಂದರವಾಗಿ ಕಂಗೊಳಿಸಿದವು. ಹಲವಾರು ವರ್ಷಗಳು ಈ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿ ಆಮೇಲೆ ಸ್ವಯಂ ನಿವೃತ್ತಿಯನ್ನು ಪಡೆದರು.

ರಾವೆಂಶ್ರೀ ಅವರು ಸಾಹಿತಿಗಳು, ದೊಡ್ಡ ಪ್ರಕಾಶಕರು. ಇವರ ಸೃಜನಾತ್ಮಕ ಕಾದಂಬರಿಗಳು ನಾಲ್ಕು ೧. ಮಲಮಗಳು, ೨.ಸವತಿ, ೩.ಹೆಣ್ಣಿನ ಕಣ್ಣು ಮತ್ತು ೪. ಬಿಸಿಲುಗುದುರೆ. ಅವರು ಕತೆಗಾರರೂ ಹೌದು, ನಾಟಕಕಾರರೂ ಹೌದು. ಇವರ ಪ್ರಸಿದ್ಧ 'ಮೋಹನ ಪ್ರಕಾಶನ' ಸುಮಾರು ೮೯ ಕೃತಿಗಳನ್ನು ಪ್ರಕಟಿಸಿದೆ. ನಿರಂಜನ, ನೀಳಾದೇವಿ, ಬಸವರಾಜ ಕಟ್ಟೀಮನಿ, ಕೃಷ್ಣಮೂರ್ತಿ ಪುರಾಣಿಕರಂಥ ಪ್ರಸಿದ್ಧ ಕಾದಂಬರಿಕಾರರ ಕೃತಿಗಳನ್ನು ಇದು ಪ್ರಕಟಿಸಿದೆ. ಮಾನವಕಂಪ್ಯೂಟರ್ ಎಂದು ಪರಿಗಣಿತವಾಗಿರುವ ಶ್ರೀಮತಿ ಶಕುಂತಲಾ ದೇವಿಯವರ ಕೃತಿಯೂ ಇವುಗಳಲ್ಲಿ ಒಂದು. ಮಧ್ಯದಲ್ಲಿಯೇ ಈ ಪ್ರಕಾಶನ ಮುಚ್ಚಿಹೋದದ್ದು ಕನ್ನಡಿಗರ ದುರಾದೃಷ್ಟಗಳಿಂದ ನಿಂತುಹೋಯಿತು.

ರಾವೆಂಶ್ರೀ ಅವರ ಒಲವು ಸಾಹಿತ್ಯದಿಂದ ಅಧ್ಯಾತ್ಮದ ಕಡೆ ತಿರುಗಿದ್ದು ರೋಚಕ ಸಂಗತಿ. ೭.೭.೧೯೯೪ ರಂದು ಅವರಿಗೆ ಸ್ವಾಮಿ ವಿವೇಕಾನಂದರ ದಿವ್ಯದರ್ಶನವಾಯಿತು. ಜೊತೆಗೆ ಪೂಜ್ಯ ಗುರೂಜಿಯವರ ಸಂದೇಶಗಳು ಬರತೊಡಗಿದವು. ಅವುಗಳನ್ನೆಲ್ಲ ಬರೆದುಕೊಳ್ಳತೊಡಗಿದರು. ಮುಂದೆ ಗುರೂಜಿ ಅವರ ಅಪ್ಪಣೆ ಪಡೆದು ಅವುಗಳನ್ನು ಸಂಗ್ರಹಿಸಿ 'ವಿವೇಕಾಮೃತವಾಣಿ' ಎಂದು ಕರೆದು ಪ್ರಕಟಿಸಿದರು. ಆ ಸಂದೇಶಗಳು ಅರ್ಥಗರ್ಭಿತವಾಗಿವೆ. ಭಾವಪೂರ್ಣವಾಗಿವೆ. ನಿರ್ಮಲ ಜೀವನವನ್ನು ನಡೆಸುವಲ್ಲಿ ಮಾರ್ಗದರ್ಶಕಗಳಾಗಿವೆ. ಒಂದೆರಡು ಸಂದೇಶಗಳನ್ನು ಇಲ್ಲಿ ಮಾದರಿಗಾಗಿ ಕೊಡಲಾಗಿದೆ.

'ನಾನು ಮಾಡಿದೆ ಎಂದು ಹೇಳಬೇಡ, ಎಲ್ಲ ಭಗವಂತ ಮಾಡಿಸುತ್ತಾನೆ ಎಂಬುದನ್ನು ಮರೆಯಬೇಡ.'

'ನೀನು ಬಂದಾಗಿನಿಂದ ದೇವರು ನಿನಗಾಗಿ ಕಾಯುತ್ತಿದ್ದಾನೆ.'

'ವಿಷ ನಿನ್ನನ್ನು ಬೇಗ ಸಾಯಿಸಿದರೆ ಆಮಿಷ ನಿಧಾನವಾಗಿ ಸಾಯಿಸುತ್ತದೆ.'

'ದೇವರು ಗುಣಕ್ಕೆ ತಕ್ಕ ಬೆಲೆ ಕೊಡುವ ಗಿರಾಕಿ ಇದ್ದಂತೆ'.

'ನಿನಗೆ ಕ್ಯೂ ಕಲಿಸಿದವರು ಯಾರು ಗೊತ್ತೆ? ಇರುವೆ.'

ಇಂಥ ಸಾಮತಿಗಳು ನೂರಾರು. ಇವು ಮನಸ್ಸನ್ನು ತುಂಬುತ್ತವೆ. ಇವುಗಳ ತಂಪು ಎಲ್ಲೆಲ್ಲೂ ಹರಡುತ್ತವೆ.

ರಾವೆಂಶ್ರೀ ಅವರ ಸಾಹಿತ್ಯಿಕ, ಆಧ್ಯಾತ್ಮಿಕ ಬದುಕು ಹೀಗೇ ವೃದ್ಧಿಸಲಿ. ಅವರು ಶತಾಯುಷಿಗಳಾಗಿ ನಮ್ಮೊಡನೆ ಇದ್ದು ಮಾರ್ಗದರ್ಶಕರಾಗಲಿ ಎಂಬುದೇ ಈ ಹೊತ್ತಿನ ನಮ್ಮೆಲ್ಲರ ಹಾರೈಕೆಯಾಗಿದೆ.

ಭೂಲೋಕದಲ್ಲಿ ಏನನ್ನು ಸಾಧಿಸಬೇಕಾದರೂ ಮೊದಲು ಅದನ್ನು ಭಾವಲೋಕದಲ್ಲಿ ಬಿತ್ತಬೇಕು. ವ್ಯೆಯಲ್ಲಿ ಯಾವ ಪರಿವರ್ತನೆಯಾಗಬೇಕಾಗಿದ್ದರೂ ಅದು ಮೊದಲು ಮನದಲ್ಲಿ ಮೊಳೆತು ಬೇರೂರಬೇಕು.

-ರಾಷ್ಟ್ರಕವಿ ಕುವೆಂಪು

ಸಮಿತಿಯ ಸಂಪಾದಕರು : ಒಂದು ಅವಲೋಕನ

ಎ.ಡಿ.ನಂಜುಂಡಸ್ವಾಮಿ
ಮನೆ ನ್ಯೂ.೧೧/ ಸಿ, ೧ನೇ ತಿರುವು
ಕೆ.ಎನ್.ಪುರ, ಉದಯಗಿರಿ,
ಮೈಸೂರು

ಕರ್ನಾಟಕದಲ್ಲಿ ತನ್ನ ವಿಶಿಷ್ಟ ಕಾರ್ಯಕ್ರಮಗಳಾದ ಅಕ್ಷರ ಪ್ರಸಾರ, ವಿದ್ಯಾಮಂದಿರ, ಗ್ರಂಥಾಲಯ ಸೇವೆ, ವಿದ್ಯಾಪೀಠಗಳಲ್ಲಿ ಯುವಕ-ಯುವತಿಯರ ತರಬೇತಿ, ಪ್ರಕಟನೆ, ಬೆಳಕು ಮತ್ತು ಪುಸ್ತಕ ಪ್ರಪಂಚ ನಿಯತಕಾಲಿಕೆಗಳ ಪ್ರಸಾರ ಹೀಗೆ ಜನಪರವಾಗಿ ತೊಡಗಿಸಿಕೊಂಡು ರಾಷ್ಟ್ರ, ಅಂತರಾಷ್ಟ್ರಮಟ್ಟದಲ್ಲಿ ವಯಸ್ಕರ ಶಿಕ್ಷಣ ಸಮಿತಿ ಪ್ರಖ್ಯಾತವಾಗಿತ್ತು. ಸಾಕ್ಷರತಾ ಕಾರ್ಯಕ್ರಮಕ್ಕೆ ಅಗತ್ಯವಾದ ಕಲಿಕಾ ಬೋಧನ ಸಾಮಾಗ್ರಿ, ಸಾಕ್ಷರೋತ್ತರ ಸಾಹಿತ್ಯ, ಪತ್ರಿಕೆಗಳ ಮುದ್ರಣ, ಪ್ರಚಾರ ಸಾಹಿತ್ಯ ಈ ಎಲ್ಲಾ ಕಾರ್ಯಗಳನ್ನು ಸಮನ್ವಯಗೊಳಿಸಿಕೊಂಡು, ವ್ಯವಹರಿಸಬಲ್ಲ 'ಸಂಪಾದಕ'ರನ್ನು ಸಂಸ್ಥೆ ಕಂಡುಕೊಳ್ಳಬೇಕಾಯ್ತು. ಈ ಹಿನ್ನೆಲೆಯಿಂದ ಬಂದಿರುವ ಒಂದು ಹಿರಿಯ ಪರಂಪರೆಯಲ್ಲಿ ನಡೆದುಕೊಂಡು ಶಿಕ್ಷಣ, ಸಾಹಿತ್ಯ, ಸಂಸ್ಕೃತಿ ಕ್ಷೇತ್ರಗಳಿಗೆ ವಿಶಿಷ್ಟ ಕೊಡುಗೆಯನ್ನು ಸಂಪಾದಕರು ನೀಡಿರುತ್ತಾರೆ.

ಸಮಿತಿಯ ಸಂಪಾದಕರ ಸ್ಥಾನ ಹೂವಿನ ಹಾಸಿಗೆಯವಲ್ಲ, ಸದಾ ಎಚ್ಚರಿಕೆಯಿಂದ ಪ್ರಕಟನೆಯ ಕಾರ್ಯವನ್ನು ಎಲ್ಲರ ಸಹಕಾರ ದಿಂದ ಸಮನ್ವಯಗೊಳಿಸಿಕೊಳ್ಳಬೇಕಾದ ಹೊಣೆ ಅವರದು. ಮುದ್ರಣಕ್ಕೆ ಬೇಕಾದ ಸಂಪನ್ಮೂಲಗಳ ಕ್ರೋಢೀಕರಣ, ಗುಣ ಮಟ್ಟದ ನಿಯಂತ್ರಣ, ಹಂಚಿಕೆ, ಪ್ರಸಾರ, ಲೇಖಕ-ವಾಚಕರೊಡನೆ ಸೌಹಾರ್ದ ಸಂಬಂಧ ಈ ಎಲ್ಲದರ ಬೆಳವಣಿಗೆಯಲ್ಲಿ ಸಂಪಾದಕರ ಶಿಸ್ತು, ಶ್ರಮ, ಬದ್ಧತೆಗಳು ಅಡಗಿವೆ. ಕವಿ ಕುವೆಂಪುರವರು, ವಿಶ್ವವಿದ್ಯಾನಿಲಯದ 'ಪ್ರಸಾರಾಂಗ'ದ ಅಗತ್ಯತೆಯನ್ನು ತಿಳಿಸುವಾಗ ವಯಸ್ಕರ ಶಿಕ್ಷಣ ಸಮಿತಿಯ ಪ್ರಕಟಣೆಯ ಹಿನ್ನೆಲೆಯನ್ನು ಹೀಗೆ ಗುರುತಿಸುತ್ತಾರೆ. ''ವಯಸ್ಕರ ಶಿಕ್ಷಣ ಸಮಿತಿ ಪ್ರಾರಂಭಿಸಿದ ಕಾರ್ಯವನ್ನು ವಿಶ್ವವಿದ್ಯಾನಿಲಯದ ಪ್ರಸಾರಾಂಗವು ಪೂರ್ಣಗೊಳಿಸಿದಾಗ ನಾಡಿನಲ್ಲಿ ಜ್ಞಾನಾರ್ಜನೆಯ ಪೂರ್ಣಾವಕಾಶವು ಎಲ್ಲರಿಗೂ ಲಭಿಸಿ ಜನತೆಯ ಆಶೋತ್ತರಗಳನ್ನು ಈಡೇರಿಸಿದಂತಾಗುತ್ತದೆ'' ರಸಋಷಿಯ ಈ ಮಾತುಗಳಲ್ಲಿ ಸಮಿತಿಯ ಸಂಪಾದಕರ ಪರಂಪರೆಯನ್ನು ಅವರ ಸಾರ್ಥಕ ಸೇವೆಯನ್ನು ಅರಿಯಬಹುದಾಗಿದೆ.

ವಯಸ್ಕರ ಶಿಕ್ಷಣ ಸಮಿತಿಯ ಆರಂಭದ ವರ್ಷಗಳಲ್ಲಿ, ಪ್ರಕಟಣೆಗೆ ಸಂಬಂಧಿಸಿದಂತೆ ಕೆಲವು ಉಪಸಮಿತಿಗಳು ಕಾರ್ಯನಿರ್ವಹಿಸುತ್ತಿದ್ದುವು. ಅವುಗಳಲ್ಲಿ ಮುಖ್ಯವಾಗಿ; 'ಪುಸ್ತಕ ಪ್ರಪಂಚ' ಸಂಪಾದಕೀಯ ಮಂಡಲಿ, ಜ್ಞಾನಪ್ರಸಾರ ಸಮಿತಿ, ಬೆಳಕು ಸಂಪಾದಕೀಯ ಮಂಡಲಿ, ಪ್ರಕಟನಾ ಸಮಿತಿ, ಸ್ಟೋರ್ಸ್ ಸಮಿತಿಗಳೆಂದು ವಿಭಾಗಿಸಲಾಗಿತ್ತು. ಈ ಉಪಸಮಿತಿಗಳಲ್ಲಿ ಸಮಿತಿಯ ಅಧಿಕಾರಿಗಳು, ಅವರ ಸಿಬ್ಬಂದಿ ವರ್ಗ, ಅಧಿಕಾರೇತರ ಖಾಸಗಿ ವ್ಯಕ್ತಿಗಳು ಕಾರ್ಯನಿರ್ವಹಿಸುತ್ತಿದುದಾಗಿ ತಿಳಿದು ಬರುತ್ತದೆ. 'ಬೆಳಕು' ಸಂಪಾದಕರಾಗಿ ಎಂ.ಆರ್.ಲಕ್ಷಮ್ಮ, ರಾ.ವೆಂ.ಶ್ರೀ., ಐ.ಶ್ರೀ ಪ್ರಸಾದ್ ಇವರುಗಳು ಆರಂಭದ ವರ್ಷಗಳಲ್ಲಿ ದುಡಿದಿದ್ದಾರೆ.

ಎಸ್.ಎ.ಶ್ರೀನಿವಾಸರಾಯರು 'ಪುಸ್ತಕ ಪ್ರಪಂಚ'ದ ಸಂಪಾದಕರಾಗಿ ಅದರ ಶೈಶ್ಯದ ದಿನಗಳಲ್ಲಿ, ಪತ್ರಿಕೆಯ ಪುರೋಭಿವೃದ್ಧಿಗೆ ದುಡಿದವರು. ಸಮಿತಿಯ ಕಾರ್ಯದರ್ಶಿಯಾಗಿಯೂ ಶ್ರಮಿಸಿದವರು. ಎಸ್.ಎ.ಶ್ರೀರವರು ಸಂಪಾದಕರಾಗಿದ್ದ ಅವಧಿಯಲ್ಲಿ ಸಾಹಿತ್ಯ, ಶಿಕ್ಷಣ, ಸಂಸ್ಕೃತಿ ಹಾಗೂ ಇತರೆ ಕ್ಷೇತ್ರದ ಗಣ್ಯರು ವಯಸ್ಕರ ಶಿಕ್ಷಣ ಸಮಿತಿಯೊಡನೆ ಗುರುತಿಸಿ

ಕೊಂಡಿರುವುದನ್ನು ಕಾಣಬಹುದಾಗಿದೆ. ಪ್ರಾಸ್ತಾವಿಕವಾಗಿ ಕೆಲವರ ಹೆಸರನ್ನು ಹೀಗೆ ಪಟ್ಟಿಮಾಡಬಹುದು: ಕುವೆಂಪು, ವಿ.ಸೀ., ಎಸ್. ಮಂಜುನಾಥ್, ಮಾಸಪ್ಪ, ಸ್ವಾಮಿ ವಿಶ್ವಾನಂದ, ಕೆ. ಶಿವರಾಮ ಕಾರಂತ, ಎಂ.ವಿ ಕೃಷ್ಣಸ್ವಾಮಿ, ಎಂ.ಇ. ಭರತರಾಜ್ ಸಿಂಗ್, ಎಚ್.ವೈ.ಶಾರದಾ ಪ್ರಸಾದ್, ಬಾದರಾಯಣ ಮೂರ್ತಿ, ಉದ್ದವನಹಳ್ಳಿ ಕೃಷ್ಣಶರ್ಮ, ಎಸ್.ವಿ.ಕೃಷ್ಣ ಮೂರ್ತಿ, ಎ.ಎನ್.ಮೂರ್ತಿ ರಾವ್, ದೇಜಗೌ, ಬಿ.ಪಿ. ರಾಧಾಕೃಷ್ಣ ಇತ್ಯಾದಿ ಈ ಎಲ್ಲ ಮಹನೀಯರು ಸಮಿತಿಯ ಪ್ರತಿಷ್ಠಿತ ಪತ್ರಿಕೆಗಳಾದ 'ಬೆಳಕು' ಮತ್ತು 'ಪುಸ್ತಕ ಪ್ರಪಂಚ'ಗಳಿಗೆ ಲೇಖಕರಾಗಿ, ನವಸಾಕ್ಷರರಿಗೆ ಅಗತ್ಯವಾದ ಸಾಹಿತ್ಯದ ಕೃತಿಕಾರರಾಗಿ ಉತ್ತರೋತ್ತರ ದುಡಿಯುತ್ತಾ ಬಂದಿದ್ದಾರೆ. ಕುವೆಂಪುರಂತಹ ಮಹಾಕವಿ, ನಾ.ಕಸ್ತೂರಿ, ಎ.ಎನ್.ಮೂರ್ತಿರಾಯರಂಥ ಗಣ್ಯರು ವಯಸ್ಕರ ಶಿಕ್ಷಣ ಸಮಿತಿ ಅನಾವರಣಗೊಳಿಸಿದ ಕೃತಿಗಳ ಲೇಖಕರಾಗಿ ಬಂದದ್ದು ಒಂದು ಅಪೂರ್ವ ದಾಖಲೆ. ಭಾರತದ ಶ್ರೇಷ್ಠ ವ್ಯಂಗಚಿತ್ರಕಾರರಲ್ಲಿ ಒಬ್ಬರಾದ ಆರ್.ಕೆ. ಲಕ್ಷ್ಮಣ್ ಹಾಗೂ ಖ್ಯಾತ ರೇಖಾಚಿತ್ರಕಾರರಾದ ಸೂಫಿ ಯವರು ಸಮಿತಿಯ ಪ್ರಕಟನೆಯ ಕಲಾವಿನ್ಯಾಸಕ್ಕೆ ಸಹಕರಿಸಿರುವುದನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ.

ಬೆಳಕು ವಾರಪತ್ರಿಕೆ ನವಸಾಕ್ಷರರಿಗಾಗಿ ಮೀಸಲಾದ ಪತ್ರಿಕೆ, ಅದರ ಪ್ರಕಟಣೆ ದೀಪಾವಳಿ ಹಬ್ಬದ ದಿನ (೭.೧೧.೪೨) ಬಂತು. ೧೯೭೫ರಲ್ಲಿ ಇಡೀ ಭಾರತದಲ್ಲಿ ಪ್ರಕಟವಾಗುತ್ತಿದ್ದ ನವ ಸಾಕ್ಷರರ ಸಾಪ್ತಾಹಿಕಗಳು ಕೇವಲ ಎರಡು. ಮಲೆಯಾಳ ಮತ್ತು ಕನ್ನಡ. ಒಂದು ಕಾಲಕ್ಕೆ 'ಬೆಳಕು' ಭಾಷೆ ಮತ್ತು ನಿರೂಪಣೆಗೆ ಹೆಸರಾಗಿತ್ತು. ಅದನ್ನು ಯುನೆಸ್ಕೊ ಮೆಚ್ಚಿಕೊಂಡಿತ್ತು. ಅದರ ಪ್ರಸಾರಸಂಖ್ಯೆ ೧೨,೦೦೦ದವರೆಗೆ ಇದ್ದು, ಅದರದೆ ಆದ ಅಭಿಮಾನಿಗಳನ್ನು ಪಡೆದಿದೆ. ಶಾಲಾ ವಿದ್ಯಾರ್ಥಿಗಳ ಮುಂದುವರಿಕೆ ಶಿಕ್ಷಣಕ್ಕೆ ಅದರ ಕೊಡುಗೆ ಅಪಾರವಾದುದು.

ವಯಸ್ಕರ ಶಿಕ್ಷಣ ಸಮಿತಿ ತನ್ನ ಸೇವಾ ಕಾರ್ಯಗಳನ್ನು ವಿಸ್ತರಿಸಿಕೊಂಡಂತೆ ಪ್ರಕಟನೆ ಶಾಖೆ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಸಮರ್ಥರಾದ 'ಸಂಪಾದಕರ' ಅಗತ್ಯತೆಯನ್ನು ಕಂಡುಕೊಂಡು, ಕಾರ್ಯೋನ್ಮುಖವಾಯ್ತು. ರಾ.ವೆಂ.ಶ್ರೀ, ಐ.ಶ್ರೀ.ಪ್ರಸಾದ್, ಎಸ್.ವಿ. ಕುಮಾರ್, ರಜತಾದ್ರಿ, ಟಿ.ಆರ್.ನಾಗಪ್ಪ, ರಾ.ಬೋರಯ್ಯ, ಚಂದ್ರಶೇಖರಾರಾಧ್ಯ ಇವರುಗಳು ಸಮಿತಿಯ ಸಂಪಾದಕರಾಗಿ ಅದರ ಸರ್ವಾಂಗೀಣ ಬೆಳವಣಿಗೆಗೆ ದುಡಿದಿದ್ದಾರೆ.

ರಾ.ವೆಂ.ಶ್ರೀ.ಯವರು ಲೇಖಕರಾಗಿ, ಪತ್ರಕರ್ತರಾಗಿ, ಮುದ್ರಕ ಪ್ರಕಟಣ ಕಾರ್ಯದ ಒಳಹೊರಗನ್ನು ಚೆನ್ನಾಗಿ ಬಲ್ಲವರು. ನವ ಸಾಕ್ಷರರಿಗೆ ಸಂಬಂಧಿಸಿದ ಸಾಹಿತ್ಯ ರಚನಾಲಯಗಳಲ್ಲಿ ಭಾಗವಹಿಸಿ, ದೇಶ- ವಿದೇಶಗಳಲ್ಲಿ ಪರ್ಯಟನೆ ಮಾಡಿ ಅಪಾರ ಅನುಭವ ಪಡೆದವರು. ವಯಸ್ಕರ ಶಿಕ್ಷಣ ಸಮಿತಿಯ ಜಿಲ್ಲಾಮಟ್ಟದ ವ್ಯವಸ್ಥಾಪಕರಾಗಿ ದುಡಿದು ಅಗತ್ಯ ಸಾಹಿತ್ಯ ಚಿಂತನೆ ನಡೆಸಿದವರು. ಇಂದಿಗೂ ವಯಸ್ಕರ ಶಿಕ್ಷಣ ಸಮಿತಿಯ ಪ್ರಕಟನೆಗೆ ಸಂಬಂಧಿಸಿದ ಚಟುವಟಿಕೆಗಳಿಗೆ ಮುಕ್ತ ಮನಸ್ಸಿನಿಂದ ರಾ.ವೆಂ.ಶ್ರೀ ಸಹಕರಿಸುತ್ತಿದ್ದಾರೆ. 'ಪುಸ್ತಕ ಪ್ರಪಂಚ' ಸಂಪಾದಕೀಯ ಮಂಡಲಿಯ ಸದಸ್ಯರಾಗಿ ಮುದ್ರಣ ವಿನ್ಯಾಸದ ಬಗೆಗೆ ಅಗತ್ಯ ಸಲಹೆಗಳನ್ನು ನೀಡುತ್ತಿರುವುದು ಸಮಿತಿಯ ಕುರಿತಾದ ಅವರ ಅಭಿಮಾನಕ್ಕೆ ಸಾಕ್ಷಿ. ೭೮ರ ಹಿರಿಯಜೀವ ರಾವೆಂಶ್ರೀ ಉತ್ತಮ ಸಾಹಿತಿಗಳು ಹೌದು.

ಐ.ಶ್ರೀ.ಪ್ರಸಾದ್‌ರವರು ಸಮಿತಿಯ ಸಂಪಾದಕರಾಗಿ ಅಮೋಘ ಸೇವೆ ಸಲ್ಲಿಸಿದ್ದಾರೆ. ಸ್ವತಃ ಸಾಹಿತಿಗಳು. ಉತ್ತಮ ಆಡಳಿತಗಾರರು ಆಗಿದ್ದ ಮಾನ್ಯ ಪ್ರಸಾದ್‌ರವರು 'ಪುಸ್ತಕ ಪ್ರಪಂಚ' ಮತ್ತು 'ಬೆಳಕು' ಪತ್ರಿಕೆಗಳ ಗುಣಮಟ್ಟ

ಹಾಗೂ ಅದರ ಪ್ರಸಾರ ಸಂಖ್ಯೆಯ ಹೆಚ್ಚಳಕ್ಕೆ ದುಡಿದವರು. ಇದೇ ಪರಂಪರೆಯಲ್ಲಿ ಬಂದ ಎಸ್.ವಿ.ಕುಮಾರ್ ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಬೆಂಗಳೂರು, ಶಿವಮೊಗ್ಗ ಮುಂತಾದ ಕಡೆ ಜಿಲ್ಲಾ ವ್ಯವಸ್ಥಾಪಕರಾಗಿ ಅದರ ಆರಂಭ ದಿನಗಳಿಂದ ಗುರುತಿಸಿಕೊಂಡವರು. ವಿಪುಲ ಕ್ಷೇತ್ರಾನುಭವ, ಅಚ್ಚುಕಟ್ಟುತನ, ಶಿಸ್ತಿನ ದುಡಿಮೆಗಳಿಂದ ಎಸ್.ವಿ.ಕುಮಾರ್ ಸಮಿತಿಯ ಸಂಪಾದಕರಾಗಿ ದುಡಿದಿದ್ದಾರೆ. ತಮ್ಮಲ್ಲಿದ್ದ ಕಿರಿಯ ಕೆಲಸಗಾರರನ್ನು ಹುರಿದುಂಬಿಸುತ್ತಾ ಎಸ್.ವಿ.ಕುಮಾರ್ ದುಡಿದಿದ್ದಾರೆ.

ಜಿಲ್ಲಾಮಟ್ಟದ ವ್ಯವಸ್ಥಾಪಕರಾಗಿ, ವಯಸ್ಕರ ಪಠ್ಯಪುಸ್ತಕದ ರಚನಾಕಾರರಾಗಿ, ನವಸಾಕ್ಷರ ಸಾಹಿತ್ಯದ ನಿರ್ಮಾತೃವಾಗಿ , ಅನೇಕಾ ರಾಷ್ಟ್ರ, ಅಂತರಾಷ್ಟ್ರಮಟ್ಟದ ಸಾಹಿತ್ಯ ರಚನಾಲಯಗಳಲ್ಲಿ ಭಾಗವಹಿಸಿ ತಮ್ಮ ನಿವೃತ್ತ ಜೀವನದಲ್ಲಿ ವಯಸ್ಕರ ಶಿಕ್ಷಣದ ಬಗ್ಗೆ ಅಭಿಮಾನವಿರಿಸಿಕೊಂಡಿದ್ದ ಬಹುಮುಖ ವ್ಯಕ್ತಿ ಟಿ.ಆರ್.ನಾಗಪ್ಪನವರು. ಸಂಪಾದಕರಾಗಿ ಸಮಿತಿಯಲ್ಲಿ ದುಡಿದಿದ್ದಾರೆ. ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ವಯಸ್ಕರ ಶಿಕ್ಷಣ ಕುರಿತು ಸರಿಸುಮಾರು ೮೦ ಗ್ರಂಥಗಳನ್ನು ಬರೆದಿದ್ದಾರೆ. ನಾಡಿನ ಪತ್ರಿಕೆಗಳಲ್ಲಿ ನೂರಾರು ಲೇಖನಗಳನ್ನು ಪ್ರಕಟಿಸಿದ್ದಾರೆ. ವಯಸ್ಕರ ಶಿಕ್ಷಣ ಸಮಿತಿಯ ಕಾಯಕಲ್ಪಕ್ಕೆ ಪ್ರತ್ಯೇಕ್ಷ ಪರೋಕ್ಷವಾಗಿ ಶ್ರಮಿಸುತ್ತಿದ್ದವರಲ್ಲಿ ಟಿ.ಆರ್.ನಾಗಪ್ಪನವರು ಒಬ್ಬರು.

ಉಚ್ಚ ಶಿಕ್ಷಣ ಪಡೆದು, ಭೌತಿಕಲಾಭದತ್ತ ಹೆಚ್ಚು ವಾಲದೆ; ಸಮಿತಿಯ ವಿವಿಧ ಶಾಖೆಗಳಲ್ಲಿ ಕಾರ್ಯನಿರ್ವಹಿಸಿ ಸಂಪಾದಕರಾಗಿ ದುಡಿದವರಲ್ಲಿ ಶ್ರೀ ಎಸ್.ರಜತಾದ್ರಿಯವರು ಒಬ್ಬರು. ವಯಸ್ಕರ ಶಿಕ್ಷಣ ಸಮಿತಿಯ ಆರಂಭ ದಿನಗಳಲ್ಲಿ ರಜತಾದ್ರಿಯವರು ಜಿಲ್ಲಾಮಟ್ಟದ ವ್ಯವಸ್ಥಾಪಕರಾಗಿ, ವಿದ್ಯಾಪೀಠದ ಆಚಾರ್ಯರಾಗಿ ದುಡಿದವರು. ಡೆನ್ಮಾರ್ಕ್‌ಗೆ ಹೋಗಿ ಅಲ್ಲಿನ ಜನತಾ ಶಿಕ್ಷಣ ಕೇಂದ್ರಗಳ ಅಧ್ಯಯನ ನಡೆಯಿಸಿ, ಸಮಿತಿಯ ವಿದ್ಯಾಪೀಠದ ಅಭಿವೃದ್ಧಿಗೆ ದುಡಿದವರು, ಉತ್ತಮ ಬರಹಗಾರರಾಗಿ ನವಸಾಕ್ಷರರಿಗಾಗಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಅವರ ಡೆನ್ಮಾರ್ಕ್, 'ಕ್ರಿಶ್ಚಿಯನ್ನ ಆಂಡರ್‌ಸನ್ನನ ಕಥೆಗಳು' 'ಪಶ್ಚಿಮದ ಹೊಂಬೆಳಗು' 'ವಯಸ್ಕ ಶಿಕ್ಷಣ ವಿಚಾರಧಾರೆ ''ಅಕ್ಷರವೈದ್ಯ' ಇತ್ಯಾದಿ ಕೃತಿಗಳನ್ನು ಬರೆದಿದ್ದಾರೆ. ನಾಡಿನ ಪ್ರಸಿದ್ಧ ಪತ್ರಿಕೆಗಳಲ್ಲಿ 'ವಯಸ್ಕರ ಶಿಕ್ಷಣ' ಕುರಿತಂತೆ ಸಾಕಷ್ಟು ಲೇಖನಗಳು ರಜತಾದ್ರಿಯವರ ಹೆಸರಿನಲ್ಲಿ ಪ್ರಕಟವಾಗಿವೆ. ನಿವೃತ್ತರಾದ ಮೇಲು ವಯಸ್ಕರ ಶಿಕ್ಷಣ ಕಾರ್ಯಕ್ರಮವನ್ನು ನಡೆಸಿಕೊಂಡು ಬಂದಿದ್ದಾರೆ. ಇಂಥ ಹಿರಿಯ ಚೇತನ ಶಕ್ತಿಯಂತೆ ಸಮಿತಿಯ ಸಂಪಾದಕರಾಗಿ ಸಾರಸ್ವತ ಲೋಕಕ್ಕೆ ತಮ್ಮ ಸೇವೆ ಸಲ್ಲಿಸಿದ್ದಾರೆ. ಬೆಳಕು ಮತ್ತು ಪುಸ್ತಕ ಪ್ರಪಂಚ ಪ್ರಸಾರ ಸಂಖ್ಯೆ ಹೆಚ್ಚಳಕ್ಕೆ ಶ್ರಮಿಸಿದವರಲ್ಲಿ ರಜತಾದ್ರಿ ಗಣ್ಯರು.

ಎಪ್ಪತ್ತರ ಅಂತಿಮ, ಎಂಭತ್ತರ ದಶಕದ ಉದ್ದಕ್ಕೂ ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯಚಟುವಟಿಕೆಗಳು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ವ್ಯಾಪಕವಾಗಿ ನಡೆಯುತ್ತಿದ್ದವು. ಇಂತಹ ಸಂಕ್ರಮಣ ಕಾಲದಲ್ಲಿ ಸಾಕ್ಷರತಾ ಕಾರ್ಯಕ್ರಮಕ್ಕೆ ಅಗತ್ಯವಾದ ಕಲಿಕೆ ಸಾಮಗ್ರಿಗಳು, ಗ್ರಾಮೀಣ ಗ್ರಂಥಾಲಯಗಳಿಗೆ ನವಸಾಕ್ಷರರಿಗೆ ಅಗತ್ಯವಾದ ಪುಸ್ತಕಗಳು ಹಾಗೂ ಪ್ರಚಾರ ಸಾಮಗ್ರಿಗಳನ್ನು ಒದಗಿಸುವುದಾಗಲಿ, ಬೆಳಕು ಮತ್ತು ಪುಸ್ತಕಪ್ರಪಂಚ ಪತ್ರಿಕೆಗಳ ಗುಣಮಟ್ಟ ಕಾಯ್ದುಕೊಂಡು, ಅವುಗಳ ಪ್ರಸಾರ ಸಂಖ್ಯೆಯನ್ನು ಹೆಚ್ಚಿಸುವ ಕಾರ್ಯ ಸುಲಭದಲ್ಲ. ಅಂದು ದಕ್ಷರಾದ ಸಂಪಾದಕರನ್ನು ಸಮಿತಿ ನಿರೀಕ್ಷಿಸಿತ್ತು. ಈ ನಡುವೆ. ರಾಷ್ಟ್ರ ಮಟ್ಟದಲ್ಲಿ ವಯಸ್ಕರ ಶಿಕ್ಷಣ ಕುರಿತಂತೆ ಕ್ರಿಯಾ ಯೋಜನೆ ಜಾರಿಗೆ ಬಂದು ಸಮಿತಿಯ ಪ್ರಕಟಣಾವಲಯಕ್ಕೆ ಹೆಚ್ಚಿನ ಬೇಡಿಕೆ ಬಂತು. ಅಂತಹ ಸಂಕೀರ್ಣ ಸನ್ನಿವೇಶದಲ್ಲಿ ರಾ.ಬೋರಯ್ಯನವರು ಸಮಿತಿಯ

ಸಂಪಾದಕರಾಗಿ ಬಂದರು. ಸಮಿತಿಗೆ ಪ್ರಕಟಣಾ ಸಹಾಯಕರಾಗಿ ಬಂದ ರಾ. ಬೋರಯ್ಯನವರು, ತಮ್ಮ ಶಿಸ್ತು, ಶ್ರಮ ಇವುಗಳನ್ನು ಮೈಗೂಡಿಸಿಕೊಂಡು ದುಡಿಯಲಾರಂಭಿಸಿದರು. ರಾ. ಬೋರಯ್ಯನವರು ನವಸಾಕ್ಷರರ ಸಾಹಿತ್ಯ ರಚನಾಲಯಗಳಲ್ಲಿ ಭಾಗವಹಿಸಿ ಅನುಭವ ಪಡೆದವರು. ಪತ್ರಿಕೋದ್ಯಮದ ಪದವೀಧರರಾಗಿ ವಿದ್ಯಾರ್ಥಿ ಜೀವನದಿಂದಲೂ ಹಲವು ಮಂದಿ ಸಾಹಿತಿಗಳು, ಕಲಾವಿದರ ಒಡನಾಟದಿಂದ ಬರವಣಿಗೆಯನ್ನು ಪಕ್ವಗೊಳಿಸಿಕೊಂಡವರು. ಇವರ ಸೇವಾವಧಿಯಲ್ಲಿ ಸಮಿತಿಯ ಹಲವು ಪ್ರಕಟಣೆಗಳು ಪುನರ್ಮುದ್ರಣಗೊಂಡು, ಸಮಿತಿಯ ಪ್ರಕಟಣೆಗಳು ಜನಸಾಮಾನ್ಯರಿಗೆ ದೊರಕುವಂತಾದುವು. ೧೦೦ ಶೀರ್ಷಿಕೆಯ ಪ್ರಚಾರ ಮಾಲೆಯ ಕೃತಿಗಳು ಪುನರ್ಮುದ್ರಣಗೊಂಡು, 'ಬೆಳಕು' ಮತ್ತು 'ಪುಸ್ತಕ ಪ್ರಪಂಚ' ಪತ್ರಿಕೆಗಳ ಪ್ರಸಾರಸಂಖ್ಯೆ ದ್ವಿಗುಣಗೊಂಡಿವೆ. ಕುವೆಂಪುರವರ 'ಜನಪ್ರಿಯ ವಾಲ್ಮೀಕಿ ರಾಮಾಯಣ' ೨-೩ ಬಾರಿ ಪುನರ್ಮುದ್ರಣಗೊಂಡಿದೆ. ಸಿದ್ದಯ್ಯ ಪುರಾಣಿಕರ 'ಶರಣ ಚರಿತಾಮೃತ' ಕೃತಿ ಮತ್ತೆ ಪುನರ್ಮುದ್ರಣಗೊಂಡಿದೆ. 'ಪುಸ್ತಕ ಪ್ರಪಂಚ' ಕಿರೀಟಾಕೃತಿ, ಬೋರಯ್ಯನವರ ಕಾಲದಲ್ಲಿ ಡೆಮ್ಮಿ ೧/೮ ಆಕಾರದಲ್ಲಿ ೬೪ಪುಟದಿಂದ ೮೦ಪುಟಕ್ಕೆ ವಿಸ್ತಾರಗೊಂಡಿದೆ. ನವಸಾಕ್ಷರರಿಗಾಗಿ 'ಲಾಲ್ ಬಹುದ್ದೂರ ಶಾಸ್ತ್ರಿ'ಎನ್ನುವ ಪುಟ್ಟ ಪುಸ್ತಕವನ್ನು ರಾ. ಬೋರಯ್ಯನವರು ರಚಿಸಿಕೊಟ್ಟಿದ್ದಾರೆ. ಹಾಲಿ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿರುವ ರಾ. ಬೋರಯ್ಯನವರು ತರುಣರನ್ನು ಪ್ರೋತ್ಸಾಹಿಸಿ, ಉತ್ತಮ ಸೇವೆಯನ್ನು ಅವರಿಂದ ಬಯಸುವುದು ಅವರ ಸಹಜ ಗುಣ.

ಶ್ರೀ ಚಂದ್ರಶೇಖರರಾಧ್ಯರು ಸಮಿತಿಗೆ ಸಹಾಯಕರಾಗಿ ಪ್ರವೇಶಿಸಿ, ತಮ್ಮ ಶಿಸ್ತು, ಅಚ್ಚುಕಟ್ಟುತನ, ಸಾಹಿತ್ಯಾಭಿರುಚಿ ಹೊಸದನ್ನು ಹುಡುಕುವ ಅವರ ಅಧ್ಯಯನ ಶೀಲತೆಯಿಂದ ಸಂಶೋಧಕರಾಗಿ, ವಿದ್ಯಾಪೀಠದ ಆಚಾರ್ಯರಾಗಿ, ನಂತರ ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ. ಸಾಹಿತ್ಯದ ವಿದ್ಯಾರ್ಥಿಯಾಗಿದ್ದಾಗಲೆ ಅನೇಕ ಲೇಖಕ ಗೆಳೆಯರ ಒಡನಾಟ, ಮುಂದೆ ಸಮಿತಿಯಲ್ಲಿನ ವಿವಿಧ ಕ್ಷೇತ್ರಗಳಲ್ಲಿನ ಅನುಭವಗಳನ್ನು ತಮ್ಮ ಕೃತಿಗಳಲ್ಲಿ ದಾಖಲಿಸಿದ್ದಾರೆ. 'ಪುಸ್ತಕ ಪ್ರಪಂಚ' ಮತ್ತು 'ಬೆಳಕು' ಪತ್ರಿಕೆಗಳ ವ್ಯಾಪಕತೆಗೆ ಹಿಂದಿನ ಸಂಪಾದಕರುಗಳು ಹಾಕಿಕೊಟ್ಟ ಸತ್ಸಂಪ್ರದಾಯದಲ್ಲಿ ನಡೆದು, ಸಾಹಿತ್ಯ ಲೋಕದ ದಿಗ್ಗಜಗಳಾದ ದೇಜಗೌ, ರಾವೆಂಶ್ರೀ, ಗುರುದತ್ತ, ನಾಗಣ್ಣ ಮುಂತಾದವರ ಅಭಿಮಾನಕ್ಕೆ ಪಾತ್ರರಾಗಿದ್ದರು. ಉತ್ತಮ ಭಾಷಣಕಾರರು, ಬರಹಗಾರರು, ಅನುಭವ ಶೀಲರು ಆಗಿದ್ದ ಆರಾಧ್ಯರಿಗೆ ಒಳ್ಳೆಯ ಭವಿಷ್ಯ ವಿತ್ತು. ಅವರ ಅಕಾಲ ಮರಣ (೨೫.೧೧.೯೯) ಎಲ್ಲ ಕನಸುಗಳನ್ನು ಭಗ್ನಗೊಳಿಸಿತು.

ಸಮಿತಿಯಲ್ಲಿ ಸಂಪಾದಕರಾಗಿ ದುಡಿದು ಮುಂದೆ ಬಂದ ಗಣ್ಯರು ಇಂದು ಮಾನ್ಯರಾಗಿದ್ದಾರೆ. ಅವರೆಲ್ಲರ [illegible]ಥೆಗಳನ್ನು ಈ ಪುಟ್ಟ ಲೇಖನದಲ್ಲಿ ಹಿಡಿಯುವುದು ಕಷ್ಟದ ಕೆಲಸ. ಬೇರೆ ಬೇರೆ [illegible] ಅವರುಗಳ ಬಗ್ಗೆ ಅಲ್ಲಲ್ಲಿ ಪ್ರಸ್ತಾ[illegible]ವಾಗಿ, ವಿಸ್ತೃತವಾಗಿ ಬರೆದಿದ್ದಾರೆ ಹಿರಿಯರಾದ ಅವರನ್ನು 'ಪುಸ್ತಕ ಪ್ರಪಂಚ'ದ ಓದುಗರಿಗೆ ಪರಿಚಯ ಮಾಡಿಕೊಡುವ ನನ್ನ ಪ್ರಯತ್ನ ಸಫಲವಾದರೆ ನಾನು ಧನ್ಯ.

ನೆನಪು- ಚಿಂತನ- ಅನಿಸಿಕೆ

ಕೆ.ಬಿ.ಪ್ರಭು ಪ್ರಸಾದ್
೧೧, ಟೆಂಪಲ್ ರೋಡ್, ಜಯಲಕ್ಷ್ಮಿಪುರಂ,
ಮೈಸೂರು-೫೭೦ ೦೧೨

'ಪುಸ್ತಕ ಪ್ರಪಂಚ'-ವಯಸ್ಕರ ಶಿಕ್ಷಣ ಸಮಿತಿಯ ಮಾಸಪತ್ರಿಕೆ ಆರಂಭವಾಗಿ ೫೦ವರ್ಷಗಳೇ ಸಂದಿವೆ.ಇದರ ಸುವರ್ಣ ಮಹೋತ್ಸವ ಆಚರಿಸಬೇಕಾದುದು ಆರಂಭ ದಿಂದ ಬಲ್ಲವರು, ಇದರ ನಿಕಟ ಸಂಬಂಧ ವುಳ್ಳವರು, ಈ ಪತ್ರಿಕೆ ನಡೆದು ಬಂದ ದಾರಿ ಯನ್ನು ಆದ್ಯಂತವಾಗಿ, ವಿಶದವಾಗಿ, ಸ್ವಾರಸ್ಯ ವಾಗಿ ಹೇಳಬಲ್ಲರು..

ಇದರ ಪ್ರಥಮ ಪರಿಚಯ ನನಗಾದುದು ೧೯೫೮ರ ಸುಮಾರಿನಲ್ಲಿ. ಯಾವ ಸಂದರ್ಭ ದಲ್ಲಿ ಎಂಬುದು ನೆನಪಾಗುತ್ತಿಲ್ಲ. 'ರೀಡರ್ಸ್ ಡೈಜೆಸ್ಟಿನ' ಒಂದು ಲೇಖನದ ಕನ್ನಡ ಅನುವಾದವನ್ನು ಕಳಿಸಿದೆ. ಅದು 'ಪುಸ್ತಕ ಪ್ರಪಂಚ"ದಲ್ಲಿ ಪ್ರಕಟವಾಯಿತು. ಯಾವ ಸಂಚಿಕೆಯಲ್ಲಿ ಎಂಬುದೂ ನೆನಪಿಲ್ಲ. ಈ ಮಾಸಿಕದ ಬಗ್ಗೆ ನನಗೆ ಬಹಳ ಮೆಚ್ಚುಗೆ-ಅಭಿಮಾನ ಇದ್ದರೂ ವಿಚಿತ್ರವೆಂದರೆ ಇದ ರೊಂದಿಗೆ ನಿಕಟವಾದ ಸಂಬಂಧ ಬೆಳೆಯ ಲಿಲ್ಲ. ಮೊದಲ ಬಾರಿಗೆ ಕಳಿಸಿದ ಲೇಖನ ಪ್ರಕಟವಾದಾಗ ಸಂತೋಷ-ಉತ್ಸಾಹ ಗಳೇನೊ ಉಂಟಾದವು. ಇಷ್ಟು ಪ್ರೋತ್ಸಾಹ ದೊರೆತರೂ ಅದೇನೊ ನನಗೆ ಸಂತತವಾಗಿ ಲೇಖನಗಳನ್ನು ಕಳಿಸಲು ಸಾಧ್ಯವಾಗಲಿಲ್ಲ. ನನ್ನ ಕೆಲವು ಅನುವಾದಗಳು ಆಗೊಮ್ಮೆ ಈಗೊಮ್ಮೆ ಪ್ರಕಟವಾಗಿವೆ. ಪುಸ್ತಕ ವಿಮರ್ಶೆಯನ್ನೂ ಕೆಲಕಾಲ ಮಾಡಿದ್ದೇನೆ. ನಡುವೆ ಎಷ್ಟೋ ಕಾಲ ಒಂದು ಲೇಖನವನ್ನೂ ಕಳಿಸಲಾಗಲಿಲ್ಲ. ಮಿತ್ರರಾದ ಚಂದ್ರಶೇಖರ ಆರಾಧ್ಯರು ಸಂಪಾದಕರಾಗಿದ್ದಾಗ ಅವರ ಹಾಗೂ ಡಿ.ಡಿ.ನಂಜುಂಡಸ್ವಾಮಿಯವರ ವಿಶ್ವಾಸದ ಒತ್ತಾಯಕ್ಕೆ ಈಚೆಗೆ ಒಂದೆರಡು ಅನುವಾದ ಗಳನ್ನೂ, ಸ್ವತಂತ್ರ ಲೇಖನಗಳನ್ನೂ ಕಳಿಸಿ ಕೊಟ್ಟೆ. ಅವು ಪ್ರಕಟವಾದುವು. ಪ್ರೊ.ದೇಜಗೌ ನನಗೆ ಇಷ್ಟರಾದ ಹಿರಿಯರು. ಪತ್ರಿಕೆಯ ಪ್ರಧಾನ ಸಂಪಾದಕರಾಗಿ, ಈ ಪತ್ರಿಕೆ ಶ್ರೇಷ್ಠ ಗುಣಮಟ್ಟ ವನ್ನು ಕಾಯ್ದುಕೊಂಡು ಬರಬೇಕು, ಹೆಚ್ಚು ಜನಪ್ರಿಯವಾಗಬೇಕು ಎಂಬ ಅಪೇಕ್ಷೆಯಿಂದ ಬಹುವಾಗಿ ಶ್ರಮಿಸುತ್ತ ಬಂದಿದ್ದಾರೆ. ಅವರ ಪ್ರೀತಿಯ ಒತ್ತಾಯವೂ ಪರೋಕ್ಷವಾಗಿ ನನ್ನ ಕೈಯಿಂದ ಬರೆಯಿಸಿದೆ. ವಾಸ್ತವವಾಗಿ ನಾನು ವಿಪುಲವಾಗಿ ಬರೆಯುವವನಲ್ಲ. ಯಾವಾ ಗಲೊ, ಲಹರಿ ಬಂದಾಗ ಬರೆಯುವುದು, ನನ್ನ ಮನಸೆಳೆದ ಇಂಗ್ಲಿಷ್ ಲೇಖನಗಳನ್ನು (ಅವುಗಳ ನ್ನೋದಿ ನಾನು ಪಡೆದ ಸಂತೋಷ ಮತ್ತು ಬೆಳಕುಗಳನ್ನು ಸಮಾನ ಶೀಲರಾದ ಕನ್ನಡ ವಾಚಕರೊಂದಿಗೆ ಹಂಚಿಕೊಳ್ಳಬೇಕೆಂಬ ಹಂಬಲದಿಂದ) ಅನುವಾದಿಸುವುದು ನನ್ನ ಹವ್ಯಾಸ.

'ಪುಸ್ತಕ ಪ್ರಪಂಚ' ಎಂದ ಕೂಡಲೆ ನನ್ನ ಮನಸ್ಸಿನಾಳದಿಂದ ಕೆಲವು ನೆನಪುಗಳು ಮೇಲೇಳುತ್ತವೆ. ಅವು ಬಹಳ ಇಲ್ಲ. ಆದರೆ ನನ್ನಷ್ಟಕ್ಕೆ ಮಾತ್ರ ಅವು ಮೌಲಿಕವಾದವುಗಳು. ನನ್ನ ಮನಸ್ಸಿನಲ್ಲಿ ಅವು ಸವಿಯಾಗಿ ನಿಂತಿವೆ. ಆಗಾಗ ಮೆಲುಕು ಹಾಕಿ ಸವಿಯುತ್ತಿರುತ್ತೇನೆ. ಈಗ ಈ ನೆನಪುಗಳನ್ನು ಇಲ್ಲಿ ಬರೆಯುತ್ತಿರು ವುದು ಇತರ ಎಲ್ಲರಿಗೂ ತುಂಬಾ ಮಹತ್ವ ವಾದವುಗಳೆಂಬ ಕಾರಣಕ್ಕಾಗಿ ಅಲ್ಲ. ಈ ಪತ್ರಿಕೆಯ ಹಿರಿಮೆಗೆ ಮತ್ತು ಇದು ರೂಪು ಗೊಳ್ಳಲು , ವಿಕಸಿಸಲು, ಕಾರಣರಾದವರಿಗೆ ಇದರ ಬೆಳವಣಿಗೆ-ಏಳಿಗೆಗಾಗಿ ನಿಸ್ಪೃಹವಾಗಿ ಶ್ರಮಿಸಿದವರಿಗೆ ಗೌರವ ಸಲ್ಲಿಸಲೆಂದು . ಅಷ್ಟೆ.

ನೆನಪುಗಳಿಗಿಂತ ಈ ಪತ್ರಿಕೆಯನ್ನು ಮತ್ತು ಇದರ ಹಿನ್ನೆಲೆಯನ್ನು ಕುರಿತ ನನ್ನ ಕೆಲವು ಚಿಂತನಗಳನ್ನೂ, ಅನಿಸಿಕೆಗಳನ್ನೂ ಇಲ್ಲಿ ನಿವೇದಿಸುವುದು ಹೆಚ್ಚು ಸೂಕ್ತ-ಪ್ರಸ್ತುತ-ಆಗಬಹುದು.

ಪುಸ್ತಕ ಪ್ರಪಂಚಕ್ಕೆ ನನ್ನಿಂದ ಅಷ್ಟಾಗಿ ಲಾಭವಾಗದೆ ಹೋದರೂ ಪತ್ರಿಕೆಯ ದೆಸೆಯಿಂದ ನನಗಂತೂ ದೊಡ್ಡ ಲಾಭವಾಗಿದೆ. ಲಾಭ ಎಂದ ಕೂಡಲೆ ಆರ್ಥಿಕವಾಗಿ ಎಂದಲ್ಲ. ವಾಸ್ತವವಾಗಿ ಆರ್ಥಿಕವಾದ ಲಾಭವಾಗಲಿ, ಆಕರ್ಷಣೆಯಾಗಲಿ ಯಾವ ರೀತಿಯಲ್ಲಿಗೂ ಇರಲಿಲ್ಲ. ಲಾಭವೆನ್ನದೆ, ಸಮಯಕ್ಕಾದ ಯುಕ್ತ ಆರ್ಥಿಕ ನೆರವು, ಯಾರಿಗಾದರೂ ದೊರೆತಿದ್ದರೆ, ಅದು ಲೇಖನ ಕಲೆಯನ್ನಾಗಲೆ ರೂಢಿಸಿಕೊಂಡ, ಬಡತನದ ಕಾರಣವಾಗಿ ಕೊಂಚ ಹಣದ ಸಹಾಯ ಅಗತ್ಯವಿದ್ದ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಎಂದು ಹೇಳಬಹುದು. ಪತ್ರಿಕೆಯಲ್ಲಿ ಪ್ರಕಟವಾಗಿರುವ ಇವರ ಲೇಖನಗಳು ನಿಜಕ್ಕೂ ಪ್ರೌಢವಾಗಿವೆ, ಚೆನ್ನಾಗಿವೆ. ಆಗ ಲೇಖನಕ್ಕೆ ಕೊಡುತ್ತಿದ್ದ ಸಂಭಾವನೆ ತೀರಾ ಕಡಿಮೆ. ಹತ್ತೊ ಇಪ್ಪತ್ತೊ ರೂಪಾಯಿ. ಆದರೆ ಅದೇ ಆ ವಿದ್ಯಾರ್ಥಿಗಳಿಗೆ ದೊಡ್ಡ ನೆರವು. ನನಗಾದ ಲಾಭ ಎಂದರೆ ಒಳ್ಳೆಯ ಸ್ನೇಹಿತರು ದೊರೆತಿದ್ದು.

ಲೇಖಕನಾಗಿ ಮನ್ನಣೆ ಪಡೆದ ನನಗೆ ಪತ್ರಿಕೆಗಾಗಿ ಪುಸ್ತಕಾವಲೋಕನ (ವಿಮರ್ಶೆ) ಮಾಡುವ ಬಡತಿ ಸಿಕ್ಕಿತು. ಈ ವ್ಯಾಜವಲ್ಲಿ ಪತ್ರಿಕಾ ಕಚೇರಿಗೆ ಆಗಾಗ ಹೋಗಿ ಬರುತ್ತ ರಾವೆಂಶ್ರೀ, ಐ.ಶ್ರೀ.ಪ್ರಸಾದ್ ಪರಿಚಯವಾಯಿತು. ಶ್ರೀನಿವಾಸಮೂರ್ತಿ ಪುಸ್ತಕ ಪ್ರಪಂಚದ ಸಂಪಾದಕರಾಗಿದ್ದರು. ಮಹಾರಾಜಾ ಕಾಲೇಜಿನ ಜಿ.ಹನುಮಂತರಾಯರು ಪತ್ರಿಕೆಯ ಆರಂಭದಿಂದ ಪ್ರಧಾನ ಸಂಪಾದಕರು. ಐ.ಶ್ರೀ.ಪ್ರಸಾದ್‌ರನ್ನು ಆರ್ಗನೈಸರ್‌ರೆಂದು ನೇಮಿಸಿದ್ದರು. ಅವರು 'ಬೆಳಕು' ವಾರಪತ್ರಿಕೆಯ ಸಂಪಾದಕರಾಗಿ ಕೆಲಸಮಾಡುತ್ತಿದ್ದರು. ರಾವೆಂಶ್ರೀ ವಿದೇಶಕ್ಕೆ ಹೋದ ಅವಧಿಯಲ್ಲಿ, ಆನಂತರ ಅವರು ಕೆಲಸವನ್ನು ಬಿಟ್ಟ ಮೇಲೆ ಶ್ರೀ ಪ್ರಸಾದರೆ 'ಪುಸ್ತಕಪ್ರಪಂಚ'ದ ಸಂಪಾದಕರಾಗಿದ್ದರು. ಇನ್ನೊಬ್ಬರು ಸುಬ್ಬರಾಮಯ್ಯನವರು. ಆಫೀಸಿನ ಕೆಲಸ ಮಾಡುತ್ತ ಮಾರಾಟ ಮತ್ತು ವಿತರಣೆ ವಿಭಾಗವನ್ನೂ ನೋಡಿಕೊಳ್ಳುತ್ತಿದ್ದರು. ಮೂವರೂ ಪರಮಸಾತ್ವಿಕರು. ತುಂಬಾ ವಿಶ್ವಾಸದಿಂದ ಮಾತಾಡಿಸುತ್ತಿದ್ದರು. ಇವರ ಸುಸಂಸ್ಕೃತ ನಡೆ, ನುಡಿ, ಸೌಜನ್ಯ, ಸ್ನೇಹಪರತೆಗಳಿಂದಾಗಿ ಪರಿಚಯ ಬಹುಬೇಗ ಆತ್ಮೀಯ ಸ್ನೇಹವಾಗಿ ಪರಿಣಮಿಸಿತು. ಈ ಬಗೆಯ ಸ್ನೇಹ-ವಿಶ್ವಾಸಗಳನ್ನು ನಾನು ಮತ್ತೆ ಕಂಡದ್ದು ಎಷ್ಟೋ ವರ್ಷಗಳ (ನಾನು ಪುಸ್ತಕ ಪ್ರಪಂಚದ ಆಫೀಸಿಗೇ ಹೋಗದ) ನಂತರ (ಈಚೆಗೆ) ಪತ್ರಿಕೆಯ ಸಂಪಾದಕರುಗಳಾದ ಚಂದ್ರಶೇಖರ ಆರಾಧ್ಯ, ಬೋರಯ್ಯ ಮತ್ತು ಎ.ಡಿ.ನಂಜುಂಡಸ್ವಾಮಿ ಅವರುಗಳಲ್ಲಿ. ಚಂದ್ರಶೇಖರ ಆರಾಧ್ಯರ ಅಕಾಲಮರಣ ಸಮಿತಿಗೆ, ನನ್ನಂತಹ ಸ್ನೇಹಿತರಿಗೆ ಸಹಿಸಲಾರದ ದುಃಖ, ಭರಿಸಲಾಗದ ನಷ್ಟ.

ರಾವೆಂಶ್ರೀಯವರದು ಸರಳ ಸ್ವಭಾವ. ವಿದ್ಯಾರ್ಥಿದೆಸೆಯಿಂದಲೂ ಶಿವಮೊಗ್ಗದಲ್ಲಿ ವಯಸ್ಕರಿಗೆ ಅಕ್ಷರ ಕಲಿಸುವುದರಲ್ಲಿ ಆಸಕ್ತಿ ಹೊಂದಿ ತರಗತಿ ಹಾಗೂ ಕ್ಷೇತ್ರ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ಆ ಅನುಭವ ಮೈಸೂರಿಗೆ ಬಂದ ಮೇಲೆ ವಯಸ್ಕ ಶಿಕ್ಷಣ ಸಮಿತಿಯ ಕಾರ್ಯಕ್ರಮಗಳಲ್ಲಿ ಉಪಯೋಗಕ್ಕೆ ಬಂದಿತು. ಈ ಕೆಲಸ ಮೂರ್ತಿಯವರಿಗೆ ತುಂಬಾ ಇಷ್ಟವಾದುದಾಗಿ ಬಹು ಶ್ರದ್ಧೆಯಿಂದ ಆಸಕ್ತಿಯಿಂದ ಕೆಲಸ ಮಾಡುತ್ತಿದ್ದರು. 'ಹೆಚ್ಚು ಕೆಲಸ ಕಡಿಮೆ ಸಂಬಳ' ಎಂದು, ಸಂಬಳದ ಬಗ್ಗೆ ಚಿಂತಿಸುವ ಸ್ಥಿತಿಯಲ್ಲೇ ಇದ್ದರೂ, ಗೊಣಗುತ್ತಿರಲಿಲ್ಲ. ಅವರ ಕಡೆ ಯೋಚಿಸವೆ ತಾವಾಗಿ ಉತ್ಸಾಹದಿಂದ ಹೆಚ್ಚು ಕೆಲಸವನ್ನು ಮಾಡುತ್ತಿದ್ದರು. ನನಗೆ ಮೆಚ್ಚುಗೆಯಾದುದು ಇವರ ಈ ಮನೋಧರ್ಮ. ಕ್ಷೇತ್ರಕಾರ್ಯಾನುಭವವಿದ್ದ ಇವರಿಗೆ ಅಕ್ಷರ ಕಲಿಸುವ ವಿಧಾನ, ಪಠ್ಯ ಸಾಮಗ್ರಿ, ಬೋಧನೋಪಕರಣ- ಇವೆಲ್ಲವನ್ನೂ ಇನ್ನೂ ಉತ್ತಮಗೊಳಿಸಬೇಕೆಂಬ ಆಕಾಂಕ್ಷೆ. ಹೊಸ ಹೊಸ ಪ್ರಯೋಗಗಳನ್ನು, ವಿಸ್ತರಣ ಕಾರ್ಯಕ್ರಮಗಳನ್ನು ರೂಪಿಸುವ ಉತ್ಸಾಹ ಇದ್ದವು. ಸಾಹಿತ್ಯದ ಸಂಸ್ಕಾರ, ಕಲಾತ್ಮಕತೆ, ದೈವಭಕ್ತಿ ಕಾರ್ಯಶ್ರದ್ಧೆ ಇವರಲ್ಲಿ ಕೂಡಿಕೊಂಡಿದ್ದವು.

ಆಗಲೂ ಅಷ್ಟೆ. ಈಗಲೂ ಅಷ್ಟೆ. ಮೂರ್ತಿ ಸರ್ಕಾರದಿಂದ ನಿಯೋಜಿತರಾಗಿ, ನಾಡಿನ ಪ್ರತಿನಿಧಿಯಾಗಿ, ಅಧ್ಯಯನ- ತರಬೇತಿ- ವಿಚಾರಸಂಕಿರಣ- ಸಮಾವೇಶಗಳಿಗೂ ಹೋಗಿ ಬಂದರು. ಇವರ ಮನೆಯಲ್ಲಿಟ್ಟು ಕೊಂಡಿದ್ದ ಸಣ್ಣ ಮುದ್ರಣಾಲಯಕ್ಕೆ ಪುಸ್ತಕ ಮುದ್ರಣಕ್ಕೆಂದು ನಾನು ಹೋಗಿ ಬರುತ್ತ ನಮ್ಮ ಸ್ನೇಹ ಬೆಳೆಯಿತು. ಅಲ್ಲಿ ಸ್ನೇಹವಾದ ಶೇಷನಾರಾಯಣ ಈಗ ಪ್ರಸಿದ್ಧ ಕಥೆಗಾರ- ಕಾದಂಬರಿಕಾರ ಆಗಿದ್ದಾರೆ.

ಎ. ಶ್ರೀ ಪ್ರಸಾದರದು ಮಗುವಿನಂಥ ಮುಗ್ಧ ಮನಸ್ಸು. ಪ್ರೀತಿ-ಸ್ನೇಹ ತುಂಬಿದ ನಿರ್ಮಲ ಹೃದಯ. ಮುಖದ ಮೇಲೆ ಎಂದೂ ಮಾಸದ ಮಂದಹಾಸ. ಇವರದು ವಿಸ್ತೃತವಾದ ಓದು. ವಿವಿಧ ವಿಷಯಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದರು. ಸಂಜೆ ಟ್ಯುಟೋರಿಯಲ್ ಶಾಲೆಯೊಂದರಲ್ಲಿ ಭೂಗೋಳದ- ವಾಣಿಜ್ಯ ಶಾಸ್ತ್ರದ ಪಾಠ ಹೇಳುತ್ತಿದ್ದರು. ಜೋತಿಷ್ಯಶಾಸ್ತ್ರದಲ್ಲೂ ಪರಿಣಿತರಾಗಿದ್ದರು. ಜನ್ಮಕುಂಡಲಿ ಹಾಕಿ ಜಾತಕ ಬರೆಯುವುದು, ಜಾತಕಗಳನ್ನು ನೋಡಿ ಫಲ ಹೇಳುವುದು ಇವರ ಹವ್ಯಾಸ. ಹಣ ಸಂಪಾದಿಸುವ ಉಪವೃತ್ತಿಯಾಗಿರಲಿಲ್ಲ. ಇಡೀ ದಿನದ ವೃತ್ತಿ-ದುಡಿಮೆಯ ನಂತರ ಸಂಜೆ, ರಾತ್ರಿ, ರಜಾ ದಿನಗಳಲ್ಲಿ ಬಿಡುವಿನ ವೇಳೆ ಮಾಡುತ್ತಿದ್ದ ಕೆಲಸ. ತಮ್ಮ ವೃತ್ತಿಯ ಕರ್ತವ್ಯಗಳಿಗೆಂದೂ ವಂಚನೆ ಮಾಡುತ್ತಿರಲಿಲ್ಲ. ಹೊಸ ಹೊಸ ಪುಸ್ತಕಗಳನ್ನು ಬಿಡದೆ ಓದುತ್ತಿದ್ದರು. ನಾನು ಭೆಟ್ಟಿಯಾದಾಗಲೆಲ್ಲ ಅವರು ಓದಿದ ಹೊಸ ಪುಸ್ತಕಗಳ ಬಗ್ಗೆ, ನಾನು ಓದಿದ ಹೊಸ ಪುಸ್ತಕಗಳ ಬಗ್ಗೆ ಮನಸಾರೆ ಮಾತನಾಡುತ್ತ ಸಂತಸವನ್ನು ವಿನಿಮಯ ಮಾಡಿಕೊಳ್ಳುತ್ತಿದ್ದೆವು. ಮನೆಯ ತೊಂದರೆ, ತಾಪತ್ರಯಗಳೇನೇ ಇದ್ದರೂ ಪ್ರಸಾದ್ ಸದಾ ಪ್ರಸನ್ನರಾಗಿರುತ್ತಿದ್ದರು. ಒಂದು ದಿನವೂ ಗೋಳು ಹೇಳಿಕೊಳ್ಳುತ್ತಿರಲಿಲ್ಲ.

ಪುಸ್ತಕ ಪ್ರಪಂಚದ ವಲಯ ವಿಸ್ತಾರವಾದುದು. ಅದರೊಳಗೆ ನನ್ನ ಒಡನಾಟದ ಪರಿಧಿ ತೀರ ಚಿಕ್ಕದು. ಅಷ್ಟರ ಮಿತಿಯಲ್ಲಿ ಪರಿಚಯವಾದವರು ಕೆಲವರು. ಅವರಲ್ಲಿ ಈಗಲೂ ನೆನಪಲ್ಲಿ ಪ್ರಿಯವಾಗಿ ನಿಂತವರನ್ನು, ಸಂಪರ್ಕವಿರುವವರನ್ನು ಮಾತ್ರ ಇಲ್ಲಿ ಉಲ್ಲೇಖಿಸಿದ್ದೇನೆ.

'ಪುಸ್ತಕ ಪ್ರಪಂಚ' ಎಂದ ಕೂಡಲೆ ಹಲವಾರು ಚಿಂತನತರಂಗಗಳೇಳುತ್ತವೆ. ಎಂಥಾ ಸೊಗಸಾದ ಹೆಸರು ! ಯಾರ ಪ್ರತಿಭೆಗೆ ಹೊಳೆಯಿತೊ ಅವರಿಗೆ ಮೆಚ್ಚುಗೆಯ ಧನ್ಯವಾದಗಳು ಸಲ್ಲಬೇಕು.

ಅಕ್ಷರ ಕಲಿಸುವ ಮೊದಲ ಹಂತ ದಾಟಿ, ನವಸಾಕ್ಷರರಲ್ಲಿ ಓದುವ ಅಭ್ಯಾಸ ಮತ್ತು ಹವ್ಯಾಸ ಬೆಳೆಸಲೆಂದು ದೊಡ್ಡ ದೊಡ್ಡ ಅಕ್ಷರಗಳ ಚಿಕ್ಕ ಚಿಕ್ಕ ಪುಸ್ತಕಗಳನ್ನು ಪ್ರಕಟಿಸ ಲಾರಂಭಿಸಿದ ಬಳಿಕ ವಯಸ್ಕ ಶಿಕ್ಷಣ ಸಮಿತಿ ಇತರ ವಿದಗ್ಧ ಓದುಗರನ್ನೂ ಆಕರ್ಷಿಸಿ ತನ್ನ ಬಳಗಕ್ಕೆ ಸೇರಿಸಿಕೊಳ್ಳಲೆಂದು ಒಂದು ಮಾಸಿಕವನ್ನು ಹೊರ ತರುವ ಯೋಚನೆ ಮಾಡಿತು.

ಇಂಗ್ಲಿಷಿನಲ್ಲಿ 'ರೀಡರ್ಸ್ ಡೈಜೆಸ್ಟ್' ಎಂಬ ಮಾಸಿಕ ಪ್ರಬುದ್ಧ ಓದುಗರಿಗೆ ತುಂಬಾ ಇಷ್ಟವಾದ ಪತ್ರಿಕೆ. ಪತ್ರಿಕೆ ಎನ್ನುವುದಕ್ಕಿಂತ ಪುಸ್ತಕ ಎಂದು ಕರೆಯಬಹುದು. ಆ ಕಾಲ ದಿಂದಲೂ ಹಾಗೇ ಇದೆ. ಈಗ ಇನ್ನೂ ಹೆಚ್ಚು ಆಕರ್ಷಕವಾಗಿದೆ. ಅದನ್ನು ಓದುವವರು ಎಂದರೆ ಸಾಕು, ವಿದ್ಯೆ-ಸಂಸ್ಕೃತಿ- ಅಭಿರುಚಿ ಎಲ್ಲ ಮೇಲ್ಪಟ್ಟವಾಗಿರುವವರು, ಪ್ರತಿಷ್ಠಿತರು ಎಂಬ ಭಾವನೆ. ವಿದ್ವತ್ ಪ್ರೌಢಿಮೆಯ ಆಡಂಬರದ ಭಾಷೆಯಾಗಲಿ ತೀರಾ ಗಹನ- ಕ್ಲಿಷ್ಟ ಎಂಬಂಥ ವಿಚಾರಗಳಾಗಲಿ ಇರದೆ ಸಾಮಾನ್ಯವಾದ ಘಟನೆಗಳಾದರೂ ಅವುಗಳ ಅಸಾಧಾರಣ ಅಂಶಗಳನ್ನೂ ವಿಶೇಷತೆಯನ್ನೂ ಎತ್ತಿ ತೋರಿಸುವ, ವಾಸ್ತವವಾಗಿ ನಡೆದ ಅದ್ಭುತ ಸಾಹಸಮಯ -ರೋಮಾಂಚಕಾರಿ ಸಂಗತಿಗಳನ್ನು ಸ್ವಾರಸ್ಯವಾಗಿ ಕಥಿಸುವ ವಿಶಿಷ್ಟ ಲೇಖನ ಕಲೆಗೆ 'ರೀಡರ್ಸ್ ಡೈಜೆಸ್ಟ್' ಹೆಸರಾಗಿದೆ. ಎಲ್ಲ

ಪುಟ್ಟ ಪುಟ್ಟ ಬಿಡಿಲೇಖನಗಳು. ವೈವಿಧ್ಯಮಯ ವಿಷಯಗಳು, ಅನುಭವಗಳು, ಖಾಲಿ ಜಾಗಗಳಲ್ಲಿ ಜಾಣ್ಣುಡಿಗಳು ಚತುರೋಕ್ತಿಗಳು, ಹಾಸ್ಯ ಚಟಾಕಿಗಳು, ಯಾವುದೇ ಲೇಖನ ೧೦-೧೫ನಿಮಿಷಗಳಲ್ಲಿ ಓದಿ ಮುಗಿಸುವಂತಹವು. ಕಾರಣಗಳೇನೇ ಇರಲಿ ಈಗಲೂ ಅತ್ಯಂತ ಜನಪ್ರಿಯವಾದ ಇಂಗ್ಲಿಷ್ ಮಾಸಿಕವೆಂದರೆ ಅದು ರೀಡರ್ಸ್ ಡೈಜೆಸ್ಟ್.

ಇದೇ ತರಹದ ಪತ್ರಿಕೆಯನ್ನು ಕನ್ನಡದಲ್ಲಿ ತರಬೇಕು ಎಂಬ ಮಹತ್ವಾಕಾಂಕ್ಷೆಯಿಂದ ವಯಸ್ಕ ಶಿಕ್ಷಣ ಸಮಿತಿಯ ಮುಖ್ಯರು, ವಿನೂತನ ಕಾರ್ಯಕ್ರಮ -ಪ್ರಯೋಗಗಳಲ್ಲಿ ಆಸಕ್ತರಾದ ಕೆಲವು ಗಣ್ಯರು, ಮಹಾರಾಜಾ ಕಾಲೇಜಿನ ಕೆಲವು ಅಧ್ಯಾಪಕರು ಕೂಡಿ ಮಾತಾಡಿಕೊಂಡರು. 'ಪುಸ್ತಕ ಪ್ರಪಂಚ' ಎಂಬ ಸೂಕ್ತವಾದ ಹೆಸರೂ ಹೊಳೆಯಿತು. ಪತ್ರಿಕೆ ಆರಂಭವಾಯಿತು. ಪ್ರಧಾನ ಸಂಪಾದಕರು ಜಿ.ಹನುಮಂತರಾಯರು. ಆ ಕಾಲಕ್ಕೆ ಅದೊಂದು ವಿನೂತನ ಪ್ರಯೋಗ-ದೊಡ್ಡ ಸಾಹಸ.

ಒಂದೆರಡು ಸ್ವತಂತ್ರ ಲೇಖನಗಳನ್ನು ಬಿಟ್ಟರೆ ಉಳಿದವುಗಳೆಲ್ಲ ಅನುವಾದಿತ ಲೇಖನಗಳು-ಇಂಗ್ಲಿಷ್‌ನಿಂದ ,ಹಿಂದಿಯಿಂದ, ರೀಡರ್ಸ್‌ಡೈಜೆಸ್ಟ್‌ನಿಂದ ಆಯ್ದ ಲೇಖನಗಳೇ ಹೆಚ್ಚು. 'ನವನೀತ್' ಹಿಂದಿ ಪತ್ರಿಕೆಯಿಂದಲೂ. ಆ ಪತ್ರಿಕೆಯವರು ಉದಾರ ಮನಸ್ಸಿನಿಂದ, ಯಾವ ಕಾಲಕ್ಕೂ ಆಗಬಹುದೆಂದು, ಅನುಮತಿ ನೀಡಿದ್ದರು ,ಅನುವಾದ ಚೆನ್ನಾಗಿದ್ದರೆ ಮಾತ್ರ ಪ್ರಕಟನೆಗೆ ಅಂಗೀಕರಿಸುತ್ತಿದ್ದರು. ರೀಡರ್ಸ್ ಡೈಜೆಸ್ಟಿಗಿಂತ ಚಿಕ್ಕ ಆಕೃತಿ; ಮುದ್ರಣ, ವಿನ್ಯಾಸ, ಮುಖಪುಟ ಎಲ್ಲ ಚೆನ್ನಾಗಿಯೆ ಇದ್ದವು. ಶ್ರೇಷ್ಠಗುಣಮಟ್ಟದ ಮುದ್ರಣಕ್ಕೆ ಹೆಸರಾಗಿದ್ದ -ಪ್ರಥಮಸ್ಥಾನದಲ್ಲಿದ್ದ-ವೆಸ್ಲಿಪ್ರೆಸ್‌ನಲ್ಲಿ ಪತ್ರಿಕೆ ಅಚ್ಚಾಗುತ್ತಿತ್ತು. 'ಪುಸ್ತಕ ಪ್ರಪಂಚ', ಪ್ರಬುದ್ಧ ಕರ್ನಾಟಕಗಳಲ್ಲಿ ಲೇಖನ ಸ್ವೀಕೃತವಾಗಿ ಪ್ರಕಟವಾಯಿತೆಂದರೆ ಸಾಹಿತ್ಯ ಲೋಕದಲ್ಲಿ ಗೌರವ-ಮನ್ನಣೆಗಳಿಗೆ ಯೋಗ್ಯವಾದುದು ಎಂದೇ ಅರ್ಥ. ಉದಯೋನ್ಮುಖ ಲೇಖಕರು ಸಾಹಿತ್ಯ ಲೋಕದಲ್ಲಿ ತಮಗೆ ಒಳ್ಳೆಯ ಸ್ಥಾನಮಾನ ದೊರೆತವೆಂದೇ ಭಾವಿಸಿ, ಹಿಗ್ಗಿ, ಧನ್ಯತಾಭಾವ ತಾಳುತ್ತಿದ್ದರು. ಆ ಗುಂಪಿಗೆ ಆಗತಾನೆ ನಾನೂ ಸೇರಿದ್ದೆ.

ಕನ್ನಡ-ಕನ್ನಡೇತರ ಪುಸ್ತಕಗಳ, ಲೇಖನಗಳ ಪರಿಚಯವನ್ನು ಮಾಡಿಕೊಡುವುದು. ಶ್ರೇಷ್ಠ ಕೃತಿಗಳ ಸಂಕ್ಷಿಪ್ತ ರೂಪವನ್ನು, ಗ್ರಾಮಸ್ಥರಿಗೆ ಉಪಯುಕ್ತವಾದ ಹಾಗೂ ರುಚಿಸುವ ವಿಷಯಗಳನ್ನು, ಕತೆ, ಪ್ರಬಂಧ, ವ್ಯಕ್ತಿ ಚಿತ್ರಗಳನ್ನು ಪ್ರಕಟಿಸುವುದು ಈ ಮಾಸಿಕದ ಉದ್ದೇಶ. ಭಾಷೆ ಸರಳವಾಗಿರಬೇಕು, ಸಾಮಾನ್ಯ ಓದುಗರಿಗೂ ಸುಲಭವಾಗಿ ಅರ್ಥವಾಗಬೇಕು, ಒಟ್ಟಿನಲ್ಲಿ ಪಂಡಿತ-ಪಾಮರರಿಬ್ಬರಿಗೂ ಪ್ರಿಯವಾಗಬೇಕು. ಹಳ್ಳಿಗಳಲ್ಲಿ ವಾಚನಾಲಯ, ಪುಸ್ತಕ ಭಂಡಾರಗಳನ್ನು ಸ್ಥಾಪಿಸಲು ಪ್ರೇರಣೆ- ಪ್ರೋತ್ಸಾಹ ನೀಡಬೇಕೆಂಬ ಉದಾತ್ತ ಧ್ಯೇಯವನ್ನು ಇರಿಸಿಕೊಂಡಿದ್ದ ವಯಸ್ಕ ಶಿಕ್ಷಣ ಸಮಿತಿ ಕಾರ್ಯಗತಗೊಳಿಸಿದ ಮೂರು ಸ್ಮರಣೀಯ ರಚನಾತ್ಮಕ ಕಾರ್ಯಗಳೆಂದರೆ ನವಸಾಕ್ಷರರ ಓದಿಗೆಂದೇ ಹೊರಡಿಸಿದ 'ಬೆಳಕು' ವಾರಪತ್ರಿಕೆ, ಚಿಕ್ಕ ಪುಸ್ತಕಗಳ ಸರಣಿ, ಎಲ್ಲ ಸಾರ್ವಜನಿಕ ಓದುಗರಿಗೂ ಹಿಡಿಸುವಂತಹ, 'ಪುಸ್ತಕ ಪ್ರಪಂಚ'-ಮಾಸಿಕ. ಚಿಕ್ಕ ಚಿಕ್ಕ ಸಚಿತ್ರ ಪುಸ್ತಕಗಳಂತೂ ನವಸಾಕ್ಷರರಿಗೆ ರಸದೂಟ. ಓದುವ ರುಚಿಯನ್ನು ಬೆಳೆಸುವಂತಹವು. ಲೋಕಜ್ಞಾನ, ವಿಜ್ಞಾನ, ಪ್ರಕೃತಿ ಪರಿಚಯ, ಕೃಷಿ ಹಾಗೂ ಇತರ ಗ್ರಾಮೀಣ ಅಭಿವೃದ್ಧಿಗಳಿಗೆ ಸಂಬಂಧಿಸಿದ ಉಪಯುಕ್ತ ಮಾಹಿತಿಗಳು ವಿಶ್ವಮಾನ್ಯರಾದ ಮಹಾ ಪುರುಷರ, ಮಹಾ ಮಹಿಳೆಯರ , ಸಂತರ ಜೀವನ ಮತ್ತು ಸಂದೇಶಗಳ ಸಂಕ್ಷಿಪ್ತ ಪರಿಚಯ, ಈ ಕಿರುಹೊತ್ತಿಗೆಗಳ ವಸ್ತು ವಿಶೇಷ. ನವಸಾಕ್ಷರರಿಗೆಂದೇ ಬರೆಯುವಾಗ ಅದಕ್ಕೆ ನಿಗದಿತವಾದ ಚಿಕ್ಕ ಚಿಕ್ಕ ವಾಕ್ಯಗಳು, ಓದಲು ಕಷ್ಟವಾಗುವ

ಒತ್ತಕ್ಷರ-ಸಂಯುಕ್ತಾಕ್ಷರಗಳನ್ನು ಸಾಧ್ಯವಾದಷ್ಟು ಬಳಸದಿರುವುದು, ಮಿತ ಸಂಖ್ಯೆಯ ಪರಿಚಿತ ಪದಗಳನ್ನು ಮಾತ್ರ ಬಳಸುವುದು -ಇತ್ಯಾದಿ ನಿಯಮಗಳನ್ನು ನುರಿತ ಲೇಖಕರು ಸಾಧ್ಯವಾದಷ್ಟು ಮಟ್ಟಿಗೆ ಅನುಸರಿಸುತ್ತಿದ್ದರು. ಈ ಬಗೆಯ ಬರೆವಣಿಗೆಯನ್ನು ಮೊದಲು ತಜ್ಞರು ಅವಲೋಕಿಸಿ ಸೂಕ್ತ ತಿದ್ದುಪಾಟು ಮಾಡುವ, ಪ್ರಕಟಿತ ಪುಸ್ತಕಗಳ ಮೌಲ್ಯಮಾಪನ, ಕ್ಷೇತ್ರದ ಪ್ರತಿಕ್ರಿಯೆಗಳ ಬೆಳಕಿನಲ್ಲಿ ಮತ್ತೆ ಪರಿಷ್ಕರಿಸುವ ಕಾರ್ಯ ನಿರಂತರವಾದುದು. ಬರೆವಣಿಗೆಯ ಕಲೆಯಲ್ಲಿ ಸ್ವಲ್ಪ ತರಬೇತಿ ಅಗತ್ಯ. ಆದರೆ ಅಂತಹ ತರಬೇತಿ ಯಾಗಲಿ, ಈ ವಿಚಾರದಲ್ಲಿ ಸಂಶೋಧನೆ- ಪ್ರಯೋಗಗಳಾಗಲಿ ಪಾಶ್ಚಾತ್ಯ ದೇಶಗಳಲ್ಲಿ ಎಷ್ಟು ಕೂಲಂಕುಶವಾಗಿ ನಡೆದಿದೆಯೊ ಅಷ್ಟು ಇಲ್ಲಿ ನಡೆದಂತೆ ಕಾಣಲಿಲ್ಲ. ಪುಸ್ತಕ ರಚನೆಯ ಚರ್ಚೆ, ಕಾರ್ಯಾಗಾರಗಳಾಗಿವೆ. ಮೌಲ್ಯಮಾಪನ ಕಾರ್ಯವೂ ಆಗಿದೆ. ಆದರೆ ಬರೆಹಗಾರರಿಗೆ (ಇವು ಸಚಿತ್ರ ಪುಸ್ತಕಗಳಾದುದರಿಂದ) ಚಿತ್ರಕಲಾ ಕಾರರಿಗೆ ತರಬೇತಿ ನೀಡಿಲ್ಲ. ವಸ್ತು ವಿಷಯದ ಚರ್ಚೆ ಆಗಿದೆಯೆ ವಿನಹ ಬರವಣಿಗೆಯ ತಂತ್ರ-ಕಲೆಗಳಲ್ಲಿ ತರಬೇತಿ ಇಲ್ಲ. ಆದಿರಲಿ.

'ವಯಸ್ಕ ಶಿಕ್ಷಣ'ದ ಪರಿಕಲ್ಪನೆ ಭಾರತದಲ್ಲಿ ಮೊಟ್ಟ ಮೊದಲಿಗೆ ಬಂದುದು ಮಾದರಿ ಹಾಗೂ ಪ್ರಗತಿಶೀಲ ರಾಜ್ಯವೆನಿಸಿದ್ದ ಮೈಸೂರು ಸಂಸ್ಥಾನದಲ್ಲಿ. ಸಮಸ್ತ ಕರ್ನಾಟಕವಷ್ಟೇ ಏಕೆ ಅಖಿಲ ಭಾರತವೂ ಹೆಮ್ಮೆ ಪಡಬಹುದಾದ ಇನ್ನೂ ಹಲವಾರು ವಿನೂತನ ಕಾರ್ಯಗಳಿಗೆ, ಅತ್ಯಾಧುನಿಕ ವಿಚಾರಗಳಿಗೆ, ಪ್ರಗತಿಯ ಸಾಧನೆಗಳಿಗೆ ಮೈಸೂರು ಹೆಸರಾಗಿತ್ತು. ಆಗ ಮೈಸೂರಿನ ಮಹಾರಾಜರಾಗಿದ್ದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಪ್ರಜಾ ವಾತ್ಸಲ್ಯ, ಸಾಮಾಜಿಕ ಕಾಳಜಿ, ಆಧುನಿಕ ಚಿಂತನ ಮತ್ತು ದೂರದರ್ಶಿತ್ವ- ಅವಕ್ಕೆ ಸಂವಾದಿಯಾಗಿ ಪೂರಕವಾಗಿ ಇದ್ದ ದಿವಾನ್ ಕೆ.ಶೇಷಾದ್ರಿ ಅಯ್ಯರ್, ಸರ್.ಎಂ.ವಿಶ್ವೇಶ್ವರಯ್ಯ, ದಿವಾನ್ ಮಿರ್ಜಾ ಇಸ್ಮಾಯಿಲ್ ಇವರ ದಕ್ಷತೆ, ಕ್ರಿಯಾಶೀಲತೆ, ಅಷ್ಟೆ ದೇಶದ ಕಾಳಜಿ- ಜೊತೆಗೂಡಿದ ಫಲವಾಗಿ ಮೈಸೂರು ಮಾದರಿ ಸಂಸ್ಥಾನವಾಯಿತು. ಸ್ವತಂತ್ರ ಭಾರತದ ಅಭಿವೃದ್ಧಿ ಯೋಜನೆಗಳ ಮೂಲ ಕಲ್ಪನೆ ಮತ್ತು ಮಾದರಿ ೩-೪ ದಶಕಗಳ ಮುಂಚೆಯೆ ಮೈಸೂರು ಸಂಸ್ಥಾನದ ಆಳರಸರಲ್ಲಿ ಮೂಡಿ ಕಾರ್ಯಗತವಾದುದು ಸಾಮಾನ್ಯ ಸಂಗತಿಯಲ್ಲ! ಇದು ಹೇಗಾಯಿತು ಎಂಬ ಬೆರಗಿನಲ್ಲಿ ಸ್ವಲ್ಪ ಚಿಂತನೆ ಮಾಡಿದರೆ ಒಂದು ಅದ್ಭುತವಾದ ದರ್ಶನ ಅನುಭವಕ್ಕೆ ಬರುತ್ತದೆ. ಶತಶತಮಾನಗಳ ಕಾಲ ದಾಸ್ಯಕ್ಕೊಳಗಾಗಿ ದೈನ್ಯತೆಗೆ, ಜಡತೆಗೆ, ನಾನಾ ಬವಣೆಗಳಿಗೆ ಒಳಗಾಗಿದ್ದ ಭಾರತ ಎಚ್ಚರಾಗಿ ಮೈಕೊಡವಿ ಏಳುವ ಕಾಲ ಬಂದಿತು. ನವಯುಗದ ಹರಿಕಾರರಾಗಿ ಬಂದ ಸ್ವಾಮಿ ವಿವೇಕಾನಂದರ ಸಿಂಹ ಘರ್ಜನೆ ಮೊಳಗಿತು. ಭಾರತ ಜಾಗೃತವಾಯಿತು. (ಇದಕ್ಕಾಗಿ ೫೦ ವರ್ಷಗಳ ಕಾಲ ಸಿದ್ಧತೆ ನಡೆದಿತ್ತು ಭಾರತಾದ್ಯಂತ). ಬಂಕಿಮಚಂದ್ರರ ವಿಶ್ವಕವಿ ರವೀಂದ್ರನಾಥ ಠಾಕೂರರ ಪ್ರಾರ್ಥನೆ ಮಾತೆಗೆ, ಭಾರತ ಭಾಗ್ಯವಿಧಾತನಿಗೆ ಕೇಳಿತೆಂದು ಕಾಣುತ್ತದೆ. ಫಲಿಸಿತು. ನವಶಕ್ತಿಯ ಸಂಚಾರವಾಯಿತು. ಜಗತ್ತಿನಾದ್ಯಂತ ಬೀಸತೊಡಗಿದ ಪರಿವರ್ತನೆಯ ಹೊಸ ಕಾಲದ ಹೊಸಗಾಳಿ ಭಾರತವನ್ನೂ ವ್ಯಾಪಿಸಿತು. ಕಾರ್ಲ್‌ಮಾರ್ಕ್ಸ್, ಟಾಲ್‌ಸ್ಟಾಯ್, ರಸ್ಕಿನ್‌ರಂತೆ ಭಾರತದಲ್ಲಿ ರಾಜಾರಾಮ್ ಮೋಹನ್‌ರಾಯ್, ಸ್ವಾಮಿ ವಿವೇಕಾನಂದ, ರವೀಂದ್ರನಾಥ್ ಠಾಕೂರ್, ಮಹಾತ್ಮಾ ಗಾಂಧಿ, ಶ್ರೀ ಅರಬಿಂದೊ - ಇವರುಗಳೂ ಹೊಸಚಿಂತನಗಳ ಬೆಳಕನ್ನೂ ಶಕ್ತಿಯನ್ನೂ ಪರಿಣಾಮಕಾರಿಯಾಗಿ ಹರಿಸಿದರು.

ಈ ಶತಮಾನದ ಪ್ರಥಮಾರ್ಧಕಾಲ ಅದರಲ್ಲೂ ೧೯೨೦ ರಿಂದ ೩ ದಶಕಗಳಕಾಲ ಅತ್ಯಂತ ಮಹತ್ತರವಾದುದು. ಮಾನವ ಚೈತನ್ಯದ ಅಂತರ್‌ವಾಹಿನಿ ಒಂದು ಕಡೆ ವಿಧ್ವಂಸಕ ದೈತ್ಯಶಕ್ತಿಯಾಗಿ ಅಲ್ಲೋಲಕಲ್ಲೋಲವನ್ನುಂಟು

ಮಾಡಿತು. ಅದಕ್ಕೆ ಪ್ರತಿಯಾಗಿ ಶಾಂತಿ-ಅಹಿಂಸೆಗಳ ದಿವ್ಯಶಕ್ತಿಯಾಗಿ ವಿಧಾಯಕ ಕಾರ್ಯಗಳಲ್ಲಿ ಮುನ್ನಡೆಸುವ ಯತ್ನವನ್ನು ಮಾಡಿತು. ಭಾರತದಲ್ಲಿ ಒಂದು ಕಡೆ ಸ್ವಾತಂತ್ರ್ಯಕ್ಕಾಗಿ ಹೋರಾಟ. ಜೊತೆ ಜೊತೆಗೆ ಸ್ವಾತಂತ್ರ್ಯಕ್ಕೆ ಜನತೆಯನ್ನು ಯೋಗ್ಯರನ್ನಾಗಿ ಮಾಡುವ ಪ್ರಾಮಾಣಿಕ ಪ್ರಯತ್ನವನ್ನೂ ಕಾಣಬಹುದು. ಮೈಸೂರು ಸಂಸ್ಥಾನವಾಗಿ ಉಳಿದಿದ್ದ ಕನ್ನಡ ನಾಡು ಈ ಪ್ರಕ್ರಿಯೆಯ ಆದ್ಯ ಪ್ರವರ್ತಕ ಎಂಬ ಕೀರ್ತಿಗೆ ಭಾಜನವಾಗಿದೆ. ಅತ್ಯಾಧುನಿಕ ವಿಚಾರಗಳ, ಮುಂದೆ ಸ್ವತಂತ್ರ ಭಾರತದ ಸರ್ವತೋಮುಖ ಅಭಿವೃದ್ಧಿಯ ಯೋಜನೆಗಳ, ಪೂರ್ವಸೂಚಿಯಂತೆ ನವಚಿಂತನದ ಮಹತ್ವವಾಹ ವಿವಿಧ ಕಾರ್ಯರೂಪಗಳಲ್ಲಿ ಅಭಿವ್ಯಕ್ತವಾದುದು ಮೈಸೂರಿನಲ್ಲಿ. ಇಡೀ ರಾಷ್ಟ್ರದಲ್ಲೇ ಪ್ರಪ್ರಥಮ ಎನ್ನುವ ಜಲವಿದ್ಯುದುತ್ಪಾದನಾ ಸ್ಥಾವರದ ರೂಪವಾಗಿ, ಬೃಹದ್ ನೀರಾವರಿ ಅಣೆಕಟ್ಟಾಗಿ, ಪ್ರಜಾಪ್ರತಿನಿಧಿ ಸಭೆಯಾಗಿ, ಮಹಿಳಾ ಸಮಾನತೆಯ ಶಾಸನವಾಗಿ, ಜನಸಂಖ್ಯಾ ನಿಯಂತ್ರಣದ ವೈದ್ಯಕೀಯ ಕೇಂದ್ರವಾಗಿ, ಭಾರಿ ಕೈಗಾರಿಕೋದ್ಯಮಗಳ ನಾಂದಿಯಾಗಿ, ವಯಸ್ಕ ಶಿಕ್ಷಣ ಕಾರ್ಯಕ್ರಮವಾಗಿ ಆಕಾಶವಾಣಿಯಾಗಿ, ವಿಶ್ವವಿದ್ಯಾನಿಲಯದ ಪ್ರಸಾರೋಪನ್ಯಾಸ ಮಾಲೆಯಾಗಿ, ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮವಾಗಿ ಈ ಆಧುನಿಕ ವಿಚಾರವಾಹಿನಿ ಕಾರ್ಯರೂಪದಲ್ಲಿ ಹರಿದಿದ್ದು ಕನ್ನಡದ ಈ ನೆಲದಲ್ಲಿ. ಇವು ಮಹಾರಾಜರ ಮತ್ತು ಅವರ ದಿವಾನರ ಧೀರ-ದಿಟ್ಟ ಮುಂತೊಡಗುವಿಕೆಯಿಂದ ನನಸಾದ ಕನಸುಗಳಾದರೂ, ಒಂದೊಂದರ ಹಿಂದೆಯೂ ಹಲವಾರು ಮೇಧಾವಿಗಳು, ಪ್ರತಿಭಾವಂತರ ಶ್ರದ್ಧೆ, ಆಸಕ್ತಿ, ಮನಃಪೂರ್ವಕವಾದ ದುಡಿಮೆಗಳು ಇದ್ದುದರಿಂದ ಯಶಸ್ವಿಯಾದವು.

೩೦ರ ಮತ್ತು ೪೦ರ ದಶಕಗಳ ಕಾಲ ಸುವರ್ಣಯುಗ ಎನ್ನಬಹುದು.

'ನಾಡಿನ ಪುಣ್ಯದ ಪೂರ್ವದಿಗಂತದಿ
ನವ ಅರುಣೋದಯ ಹೊಮ್ಮುತಿದೆ'

ಎಂದು ಈ ಉಷಃಕಾಲದ ಕವಿಶ್ರೇಷ್ಠ ಕುವೆಂಪು ಗುರುತಿಸಿದರು. ಕವಿ ರವೀಂದ್ರರು 'ಜನಗಣಮನ ಅಧಿನಾಯಕ ಭಾರತ ಭಾಗ್ಯವಿಧಾನತನಿಗೆ' ನಿಗೆ ನಮಿಸಿ ಜಯಕಾರ ಮಾಡಿದರು. ಮೈಸೂರಿನ 'ಪ್ರಥಮ'ಗಳು ಒಂದಕ್ಕಿಂತ ಒಂದು ಹೆಚ್ಚು ವಿಸ್ಮಯಕರವಾಗಿವೆ. ಪ್ರಥಮ ರೇಡಿಯೋ ಕೇಂದ್ರ ಆಕಾಶವಾಣಿ), ಶಿಶುವಿಹಾರ ಡಾ. ಎಂ. ವಿ. ಗೋಪಾಲ ಸ್ವಾಮಿಯವರ ಕೊಡುಗೆ; ಪ್ರಸಾರೋಪನ್ಯಾಸ ಮಾಲೆ, ಅಕ್ಷರ ಪ್ರಸಾರಗಳ ಪ್ರವರ್ತಕರು ಬಿಎಂಶ್ರೀ, ಜಿ. ಹನುಮಂತರಾಯರು ಮತ್ತು ನಾ. ಕಸ್ತೂರಿಯವರು.

ತಿಳಿವಿಗೆ ಬೆಳಕನ್ನೂ ಬಾಳಿಗೆ ಅರ್ಥವನ್ನೂ ನೀಡುವ ಜ್ಞಾನವನ್ನು ರೈತರ ಮನೆ-ಮನೆಗಳಿಗೆ ತಲುಪಿಸುವ ಚಿಂತನ ಆರಂಭವಾದುದು ಮೈಸೂರಿನ ಮಹಾರಾಜಾ ಕಾಲೇಜಿನ ಅಧ್ಯಾಪಕರ ಕಾಮನ್ ರೂಮಿನಲ್ಲಿ. ಇದನ್ನು ಭಾರತ ನವನಿರ್ಮಾಣದ ಉದಾತ್ತ-ಆಧುನಿಕ ವಿಚಾರಗಳ ಗಂಗೋತ್ರಿ ಎಂದು ಕರೆಯಬಹುದು. ಸ್ಫೂರ್ತಿ, ಉತ್ಸಾಹ-ಆದರ್ಶ ಪ್ರಿಯತೆಗಳು ತುಂಬಿದ ಕೆಲವು ಅಧ್ಯಾಪಕರ ನಿಸ್ವಾರ್ಥ, ನಿಷ್ಕಾಮ ಸೇವಾಮನೋಭಾವದಿಂದ ಸ್ವದೇಶಾಭಿಮಾನದಿಂದ ಈ ಹೊಸ ಹೊಸ ಯೋಜನೆಗಳು ಉದ್ಭವವಾದವು. ವಯಸ್ಕರಿಗೆ ಅಕ್ಷರ ಕಲಿಸಿ ಅವರಿಗೂ ಆಧುನಿಕ ಜ್ಞಾನವನ್ನು ಪಡೆಯುವ, ಅವಕಾಶವನ್ನೊದಗಿಸಬೇಕೆಂಬ ಸದಿಚ್ಛೆ ಉಂಟಾದುದು ಈ ಅಧ್ಯಾಪಕರಲ್ಲೆ.

ಹಳ್ಳಿಗಾಡಿನ ಜನತೆಗೆ ಜಗತ್ತಿನ ಎಲ್ಲ ಉಪಯುಕ್ತ ಮಾಹಿತಿಗಳನ್ನೂ ವಿವಿಧ (ಅಂದರೆ ವಿಜ್ಞಾನ, ಮಾನವಿಕ, ಸಾಹಿತ್ಯಕ ಮತ್ತು ಸಾಂಸ್ಕೃತಿಕ) ವಿಷಯಗಳ ಬಗ್ಗೆ ತಿಳಿವಳಿಕೆ ಮಾಡಿಕೊಡುವಂತಹ ಜನಪ್ರಿಯ ಉಪನ್ಯಾಸಗಳನ್ನೇರ್ಪಡಿಸುವುದು, ಹಳ್ಳಿಗಳಲ್ಲೇ ಇರಲಿ ನಗರಗಳಲ್ಲೇ ಇರಲಿ ಜನ ಸಾಮಾನ್ಯರಲ್ಲಿ ವೈಜ್ಞಾನಿಕತೆಯನ್ನು ಬೆಳೆಸುವುದು, ಅವರಲ್ಲಿ

ರೂಢಮೂಲವಾಗಿರುವ ಮೂಢನಂಬಿಕೆಗಳನ್ನೂ ಜಾತಿ ಭಾವನೆಗಳನ್ನೂ ಹೋಗಲಾಡಿಸುವುದು, ಹಬ್ಬ-ಹರಿದಿನ, ಮದುವೆ-ಮುಂಜಿಗಳಲ್ಲಿ ಮಿಥ್ಯಾಪ್ರತಿಷ್ಠೆಯ ಆಡಂಬರ ಹಾಗೂ ಮುಂದು ವೆಚ್ಚಗಳನ್ನು ತಪ್ಪಿಸುವುದು, ಈ ಉದ್ದೇಶಗಳಿಂದ ಆರಂಭವಾಯಿತು. ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸ ಕಾರ್ಯಕ್ರಮ ತತ್ವಶಾಸ್ತ್ರ ಉಪನ್ಯಾಸಕರಾಗಿದ್ದ ಜಿ.ಹನುಮಂತರಾಯರು, ಇತಿಹಾಸದ ಉಪನ್ಯಾಸಕರಾಗಿದ್ದ ನಾ.ಕಸ್ತೂರಿಯವರೂ ಜೊತೆಗೂಡಿ ಇವರ ಯೋಜನೆಯನ್ನು ತಯಾರು ಮಾಡಿದರು. ಸಮಾನ ಮನಸ್ಕರಾಗಿದ್ದ ಇತರ ಹಲವು ಉಪನ್ಯಾಸಕರೂ ಇದನ್ನು ಕಾರ್ಯಗತಗೊಳಿಸಲು ಮುಂದಾದರು. ಸುತ್ತಮುತ್ತಲ ಹಳ್ಳಿಗಳಿಗೆ ಮಾತ್ರವಲ್ಲ ದೂರದ ಊರುಗಳಿಗೂ ಹೋಗಿ ಉಪನ್ಯಾಸ ನೀಡಿದರು. ಆಯಾ ಸ್ಥಳಗಳ ಸಂಘ-ಸಂಸ್ಥೆಗಳು ನೆರವು- ಸಹಕಾರ ನೀಡಿದವು. ಜನರಿಂದಲೂ ಒಳ್ಳೆಯ ಪ್ರೋತ್ಸಾಹ ಸಿಕ್ಕಿತು. ಈ ಉಪನ್ಯಾಸಗಳು, ನಂತರ ಇವುಗಳ ಮುದ್ರಿತ ರೂಪದ ಪುಸ್ತಿಕೆಗಳು, ಜನಪ್ರಿಯವಾದವು. ಈ ಕಾರ್ಯಕ್ರಮದ ಜೊತೆ ಜೊತೆಗೆ ವಯಸ್ಕ ಶಿಕ್ಷಣ, ಮತ್ತು ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳೂ ಮೊದಲಾದುವು. ಮುಂದೆ ಸ್ವಾತಂತ್ರ್ಯಾನಂತರದ ರಾಷ್ಟ್ರವ್ಯಾಪಿ ಜನ ಕಲ್ಯಾಣ ಯೋಜನೆ ಗಳ ಅಂಕುರಾರ್ಪಣೆಯನ್ನಿಲ್ಲಿ ಕಾಣಬಹುದು.

ಪುಸ್ತಕ ಪ್ರಪಂಚದ ಮತ್ತು ನನ್ನ ನಂಟು ಬೆಳೆದ ೩೦ರ ದಶಕದ ಹೊತ್ತಿಗೆ ಈ ವಿನೂತನ ಕಾರ್ಯಕ್ರಮಗಳು ಆರಂಭವಾಗಿ ಎರಡು ದಶಕಗಳಾಗಿ ಇವುಗಳನ್ನು ಮೊದಲಿಗರಾಗಿ ನಿಂತು ನಡೆಸಿದ ಮಹಾನೀಯರುಗಳ ಶೈಕ್ಷಣಿಕ ಸಾಹಸಗಳು ರಮ್ಯವಾದ ದಂತಕಥೆಗಳಾಗಿದ್ದವು. ಇದು ತಮ್ಮ ಬೋಧನ ಕರ್ತವ್ಯದ ಭಾಗವಲ್ಲ, ಸರ್ಕಾರದ ಆದೇಶವಲ್ಲ, ಆಸೆಯೊಡ್ಡಿ ಮಾಡಿದ ಪ್ರೇರಣೆಯೂ ಅಲ್ಲ, ಇದರಿಂದ ಸಂಬಳ ಹೆಚ್ಚುವುದಿಲ್ಲ, ಉಪ-ಸಂಪಾದನೆ ಆಗುವುದಿಲ್ಲ ಬಡ್ತಿಯೂ ಸಿಕ್ಕದು, ಹೆಸರು-ಕೀರ್ತಿ ಬರುವುದೆಂಬ ಭ್ರಮೆಯೂ ಇಲ್ಲ, ಆದರೂ ಈ ವಿಚಾರಗಳು-ಸೇವಾಕಾಂಕ್ಷೆ ಈ ಅಧ್ಯಾಪಕರ ತಲೆಯೊಳಗೆ ಏಕೆ ಬಂದುವು? ಹೇಗೆ ಹೊಳೆದವು? ವೈಯಕ್ತಿಕವಾಗಿ ಆತ್ಮಸಂತೋಷ , ಲೋಕಹಿತಾರ್ಥಬುದ್ಧಿ ಇರಬಹುದು. ಯುಗಧರ್ಮ, ವಿಶ್ವಮಾನಸದ ಅಭೀಪ್ಸೆಗಳ ಸಂವಹನ ಮಾಧ್ಯಮವಾದ ಪ್ರತಿಭೆ ಇರಬಹುದು. ಕಾರಣವೇನೇ ಇರಲಿ ಈ ಅಧ್ಯಾಪಕರ ಆದರ್ಶ ಮಾದರಿ ಎಲ್ಲರಿಗೂ ಮೇಲ್ಪಂಕ್ತಿ.

ಈ ಹಿನ್ನೆಲೆಯಲ್ಲಿ ಮೂಡಿದ ವಯಸ್ಕ ಶಿಕ್ಷಣ ಸಮಿತಿಯ ಒಂದು ಸೊಗಸಾದ ಅಭಿವ್ಯಕ್ತಿ 'ಪುಸ್ತಕ ಪ್ರಪಂಚ', ಇನ್ನೊಂದು 'ಬೆಳಕು'. ಸರ್ವೋದಯ ಸಾಹಿತ್ಯ ಪ್ರವರ್ತಕರಾದ ಬಿಎಂಶ್ರೀ ಈ ಸಮಿತಿಯ ಪ್ರಥಮ ಅಧ್ಯಕ್ಷರು. ಸ್ಫೂರ್ತಿಯ ಸೆಲೆ! 'ಪುಸ್ತಕ ಪ್ರಪಂಚ'ಕ್ಕೆ ಜಿ.ಹನುಮಂತರಾಯರು ಪ್ರಥಮ ಸಂಪಾದಕರು. 'ಬೆಳಕು' ವಾರಪತ್ರಿಕೆಗೆ ಎಸ್.ವಿ.ಶ್ರೀನಿವಾಸರಾವ್ ಪ್ರಥಮ ಸಂಪಾದಕರು. ವಯಸ್ಕ ಶಿಕ್ಷಣದ ಒಟ್ಟು ಕಾರ್ಯಕ್ರಮವನ್ನು ಮುನ್ನಡೆಸಿದವರು, ಇದರ ಏರಿಳಿತಗಳಲ್ಲೂ ಉತ್ಸಾಹಗುಂದದೆ ದುಡಿದವರು, ಅಭಿನಂದನಾರ್ಹರು. ಆರಂಭದಲ್ಲಿ ಪಥನಿರ್ಮಾಪಕರಾದವರಲ್ಲಿ ನಾ.ಕಸ್ತೂರಿ, ಟಿ.ಕೃಷ್ಣಮೂರ್ತಿ ಅವರುಗಳೂ ಸೇರುತ್ತಾರೆ. ವಯಸ್ಕ ಶಿಕ್ಷಣ ಕಾರ್ಯಕ್ರಮದ ಬೆಳೆವಣಿಗೆಗೆ, ಮುಂದುವರಿಕೆಗೆ ಶ್ರಮಿಸಿದ ಮಹಾನೀಯರಲ್ಲಿ ನ.ಭದ್ರಯ್ಯನವರು, ಪ್ರೊ.ಈಗಲ್‌ಟನ್, ದೇವನೂರ ಶಿವಮಲ್ಲು, ಕೆ.ಶಿವರಾಮ (ಕಮಿಷನರ್), ನನ್ನ ನೆನಪಿಗೆ ಬರುತ್ತಾರೆ. ವಿಶೇಷವಾಗಿ ಪ್ರೊ.ಈಗಲ್‌ಟನ್, ಪ್ರೊ. ನಾ. ಕಸ್ತೂರಿಯವರ ಸೇವೆಯನ್ನು ಮೆಚ್ಚಬೇಕು. ಏಕೆಂದರೆ ಕನ್ನಡ ಮಾತೃ ಭಾಷೆಯಾಗಿರದಿದ್ದ ಇವರೀರ್ವರ ಕನ್ನಡ ಸಾಕ್ಷರತೆಗಾಗಿ ಆಸಕ್ತಿ ವಹಿಸಿ ದುಡಿದರು. ಈಗಲ್‌ಟನ್ ಅವರು ವಯಸ್ಕ ಶಿಕ್ಷಣ ಸಮಿತಿ ಆರಂಭವಾದಾಗ ಅದರ ಉಪಾಧ್ಯಕ್ಷರಾಗಿದ್ದರು. ನಿವೃತ್ತರಾಗಿ ಸ್ವದೇಶಕ್ಕೆ

ಹಿಂತಿರುಗಿದ ಮೇಲೂ, ಯೂನೆಸ್ಕೋದಲ್ಲಿ ಗಣ್ಯಸ್ಥಾನ ದಲ್ಲಿದ್ದಾಗ ಮೈಸೂರಿನ ಹಾಗೂ ಕನ್ನಡದ ಬಗ್ಗೆ ಅಭಿಮಾನ ಏರಿಸಿ ಇಲ್ಲಿನ ವಯಸ್ಕ ಶಿಕ್ಷಣ ಕಾರ್ಯಕ್ರಮಕ್ಕೆ ಪುಷ್ಟಿ ನೀಡುವಂತಹ ತರಬೇತಿ, ಸೆಮಿನಾರ್‌ಗಳಿಗೆ ಇಲ್ಲಿಂದ ಪ್ರತಿನಿಧಿಗಳನ್ನು ಆಹ್ವಾನಿಸಿ ಪ್ರೇರಣೆ- ಪ್ರೋತ್ಸಾಹ- ನೀಡಿದರು.

ನಾ.ಕಸ್ತೂರಿಯವರು ಕೇರಳದವರು. ಬನುಮಯ್ಯ ಕೊಲಿಜಿಯೇಟ್ ಹೈಸ್ಕೂಲಲ್ಲಿ ಅಧ್ಯಾಪಕರಾಗಿ ಮೈಸೂರಿಗೆ ಬಂದರು. ನಂತರ ಮಹಾರಾಜಾ ಕಾಲೇಜಿನಲ್ಲಿ ಇತಿಹಾಸದ ಉಪನ್ಯಾಸಕರಾಗಿ ಇಲ್ಲಿಯೆ ನೆಲೆಸಿದ ಮೇಲೆ ಜನರೊಂದಿಗೆ ಬೆರೆತು ಮೈಸೂರಿನವರೇ ಆದರು. ವಯಸ್ಕರ ಶಿಕ್ಷಣ ಸೌಲಭ್ಯ ಆಗತಾನೆ ಕಲ್ಪಿತವಾಗಿತ್ತು. ಅದರ ಪ್ರಥಮ ತಂಡದ ಒಬ್ಬ ಫಲಾನುಭವಿಯಾಗಿ ಕನ್ನಡ ಕಲಿತರು. ಅಷ್ಟರಲ್ಲೆ ತೃಪ್ತರಾಗದೆ ಪ್ರೊ. ಟಿ.ಎಸ್.ವೆಂಕಣ್ಣಯ್ಯನವರನ್ನು ಗುರುಗಳನ್ನಾಗಿ ಮಾಡಿಕೊಂಡು ಹಳಗನ್ನಡ- ನಡುಗನ್ನಡ ಕಾವ್ಯಕೃತಿಗಳನ್ನೆಲ್ಲ ಓದಿ ಅರಗಿಸಿಕೊಂಡು ಕನ್ನಡ ಭಾಷೆಯ ಮೇಲೆ ಅಸಾಧಾರಣ ಪ್ರಭುತ್ವವನ್ನು ಸಂಪಾದಿಸಿದರು. ಕನ್ನಡದಲ್ಲಿ ಶ್ರೇಷ್ಠವಾದ ಹಾಸ್ಯಕೃತಿಗಳನ್ನು ರಚಿಸಿ ಹಾಸ್ಯ ಒಂದು ಸ್ವತಂತ್ರವಾದ ಪ್ರಕಾರವಾಗಿ ಬೆಳೆಯುವಂತೆ ಮಾಡಿದರು. 'ವಯಸ್ಕ ಬೋಧೆ'(ಬಾಲಬೋಧೆ ಎಂಬಂತೆ) ಎಂಬ ಅಕ್ಷರ ಕಲಿಕೆಯ ಪ್ರಥಮ ಪುಸ್ತಕವನ್ನು ಸಿದ್ಧಪಡಿಸುವುದರಲ್ಲಿ ನೆರವಾದರು. ಇವರ ಮಿತ್ರರಾದ, ಗಣಿತದ ಉಪನ್ಯಾಸಕ, ಟಿ.ಕೃಷ್ಣಮೂರ್ತಿಯವರಿಗೆ ವಯಸ್ಕ ಶಿಕ್ಷಣ ಎಂದರೆ ಎಲ್ಲಿಲ್ಲದ ಅಕ್ಕರೆ. ಇಬ್ಬರೂ ಜೊತೆಗೂಡಿ ಚಾಮುಂಡಿಪುರಂ ಬಡಾವಣೆಯ ಮೇದರ ಕಾಲನಿ, ಕುಕ್ಕರಹಳ್ಳಿ, ಕೂರ್ಗಳ್ಳಿಗಳಲ್ಲಿ ಸಂಜೆ, ವಯಸ್ಕರನ್ನೆಲ್ಲ ಅಕ್ಷರ ಕಲಿಯಲು ಹುರಿದುಂಬಿಸಿ ತರಗತಿ ನಡೆಸುವರು. ಸ್ಥಳ ಮಾರಿಗುಡಿಯೊ ರಾಮಮಂದಿರವೊ! ಸ್ವಲ್ಪ ಹೊತ್ತು ಭಕ್ತಿರಸ ಭರಿತವಾದ ಭಜನೆ. ಹಾಡುತ್ತಿದ್ದವರು ಸ್ವಲೀಯರೇ. ಮೇಲ್ಜಾತಿ ಕೀಳ್ಜಾತಿ ಎಂಬ ಭೇದವಿರದೆ ಗುರುಗಳು ಶಿಷ್ಯರು ಎಲ್ಲರೂ ಸೋದರಭಾವದಿಂದ ಒಂದಾಗಿ ಹಾಡುವರು. ನಂತರ ಅಕ್ಷರ ಕಲಿಕೆ. ಅಕ್ಷರ ಬರೆಸುವುದರ ಜೊತೆಗೆ ಗುರುಗಳು ವರ್ತಮಾನ ಸುದ್ದಿಗಳನ್ನೂ, ಅನೇಕ ವಿಷಯಗಳನ್ನೂ ತಿಳಿಸುವರು. ದೇಶಭಕ್ತಿ, ಸಮತಾಭಾವ, ಸ್ವಚ್ಛತೆ, ಆರೋಗ್ಯಗಳ ಬಗ್ಗೆ ಅವರಲ್ಲಿ ಕಾಳಜಿ ಉದ್ದೀಪನವಾಗುವಂತೆ ಮಾಡುವರು. ಮೂಢನಂಬಿಕೆಗಳನ್ನು ಬಿಡಿಸುವರು. ಕಸ್ತೂರಿಯವರು ಜನಪದಕ್ಕೆ ಪ್ರಿಯವಾದ ಹರಿಕಥೆ ಮತ್ತು ನಾಟಕ ಮಾಧ್ಯಮಗಳನ್ನು ಬಳಸುತ್ತ ರಾಮಕೃಷ್ಣ- ವಿವೇಕಾನಂದರ ದಿವ್ಯಜೀವನ ಹಾಗೂ ತತ್ವಗಳನ್ನು ಸ್ವಾರಸ್ಯವಾಗಿ ಜನಮನಕ್ಕೆ ಮುಟ್ಟಿಸುವರು. ಹಾಗೆಯೆ ಆಧುನಿಕ ವಿಚಾರಗಳನ್ನು ಈ ಮಾಧ್ಯಮಗಳ ಮೂಲಕ ಬಿತ್ತರಿಸುವರು. ಗ್ರಾಮಸೇವಾ ಕಾರ್ಯ, ವಯಸ್ಕ ಶಿಕ್ಷಣ ಕಾರ್ಯ, ಸಾಕ್ಷರತಾ ಚಳುವಳಿ ಉತ್ತಮ ಪರಿಣಾಮ, ಫಲಗಳನ್ನು ಸಾಧಿಸಿದವು.

ಇಲ್ಲಿ ಗಮನಿಸಬೇಕಾದ ಮುಖ್ಯವಾದ ಅಂಶವೆಂದರೆ, ವಯಸ್ಕ ಶಿಕ್ಷಣದ (ಸಾಕ್ಷರತೆಯ) ನವಚಿಂತನ ಧಾರೆ ಕಾರ್ಯರೂಪಕ್ಕಿಳಿದಾಗ ಜನಸಾಮಾನ್ಯರಲ್ಲಿ ನಗರೇತರ ಪ್ರದೇಶಗಳಲ್ಲಿ ವಾಚನಾಭಿರುಚಿಯನ್ನು ಬೆಳೆಸುವ ವಾಚನಾಲಯ ಹಾಗೂ ಪುಸ್ತಕ ಭಂಡಾರಗಳನ್ನು ಸ್ಥಾಪಿಸುವ ಪ್ರಯತ್ನ, ಆರೋಗ್ಯತಪಾಸಣಾ ವೈದ್ಯಕೀಯ ಶಿಬಿರಗಳ ಪ್ರಯೋಗ, ಇತ್ಯಾದಿಗಳಾರಂಭವಾಗಿ ಸಮಗ್ರ ಗ್ರಾಮೀಣ ಅಭಿವೃದ್ಧಿಯ ಪರಿಕಲ್ಪನೆ ಮೂಡಿದ್ದು. ಹೀಗೆ ಅಂಕುರಿಸಿದ ಕಿರುಕಾರ್ಯ ಮುಂದೆ ಸಾಕ್ಷರತಾ ಆಂದೋಲನ ಜನಶಿಕ್ಷಣ ಕೇಂದ್ರ, ಎಲ್ಲರಿಗೂ ಆರೋಗ್ಯ-ಎಂಬ ಬೃಹತ್ ಪ್ರಮಾಣದ ಯೋಜನೆಗಳಾದವು ಎಂಬುದು!

ಸಮಿತಿ ನವಸಾಕ್ಷರರ ಪುಸ್ತಕ ಮಾಲೆಯಲ್ಲಿ ವಿವಿಧ ವಿಷಯಗಳನ್ನು ಕುರಿತು ನೂರಾರು ಪುಸ್ತಕಗಳನ್ನು ಬರೆಯಿಸಿ ಪ್ರಕಟಿಸಿರುವ ವಿಚಾರವನ್ನು ಈಗಾಗಲೆ ಪ್ರಸ್ತಾಪಿಸಿದ್ದೇನೆ. 'ಆಕಾಶ

ಲೋಕ', 'ನಮ್ಮ ಭೂಮಿ', ಝಾನ್ಸಿಲಕ್ಷ್ಮಿ ಬಾಯಿ', 'ಎಡಿಸನ್', 'ಬೆಳುಗೊಳದ ಗೊಮ್ಮಟೇಶ', 'ಜೇನುಸಾಕುವ ಬಗೆ', 'ಸೂರ್ಯ-ಚಂದ್ರ', 'ಬಸವಣ್ಣನವರ ಮಾತು', 'ತಿರುವಳ್ಳುವರ', 'ಜೀವಸಂತಾನ ಸಾಗಿದ ಬಗೆ',-ಈ ವೈವಿಧ್ಯದ ವ್ಯಾಪ್ತಿಯನ್ನು ಪರಿಭಾವಿಸ ಬೇಕು. ನಾ.ಕಸ್ತೂರಿ ಯವರು ಅಕ್ಷರ ಪ್ರಚಾರಕ್ಕೆ 'ಏಕಚಕ್ರ', ಮೂಢನಂಬಿಕೆಗಳನ್ನು ತೊಡೆದು ಹಾಕಲು 'ಮಂಕಾಸುರ ವಧೆ', ಆಷಾಢಭೂತಿ ಗಳನ್ನು ಬಯಲಿಗೆಳೆವ 'ಶಂಭು', ಅಸ್ಪೃಶ್ಯತಾ ನಿವಾರಣೆಗೆ 'ನಂದನಾರ್', 'ತಿರುಪ್ಪಾಣಾಳ್ವಾರ್' ಎಂಬ ನಾಟಕಗಳನ್ನು ಬರೆದು ಹೋದ ಕಡೆ ರಂಗದ ಮೇಲೆ ಆಡಿಸಿದರು. ಇವರ ನವರಾತ್ರಿಗೆ 'ಕೆಂಪ ಮೈಸೂರಿಗೆ ಹೋದದ್ದು' ಎಂಬ ಶಿಕ್ಷಣ ಸಮಿತಿ ಪರಿಹರಿಸಬೇಕಾದ ಎಲ್ಲ ಸಮಸ್ಯೆಗಳನ್ನೂ ಚಿತ್ರಿಸುವ ಕಿರುಹೊತ್ತಿಗೆ ಈ ಮಾಲಿಯಲ್ಲಿ ಉತ್ತಮ ಮಾರ್ಗಸೂಚಿಯಾಗಿದೆ. ಶಿವರಾಮಕಾರಂತರು, ಕುವೆಂಪು ಅವರು, ಎ.ಎನ್.ಮೂರ್ತಿರಾಯರು, ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರು ಈ ಪುಸ್ತಕ ಮಾಲೆಯನ್ನು ಬೆಂಬಲಿಸಿದರು. ಕಾರಂತರು ಬರೆದೂ ಕೊಟ್ಟಿದ್ದಾರೆ. ಈ ಪುಸ್ತಕಗಳು ಒಂದೊಂದೂ ೨೪ ಇಲ್ಲಾ ೩೨ ಪುಟಗಳಷ್ಟು ಮಾತ್ರ. ಬೆಲೆಯೂ ೧೯ ಪೈಸೆ ಮಾತ್ರ. ಒಂದೊಂದೂ ಉತ್ಕೃಷ್ಟವಾದ ಕೃತಿ.

ಎಂಥಾ ಹಿನ್ನೆಲೆಯಲ್ಲಿ ಎಂಥಾ ಉದಾತ್ತ-ಪ್ರಗತಿಶೀಲ ವಿಚಾರವಾಹಿನಿಗಳು ಕಾರ್ಯರೂಪತಾಳುತ್ತಿದ್ದ ಕಾಲದಲ್ಲಿ 'ಪುಸ್ತಕ ಪ್ರಪಂಚ' ಜನ್ಮತಾಳಿ ರೂಪುಗೊಂಡು ಬೆಳೆಯಿತು ಎಂಬುದನ್ನು ಗಮನಿಸಬೇಕು. ಅದಕ್ಕಾಗಿ ಇಷ್ಟೆಲ್ಲ ಬರೆಯ ಬೇಕಾಯಿತು.

ಪತ್ರಿಕೆ ಎಲ್ಲರ ಮನಸೆಳೆಯಿತು. ಈಗಿನ ಕಾಲದ ಮಾಸಿಕಗಳ ಆಕರ್ಷಕ ಹೊರರೂಪಿನ ಶ್ರೀಮಂತಿಕೆಗೆ ಹೋಲಿಸಲಾಗದು. ಮನಸೆಳೆದದ್ದು ಸತ್ವಪೂರ್ಣ ಲೇಖನಗಳಿಂದ. ಆರಂಭದಲ್ಲಿ ಕೆಲವು ವರ್ಷಕಂಡ ಉತ್ಕರ್ಷ ಹಾಗೇ ಉಳಿಯಲಿಲ್ಲ. ಬದುಕಿನಲ್ಲಿ ಏಳುಬೀಳುಗಳು ಸಹಜ., ಮೊದಲಿದ್ದ ಪ್ರಕಾಶ ಮಂಕಾಗುತ್ತ ನಂತರ ಎರಡು ವರ್ಷ ನಿಂತೇಹೋಗಿದ್ದ ಪತ್ರಿಕೆಗೆ ಕನ್ನಡಿಗರ ಭಾಗ್ಯವಶಾತ್ ಮತ್ತೆ ಜೀವದಾನ ನೀಡಲಾಯಿತು. ಪತ್ರಿಕೆ ಜೀವಂತವಾಯಿತು. ಹೊಸ ಲವಲವಿಕೆ ಮೂಡಿತು. ಇಷ್ಟೆಲ್ಲಕ್ಕೂ ಕಾರಣರಾದವರನ್ನು ಕೃತಜ್ಞತೆಯಿಂದ ನೆನೆಯ ಬೇಕು. ಈ ಮಾಸಿಕದ ವೈಶಿಷ್ಟ್ಯವನ್ನೂ ಆಗತ್ಯ ಹಾಗೂ ಉಪಯುಕ್ತತೆಗಳನ್ನೂ ಮನಗಂಡ ಮಹಾನೀಯರು ಇದರ ಉಳಿವಿಗೆ, ವಿಕಾಸಕ್ಕೆ ಹಂಬಲಿಸಿದರು. ಶ್ರಮಿಸಿ ದರು. ಶ್ರಮಿಸಿ ಕೃತಕೃತ್ಯರಾದರು

ನ.ಭದ್ರಯ್ಯನವರು ಯುನೆಸ್ಕೊ ಆಶಯದಂತೆ ತರಬೇತಿ, ಅಧ್ಯಯನ-ವಿಚಾರ ಸಂಕಿರಣಗಳಿಗೆಂದು ವಿದೇಶಗಳಿಗೆ ಹೋಗಿ ಬಂದ ಮೇಲೆ ವಯಸ್ಕ ಶಿಕ್ಷಣ ಕ್ಷೇತ್ರಕ್ಕೆ ಪುನಶ್ಚೇತನ ನೀಡಿದರು. ಕ್ಷೇತ್ರಕಾರ್ಯಗಳಲ್ಲಿ ಇನ್ನೂ ಹೆಚ್ಚು ಉತ್ಸಾಹದಿಂದ ಆಸ್ಥೆ ವಹಿಸಿದರು. ಹೊಸ ವಿಚಾರಗಳ ಬೆಳಕಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಿದರು. ಪುಸ್ತಕ ಪ್ರಪಂಚದ ಉಳಿವಿಗೆ ಬೆಳವಣಿಗೆಗೆ ವಿಶೇಷವಾಗಿ ಶ್ರಮಿಸಿದವರು. ಪ್ರೊ.ಡಾ.ದೇಜಗೌ ಅವರು. ಅದರ ಪ್ರಧಾನ ಸಂಪಾದಕರಾಗಿ ಮತ್ತು ಇವರ ಸಹಾಯಕರಾಗಿ ನಿಂತ ಆಲನಹಳ್ಳಿಕೃಷ್ಣ ಅವರು ಗೌರವ ಸಂಪಾದಕರಾಗಿ ಈ ಪತ್ರಿಕೆಯ ಮೂಲ ಧ್ಯೇಯ-ಧೋರಣೆಗಳಿಗೆ ನವಚೈತನ್ಯವನ್ನು ನೀಡಿ, ಗಾತ್ರ, ಆಕಾರ, ಆಕರ್ಷಕ ವಿನ್ಯಾಸ, ವೈವಿಧ್ಯ ಮಯ ಸ್ವತಂತ್ರಲೇಖನಗಳು, ಬೇರೆ ಭಾಷೆಯ ಅತ್ಯುತ್ತಮ ಲೇಖನಗಳ ಅನುವಾದಗಳು- ವಿಚಾರಗಳಲ್ಲಿ ಕೆಲವು ಬದಲಾವಣೆಗಳನ್ನು ತಂದರು. ಪ್ರೊ.ದೇಜಗೌ ಅವರಿಗೆ ಇದರೊಂದಿಗೆ ಬಹುಕಾಲದ ಬಾಂಧವ್ಯ. ಡಾ.ಹಾ.ಮಾ. ನಾಯಕ್, ಎಸ್.ರಜತಾದ್ರಿ, ಚಂದ್ರಶೇಖರ ಆರಾಧ್ಯ, ಜೋರಯ್ಯ ಇವರುಗಳು ಗಣನೀಯ ಸೇವೆ ಸಲ್ಲಿಸಿ ಸ್ಮರಣೀಯರಾಗಿದ್ದಾರೆ. ಕೂಡಲಿ ಚಿದಂಬರಂ, ಎಂ.ಆರ್. ಲಕ್ಷಮ್ಮ, ಎ.ಎನ್. ಮೂರ್ತಿರಾಯರು, ಟಿ.ಕೃಷ್ಣಮೂರ್ತಿ, ಗೊರೂರು ರಾಮಸ್ವಾಮಿ

ಅಯ್ಯಂಗಾರ್, ಎಂ. ರಾಮಾನುಜಾಚಾರ್, ಕೆ.ವಿ. ರಾಘವಾಚಾರ್, ಎಚ್. ದೇವೀರಪ್ಪ, ಎಸ್.ವಿ. ಪರಮೇಶ್ವರ ಭಟ್ಟ, ಎಚ್.ಎಂ. ಶಂಕರ ನಾರಾಯಣರಾವ್, ಟಿ. ಮಾದೇಗೌಡ, ಜಿ.ಟಿ. ನಾರಾಯಣರಾವ್, ಡಾ.ಸಿ.ಪಿ.ಕೆ. (ಕೃಷ್ಣ ಕುಮಾರ್) ಮುಂತಾದವರು ಸಂಪಾದಕ ಸಮಿತಿಯ ಸದಸ್ಯರಾಗಿ ಪತ್ರಿಕೆಯ ಉತ್ತಮ ಗುಣಮಟ್ಟವನ್ನು ಕಾಯ್ದುಕೊಂಡು ಬಂದರು.

ನನ್ನ ನೆನಪಿನ ಹಾಗೂ ತಿಳುವಳಿಕೆಯ ಮಿತಿಯಲ್ಲಿರುವ ಈ ಅವಲೋಕನದ ಅಂತರ್ಗದ ಆಶಯವನ್ನು ಮಾತ್ರ ಓದುಗರು ಗ್ರಹಿಸುವರೆಂದೂ, ಅಜ್ಞಾನದಿಂದಲೊ ಮರೆವಿನಿಂದಲೊ ಆಗಿರಬಹುದಾದ ಲೋಪಗಳನ್ನೂ, ಪ್ರಮಾದಗಳನ್ನೂ ಕ್ಷಮಿಸಿ ಔದಾರ್ಯವನ್ನು ತೋರುವರೆಂದು ಆಶಿಸುತ್ತೇನೆ.

''ಹೆಸರಾಂತವರಿಗಿಂತಲೂ ಹೆಸರ ದೌರ್ಬಲ್ಯವನು ದಾಟಿ
ನಿಂತಾ ಮಹಾತ್ಮರಿಹ ಕೋಟಿ ಕೋಟಿ!
ಎಲ್ಲರನು ನೆನೆದು ತಾ ವಂದಿಸುತ್ತವಕ್ಕೆ''

'ಪುಸ್ತಕ ಪ್ರಪಂಚ' ಹಳೆಯ ಮೈಸೂರು ಸಂಸ್ಥಾನದಲ್ಲಿ ಆರಂಭವಾಯಿತು ನಿಜ. ಆದರೆ ಈಗ ಅಖಿಲ ಕರ್ನಾಟಕ ಪತ್ರಿಕೆ. ಇದರ ಪ್ರಸಾರ ಸಂಖ್ಯೆ ಕೇವಲ ೩-೪ ಸಾವಿರ ಮಾತ್ರ, ಎಂಬುದನ್ನು ನೋಡಿದರೆ ಕನ್ನಡಿಗರು ನಾಚಿ ತಲೆತಗ್ಗಿಸ ಬೇಕು. ಉತ್ಕರ್ಷದ ಒಂದು ಕಾಲದಲ್ಲಿ ಸಹ ಇದರ ಪ್ರಸಾರ ಹತ್ತು ಸಾವಿರದಾಟಲಿಲ್ಲ. ಆಗ ಮುಕ್ಕೋಟಿ ಕನ್ನಡಿಗರಿದ್ದೂ ಹತ್ತು ಸಾವಿರವೇ ದೊಡ್ಡದಾಗಿ ಕಂಡಿತು ! ಎಂಥ ವಿಪರ್ಯಾಸ! ಇತ್ತೀಚಿನ ಜನಗಣತಿಯ ಪ್ರಕಾರ ಕನ್ನಡಿಗರ ಸಂಖ್ಯೆ ನಾಲ್ಕು ಕೋಟಿಗೂ ಮಿಕ್ಕಿದೆ. ಕನ್ನಡಿಗರು ಅಭಿಮಾನ ಶೂನ್ಯರು ಎಂಬ ಮಾತು ಸುಳ್ಳಾಗಿ ಅಥವಾ ಹಳೆಯ ಕತೆಯಾಗಿ ಕನ್ನಡಿಗರಲ್ಲಿ ಸ್ವಾಭಿಮಾನ ಮೂಡಲಿ, ಬೆಳೆಯಲಿ. ಆಚಾರ್ಯ ಬಿಎಂಶ್ರೀಯವರ

''ಸಿರಿಗನ್ನಡಂಗೆಲ್ಗೆ, ಕನ್ನಡ ತಾಯ್ ಬಾಳ್ಗೆ
ಕನ್ನಡಿಗರುಸಿರಾಗಿ ಕನ್ನಡಂ ಬಾಳ್ಗೆ''

ಎಂಬ ವಾಣಿ,

ರಸಋಷಿ, ಕವಿ, ದ್ರಷ್ಟಾರ ಕುವೆಂಪು ಅವರ-

''ಎಲ್ಲಿದ್ದರೆ ಏನ್? ಎಂತಿದ್ದರೆ ಏನ್
ಎಂದೆಂದಿಗು ತಾನ್-
ಕನ್ನಡವೇ ಸತ್ಯ!
ಕನ್ನಡವೇ ನಿತ್ಯ!''

ಎಂಬ ಹರಕೆ,

ಪ್ರತಿಯೊಬ್ಬ ಕನ್ನಡಿಗನ ಮಂತ್ರವಾಗಲಿ, ಪ್ರಾಣದುಸಿರಾಗಲಿ. 'ಪುಸ್ತಕ ಪ್ರಪಂಚ' , ರೂಪ-ಗುಣ-ಸತ್ವಗಳಲ್ಲಿ, ಪ್ರಸಾರ ಸಂಖ್ಯೆಯಲ್ಲಿ ಸಹ 'ರೀಡರ್ಸ್ ಡೈಜೆಸ್ಟ್'ನ್ನು ಮೀರಿಸಲಿ. 'ಕನ್ನಡ ಕಸ್ತೂರಿಯಲ್ತೆ' ಎಂಬ ನಾಣ್ನುಡಿ ಅನ್ವರ್ಥವಾಗಿ ಕನ್ನಡ ನುಡಿ, ಸಂಸ್ಕೃತಿಗಳ ಸೌರಭ ಎಲ್ಲೆಡೆ ಪಸರಿಸಲಿ.

ಮಹಾಪುರುಷರ ಜೀವನದ ಸಂದೇಶವೆಂದರೆ : ನಾವು ನಮ್ಮ ಜೀವನವನ್ನು ಉದಾತ್ತೀಕರಿಸಬಲ್ಲೆವು ಮತ್ತು ಕಾಲ ಎಂಬ ಮರಳ ರಾಶಿಯ ಮೇಲೆ ನಮ್ಮ ಹೆಜ್ಜೆಯ ಗುರುತನ್ನು ಬಿಟ್ಟು ಹೋಗಬಲ್ಲೆವು.

-ಲಾಂಗ್‌ಫೆಲೋ

'ಪುಸ್ತಕ ಪ್ರಪಂಚ' ಮತ್ತು ನಾನು

ಡಾ. ಸಿ. ಪಿ. ಕೃಷ್ಣಕುಮಾರ್
ನಿವೃತ್ತ ಪ್ರಾಧ್ಯಾಪಕರು
೩೩/೧೯, 'ಭಾರತಿ' ೬ನೇ ತಿರುವು,
ವಿನಾಯಕನಗರ, ಮೈಸೂರು-೫೭೦ ೦೧೨

'ಪುಸ್ತಕ ಪ್ರಪಂಚ' ಮತ್ತು 'ಪ್ರಬುದ್ಧ ಕರ್ಣಾಟಕ' - ಎರಡೂ ನನ್ನೆದೆಯಲ್ಲಿ ಅನೇಕ ನವಿನೆನಪುಗಳನ್ನು ಮೀಟುವ, ಅಷ್ಟೇಕೆ, ನನ್ನ ಭಾವಕೋಶದ ಒಂದು ಭಾಗವೇ ಆಗಿರುವ ಹೆಸರುಗಳು! ಒಂದು, ಜನತಾ ವಿಶ್ವವಿದ್ಯಾನಿಲಯ ಎನ್ನಬಹುದಾದ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಮಾಸಪತ್ರಿಕೆ; ಇನ್ನೊಂದು ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕ ಪತ್ರಿಕೆ. ಎರಡರಿಂದಲೂ ಸಾಹಿತ್ಯವಾಗಿ ಬೆಳೆದವನು ನಾನು.

'ಪುಸ್ತಕ ಪ್ರಪಂಚ' ದೊಡನೆ ನನ್ನ ಸಂಪರ್ಕ ಈಗ ಕ್ಷೀಣಿಸಿದ್ದರೂ, ನಮ್ಮಿಬ್ಬರ ಸಂಬಂಧ ಸುಮಾರು ಅರ್ಧಶತಮಾನದಷ್ಟು ಹಿಂದಿನದು! (ಎಂದರೆ, ಅದು ಹುಟ್ಟಿದ ಸ್ವಲ್ಪಕಾಲದಲ್ಲೇ ತೊಡಗಿದ್ದು). ಮೊದಲು ಓದುಗನಾಗಿ, ಆಮೇಲೆ ಲೇಖಕನಾಗಿ, ಕಡೆಗೆ ಸಂಪಾದಕ ಮಂಡಲಿಯ ಸದಸ್ಯನಾಗಿ ಮೂರು ನೆಲೆಗಳಲ್ಲಿ ನಾನು 'ಪುಸ್ತಕ ಪ್ರಪಂಚ'ದ ಬಳಗಕ್ಕೆ ಒಳಪಟ್ಟವನು.

೨೦ನೆಯ ಶತಮಾನದ ಐವತ್ತರ ದಶಕದ ಪೂರ್ವಾರ್ಧದಲ್ಲಿ, ನಾನು ಪ್ರೌಢಶಾಲಾ ವಿದ್ಯಾರ್ಥಿಯಾಗಿದ್ದಾಗ 'ಪುಸ್ತಕ ಪ್ರಪಂಚ'ದ ಪರಿಚಯ ನನಗಾಯಿತು. ನಮ್ಮ ಹಳ್ಳಿಯ ಪ್ರಾಥಮಿಕ ಶಾಲೆಯಲ್ಲಿ ಆಗ ವಯಸ್ಕರ ಶಿಕ್ಷಣ ಸಮಿತಿಯ ಪುಟ್ಟ ಪುಸ್ತಕ ಭಂಡಾರವೊಂದಿತ್ತು. ಅಲ್ಲಿಗೆ 'ಪುಸ್ತಕ ಪ್ರಪಂಚ' ಮತ್ತು 'ಬೆಳಕು' (ವಯಸ್ಕರ ಶಿಕ್ಷಣ ಸಮಿತಿಯ ವಾರಪತ್ರಿಕೆ) ಬರುತ್ತಿದ್ದವು. ಅವುಗಳಲ್ಲಿ 'ಪುಸ್ತಕ ಪ್ರಪಂಚ' ವಾಸ್ತವವಾಗಿಯೂ ನನ್ನ ಪಾಲಿಗೊಂದು ಬೆಳಕಿಂಡಿಯಾಯಿತು! ಅದು ಆಗ ಕ್ರೌನ್ ಆಕಾರದ ಅರವತ್ತನಾಲ್ಕು ಪುಟಗಳ ಪತ್ರಿಕೆ; ಮೈಸೂರಿನ ವೆಸ್ಲಿ ಮುದ್ರಣಾಲಯದಲ್ಲಿ ಮುದ್ದಾಗಿ ಅಚ್ಚಾಗುತ್ತಿತ್ತು. (ಈಗ ಆ ಮುದ್ರಣಾಲಯವಿಲ್ಲ. ಆದರೆ ಅದರ ನೆನಪು 'ಪುಸ್ತಕ ಪ್ರಪಂಚ' ಮಾಸುವಂಥದಲ್ಲ. 'ಪ್ರಬುದ್ಧ ಕರ್ಣಾಟಕ'ವೂ ಹಿಂದೆ ಅಲ್ಲಿಯೆ ಮುದ್ರಣಗೊಳ್ಳುತ್ತಿತ್ತು.) ಅದನ್ನು ಕೈಯಲ್ಲಿ ಹಿಡಿಯುವುದೆ ಒಂದು ಸಂತೋಷ!

ಆಗ ಮತ್ತು ಮುಂದೆಯೂ ಬಹಳ ಕಾಲ 'ಪುಸ್ತಕ ಪ್ರಪಂಚ'ದಲ್ಲಿ ಬಹುಪಾಲು ಅನುವಾದಿತ ಲೇಖನಗಳೆ ಪ್ರಕಟವಾಗುತ್ತಿದ್ದವು; ಸ್ವತಂತ್ರ ಲೇಖನಗಳು ಇಲ್ಲ ಎನ್ನುವಷ್ಟು ವಿರಳ. (ಶ್ರೀ ಅರವಿಂದರನ್ನು ಕುರಿತ ಕುವೆಂಪು ಅವರ ಲೇಖನವನ್ನು - ಈಗ 'ವಿಭೂತಿ ಪೂಜೆ'ಯಲ್ಲಿದೆ - ನಾನು ಮೊದಲು ಓದಿದ್ದು 'ಪುಸ್ತಕ ಪ್ರಪಂಚ'ದಲ್ಲಿ. ಓದಿದೆ ಅಷ್ಟೆ, ಅರ್ಥವಾದದ್ದೆಷ್ಟು ?) ಬಹುಮಟ್ಟಿಗೆ ಭಾಷಾಂತರಗೊಳ್ಳುತ್ತಿದ್ದವು 'ರೀಡರ್ಸ್ ಡೈಜೆಸ್ಟ್' ಪತ್ರಿಕೆಯ ಲೇಖನಗಳೇ. (ಆ ಮಾದರಿಯ ಪತ್ರಿಕೆಯಾಗಬೇಕೆಂದೇ ಮೂಲತಃ ಉದ್ದಿಷ್ಟವಾದದ್ದು, 'ಪುಸ್ತಕ ಪ್ರಪಂಚ') ಕಡೆಯಲ್ಲಿ 'ಪುಸ್ತಕ ವಿಮರ್ಶೆ' ಎಂಬ ವಿಭಾಗವೊಂದು ನಿಯತವಾಗಿ ಇದ್ದೇ ಇರುತ್ತಿತ್ತು. ಈಚೆಗೆ 'ಪುಸ್ತಕ ಪ್ರಪಂಚ'ದ ರೂಪ, ಸ್ವರೂಪ ಎರಡೂ ತಕ್ಕಮಟ್ಟಿಗೆ ಬದಲಾಗಿವೆ. ಈಗ ಅದರದು ಡೆಮಿ ಆಕಾರ; ಅನುವಾದಗಳಂತೆ ಸ್ವತಂತ್ರ ಲೇಖನಗಳೂ ಹೆಚ್ಚು ಅವಕಾಶಗಳಿಸಿಕೊಳ್ಳುತ್ತಿವೆ. ಪುಸ್ತಕ ಪರಿಚಯ, ವಿಮರ್ಶೆ ಇದ್ದೇ ಇವೆ.

ನನ್ನ ಬಾಲ್ಯದಲ್ಲಿ ಸಾಹಿತ್ಯಾಭಿರುಚಿಯನ್ನು ಮೂಡಿಸಿ, ನಾನೂ ಬರೆಯಬೇಕೆಂಬ 'ಚಪಲ'ವನ್ನು ಚೋದಿಸಿದ ಶಕ್ತಿಗಳಲ್ಲಿ 'ಪುಸ್ತಕ ಪ್ರಪಂಚ'ವೂ ಒಂದು. ಕುವೆಂಪು, ದೇಜಗೌ ಮುಂತಾದ ಖ್ಯಾತ ನಾಮ ಸಾಹಿತಿಗಳು ಸ್ವತಂತ್ರ, ಇಲ್ಲವೆ ಅನುವಾದಿತ ಲೇಖನಗಳು ಹಾಗೂ ಪುಸ್ತಕ ವಿಮರ್ಶೆಗಳು ನನ್ನ ಎಳೆಯ ಮನಸ್ಸಿನ ಮೇಲೆ ಪ್ರಭಾವ ಬೀರಿದುವು. ಮುಂದೆ

ನಾನು ಭಾಷಾಂತರದತ್ತ ಹೆಚ್ಚು-ಲಕ್ಷ್ಯ ಹರಿಸುವುದಕ್ಕೆ 'ಪುಸ್ತಕ ಪ್ರಪಂಚ'ದ ಲೇಖನಗಳೂ ಅಷ್ಟು ಹಿಂದೆಯೆ ನನ್ನಲ್ಲಿ ಸಾಹಿತ್ಯವಿಮರ್ಶೆಯ ಒಂದು ಸ್ಥೂಲಕಲ್ಪನೆಯುಂಟಾಗುವುದಕ್ಕೆ ಅದರ ಪುಸಕ್ತ ವಿಮರ್ಶೆ ವಿಭಾಗವೂ ಕಾರಣವಾಗಿರಬೇಕು.

ಇದು ಮೊದಲನೆಯ ಘಟ್ಟ. ನಾನು 'ಪುಸ್ತಕ ಪ್ರಪಂಚ'ದ ಲೇಖಕ ವರ್ಗಕ್ಕೆ ಸೇರುವಂತಾದುದು ಎರಡನೆಯ ಘಟ್ಟ. ನಾನು ೧೯೫೮ರಲ್ಲಿ ಬಿಎ (ಆನರ್ಸ್)ವಿದ್ಯಾರ್ಥಿಯಾಗಿ ಮೈಸೂರಿನ ಮಹಾರಾಜಾ ಕಾಲೇಜನ್ನು ಸೇರಿದೆ. ಅಲ್ಲಿ ಪ್ರಸಿದ್ಧ ಲೇಖಕ(ಈಗದಿವಂಗತ) ಜೀ.ಶಂ.ಪರಮಶಿವಯ್ಯನವರು ನನ್ನ ಸಹಪಾಠಿ ಹಾಗೂ ಸ್ನೇಹಿತರಾಗಿ ಸಿಕ್ಕಿದರು. ಹಿಂದಿನಿಂದಲೂ 'ಪುಸ್ತಕ ಪ್ರಪಂಚ'ಕ್ಕೆ ಬರೆಯುತ್ತಿದ್ದ ಅವರು ನನ್ನನ್ನು ಬರೆಯುವಂತೆ ಪ್ರೇರಿಸಿದರು. ಆ ವರ್ಷದ ಡಿಸೆಂಬರ್ ತಿಂಗಳ 'ಪುಸ್ತಕ ಪ್ರಪಂಚ'ದ ಸಂಚಿಕೆಯಲ್ಲಿ ನನ್ನ ಪ್ರಥಮ ಲೇಖನ ಪ್ರಕಟವಾಯಿತು. ಅದು ಸೆರೆಮನೆಯಲ್ಲಿ 'ಸಾಹಿತ್ಯ ಸೃಷ್ಟಿ'ಎಂಬ ಸ್ವತಂತ್ರ, ಸಾಧಾರ ಲೇಖನ. ಮುಂದೆ ಬಹುಕಾಲದವರೆಗೆ, ಹೆಚ್ಚು ಕಡಮೆ ಪ್ರತಿ ಸಂಚಿಕೆಯಲ್ಲೂ ನನ್ನ ಅನುವಾದಿತ ಲೇಖನವೊಂದು ಇದ್ದೇ ಇರುತ್ತಿತ್ತು;ಮೇಲಿಂದ ಮೇಲೆ ಪುಸ್ತಕ ವಿಮರ್ಶೆ ಕೂಡ. ('ರೀಡರ್ಸ್ ಡೈಜೆಸ್ಟ್' ಹಾಗೂ 'ಭವನ್ಸ್ ಜರ್ನಲ್' ಪತ್ರಿಕೆಗಳಿಂದ ನಾನು ಭಾಷಾಂತರಿಸುತ್ತಿದ್ದೆ. ಆ ದಿಶೆಯಲ್ಲಿ ನನಗೆ ಸಂಪಾದಕ ಮಂಡಲಿಯ ಸದಸ್ಯರಾಗಿದ್ದ ದೇಜಗೌ ಮತ್ತು ಎಸ್.ವಿ.ಪರಮೇಶ್ವರ ಭಟ್ಟರು ಕೊಟ್ಟ ಪ್ರೋತ್ಸಾಹ ಸ್ಮರಣಯೋಗ್ಯವಾದದ್ದು. ಪ್ರಧಾನ ಸಂಪಾದಕರಾಗಿದ್ದ ಜಿ.ಹನುಮಂತ ರಾಯರನ್ನೂ ಸಂಪಾದಕರಾಗಿದ್ದ ರಾ.ವೆಂ.ಶ್ರೀನಿವಾಸ ಮೂರ್ತಿ ಹಾಗೂ ಐ.ಶ್ರೀ.ಪ್ರಸಾದರನ್ನೂ ನಾನು ನೆನೆಯಬೇಕು.

ಮುಂದೆ, 'ಪುಸ್ತಕ ಪ್ರಪಂಚ'ದಲ್ಲಿ ಪ್ರಕಟವಾದ ನನ್ನ ಬರಹಗಳಲ್ಲಿ ಇಪ್ಪತ್ತೇಳನ್ನು ಆಯ್ದು 'ಸಂಕಲನ' ಎಂಬ ಪುಸ್ತಕವನ್ನು ನಾನು ರೂಪಿಸಿದೆ ಎಂಬುದೂ ಉಲ್ಲೇಖನೀಯ. ವಯಸ್ಕರ ಶಿಕ್ಷಣ ಸಮಿತಿಯಿಂದ ನನ್ನ ಎರಡು ಪುಸ್ತಿಕೆಗಳು ಪ್ರಕಟಗೊಂಡುದಕ್ಕೂ 'ಪುಸ್ತಕ ಪ್ರಪಂಚ'ವೆ ಪರೋಕ್ಷವಾಗಿ ಕಾರಣವೆನ್ನಬಹುದು.

ವಿದ್ಯಾರ್ಥಿದಶೆಯ ನನ್ನ ಆರ್ಥಿಕ ದುರವಸ್ಥೆಯಲ್ಲಿ 'ಪುಸ್ತಕ ಪ್ರಪಂಚ' ಒದಗಿಸಿದ ಅಷ್ಟಿಷ್ಟು ಆರ್ಥಿಕ ಸಹಾಯವೂ ಗಣ್ಯವಾದದ್ದು. ಆಗ ಗರಿಷ್ಟ ಸಂಭಾವನೆ ಒಂದು ಲೇಖನಕ್ಕೆ ಹತ್ತು ರೂಪಾಯಿ ; ಒಂದು ವಿಮರ್ಶೆಗೆ ಆರು ರೂ. ನಾಲ್ಕು ದಶಕಗಳ ಹಿಂದೆ ಅದೇನೂ ಸಣ್ಣ ಮೊತ್ತವಾಗಿರಲಿಲ್ಲ.(ಅಂತೂ ವಿದ್ಯಾಭ್ಯಾಸದ ಅವಧಿಯಲ್ಲೆ ನಾನು ಸಂಪಾದಿಸುವ ವ್ಯಕ್ತಿಯೂ ಆಗಿದ್ದೆ!)

ಈಚೆಗೆ , ಎಪ್ಪತ್ತರ ದಶಕದಲ್ಲಿ ನಾನು ಒಂದೋ ಎರಡೋ ಅವಧಿಗೆ 'ಪುಸ್ತಕ ಪ್ರಪಂಚ'ದ ಸಂಪಾದಕ ಮಂಡಲಿಯ ಸದಸ್ಯನೂ ಆದುದು, ಆ ಪತ್ರಿಕೆಯ ಮತ್ತು ನನ್ನ ಸಂಬಂಧದಲ್ಲಿ ಮೂರನೆಯ ಘಟ್ಟ. ಆದರೆ ಅದಕ್ಕೆ ಮುಂಚೆಯೆ ನಾನು 'ಪುಸ್ತಕ ಪ್ರಪಂಚ'ಕ್ಕೆ ಬರೆಯುವುದನ್ನು ನಿಲ್ಲಿಸಿದ್ದೆ. (ಬರೆದು ಬರೆದು ಸಾಕಾಗಿತ್ತು; ಜೊತೆಗೊಂದು ನಿರ್ದಿಷ್ಟ ಕಾರಣವೂ ಇತ್ತು.) ಆದರೆ ಶ್ರೀಕೃಷ್ಣ ಆಲನಹಳ್ಳಿಯವರು ಪ್ರಧಾನ ಸಂಪಾದಕರಾದ ಬಳಿಕ, ನನ್ನಿಂದ ಕೆಲವು ಲೇಖನಗಳನ್ನು ಅನುವಾದಗೊಳಿಸಿದರು. ಮುಂದೆಯೂ ಒಂದೆರಡು ವಿಶೇಷ ಸಂಚಿಕೆಗಳಲ್ಲಿ ನನ್ನ ಲೇಖನಗಳು- ಬೇಂದ್ರೆ, ಕಾರಂತರನ್ನು ಕುರಿತವು-ಪ್ರಕಟವಾದುವು. ಈಗಿನ ಸಂಭಾವನೆಗೂ ಹಿಂದೆ ಬರುತ್ತಿದ್ದ ಸಂಭಾವನೆಗೂ ಅಜಗಜಾಂತರ.

'ಪುಸ್ತಕ ಪ್ರಪಂಚ'ತನ್ನ ಚಿನ್ನದ ಹಬ್ಬವನ್ನು ಆಚರಿಸುತ್ತಿರುವ ಈ ಸುಸಂದರ್ಭದಲ್ಲಿ, ನಾನು ಅದರ ಲೇಖಕರಲ್ಲಿ ಒಬ್ಬ ಎಂದು ಹೇಳಿಕೊಳ್ಳುವುದು ನನಗೆ ಹೆಮ್ಮೆಯ ಸಂಗತಿ. ಪತ್ರಿಕೆಗೆ ನಾನು ಕೃತಜ್ಞ ಎಂಬುದನ್ನೂ ಹೇಳದಿದ್ದರೆ, ತಪ್ಪಾಗುತ್ತದೆ.

ಸಾರಸ್ವತ ಗಣಿ 'ಪುಸ್ತಕ ಪ್ರಪಂಚ'

ಡಾ.ಹೆಚ್.ಎ.ಪಾರ್ಶ್ವನಾಥ್
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ರೋಗಲಕ್ಷಣ ಶಾಸ್ತ್ರ
ಮೈಸೂರು ಮೆಡಿಕಲ್ ಕಾಲೇಜು
ಕೆ.ಆರ್.ಆಸ್ಪತ್ರೆ ಮೈಸೂರು

ಕನ್ನಡ ಪುಸ್ತಕಗಳ ಪ್ರಕಟಣೆ, ಪ್ರಸಾರ ಮತ್ತು ಅಕ್ಷರ ಜ್ಞಾನಾಭಿವೃದ್ಧಿಯಲ್ಲಿ 'ಪುಸ್ತಕ ಪ್ರಪಂಚ'ದ ಪಾತ್ರ ಬೃಹತ್ ಹಾಗೂ ಮೌಲಿಕಯುತವಾದುದು. ಹೆಸರಿಗೆ ತಕ್ಕಂತೆ ಅದರ ವಿಷಯ ವ್ಯಾಪ್ತಿ ಸೀಮಾತೀತ, ವೈವಿಧ್ಯಮಯ ಹಾಗೂ ಅಕ್ಷರಗಳಿಗೆ ನಿಲುಕದಂತಹುದು. ಐತಿಹಾಸಿಕ, ಜಾನಪದ, ಸಾಮಾಜಿಕ, ಧಾರ್ಮಿಕ, ವೈಜ್ಞಾನಿಕ ಸಂಗತಿ-ಕಥಾನಕಗಳಲ್ಲಿದೆ ವ್ಯಕ್ತಿಚಿತ್ರಣ, ಪರಿಚಯ, ಪ್ರವಾಸ ಕಥನ, ಅನುವಾದಗಳು, ಕಿರುನಾಟಕಗಳು, ಪುಸ್ತಕ ವಿಮರ್ಶೆ ಮತ್ತು ದೇಶವಿದೇಶಗಳ ಸುದ್ದಿಸಾರ ಯಾವತ್ತೂ ಸಾರ್ವಕಾಲಿಕ ಹಾಗೂ ಸಾರ್ವತ್ರಿಕ ದಾಖಲೆಗಳಂತಿದ್ದು ಅರ್ಥವಿಸ್ತಾರವನ್ನು ಹೊಂದಿವೆ. ಅದರ ಮೊದಲನೆಯ ಸಂಚಿಕೆಯಲಾಗಾಯ್ತು (ಆಗಸ್ಟ್ ೧೯೪೭) ಕನ್ನಡನಾಡು ನುಡಿಯ ಏಳ್ಗೆಗಾಗಿ ಇಟ್ಟ ದಿಟ್ಟ ಹೆಜ್ಜೆಗಳು, ಬೆಳೆದು ಬಂದ ಬಗೆ ಚೇತೋಹಾರಿ. ಘನತರ ಧ್ಯೇಯೋದ್ದೇಶಗಳನ್ನೊತ್ತು ನಿರ್ವಹಿಸುತ್ತಿರುವ ಪಾತ್ರವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಮನದುಂಬಿ, ಮೈಯುಬ್ಬಿದಂತಾಗುತ್ತದೆ. 'ಪುಸ್ತಕ ಪ್ರಪಂಚ'ದ ಹರವು ಸಂಕೀರ್ಣವಾದುದು. ಹೊರತು ಸಂಕುಚಿತವಾದುದಲ್ಲ. ಅಂತೆಯೇ ಇತರರನ್ನೂ ಬೆಳೆಸಿ ತಾನೂ ಬೆಳೆವಿದೆ. ವಾಮನನಂತೆ ಅದರಲ್ಲಿ ಬರೆಯಲು ಉಪಕ್ರಮಿಸಿ ತ್ರಿವಿಕ್ರಮನಂತೆ ಬೆಳೆದ ಬರಹಗಾರರ ಉದಾಹರಣೆಗಳಿವೆ. ಅಲ್ಲದೆ ತಮ್ಮ ಬರಹವನ್ನು ತಿದ್ದಿ ತೀಡಿಕೊಂಡ ಅನೇಕ ಲೇಖಕರಿದ್ದಾರೆ; ಅನಾಮಧೇಯರೆನಿಸಿಕೊಂಡವರು ನಾಮಧೇಯರಾಗಿದ್ದಾರೆ. ಲೇಖನಾಸಕ್ತಿ ಮತ್ತು ಶಕ್ತಿಯನ್ನುಳ್ಳ ಸುಪ್ತಚೇತನಗಳನ್ನು ಸೌಮ್ಯವಾಗಿಯೇ ಬಡಿದೆಬ್ಬಿಸಿದೆ. ಅದರಲ್ಲಿನ ಪ್ರಕಟನೆಗಳು ಲೇಖಕರಿಗೆ ಘನತೆ ತಂದಿವೆ. ಅದರ ಕಕ್ಷೆ-ನಕ್ಷೆಯಲ್ಲಿ ಮೂಡಿಬಂದ ಬರಹಗಾರರು ಮತ್ತು ಓದುಗರೆಲ್ಲರೂ ಒಡನಾಡಿಗರು ಮತ್ತು ಸ್ನೇಹಬಂಧಿಗಳು. ನನ್ನ ವೈದ್ಯಕೀಯ ವಿದ್ಯಾರ್ಥಿ ದೆಸೆಯಿಂದಲೇ ಅದರ ನಿರಂತರ ಅಭಿಮಾನಿ ಓದುಗನಾಗಿದ್ದೇನೆ. ಒಂದು ವಿಧದಲ್ಲಿ ಹೇಳುವುದಾದರೆ ನಾನು 'ಪುಸ್ತಕ ಪ್ರಪಂಚ'ದ ಮೂಲಕವೇ ಸಾಹಿತ್ಯಲೋಕವನ್ನು ಪ್ರವೇಶಿಸಿದೆನೆಂದರೆ ಅತಿಶಯೋಕ್ತಿಯಾಗಲಾರದು.

'ಪುಸ್ತಕ ಪ್ರಪಂಚ'ವು ವಯಸ್ಕರ ಶಿಕ್ಷಣವನ್ನು ಶುಷ್ಕವಾದುದೆಂದು ಪರಿಗಣಿಸದೆ ಕುಗ್ಗಿದ ಜನಮನಗಳ ಧಮನಿಗಳಿಗೆ ಜೀವ ತುಂಬಿದೆ. ಜನಮನದ ಅಂತಃಸ್ಥಕ್ಕೆ ಇಂಬ ನಿತ್ತು ಸಾಹಿತ್ಯ ಸಿಂಚನಗೈಯುತ್ತಿರುವ ಅದರ ಪ್ರಯತ್ನ ಸರ್ವಾದರಣೀಯ ಮತ್ತು ಅನುಕರಣೀಯ. ಅದರಲ್ಲಿಯೂ ವಿಜ್ಞಾನ ಸಂಬಂಧೀ ಮತ್ತು ವೈಚಾರಿಕ ವಿಷಯಗಳನ್ನು ಜನಸಾಮಾನ್ಯರಿಗೂ ಮನದಟ್ಟಾಗುವಂತೆ ತಿಳಿಸುವ ಪರಿ ಮೆಚ್ಚುಗೆಗಳಿಸಿದೆ. ಜನಸಮುದಾಯವನ್ನು ಕೇವಲ ವಿದ್ಯಾವಂತರನ್ನಾಗಿ ಸಲಿಕ್ಷಿಸದೆ ಬುದ್ಧಿವಂತರನ್ನಾಗಿಸಲೂ ಶ್ರಮಿಸಿದೆ. ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿ, ಸಾಕ್ಷರಸ್ಥರನ್ನು ಸುಶಿಕ್ಷಿತರನ್ನಾಗಿ ಮತ್ತು ಅಜ್ಞಾನಿಗಳನ್ನು ಸುಜ್ಞಾನಿಗಳನ್ನಾಗಿ ಮಾಡಿ ಕತ್ತಲೆಯಿಂದ ಬೆಳಕಿಗೆ ಕೊಂಡೊಯ್ಯುವ ದೀವಟಿಗೆಯಾಗಿದೆ, ಯಶಸ್ಸನ್ನು ಕಂಡಿದೆ. ಭಾರತೀಯ ಹಾಗೂ ಅಂತಾರಾಷ್ಟ್ರೀಯ ಭಾಷೆಗಳೊಂದಿಗಿನ ಸಹಯೋಗದಿಂದ ಸಾಹಿತ್ಯ ವಿನಿಮಯ ಮಾಡಿಕೊಂಡಿದೆ ಮಹಾಕವಿ ಕುವೆಂಪುರವರಿಂದ ಮೊದಲ್ಗೊಂಡು ನವೋದಯ, ನವ್ಯ, ಬಂಡಾಯ ಪ್ರಾಕಾರಗಳ

ಇತ್ತೀಚಿನ ನೂರಾರು ಬರಹಗಾರರು 'ಪುಸ್ತಕ ಪ್ರಪಂಚ'ದ ಜೀವನಾಡಿಯಾಗಿದ್ದಾರೆ. ಅದರಲ್ಲಿ ನಿರಂತರವಾಗಿ ಬೆಳಕು ಕಂಡ ಬರಹಗಳು ಪುಸ್ತಕರೂಪವನ್ನು ತಾಳಿ ಕನ್ನಡಿಗರ ಮಡಿಲನ್ನು ತುಂಬಿವೆ. ಈ ದಿಸೆಯಲ್ಲಿ ಡಾ.ದೇಜಗೌರವರ 'ಯುದ್ಧ ಮತ್ತು ಶಾಂತಿ' ಮತ್ತು 'ಸಂಪಾದಕೀಯ ಲೇಖನ', ಕುವೆಂಪುರವರ 'ಜನಪ್ರಿಯ ವಾಲ್ಮೀಕಿ ರಾಮಾಯಣ' ಜಿ.ಎಸ್. ಭಟ್‌ರವರ 'ಜಗತ್ತಿನ ನಾಗರಿಕತೆಗಳು' ಮತ್ತು ಪ್ರೊ.ಎ.ಎನ್.ಮೂರ್ತಿರಾವ್‌ರವರ 'ಸಂಜೆಗಣ್ಣಿನ ಹಿನ್ನೋಟ'ವನ್ನು ಹೆಸರಿಸಬಹುದು. ಅದರ ಹಳೆಯ ಸಂಚಿಕೆಗಳ ಪುಟಗಳನ್ನು ತಿರುವು ಹಾಕಿದಾಗ ಅಮೂಲ್ಯ ಹಾಗೂ ಸೋಜಿಗವೆನಿಸುವಂತಹ ಮಾಹಿತಿಗಳು ಗಣಿಯನ್ನು ಅಗೆದಷ್ಟೂ ದೊರಕುವ ಖನಿಜಗಳಂತೆ ಸಿಗುತ್ತವೆ. ಪ್ರಹಸನ ಪಿತಾಮಹ ಕೈಲಾಸಂ ಸಾಹಿತ್ಯ ಕುರಿತಂತೆ ಅ.ನ.ಕೃಷ್ಣರಾಯರು ಟಿ.ದಾ.ಗೋವಿಂದರಾವ್ ಮುಂತಾದವರ ನಲವತ್ತರ ದಶಕದ ಲೇಖನಗಳು ಮೈನವಿರೇಳಿಸುತ್ತವೆ. ಬೇಂದ್ರೆಯವರ ವಿವಾಹ(೧೯೧೯), ಪ್ರಾರಂಭಿಕ ಜೀವನ ಮತ್ತು ಗೋಕರ್ಣದ ಸಮುದ್ರತೀರದಲ್ಲಿ (೧೯೯೦-೯೨)ಕಳೆದ ಕ್ಷಣಗಳ ಅಪೂರ್ವ ಚಿತ್ರಗಳು ಬಹುಶಃ 'ಪುಸ್ತಕ ಪ್ರಪಂಚ'ದಲ್ಲಿ ಪಾತ್ರ ಲಭ್ಯ. 'ಅಡುಮುಟ್ಟದ ಸೊಪ್ಪಿಲ್ಲ ಪುಸ್ತಕ ಪ್ರಪಂಚದಲ್ಲಿಲ್ಲದ ಸಂಗತಿಯಿಲ್ಲ'ವೆಂದಾಗಿದೆ.

ಜ್ಞಾನದಾಹಿಗಳ ತೃಷೆಯನ್ನು ಇಂಗಿಸುತ್ತ ನಂದಿಹೋಗುತ್ತಿರುವ ಜೀವಜ್ಯೋತಿಗಳಿಗೆ ಎಣ್ಣೆಯನ್ನು ಉಯ್ದು ತ್ರಾಣವೆನ್ನಿತ್ತಿದೆ. ಅಕ್ಷರ ದೆಳವರ ಊರುಗೋಲಾಗಿದೆ; ಜ್ಞಾನ ಸಂಪತ್ತನ್ನು ಇಮ್ಮಡಿ, ಮುಮ್ಮಡಿ, ನಾಲ್ಮಡಿಗೊಳಿಸಿದೆ. ನಾಡಿನ ಚೇತನಗಳು ಪ್ರಶಸ್ತಿ-ಪುರಸ್ಕಾರದಂತಹ ಗೌರವಗಳಿಗೆ ಪಾತ್ರರಾಗಿ ಸನ್ಮಾನಿತರಾದಾಗ, ಕಣ್ಮರೆಯಾದಾಗ ಹಾಗೂ ನಾಡುನುಡಿಯ ಉಳಿವಿಗಾಗಿ ಚಳುವಳಿ-ಹೋರಾಟಗಳನ್ನು ಕೈಗೊಂಡಾಗ ನೆನಪಿನಾರ್ಥವಾಗಿ ವಿಶೇಷ ಸಂಚಿಕೆಗಳು ಮತ್ತು ಬರಹಗಳ ಮೂಲಕ ತನ್ನ ಕರ್ತವ್ಯವನ್ನು ನಿರ್ವಹಿಸಿದೆ. ವಿಶ್ವದೆದೆಯ ದೈನಂದಿನ ಆಗುಹೋಗುಗಳಿಗೆ ಸ್ಪಂದಿಸಿದೆ. ಸಾರಸ್ವತ ಲೋಕದ ಮಹನೀಯ ರಸೀಕರ ಸಿದ್ಧಿಸಾಧನೆಗಳನ್ನು ದಾಖಲಿಸಿದೆ. ಈ ದಿಸೆಯಲ್ಲಿ 'ಶ್ರೀ' ಸಂಚಿಕೆ, ಥಾಮಸ್ ಹಾರ್ಡಿ (ಆಗಸ್ಟ್ ೧೯೮೭), ದಾಸ್ತೋವಸ್ಕಿ (ಅಕ್ಟೋಬರ್ ೧೯೮೭), ಅಲ್ಬರ್ಟ್‌ಕಾಮೂ(ಮಾರ್ಚ್‌೧೯೮೮), ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಸ್ (ಏಪ್ರಿಲ್ ೧೯೮೮)ನ. ಭದ್ರಯ್ಯ(ಜುಲೈ ೧೯೮೮) ಡಾ. ದ. ರಾ. ಬೇಂದ್ರೆಯವರ ಶತಮಾನೋತ್ಸವದ ಅಂಗವಾಗಿ(೧೯೯೬), ಮಹಾಕವಿ ಕುವೆಂಪು (೧೯೯೪), ಡಾ. ದೇಜಗೌ(೧೯೯೯) ಮತ್ತು ಶತಾಯುಷಿ ಸಾಹಿತಿ ಪ್ರೊ.ಎ.ಎನ್. ಮೂರ್ತಿರಾಯರು (ಆಗಸ್ಟ್ ೨೦೦೦)ಹಾಗೂ ಪ್ರೇಮಚಂದ, ಟಾಲ್‌ಸ್ಟಾಯ್ ಮುಂತಾದವರ ಕುರಿತು ವಿಶೇಷ ಸಂಚಿಕೆಗಳು ಪ್ರಕಟಗೊಂಡಿವೆ.

'ಪುಸ್ತಕ ಪ್ರಪಂಚ'ದ ರಚನಾ ವಿನ್ಯಾಸದಲ್ಲಿ ಯಾವುದೇ ಆಡಂಬರವಿಲ್ಲದಿದ್ದರೂ ತನ್ನ ಆಕರ್ಷಣೆಯನ್ನು ಉಳಿಸಿಕೊಂಡಿದೆ. ಅದರ ಊರಣ ಮತ್ತು ತೋರಣ ಸರಳ ಮತ್ತು ವಿರಳ. ಬಹುತೇಕ ಲೇಖನಗಳ ಅಂತ್ಯದಲ್ಲಿ 'ಫಿಲರ್ಸ್' ಮತ್ತು ರೇಖಾಚಿತ್ರಗಳನ್ನು ಬಳಸಿ ಓದುಗರ ಜ್ಞಾನಚಕ್ಷುವನ್ನು ತೆರೆದಿಟ್ಟಿದೆ. ಇಲ್ಲಿ ಲೋಕೋಕ್ತಿ ಸೂಕ್ತಿಗಳು, ಸುಭಾಷಿತಗಳು, ಸೂಳ್ನುಡಿಗಳು, ನಾಣ್ನುಡಿಗಳು ಮತ್ತು ಗಾದೆ ಮಾತುಗಳು ಸಮಯೋಚಿತ ಹಾಗೂ ಸಮುಚಿತವಾಗಿ ಬಳಕೆಗೊಂಡಿವೆ. ಭಗವಾನ್ ಬುದ್ಧ, ಮಹಾವೀರ, ಸ್ವಾಮಿಚೈತನ್ಯ, ಕನ್‌ಫ್ಯೂಷಿಯಸ್, ಬಸವಣ್ಣ, ಮಹಾದೇವಿ ಯಕ್ಕ, ಚಾಣಕ್ಯ, ಶುಕ್ರಾಚಾರ್ಯ, ವಾಲ್ಮೀಕಿ, ಕಾಳಿದಾಸ

ಕಬೀರದಾಸ, ಅಶೋಕ ಸಾಮ್ರಾಟ್, ಸಾಕ್ರೆಟಿಸ್, ಪರಮಹಂಸ, ವಿವೇಕಾನಂದ, ಅರವಿಂದ, ಗಾಂಧೀಜಿ, ನೆಹರೂಜಿ, ನೇತಾಜಿ, ರಾಜಾಜಿ, ವಿನೋಬಾ, ಡಾ.ಎಸ್.ರಾಧಾ ಕೃಷ್ಣನ್, ಮಾಂಟಿಗ್ಯೊ ,ಡೇನ್ ವಾರ್ಟನ್, ವಾಲ್ಟ ವಿಟಮನ್,ಲಾಂಗ್ ಫೆಲೋ, ಸಿಸಿರೋ, ಬೇಕನ್, ರಿಚರ್ಡ್ ಗಾರ್ಟನ್, ಥಾಮಸ್ ಹುಡ್, ಹೆಮಾಕ್ ಹೆಲ್ಲಿಸ್, ಸೆರಸ್, ಆರ್.ಜಿ. ಇಂಗರ್‌ಸಾಲ್, ಪೆರವಾಂಜಸ್, ಬರ್ನಾರ್ಡ್ ಶಾ, ಕುಬರ್‌ಲ್ಯಾಂಡ್,ಪ್ರೋರ್ಡ್, ಕಾರ್ಲೈಲ್, ಹಿಲ್ತಿಫಿ ಫಿಷರ್, ವೇಯಿನ್‌ರೀಡ್, ಫೆಯೆಲೊ ಫ್ರೈಯರಿಸ್, ಜಾರ್ಜ್ ಹರ್ಬರ್ಟ್, ಎಮರ್ಸನ್, ಹಬಾಸ್, ವರ್ಡ್ಸ್‌ವರ್ತ್,ವಿಲಿಯಂ ಬ್ಲೈಕ್, ವಿಲಿಯಂ ಷೇಕ್ಸ್‌ಫಿಯರ್, ಅಲೆಕ್ಸಾಂಡರ್ ಪೋಪ್ ಮತ್ತು ಚಿ.ಪಿ.ರಿಚರ್ಡ್ ಮುಂತಾದ ದಾರ್ಶನಿಕರ ಆಯ್ದ ಉಲ್ಲೇಖಗಳು ಗಮನ ಸೆಳೆಯುತ್ತವೆ. ಮೃಗ, ಖಗ, ಪ್ರಕೃತಿಯ ಚಿತ್ರಗಳು ವಿರಾಜಿಸಿ ಮುದನೀಡುತ್ತವೆ. ಹಳ್ಳಿಗಳಿಂದ ಪಟ್ಟಣ ಪ್ರದೇಶಗಳಿಗೆ ಹರಿಯುವ ಜಾನಪದ ಸಿರಿಯಂತೆ ನಗರಗಳಿಂದ ಗ್ರಾಮೀಣ ಪ್ರದೇಶಗಳೆಡೆಗೆ ಆಧುನಿಕ ಸಾಹಿತ್ಯಿಕ, ಶೈಕ್ಷಣಿಕ ತಾಂತ್ರಿಕ ಜ್ಞಾನವು ಹರಿಯಲು ವಾಹಕದಂತೆ ನೆರವಾಗಿ ಕ್ಲಿಷ್ಟವಿಷಯಗಳೂ ಜನಸಾಮಾನ್ಯರಿಗೆ ಅರಿವಾಗುವಂತೆ ಪಾತ್ರನಿರ್ವಹಿಸುತ್ತಿರುವ ಹೆಗ್ಗಳಿಕೆಯನ್ನು ಹೊಂದಿದೆ. ಇದನ್ನು ಹುಟ್ಟು ಹಾಕಿ ಕಟ್ಟಿ ಬೆಳೆಸಿದ ಸಾಹಿತ್ಯ ಮತ್ತು ಶಿಕ್ಷಣ ದಿಗ್ಗಜರು ಅನೇಕರು. ಅಂತಹ ಹಿರಿಯರ ಸಾಲಿನಲ್ಲಿ ಜಿ.ಹನುಮಂತರಾಯರು, ಡಾ.ದೇಜಗೌ, ಎಸ್.ವಿ.ಶ್ರೀನಿವಾಸರಾವ್, ರಾ.ವೆಂ.ಶ್ರೀ, ಎಸ್.ರಜತಾದ್ರಿ, ಡಾ.ಹಾ.ಮಾ. ನಾಯಕ, ಟಿ.ಆರ್.ನಾಗಪ್ಪ, ರಾಮಚಂದ್ರ, ಚಂದ್ರಶೇಖರಾರಾಧ್ಯ, ರಾ.ಬೋರಯ್ಯ, ಸಿ.ರಂಗಾಚಾರ್, ಎಂ.ಆರ್.ಲಕ್ಷ್ಮಮ್ಮ, ಕೆ.ವೆಂ. ರಾಘವಾಚಾರ್, ಬಿ.ಕೃಷ್ಣಮೂರ್ತಿ, ಎಂ. ಯಮುನಾಚಾರ್, ಪಿ.ಜಿ. ಮುತ್ತಪ್ಪ, ಕೆ.ವೀರಭದ್ರಪ್ಪ , ಡಾ.ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪ್ರೊ.ಎಚ್ಚೆಸ್ಕೆ, ಐ.ಶ್ರೀ.ಪ್ರಸಾದ್, ಜಿ.ಟಿ.ನಾರಾಯಣರಾವ್, ಕೆ.ಶಿವರಾಮ್, ಡಾ.ಜೀ.ಶಂ.ಪ.,ಡಾ.ಸಿ.ಪಿ.ಕೆ., ಡಾ.ಹಾ.ತಿ. ಕೃಷ್ಣೇಗೌಡ, ಶ್ರೀಕೃಷ್ಣಆಲನಹಳ್ಳಿ, ಡಾ.ಪ್ರಧಾನ್ ಗುರುದತ್ತ, ಡಾ.ಪ್ರಭುಶಂಕರ, ಕೆ.ಶಿವರಾಮ ಐತಾಳ್ ಮತ್ತು ಮಲೆಯೂರು ಗುರುಸ್ವಾಮಿ ಮುಂತಾದ ಅಸಂಖ್ಯಾತ ವಿದ್ವಾಂಸರು ಥಳಾಗಿ ಕಂಡುಬರುತ್ತಾರೆ.ನನ್ನ ಮತ್ತು 'ಪುಸ್ತಕ ಪ್ರಪಂಚ'ದ ಸಂಬಂಧ ಓದುಗನಾಗಿ ಸುದೀರ್ಘವಾದುದಾದರೂ ಅದರ ಬರಹಗಾರನಾಗಿ ಅಲ್ಪಕಾಲದ್ದಾಗಿದೆ.ನನ್ನೆರಡು ಪುಸ್ತಕಗಳು ('ರಂಗಸಂಗ' ೧೯೯೬, 'ವ್ಯಕ್ತಿಶಕ್ತಿ' ೧೯೯೯) ಪರಿಚಯಹಾಗೂ ಪ್ರೊ.ಎ.ಎನ್. ಮೂರ್ತಿ ರಾಯರ ನಾಟಕಗಳು ಲೇಖನವು 'ಪುಸ್ತಕ ಪ್ರಪಂಚ'ದಲ್ಲಿ ಪ್ರಕಟಗೊಂಡಿರುವುದು ಅಭಿಮಾನ ಮತ್ತು ಹೆಮ್ಮೆಯನ್ನು ತಂದಿದೆ. ಅದರೊಡನೆಯ ಒಡನಾಟ ಹಲವಾರು ಸನ್ಮಿತ್ರರನ್ನು ತಂದುಕೊಟ್ಟಿದೆ. ಹಿರಿಯರಾದ ಪ್ರೊ.ದೇಜಗೌರವರ ಆಶೀರ್ವಾದ ಮತ್ತು ವಾತ್ಸಲ್ಯಮಯ ಸ್ನೇಹ ಸೌಭಾಗ್ಯವನ್ನು ಒದಗಿಸಿದೆ. ಅವರು ಮೈದಡವಿ ಪ್ರೋತ್ಸಾಹದ ನುಡಿಗಳನ್ನಾಡಿ ಉತ್ಸಾಹ ತುಂಬಿದ್ದಾರೆ.

ಪಂಡಿತಪಾಮರರೆಲ್ಲರ ಪ್ರೀತಿಯ ಸಂಗಾತಿಯಾಗಿ 'ಪುಸ್ತಕ ಪ್ರಪಂಚ'ವು ಕೇವಲ ಮಾಸಿಕ ಪತ್ರಿಕೆಯಾಗದೆ ಜನಮಾನಸದಲ್ಲಿ ಮಾಸದ ಪತ್ರಿಕೆಯಾಗುಳಿದಿದೆ.

ಲೇಖಕನಾಗಿ, ಓದುಗನಾಗಿ ಪುಸ್ತಕ ಪ್ರಪಂಚ ಕುರಿತಂತೆ

ಮಾಧವರಾವ್ ಮುಧೋಳ್
೧೬೯೧,೧೭ನೇ ಮುಖ್ಯ ಬೀದಿ,
ಜೆ.ಪಿ.ನಗರ,೨ನೇ ಹಂತ
ಬೆಂಗಳೂರು-೫೬೦ ೦೭೮

ಪ್ರಪಂಚವನ್ನೇ ತನ್ನಲ್ಲಡಗಿಸಿಕೊಂಡು, ''ಪುಸ್ತಕ ಪ್ರಪಂಚ'' ಪ್ರೈತಳೆದುದು ೧೯೪೯ರ ಆಗಸ್ಟ್ ತಿಂಗಳಲ್ಲಿ. ಆಗಿನ್ನು ಅದು ಪುಟ್ಟಮಗು, ಬಳ್ಳಿ. ಅದರ ಗಾತ್ರ, ವಿನ್ಯಾಸ ಕ್ರೌನ್ ಅಷ್ಟದಳ ೬೪ ಪುಟಗಳದ್ದು. ಅದರ ಸುಂದರ ಅಚ್ಚೇ ಹೇಳು ತ್ತಿತ್ತು. ಅದು ವೆಸ್ಲಿ ಪ್ರೆಸ್ಸಿನಲ್ಲಿ ಪ್ರಿಂಟಾಗು ತ್ತಿತ್ತೆಂದು 'ಜೀವನ' ಕೊರವಂಜಿಯಂತೆ.. ಅದು ಎಲ್ಲರ ಮನಸ್ಸನ್ನೂ ಗೆದ್ದಿತು. ಆದರೆ ಅವುಗಳಂತೆ ಅಲ್ಪಾಯುಷಿಯಾಗಲಿಲ್ಲ. ಓದುಗರಿಗೆ ಜ್ಞಾನದ ಬೆಳಕು ಬೀರಿ, ಬರಹ ಗಾರರನ್ನು ಪ್ರೋತ್ಸಾಹಿಸಿ; ಸಂಪಾದಕಿ ಸದಸ್ಯರ ಸಾಹಿತ್ಯಾಭಿರುಚಿಯನ್ನು ವೃದ್ಧಿಸಿ; ಪ್ರಧಾನ ಸಂಪಾದಕರನ್ನೂ ಇನ್ನೂ ಎತ್ತರದ ಲೇಖಕರನ್ನಾಗಿ ಮಾಡಿ, ಅವರೆಲ್ಲ ರನ್ನೂ ಸಾಹಿತ್ಯದ ದಿಗ್ಗಜಗಳನ್ನಾಗಿ ಮಾಡು ವಲ್ಲಿ, ''ಪುಸ್ತಕ ಪ್ರಪಂಚ'' ಏಣಿಯಾಗಿ ಪರಿಣಮಿ ಸಿತು. ಗ್ರಾಮಸ್ಥರಿಗೆ, ಗ್ರಾಮೀಣ ಪುಸ್ತಕ ಭಂಡಾರಗಳ ಅಧಿಕಾರಿಗಳಿಗೆ ಪ್ರಯೋಜನ ವಾಗಲೆಂದೂ ಸಾರ್ವಜನಿಕರ, ವಿದ್ಯಾವಂತರ ವಿವೇಕವನ್ನು ಜಾಗ್ರತಗೊಳಿಸುವಲ್ಲಿ ನೆರವಾಗ ಲೆಂದೂ, ತನ್ನ ಮೂಲ ಉದ್ದೇಶ ಇಟ್ಟುಕೊಂಡು, ''ಪುಸ್ತಕ ಪ್ರಪಂಚ'' ಪ್ರಾರಂಭವಾಯಿತು. ಕಾಲಕಳೆದಂತೆಲ್ಲಾ ಕನ್ನಡದ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸಲು, ಅದು ತನ್ನ ಮೂಲ ಧ್ಯೇಯೋದ್ದೇಶಗಳನ್ನು ವಿಸ್ತರಿಸಿ, ಅದಕ್ಕೆ ಪೂರಕವಾಗುವ ಹಾಗೆ ತನ್ನ ಕಾರ್ಯಯೋಜನೆ ಯನ್ನು ರೂಪಿಸಿಕೊಂಡಿತು. ಅದಕ್ಕನುಗುಣವಾಗಿ ಕನ್ನಡೇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ, ಲೇಖನಗಳ ಬಗ್ಗೆ ಪ್ರಕಟಿಸಿ, ಅವುಗಳ ಪರಿಚಯ ಮಾಡಿಕೊಡುವುದು, ಆಯಾ ತಿಂಗಳಲ್ಲಿ ಪ್ರಕಟವಾದ ಕನ್ನಡ ಪುಸ್ತಕಗಳ ಮತ್ತು ಲೇಖನ ಗಳ ಬಗ್ಗೆ ಪ್ರಕಟಿಸಿ ಪ್ರಚಾರಮಾಡುವುದು. ಪುಸ್ತಕ ಭಂಡಾರ ವ್ಯವಸ್ಥೆಯ ಬಗ್ಗೆ ಲೇಖನಗಳನ್ನು ಪ್ರಕಟಿಸುವುದು.

ಒಬ್ಬ ಲೇಖಕನ ಎಲ್ಲ ಪುಸ್ತಕಗಳ ಬಗ್ಗೆ ವಿಮರ್ಶಾತ್ಮಕ ಲೇಖನ ಪ್ರಕಟಿಸಿ, ಪರಿಚಯಿಸು ವುದು. ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಕಥೆಗಳು, ಕವಿತೆಗಳು, ಪ್ರಬಂಧಗಳು ಮತ್ತು ವ್ಯಕ್ತಿಚಿತ್ರಗಳನ್ನು ಪ್ರಕಟಿಸುವುದು. ಮೋಹಕ ಕಲಾ ಚಿತ್ರಗಳನ್ನು ಅಚ್ಚುಮಾಡುವುದು. ಕನ್ನಡದಲ್ಲಿ ಪ್ರಕಟವಾದ ಅತಿಮುಖ್ಯ ಲೇಖನದ ಸಾರಾಂಶವನ್ನು ಪ್ರಕಟಿಸುವುದು. ಗ್ರಾಮಸ್ಥರಿಗೆ ರುಚಿಸುವ ವಿಷಯಗಳ ಮೇಲೆ ಸುಲಭ ಶೈಲಿಯಲ್ಲಿ ಲೇಖನಗಳನ್ನು ಪ್ರಕಟಿಸುವುದು ಮೊದಲಾದವು ಗಳನ್ನು ಹಮ್ಮಿಕೊಂಡಿತು.

ಈ ಯೋಜಿತ ಕಾರ್ಯಬಾಹುಲ್ಯವನ್ನು ನಡೆಸಿಕೊಂಡು ಹೋಗಲು ಸಮರ್ಥ ಪ್ರಧಾನ ಸಂಪಾದಕರೇ ಬೇಕಾಗಿದ್ದರು. ಇದಕ್ಕಾಗಿ ಶ್ರೀ ಜಿ.ಹನುಮಂತರಾಯರು, ಡಾ. ಹಾ.ಮಾ. ನಾಯಕರು ಮತ್ತು ಡಾ.ದೇ.ಜ.ಗೌಡರಂಥ ನುರಿತ ಅದ್ವಿತೀಯ ಲೇಖಕರೇ ಪ್ರಧಾನ ಸಂಪಾದಕರಾಗಿ ದೊರೆತು, ''ಪುಸ್ತಕ ಪ್ರಪಂಚ'' ದ ಕೀರ್ತಿ ಮುಗಿಲೆತ್ತರಕ್ಕೆ ಮುಟ್ಟಿತು.

''ಪುಸ್ತಕ ಪ್ರಪಂಚ''ಕ್ಕೆ ಬಂದ ವಿವಿಧ ಲೇಖನಗಳನ್ನು ವಿಷಯಾನುಸಾರ ಆಯ್ದು, ವಿಶ್ಲೇಷಿಸಿ, ಮೂಲ ಲೇಖಕರಿಗೆ ಅಪಚಾರ ವಾಗದಂತೆ ಅವುಗಳನ್ನು ಸರಿಪಡಿಸಿ, ಪ್ರಕಟನೆಗೆ ಅನುಗೊಳಿಸಿ ಕೊಡುವಲ್ಲಿ, ಸಂಪಾದಕೀಯ ಸದಸ್ಯರಾದವರೂ ಹೆಸರಾಂತ ಸಾಹಿತಿಗಳು, ಬಹುಭಾಷಾವಿಶಾರದರು,, ಚಿಂತಕರು ಆಗಿದ್ದ ಸರ್ವಶ್ರೀಗಳಾದ: ಎಸ್.ವಿ.ಶ್ರೀನಿವಾಸ್‌ರಾವ್,

ಸಿ.ರಂಗಾಚಾರ್, ಎ.ಎನ್.ಮೂರ್ತಿರಾವ್, ಎಂ.ಆರ್.ಲಕ್ಷ್ಮಮ್ಮ, ನ.ಭದ್ರಯ್ಯ, ಕ.ವೆಂ. ರಾಘವಾಚಾರ್, ಟಿ. ಕೃಷ್ಣಮೂರ್ತಿ, ಎಂ. ಯಮುನಾಚಾರ್ಯ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪಿ.ಜಿ.ಮುತ್ತಪ್ಪ, ಕೆ.ವೀರಬದ್ರಪ್ಪ, ಡಾ.ಪ್ರಭುಶಂಕರ, ರಾ.ವೆಂ. ಶ್ರೀನಿವಾಸಮೂರ್ತಿ, ಕೆ.ಶಿವರಾಮ ಐತಾಳ್, ಡಾ.ಜಿ.ಶಂ.ಪರಮಶಿವಯ್ಯ, ಐ.ಶ್ರೀಪ್ರಸಾದ್, ಡಾ.ಸಿ.ಪಿ.ಕೆ, ಪ್ರೊ.ಎಚ್ಚೆಸ್ಕೆ, ಮಲೆಯೂರು ಗುರುಸ್ವಾಮಿ, ಪರಮಶಿವ ನಡುಬೆಟ್ಟ, ಜಿ.ಟಿ. ನಾರಾಯಣರಾವ್, ಕೆ.ಶಿವರಾಮ್, ಆರ್. ಶಾಂತರಾಜ್ ಮುಂತಾದವರು 'ಪುಸ್ತಕ ಪ್ರಪಂಚ'ಕ್ಕೆ ದೊರೆತರು. ಅವರ ಸೇವೆಯನ್ನು ನಾವು ಕೃತಜ್ಞತಾಭಾವದಿಂದ ಸ್ಮರಿಸ ಬೇಕಾಗುವುದು.

ಕಾಲಕಾಲಕ್ಕೆ ಹೊಸ ಬೆಳಕನ್ನೀವ ಹೊಸ ಸಂಶೋಧನೆಗಳನ್ನು ಮಾಡುವ, ಸಂಸ್ಕೃತಿ, ನಾಗರಿಕ ಪ್ರಜ್ಞೆಯನ್ನು ಬೆಳೆಸುವ ವ್ಯಕ್ತಿಗಳ ಬಗ್ಗೆ ಕನ್ನಡದ ಕೀರ್ತಿಯನ್ನು ಎತ್ತಿ ಬೆಳಗಿದವರ ಬಗ್ಗೆ ವಯಸ್ಕರ ಶಿಕ್ಷಣಕ್ಕಾಗಿ ಹಗಲಿರುಳು ದುಡಿದವರ ಬಗ್ಗೆ ಚರಿತ್ರಾರ್ಹ ಪ್ರದೇಶಗಳ ಬಗ್ಗೆ ಸಂಪಾದಕಿ-ಸದಸ್ಯ ಮಂಡಳಿಯ ಲಕ್ಷವನ್ನು ಸೆಳೆದು, ಲೇಖನವನ್ನು ಪ್ರಕಟಿಸುವ ಸಂಪಾದಕರೂ, 'ಪುಸ್ತಕ ಪ್ರಪಂಚ'ಕ್ಕೆ ನೆರವಾದರು. ಅಂಥ ಸಂಪಾದಕರೂ ಈ ಪತ್ರಿಕೆಗೆ ದೊರೆತರು. ಅವರು ತಮ್ಮ ಅಮೋಘ ಸೇವೆಯನ್ನು 'ಪುಸ್ತಕ ಪ್ರಪಂಚ'ಕ್ಕೆ ಸಲ್ಲಿಸಿದರು. ಇದು ನಮ್ಮ ಸುಕೃತ.

ಸಂಪಾದಕರಿಗೆ ನಯಬೇಕು. ಸೌಜನ್ಯ ಬೇಕು. ಮಾತಿನ ಚತುರತೆಬೇಕು. ಸಂಮಂಜಸ ಸಲಹೆಗಳು ಬಂದಾಗ ಅವುಗಳನ್ನು ವಿವೇಚಿಸುವ ಶಕ್ತಿಬೇಕು. ಸರ್ಕಾರದ ನಿಯಮಗಳಿಗೂ ಸಾಮಾಜಿಕ ನಿತ್ಯ ವ್ಯವಹಾರಗಳಿಗೂ ಸ್ಪಂಧಿಸಿ, ಅವುಗಳಿಗೆ ಅಡ್ಡಿ ಆತಂಕ ಬಾರದಂತೆ- ಲೇಖನಗಳನ್ನು ಪರಿಷ್ಕರಿಸಿ, ಸಂಪಾದಕಿ ಸದಸ್ಯರ ಅವಗಾಹನೆಗೆ ತಂದು, ಪ್ರಕಟಿಸುವ ಚಾಕಚಕ್ಯತೆ ಬೇಕು. ಈ ಎಲ್ಲ ಹೊಣೆಗಾರಿಕೆಗಳನ್ನು ಹೊತ್ತು ಪತ್ರಿಕೆಗಳನ್ನು ನಡೆಸಿಕೊಂಡು ಹೋಗುವುದು, ಸೂಜಿಯ ಮೇಲೆ ಸಾಮುತೆಗೆದಂತೆ. ಇಂತಹ ಜವಾಬ್ದಾರಿಗಳನ್ನೂ ಸಿರ್ವಹಿಸಿಕೊಂಡು, 'ಪುಸ್ತಕ ಪ್ರಪಂಚ'ವನ್ನು ಸುಗಮವಾಗಿ ನಡೆಸಿಕೊಂಡು ಹೋದ ಸಂಪಾದಕರುಗಳಲ್ಲಿ ನಾವು ಸರ್ವಶ್ರೀಗಳಾದ: ಎಸ್.ವಿ.ಶ್ರೀನಿವಾಸರಾವ್, ಎಸ್.ವಿ. ಕುಮಾರ್, ಎಸ್.ರಜತಾದ್ರಿ, ಟಿ.ಆರ್.ನಾಗಪ್ಪ, ರಾ.ಬೋರಯ್ಯ, ಚಂದ್ರಶೇಖರಾರಾಧ್ಯರಂಥವರನ್ನು ಸದಾ ನೆನೆಯಬೇಕು.

ಪತ್ರಿಕೆಯ ಜೀವಾಳ ಆದರಲ್ಲಿ ಪ್ರಕಟವಾಗುವ ಲೇಖನಗಳು. ಇದಕ್ಕೆ ಹೆಸರಾಂತ, ನುರಿತ, ಅನುಭವಿಗಳಾದ ಲೇಖಕರ ಕೊಡುಗೆಗಳು ಅತ್ಯಾವಶ್ಯಕ. ಇಂಥ ಲೇಖಕರು ಪತ್ರಿಕೆಗೆ ಸಿಕ್ಕುವುದು ಅದರ ಪುಣ್ಯದ ಫಲ. ಸುದೈವದಿಂದ ಸರ್ವಶ್ರೀ ಗಳಾದ: ಕುವೆಂಪು, ದೇಜಗೌ, ತೀನಂಶ್ರೀ, ಕೆ.ಆರ್.ಲಿಂಗಪ್ಪ, ಎ.ಎನ್. ಮೂರ್ತಿರಾವ್, ಕೆ.ಎಸ್.ನರಸಿಂಹಸ್ವಾಮಿ, ಗೋಪಾಲ ಕೃಷ್ಣ ಅಡಿಗ, ಹಾ.ಮಾ.ನಾಯಕ್, ಸಿ.ಪಿ.ಕೆ, ಎಂ.ವಸಂತ ಕುಮಾರ್, ತಿಪ್ಪೇಸ್ವಾಮಿ ಇತ್ಯಾದಿ ಸುಮಾರು ೨೦೦ ಹಿರಿಯ, ಕಿರಿಯ ಲೇಖಕರು ತಮ್ಮ ಲೇಖನಗಳಿಂದ 'ಪುಸ್ತಕ ಪ್ರಪಂಚ'ದ ಲತೆಗೆ ನೀರೆರೆದು, ಪೋಷಿಸಿ, ಬೆಳೆಸಿ ದೊಡ್ಡ ವೃಕ್ಷವನ್ನಾಗಿ ಮಾಡಿದರು. ಈಗಲೂ ಸರ್ವಶ್ರೀಗಳಾದ ದೇಜಗೌ, ಜಿ.ಟಿ.ನಾರಾಯಣ ರಾವ್, ಪ್ರಧಾನಗುರುದತ್ತ, ನಾಗಾಲೋಟಿ ಮಠ, ಪರಿಣೀತ ಲತಾರಾಜಶೇಖರ್, ಪದ್ಮಾ ಶೇಖರ್, ಲಕ್ಷ್ಮೀನಾರಾಯಣ ಅರೋರಾ, ತಿಪ್ಪೇಸ್ವಾಮಿ ಡಿ.ವಿ.ಶಾಮಣ್ಣ, ಎಂ.ಎಸ್. ಗೋಪಾಲನ್, ಎನ್.ಕೆ.ಕುಲಕರ್ಣಿ, ಸೀತಾರಾಮ ಜಾಗೀರದಾರ್, ಗೋಪಾಲ್ ಆಶ್ರಿತ ಮೊದಲಾದವರು ತಮ್ಮ ಬೆಲೆ ಬಾಳುವ ಸಮಯವನ್ನು 'ಪುಸ್ತಕ ಪ್ರಪಂಚ'ಕ್ಕೆ ಲೇಖನ ಬರೆದು ಕಳುಹಿಸುವಲ್ಲಿ ಸದುಪಯೋಗಪಡಿಸಿಕೊಳ್ಳುತ್ತಿದ್ದಾರೆ. ತಮ್ಮ ಅನುಭವದ ಧಾರೆಯನ್ನು

‘ಪುಸ್ತಕ ಪ್ರಪಂಚ’ಕ್ಕೆ ಎರೆದು ಓದುಗರನ್ನು ತಣಿಸುತ್ತಿದ್ದಾರೆ.

ಪತ್ರಿಕೆ, ಬರಿಯ ಲೇಖನಗಳೊಂದನ್ನೇ ಒಳಗೊಂಡಿದ್ದರೆ ಸಾಲದು. ಅದಕ್ಕೆ ತಕ್ಕ ಹಾಗೆ ಜನಗಳನ್ನು ಆಕರ್ಷಿಸುವ ಕಲಾವಿನ್ಯಾಸವೂ ಬೇಕು. ಪ್ರಕೃತಿಯ ಚೆಲುವನ್ನು ಭಾವನೆಯ ಏರಿಳಿತವನ್ನು ಚಿತ್ರೀಕರಿಸಿ, ಓದುಗರೆದುರು ಇಡುವ ಕಲಾವಿದರ ಸೇವೆ ಇದಕ್ಕೆ ಬೇಕು. ಈ ದೆಶೆಯಲ್ಲೂ ‘ಪುಸ್ತಕ ಪ್ರಪಂಚ’ ಸುದೈವಿ. ಸರ್ವಶ್ರೀಗಳಾದ. ಎಂ.ಇ.ಗುರು, ಸೂಫಿ, ಪಿ.ಆರ್. ತಿಪ್ಪೇಸ್ವಾಮಿ, ಗೋವಿಂದಪ್ಪ ಮೊದಲಾದ ಉನ್ನತ ಕಲಾವಿದರು ತಮ್ಮ ಕಲೆಯ ಚತುರತೆಯ ಸಾಧನೆಯನ್ನೇ ಈ ಪತ್ರಿಕೆಗೆ ಬಳಸಿ; ಅದರ ಬೇಡಿಕೆಗಳನ್ನು ಈಡೇರಿಸಿ ಅದರ ಅಂದವನ್ನು ಹೆಚ್ಚಿಸಿದರು.

ಒಳ್ಳೆಯ ಲೇಖನಗಳ, ಕಲಾನೈಪುಣ್ಯದ ಜೊತೆಗೆ ತನ್ನ ಇನ್ನೂ ಹೆಚ್ಚಿನ ಯಶಕ್ಕೆ ಪತ್ರಿಕೆ ಬೇರೆ ಜಾಡುಗಳನ್ನು ಹುಡುಕಿಕೊಂಡಿತು. ವಿವಿಧ ಭಾಷೆಗಳಲ್ಲಿ ಪ್ರಕಟವಾಗುವ ಉತ್ತಮ ಕಥೆಗಳನ್ನು, ಚಿಂತನೆಗಳನ್ನು, ಲೇಖನಗಳನ್ನು, ಆಯ್ದುಕೊಂಡು, ಅವಕ್ಕೆ ಅಚ್ಚಕನ್ನಡದ ಉಡುಪು ತೊಡಿಸಿ, ಸಾರ್ವಜನಿಕರಿಗೆ ತೋರಿಸಿತು. ಈ ದಿಕ್ಕಿನಲ್ಲಿ ಅದು ‘ನವನೀತ’, ರೀಡರ್ಸ್‌ಡೈಜೆಸ್ಟ್’ ‘ಭವಾನ್ಸ್ ಜರ್ನಲ್’ ‘ಬೀಸ್ವೀಸದಿ’ ಮೊದಲಾದ ಉಪಯುಕ್ತ ಪತ್ರಿಕೆಗಳಲ್ಲಿ ಪ್ರಕಟವಾದ ಉತ್ತಮ ಇಂಗ್ಲೀಷ್ ಉರ್ದು ಲೇಖನಗಳನ್ನು, ಕಥೆಗಳನ್ನು ಎತ್ತಿಕೊಂಡು ಅನುವಾದಿಸಿ ಅವುಗಳನ್ನೇ ತನ್ನ ಆಭರಣಗಳನ್ನಾಗಿ ಮಾಡಿಕೊಂಡು ಮೆರೆಯಿತು. ಮೂಲ ಭಾಷೆಯ ಲೇಖಕರಿಗೆ ಕೃತಜ್ಞತೆಯನ್ನು ತೋರುವುದನ್ನೂ ಮರೆಯಲಿಲ್ಲ. ಹೀಗಾಗಿ ‘ಪುಸ್ತಕ ಪ್ರಪಂಚ’ದ ವ್ಯಾಪ್ತಿ ಹೆಚ್ಚಿ, ಓದುಗರ ಸಂಖ್ಯೆ ದಿನೇ ದಿನೇ ಬೆಳೆಯಿತು.

ಬಹು ಚೆನ್ನಾಗಿರುವ ಕನ್ನಡದ ಕೃತಿಗಳನ್ನು ಸೋದರ ಪತ್ರಿಕೆಗಳಾದ ‘ಪ್ರಬುದ್ಧ ಕರ್ನಾಟಕ’ ,‘ಜೀವನ’,‘ಕಸ್ತೂರಿ’ ‘ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಗಳಂತಹ, ’ಪತ್ರಿಕೆಗಳಿಂದ, ಯಥಾವತ್ತಾಗಿ ಎತ್ತಿಕೊಂಡು ಕನ್ನಡ ಜನತೆಗೆ ಕೊಡುವಲ್ಲೂ ‘ಪುಸ್ತಕ ಪ್ರಪಂಚ’ ಹಿಂದಾಗಲಿಲ್ಲ. ಬೇರೆ ಪತ್ರಿಕೆಗಳಿಂದ ತೆಗೆದುಕೊಳ್ಳಬಾರದೆಂಬ ಸಂಕೋಚಕ್ಕೆ ಒಳಗಾಗಲಿಲ್ಲ.

ಧಾರಾವಾಹಿಯಂತೆ ಪ್ರಕಟವಾದ ಸದಾ ವ್ಯಾಸಂಗಕ್ಕಾಗಿ ಇಟ್ಟುಕೊಳ್ಳುವಂಥ ಉತ್ತಮ ಕೃತಿ ರತ್ನಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಿ, ಬರಿಯ ಎಳೆಯರಿಗೇ ಅಲ್ಲದೆ, ತರುಣರಿಗೂ ಹಿರಿಯರಿಗೂ, ಮೊದಲು ಅನಕ್ಷರಸ್ಥರಿದ್ದು ವಯಸ್ಸಾದ ಮೇಲೆ ಶಿಕ್ಷಣ ಪಡೆದುಕೊಂಡು ಓದುವಂಥವರಿಗೂ ದಾರಿ ದೀಪಗಳಾಗುವಂತೆ ಮಾಡಿ, ‘ಪುಸ್ತಕ ಪ್ರಪಂಚ’ ಪ್ರಸಿದ್ಧವಾಯಿತು. ಶ್ರೀ ಕುವೆಂಪುರವರ ‘ಜನಪ್ರಿಯ ವಾಲ್ಮೀಕಿ ರಾಮಾಯಣ’, ಎ.ಎನ್.ಮೂರ್ತಿರಾವ್ ಅವರ ‘ಶ್ರೀ ಸಾಮಾನ್ಯನ ನಂಜಿಗಣ್ಣನ ಹಿನ್ನೋಟ’, ಶ್ರೀ ದೇಜಗೌರವರ ‘ಯುದ್ಧ ಮತ್ತು ಶಾಂತಿ’ ಮೊದಲಾದ ಅಚ್ಚುಮೆಚ್ಚಿನ ಪುಸ್ತಕಗಳು, ‘ಪುಸ್ತಕ ಪ್ರಪಂಚ’ ಕೊಡುಗೆಗಳಾದವು. ಜನಪ್ರಿಯವಾದವು.

ಕುವೆಂಪು, ಶಿವರಾಮ ಕಾರಂತ, ದ.ರಾ. ಬೇಂದ್ರೆಯವರಂಥ ಮಹಾನ್ ವ್ಯಕ್ತಿಗಳ ಬಗ್ಗೆ ವಿವಿಧ ವಿದ್ವಾಂಸರುಗಳಿಂದ ಲೇಖನಗಳನ್ನು ತರಿಸಿಕೊಂಡು, ವಿಶೇಷ ಸಂಚಿಕೆಗಳನ್ನು ವಿಶೇಷ ಸಂಚಿಕೆಗಳನ್ನು ಪ್ರಕಟಿಸಿ, ಕಾಲೇಜಿನ, ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೂ ಡಾಕ್ಟರೇಟ್ ಮಾಡಿಕೊಳ್ಳುವವರಿಗೂ ನೆರವಾಗುವಂತೆ ಮಾಡಿ, ‘ಪುಸ್ತಕ ಪ್ರಪಂಚ’ ಕೀರ್ತಿಗಳಿಸಿ ಕೊಂಡಿತು.

ಉತ್ಕೃಷ್ಟ ಕಥೆಗಳು. ಚಿಂತನಾಶೀಲ ಲೇಖನಗಳು, ಒಳ್ಳೆಯ ಬರಹಗಾರರ ಹದವರಿತ ನಿರೂಪಣಾ ಶೈಲಿಯ ಬರಹಗಳಿಂದ ಪುಷ್ಟಿಗೊಂಡ, ‘ಪುಸ್ತಕ ಪ್ರಪಂಚ’ದತ್ತ ವಿವಿಧ ಪ್ರಕಾಶಕರ ಚಿತ್ತ ಹರಿಯಿತು. ಅವರು ತಮ್ಮ ಸಂಸ್ಥೆಯಲ್ಲಿ ಪ್ರಕಟವಾದ ಪುಸ್ತಕಗಳನ್ನು ವಿಮರ್ಶೆಗಾಗಿ, ‘ಪುಸ್ತಕ ಪ್ರಪಂಚ’ಕ್ಕೆ ಕಳುಹಿಸುವುದಕ್ಕೆ ಪ್ರಾರಂಭಿಸಿದರು.

ಹೀಗಾಗಿ ಪತ್ರಿಕೆಯ ಹೊಣೆ ಇನ್ನೂ ಹೆಚ್ಚಿತು. ಪತ್ರಿಕೆಗೆ ಬಂದಿರುವ ಪುಸ್ತಕಗಳ ನಿಷ್ಪಕ್ಷಪಾತ ವಿಮರ್ಶೆಯಿಂದ 'ಪುಸ್ತಕ ಪ್ರಪಂಚ'ದ ಕೀರ್ತಿ ಹಬ್ಬಿತು. ಇದರಿಂದಾಗಿ 'ಶಾರದಾ ಮಂದಿರ', 'ಉಷಾ ಸಾಹಿತ್ಯ ಮಾಲೆ', 'ಕಾವ್ಯಾಲಯ', 'ತ.ವೆಂ.ಸ್ಮಾರಕ ಗ್ರಂಥಮಾಲೆ', 'ಡಿ.ವಿ.ಕೆ. ಮೂರ್ತಿ ಪ್ರಕಾಶನ', 'ನವಕರ್ನಾಟಕ ಪ್ರಕಾಶನ', 'ನ್ಯಾಷನಲ್ ಬುಕ್ ಟ್ರಸ್ಟ್', ಮೊದಲಾದ ವಿವಿಧ ಪ್ರಕಾಶಕರು, ತಮ್ಮಲ್ಲಿ ಪ್ರಕಟವಾದ ಗ್ರಂಥಗಳನ್ನು 'ಪುಸ್ತಕ ಪ್ರಪಂಚ'ಕ್ಕೆ ವಿಮರ್ಶೆಗೆ ಕಳುಹಿಸತೊಡಗಿದರು. ವಿಮರ್ಶೆಯ ಕೆಲಸವೂ ಪತ್ರಿಕೆಯಲ್ಲಿ ತಡೆಯಿಲ್ಲದೆ ನಡೆಯಿತು.

ಕಿರಿಯರಿದ್ದಾಗ ಕಾರಣಾಂತರದಿಂದ ಶಿಕ್ಷಣದಿಂದ ವಂಚಿತರಾಗಿ ಆಮೇಲೆ ಶಿಕ್ಷಣದ ಆಗತ್ಯತೆಯನ್ನು ಅರಿತು, ಶಿಕ್ಷಣ ಪಡೆಯುವುದಕ್ಕೆ ಆಸಕ್ತಿವಹಿಸಿ ಮುಂದೆ ಬಂದವರಿಗೆ, ಸುಲಭವಾಗಿ ಓದಲು ಸರಳ ಶೈಲಿಯಲ್ಲಿ ಬರೆದ ಉಪಯುಕ್ತ ಲೇಖನಗಳ ಪ್ರಕಟನೆಗಾಗಿ, 'ಪುಸ್ತಕ ಪ್ರಪಂಚ' ಸೋದರ ಪತ್ರಿಕೆ 'ಬೆಳಕು' ಹೊರತಂದಿತು.

ಈ ರೀತಿ ಸರ್ವತೋಮುಖವಾಗಿ ಬೆಳೆದು, ಜನಪ್ರಿಯವಾದ 'ಪುಸ್ತಕ ಪ್ರಪಂಚ' ಈಗ ತನ್ನ ಗಾತ್ರವನ್ನು ಹೆಚ್ಚಿಸಿಕೊಂಡು ೧/೮ ಡೆಮ್ಮಿ ೮೦ ಪುಟಗಳದ್ದಾಯಿತು.

'ಪುಸ್ತಕ ಪ್ರಪಂಚ'ದ ಇನ್ನೊಂದು ವಿಶೇಷತೆಯೆಂದರೆ, ಅದು, ಅದರಲ್ಲಿ ಬರೆಯುವ ಲೇಖಕರ ಹೆಸರು, ಸಂಪೂರ್ಣ ವಿಳಾಸವನ್ನು ಕೊಡುವುದು. ಅನುವಾದಿತ ಲೇಖನಗಳಿದ್ದರೆ ಅವುಗಳ ಮೂಲ ಲೇಖಕರ ಹೆಸರುಗಳನ್ನೂ ಪ್ರಕಟಿಸುವುದು. ವರ್ಷಕ್ಕೊಂದು ಸಲ, ಆ ವರ್ಷದಲ್ಲಿ ಪ್ರಕಟವಾದ ಲೇಖನದ ಹೆಸರುಗಳನ್ನು ಸಂಬಂಧಪಟ್ಟ ಲೇಖಕರ ಹೆಸರಿನ ಅಡಿಯಲ್ಲಿ ಕೊಟ್ಟು, ಸಂಚಿಕೆಯ ಸಂಖ್ಯೆ ಮತ್ತು ದಿನಾಂಕಗಳನ್ನು ಹಾಗೂ ಲೇಖಕರ ಸಂಪೂರ್ಣ ಅಂಚೆವಿಳಾಸವನ್ನೂ ಪ್ರಕಟಿಸುವುದು. ಇದರ ಪ್ರಯೋಜನ ಬಹಳಷ್ಟಾಗುವುದು.

'ಪುಸ್ತಕ ಪ್ರಪಂಚ'ವನ್ನು ನಾನು ಓದಿ, ನನಗೆ ಕೆಲವು ಲೇಖನಗಳು ಹಿಡಿಸಿದಾಗ ಅವುಗಳ ಬಗ್ಗೆ ಅವುಗಳನ್ನು ಬರೆದವರಿಗೆ ನನ್ನ ಅನಿಸಿಕೆಯನ್ನು ತಿಳಿಸಬೇಕೆಂಬ ಲವಲವಿಕೆ ಬೆಳೆಯಿತು. ಪ್ರಾಯಶಃ ನಾನು ಬರೆದ ಲೇಖನದ ವಿಷಯಕ್ಕೆ ಅವರೂ ತಮ್ಮ ಅಭಿಪ್ರಾಯವನ್ನು ಕೊಟ್ಟು, ಪ್ರೋತ್ಸಾಹಿಸಬೇಕೆಂಬ ಬಯಕೆ ನನಗರಿಯದಂತೆ ನನ್ನ ಮನಸ್ಸಿನಲ್ಲಿದ್ದಿರಬೇಕು. ವಿಳಾಸ ಹೇಗೂ ಪತ್ರಿಕೆಯಲ್ಲಿತ್ತು. ಕಾಗದ ಬರೆದೆ. ಅನೇಕರು ಉತ್ತರಿಸಿದರು. ಓದಿ ನನಗೆ ಅಚ್ಚರಿ-ಸಂತಸ. ಅವರ ವೃತ್ತಿ ವೈದ್ಯಕಿ ಪ್ರವೃತ್ತಿ ಸಾಹಿತ್ಯಕ್ಕೆ ಮೀಸಲು, ಕೆಲವರು ವೃತ್ತಿ ಕೃಷಿ, ಪ್ರವೃತ್ತಿ ಹಸನಾದ ಸಾಹಿತ್ಯಾಭಿರುಚಿ. ಅವನ್ನು ಅರಿತು ಅವರ ಬಗ್ಗೆ ನನ್ನ ಗೌರವ ಹೆಚ್ಚಿತು. ಇನ್ನೂ ಕೆಲವರು ತಮ್ಮ ಬಗ್ಗೆಯೇ ಹೆಚ್ಚಿಗೆ ಹೇಳಿಕೊಂಡು ತಾವು ಬರೆದ ಲೇಖನಗಳನ್ನೇ ಆ ಸಂಚಿಕೆಯಲ್ಲಿ, ನೋಡಿ, ಈ ಸಂಚಿಕೆಯಲ್ಲಿ ಓದಿ ಎಂದು ಬರೆದಿದ್ದರು. ನನ್ನ ಬಗ್ಗೆಯಾಗಲೀ ನನ್ನ ಲೇಖನದ ಬಗ್ಗೆಯಾಗಲೀ ಏನೂ ವಿಚಾರಿಸಿರಲಿಲ್ಲ, ಇದರಿಂದಾಗಿ ನನ್ನ ಒಳಮನಸ್ಸಿಗೆ ಕಿಂಚಿತ್ ಖೇದವಾಗಿರಬೇಕು. ಇನ್ನೂ ಕೆಲವರು, ಶ್ರೀ ಜಿ.ಟಿ.ನಾರಾಯಣ ರಾಯರು ನನ್ನನ್ನು ಪ್ರೋತ್ಸಾಹಿಸಿ, ಬರೆಯಲು ಹುಮ್ಮಸ್ಸು ತಂದು ಕೊಟ್ಟಿದ್ದಾರೆ. ''ನೀವೂ ಅವರನ್ನು ಕಾಣಿರಿ,'' ಎಂದು ಬರೆದಿದ್ದರು. ಆಗ ನನಗೊಂದು ಬಗೆಯ ಖುಷಿಯಾಯಿತು. ಏಕೆಂದರೆ, ನನ್ನ ಮನದ ವಾಕ್ಯವನ್ನೇ ಅವರೂ ಕದ್ದು, ನನಗೇ ಬರೆದಂತಾಗಿತ್ತು.

ಸುಮಾರು ೬೦ರ ದಶಕದಲ್ಲಿ ಶ್ರೀಮತಿ ಮಸ್ರೂರ್ ಜಂಹಾರೆಂಬ ಸುಪ್ರಸಿದ್ಧ ಲೇಖಕಿಯರ ಉರ್ದು ಕಥೆಯೊಂದನ್ನು ಅನುವಾದಿಸಿ ಪುಸ್ತಕ ಪ್ರಪಂಚದಲ್ಲಿ ಪ್ರಕಟನೆಗಾಗಿ ಕೊಡಲು ಶ್ರೀ ಜಿ.ಟಿ.ಎನ್ ರವರನ್ನು ಕಾಣಲು, ಮಾನಸ ಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಗೆ ಹೋದೆ. ಆಗ ಅವರು ಯಾವುದೋ ಕೆಲಸದ

ಮೇಲೆ ಹುಬ್ಬಳ್ಳಿಗೆ ಹೊರಟು ನಿಂತಿದ್ದರು. ತುಂಬಾ ಅವಸರದಲ್ಲಿದ್ದರು. ನಾನು ಅನುಮಾನದಿಂದಲೇ ಕಥೆಯನ್ನು ಕೊಡಲು ಕೈಚಾಚಿದೆ. 'ಕೊಡಿ' ಎಂದು ಸಂತೋಷದಿಂದ ತೆಗೆದುಕೊಂಡರು. ಅವರು ಹುಬ್ಬಳ್ಳಿಯಿಂದ ತಿರುಗಿ ಬರುವ ದಾರಿಯನ್ನೇ ಕಾಯುತ್ತಿದ್ದೆ. ನಾಲ್ಕಾರು ದಿವಸದ ನಂತರ ಅವರನ್ನು ಕಂಡಾಗ, 'ಚೆನ್ನಾಗಿ ಬರೆದಿದ್ದೀರಿ. ಹಿಂದು ಮುಸ್ಲಿಮ್ ಇಂಟೆಗ್ರಿಟಿ ತೋರಿಸುತ್ತದೆ. ಹೇಗೂ ನಾನು ಹುಬ್ಬಳ್ಳಿಗೇ ಹೋಗಿದ್ದೆ. ನಿಮ್ಮ ಕಥೆಯನ್ನು 'ಕಸ್ತೂರಿ'ಗೇ ಕೊಟ್ಟು ಬಂದಿದ್ದೇನೆ' ಅಂದರು. ಕೇಳಿ ಸಂತೋಷದಿಂದ ನನ್ನ ಕಣ್ಣುಗಳು ತೇವಾದವು. ಅಂದಿನಿಂದ ನಾನು ಹೊಸ ಹುರುಪಿನಿಂದ ಅನೇಕ ಉರ್ದು ಕಥೆಗಳನ್ನು ಅನುವಾದಿಸಿ 'ಪುಸ್ತಕಪ್ರಪಂಚ'ಕ್ಕೆ ಕೊಟ್ಟೆ. ಅವು ಪ್ರಕಟವಾದವು. ಇನ್ನುಳಿದವುಗಳನ್ನು 'ಸುಧಾ', 'ಕಸ್ತೂರಿ', 'ತರಂಗ', 'ನೂತನ' ಗಳಿಗೆ ಕಳುಹಿಸಿದೆ. 'ಪುಸ್ತಕ ಪ್ರಪಂಚ'ಕ್ಕೆ ಕಳುಹಿಸುವಾಗ ಮಾಡಿದ ಅನುವಾದದ ಕೃಷಿಯ ಪಾಯ ಚೆನ್ನಾಗಿತ್ತು. ಎಲ್ಲ ಪತ್ರಿಕೆಗಳೂ ನನ್ನ ಅನುವಾದಿತ ಕಥೆಗಳನ್ನು ಸ್ವೀಕರಿಸಿ ಪ್ರಕಟಿಸಿದವು. ಹೀಗಾಗಿ ನಾನು 'ಪುಸ್ತಕ ಪ್ರಪಂಚ'ಕ್ಕೂ, ನನ್ನನ್ನು ಪ್ರೋತ್ಸಾಹಿಸಿದವರಿಗೂ ಚಿರಋಣಿಯಾಗಿರುವೆನು.

ಬರಬರುತ್ತ 'ಪುಸ್ತಕ ಪ್ರಪಂಚ'ದ ಬಗ್ಗೆ ನನ್ನ ಗೌರವ ಮತ್ತಿಷ್ಟು ಬೆಳೆಯಿತು. ಸಂಪಾದಕೀಯಗಳನ್ನು ಓದಿದಾಗಲಂತೂ, ಆ ಅಗಾಧ ಜ್ಞಾನ ಭಾಂಡಾರವನ್ನು ಕಂಡು, ನಾನೂ ಹೀಗೆ ಬರೆಯುವವ ಏಕೆ ಆಗಬಾರದೆಂದೆನಿಸಿತು. ಅದಕ್ಕೆ ಅಪಾರ ಪ್ರತಿಭೆ, ವ್ಯುತ್ಪನ್ನಮತಿ, ಅಭ್ಯಾಸ, ಸಾಧನೆ, ತಪಸ್ಸು ಬೇಕು ಎಂಬುದರ ಅರಿವಾಯಿತು.

ಒಂದು ಸಲ ಸಂಪಾದಕೀಯಗಳನ್ನು ನೆನೆದು, ಅವು ಒಟ್ಟಾರೆ ಒಂದು ಪುಸ್ತಕರೂಪದಲ್ಲಿ ಬಂದರೆ ಕನ್ನಡ ಸಾರಸ್ವತ ಲೋಕಕ್ಕೇ ಉಪಯೋಗವಾಗಬಲ್ಲುದೆಂದೆನಿಸಿ, 'ಪುಸ್ತಕ ಪ್ರಪಂಚ'ಕ್ಕೆ ಆ ಕುರಿತು ಕಾಗದ ಬರೆದೆ. ಆ ಕೆಲಸ ಕೈಗೆತ್ತಿಕೊಂಡು, ಸಂಪಾದಕೀಯಗಳು ಪುಸ್ತಕರೂಪ ಧರಿಸಿದೆ ಎಂದು ತಿಳಿದು ಮಹದಾನಂದವಾಯಿತು.

ಒಟ್ಟಿನಲ್ಲಿ ೧೯೪೬ರ ಆಗಸ್ಟ್ ತಿಂಗಳಲ್ಲಿ ಬೆಳೆದ 'ಪುಸ್ತಕ ಪ್ರಪಂಚ'ದ ಬಳ್ಳಿ, ಈಗ ಫಲಪುಷ್ಪ ಭರಿತವೃಕ್ಷವಾಗಿ, ಸಾಹಿತ್ಯಾಭಿರುಚಿ ಬೆಳೆಸಿಕೊಳ್ಳುವವರಿಗೆ ನೆರಳಾಗಿ, ಆಶ್ರಯದಾತವಾಗಿದೆ. ಧನದ ನೀರಿರದೆ ಆ ವೃಕ್ಷ ಒಂದು ಸಲ ಬಾಡಿದಂತಾಗಿ, ಫಲಕೊಡದೆ, ಮೌನತಾಳಿ ಸಿಟ್ಟಾಗಿ ನಿಂತ ಸಂದರ್ಭವೂ ಇತ್ತು. ಆಗ ಸಿಬ್ಬಂದಿ ವರ್ಗಕ್ಕೂ, ಆಡಳಿತವರ್ಗಕ್ಕೂ ತೊಂದರೆಯೂ ಆಗಿತ್ತು. ಹೇಗೋ ಪರಿಣಿತರ ಕಳಕಳಿಯುಳ್ಳವರ ಪ್ರಭಾವ ಪ್ರಯತ್ನದಿಂದ ಮತ್ತೆ ವೃಕ್ಷಕ್ಕೆ ನೀರಿನ ಸಿಂಚನೆಯಾಯಿತು. ಸದ್ಯ ವೃಕ್ಷ ಪೂರ್ತಿ ಬಾಡಿ ಹೋಗಲಿಲ್ಲ. ಮತ್ತೆ ಕೊನರಿ ಫಲಿಸಿತು. ಎಲ್ಲರಿಗೂ ತಂಪು ಬೀರಿತು. ಆ ದಿನಗಳನ್ನು ನೆನೆದಾಗ, ಈ ಧನದ ನೀರಿನ ತೊರೆ ಎಂದೂ ಬತ್ತದಂತೆ, ಒಂದು ಸ್ಥಾಯಿನಿಧಿಯಾಗಿ, ತೊರೆಗೆ ಹಿಂಗದ ಚಿಲುಮೆಯಾಗಿ ಪರಿಣಮಿಸಬಾರದೇ ಎನಿಸದಿರಲಿಲ್ಲ.

'ಪುಸ್ತಕ ಪ್ರಪಂಚ' ಓದಿದಾಗ, ಅದಕ್ಕೆ ಬರೆದಾಗ, ಅದರೊಡನೆ ಒಡನಾಟವಾಡಿದಾಗ, ಅದರ ಹುಟ್ಟು, ಬೆಳವಣಿಗೆ, ಅದಕ್ಕಿರುವ ಅಸರೆ, ಆತಂಕಗಳನ್ನು ಕಂಡುಕೊಳ್ಳಬೇಕೆಂಬ ಚಿಕಿತ್ಸಕ ಬುದ್ಧಿ ಬೆಳೆದು, ಆಸಕ್ತಿವಹಿಸಿ ಆ ಬಗ್ಗೆ ಮಾಹಿತಿ ಸಂಗ್ರಹಿಸಲು ಪ್ರಯತ್ನಿಸಿದಾಗ, ಈ ಪತ್ರಿಕೆಯ ಬಗ್ಗೆ ಸಂಪೂರ್ಣ ಅರಿವಿದ್ದ, ಸಿಬ್ಬಂದಿವರ್ಗವೂ ಬೇಕೆಂದೆನಿಸದಿರಲಿಲ್ಲ. ಆಗ ಕಂಡವರು ನನ್ನೊಬ್ಬ ಆತ್ಮೀಯ ಸ್ನೇಹಿತ. ಶ್ರೀ ಎ.ಡಿ.ನಂಜುಂಡಸ್ವಾಮಿಯವರು. ಅವರು ಮಾಹಿತಿ ಒದಗಿಸಿದಾಗಲ್ಲವೇ ಈ ಕಿರು ಲೇಖನವನ್ನು ನಾನು ಬರೆಯಲು ಸಾಧ್ಯವಾಯಿತು.

ಈ 'ಪುಸ್ತಕ ಪ್ರಪಂಚ'ವೃಕ್ಷ ಇನ್ನೂ ಸುಂದರವಾಗಿ ನಿಬಿಡವಾಗಿ ಬೆಳೆಯಲಿ. ಒಳ್ಳೊಳ್ಳೆಯ ಫಲವನ್ನು ಕೊಡುವಂತಾಗಲಿ ಎಂದು ಈ ಸುವರ್ಣ ಸಂಚಿಕೆಯ ಪ್ರಕಟನೆಯ ಸಂದರ್ಭದಲ್ಲಿ ಮನದ ಅಂತರಾಳದಿಂದ ದೇವರನ್ನು ಪ್ರಾರ್ಥಿಸುತ್ತೇನೆ. ಹಾಗೆಯೇ 'ಪುಸ್ತಕ ಪ್ರಪಂಚ'ವನ್ನು ಕೊಂಡು ಓದುವವರ ಸಂಖ್ಯೆ, ಅಸಂಖ್ಯಾತವಾಗಲೆಂದು ಹಾರೈಸುತ್ತೇನೆ.

‘ಪುಸ್ತಕ ಪ್ರಪಂಚ’ದೊಡನೆ ನನ್ನ ಒಡನಾಟ

ಲಕ್ಷ್ಮೀನಾರಾಯಣ ಅರೋರಾ
ನಿರ್ದೇಶಕ, ಪ್ರಸಾರಾಂಗ,
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

‘ಪುಸ್ತಕ ಪ್ರಪಂಚ’ದೊಡನೆ ನನ್ನ ನಂಟು ಸುಮಾರು ಮೂವತ್ತು ವರ್ಷಗಳದ್ದು. ಆಗ ನಾನಿನ್ನೂ ಉದ್ಯೋಗಕ್ಕೆ ಸೇರಿದ ಮೊದಲ ದಿನಗಳು. ವಿದ್ಯಾರ್ಥಿದೆಸೆಯಿಂದಲೂ ಬರೆಯುವ ಹವ್ಯಾಸವನ್ನು ಜೊತೆಗೂಡಿಸಿಕೊಂಡಿದ್ದೆ. ಕೆಲವಾರು ಲೇಖನಗಳನ್ನು ವಿವಿಧ ಪತ್ರಿಕೆಗಳಲ್ಲಿ ಪ್ರಕಟಪಡಿಸಿದ್ದೆ. ಹಾಗಾಗಿ ಹೊಸ ಬರವಣಿಗೆಗೆ ಒಂದು ಸೂಕ್ತ ಮಾಧ್ಯಮ ಬೇಕಾಗಿತ್ತು. ಆ ದಿನಗಳಲ್ಲಿ ‘ಪುಸ್ತಕ ಪ್ರಪಂಚ’ ನನ್ನ ಪಾಲಿಗೆ ಆಕರ್ಷಣೀಯವಾಗಿ ಕಂಡುಬಂತು. ಈ ಪತ್ರಿಕೆಯನ್ನೇ ಹೆಚ್ಚು ಪ್ರೀತಿಯಿಂದ ಆರಿಸಿಕೊಂಡಿದ್ದಕ್ಕೆ ಇನ್ನೊಂದು ಕಾರಣವೂ ಇತ್ತು. ಬೇರೆ ಬೇರೆ ಭಾಷೆಗಳ ಬಗೆಗೆ ನನಗೆ ಮೊದಲಿನಿಂದಲೂ ಒಂದು ಬಗೆಯ ಸೆಳೆತ. ಇಂಗ್ಲಿಷ್, ಹಿಂದಿ, ಸಂಸ್ಕೃತ ಇಂಥ ಭಾಷೆಗಳಲ್ಲಿ ಆಗಾಗ್ಗೆ ಓದುತ್ತಿದ್ದ ಸಾಹಿತ್ಯವನ್ನು ಕನ್ನಡಕ್ಕೆ ತರಬೇಕೆಂಬ ಹಂಬಲ. ಈ ಬಯಕೆಯನ್ನು ಪೂರೈಸಲೋ ಏನೋ ಎಂಬಂತೆ ‘ಪುಸ್ತಕ ಪ್ರಪಂಚ’ ಕುತೂಹಲಕಾರಿಯಾಗಿ ಎದುರಾಯಿತು.

‘ಪುಸ್ತಕ ಪ್ರಪಂಚ’ದ ಪ್ರಕಾಶನ ಸಂಸ್ಥೆಯಾದ ವಯಸ್ಕರ ಶಿಕ್ಷಣ ಸಮಿತಿಯ ಬಗೆಗೆ ಎರಡು ಕೃತಜ್ಞತೆಯ ಮಾತುಗಳನ್ನು ಆಡಬೇಕು. ನಾನು ಪ್ರಾಥಮಿಕ ಶಾಲೆಯಲ್ಲಿ- ನಾಲ್ಕನೇ ತರಗತಿ ಇರಬೇಕು- ಓದುತ್ತಿರಬೇಕಾದರೆ ಒಮ್ಮೆ ನಮ್ಮ ತಂದೆಯವರ ಮಿತ್ರರೊಬ್ಬರು ಒಂದು ಪುಸ್ತಕವನ್ನು ಓದಿಕೊಡಲು ನನ್ನ ಕೈಗೆ ಕೊಟ್ಟರು. ಅದು ಕುವೆಂಪುರವರ ‘ಜನಪ್ರಿಯ ವಾಲ್ಮೀಕಿ ರಾಮಾಯಣ’. ಆ ಪುಸ್ತಕ ಓದುತ್ತಾ ಹೋದಂತೆ ಶಾಲೆಯ ಹುಡುಗನಾಗಿದ್ದ ನನ್ನ ಮೇಲೆ ಅದು ವಿಶೇಷವಾದ ಪ್ರಭಾವ ಬೀರಿತು. ಸರಳವಾದ ಸ್ಪಷ್ಟವಾದ ಭಾಷೆ, ಕುತೂಹಲಕಾರಿಯಾದ ವೃತ್ತಾಂತಗಳು, ಮಕ್ಕಳಿಗೆ ಮನಮುಟ್ಟುವಂತೆ ಬಣ್ಣಿಸಿ ಹೇಳುವ ಶೈಲಿ. ಪ್ರಾಯಶಃ ನಾನು ಓದಿದ ಮೊದಲ ದೊಡ್ಡ ಪುಸ್ತಕ ಇದು. ನನಗೆ ಅದು ಎಷ್ಟು ಪ್ರಿಯವಾಯಿತೆಂದರೆ ಸ್ವಲ್ಪ ದಿನಗಳಲ್ಲೇ ಅದರ ಪುಟಪುಟವನ್ನೂ ಉರುಹೊಡೆದೆ. ಪ್ರತಿಯೊಂದು ಚಿತ್ರದ ಕೆಳಗಿದ್ದ ಒಕ್ಕಣೆಯನ್ನೂ ಬಿಡದೆ ಗಟ್ಟುಮಾಡಿದೆ. ಬಂದವರು ಯಾರು ಎಲ್ಲಿ ಕೇಳಿದರೂ ತಟಕ್ಕನೆ ಉತ್ತರ ಕೊಡುವಷ್ಟು ಪಳಗಿತು ನನ್ನ ಮತ್ತು ಆ ರಾಮಾಯಣದ ಸಂಬಂಧ. ಅನಂತರ ಒಮ್ಮೆ ತಾವು ಕೊಟ್ಟಿದ್ದ ಆ ಪುಸ್ತಕವನ್ನು ಹಿಂದಿರುಗಿ ಒಯ್ಯಲು ಬಂದ ನಮ್ಮ ತಂದೆಯವರ ಮಿತ್ರರು ಕುತೂಹಲಕ್ಕಾಗಿ ಆ ಪುಸ್ತಕದ ಕೆಲವು ವಾಕ್ಯಗಳನ್ನು ಮತ್ತು ಪ್ರಸಂಗಗಳನ್ನು ಕುರಿತಂತೆ ಪರೀಕ್ಷೆಮಾಡಿ ತುಂಬಾ ಸಂತೋಷದಿಂದ ಅದನ್ನು ನನಗೇ ಬಳುವಳಿಯಾಗಿ ನೀಡಿದರು. ಅದನ್ನು ಬಹಳ ಕಾಲ ಪ್ರೀತಿಯಿಂದ ಇಟ್ಟುಕೊಂಡಿದ್ದೆ. ಈಗ ನನ್ನ ಬಳಿ ಅದು ಇಲ್ಲ. ಆದರೆ ಅದು ಒದಗಿಸಿದ ಪೌರಾಣಿಕ ಪ್ರಜ್ಞೆ ಇನ್ನೂ ನನ್ನ ಪಾಲಿಗೆ ಒಂದು ಒಳ್ಳೆಯ ಆಸ್ತಿಯಾಗಿ ಉಳಿದುಕೊಂಡು ಬಂದಿದೆ. ಅಂದಿನಿಂದ ವಯಸ್ಕರ ಶಿಕ್ಷಣ ಸಮಿತಿಯ ಬಗ್ಗೆ ನನಗೆ ಒಂದು ರೀತಿಯ ಅತೀವವಾದ ಗೌರವಾದರಗಳು.

ಸಾಮಾನ್ಯವಾಗಿ ಭಾಷಾಂತರ ಮಾಡಬೇಕಾದರೆ ಹಲವಾರು ತಾಪತ್ರಯಗಳು ಎದುರಾಗುತ್ತವೆ. ಅವುಗಳಲ್ಲಿ ಮುಖ್ಯವಾಗಿ ಯಾವ ಬಗೆಯ ಲೇಖನಗಳನ್ನು ಭಾಷಾಂತರಿಸುವುದು ಹಾಗೂ ಅವುಗಳನ್ನು ಎಲ್ಲಿ ಪ್ರಕಟಿಸುವುದು ಇವು ಮುಖ್ಯ ಸಮಸ್ಯೆಗಳು. ಅಲ್ಲದೆ ಮೂಲ ಲೇಖಕರಿಂದ ಅನುಮತಿ ಪಡೆದಿರಬೇಕಾದ್ದು ಕೂಡ ಅಷ್ಟೇ ಅಗತ್ಯ. ಎಷ್ಟೋ ವೇಳೆ ಮೂಲ ಲೇಖಕರ ವಿಳಾಸಗಳೆ ದುರ್ಲಭವಾಗಿರುತ್ತವೆ. ಅಕಸ್ಮಾತ್ತಾಗಿ ವಿಳಾಸ ದೊರೆತರೂ ಅವರನ್ನು ಸಂಪರ್ಕಿಸಿದಾಗ ಸಕಾಲದಲ್ಲಿ ಉತ್ತರ ಅಥವಾ ಅನುಮತಿ ಪತ್ರ ದೊರೆಯುವುದಿಲ್ಲ. ಅಲ್ಲದೆ ಲೇಖಕರು ಈ ರೀತಿ

ಮೇಲೆ ಹುಬ್ಬಳ್ಳಿಗೆ ಹೊರಟು ನಿಂತಿದ್ದರು. ತುಂಬಾ ಅವಸರದಲ್ಲಿದ್ದರು. ನಾನು ಅನುಮಾನದಿಂದಲೇ ಕಥೆಯನ್ನು ಕೊಡಲು ಕೈಚಾಚಿದೆ. 'ಕೊಡಿ' ಎಂದು ಸಂತೋಷದಿಂದ ತೆಗೆದುಕೊಂಡರು. ಅವರು ಹುಬ್ಬಳ್ಳಿಯಿಂದ ತಿರುಗಿ ಬರುವ ದಾರಿಯನ್ನೇ ಕಾಯುತ್ತಿದ್ದೆ. ನಾಲ್ಕಾರು ದಿವಸದ ನಂತರ ಅವರನ್ನು ಕಂಡಾಗ, 'ಚೆನ್ನಾಗಿ ಬರೆದಿದ್ದೀರಿ. ಹಿಂದು ಮುಸ್ಲಿಮ್ ಇಂಟೆಗ್ರಿಟಿ ತೋರಿಸುತ್ತದೆ. ಹೇಗೂ ನಾನು ಹುಬ್ಬಳ್ಳಿಗೇ ಹೋಗಿದ್ದೆ. ನಿಮ್ಮ ಕಥೆಯನ್ನು 'ಕಸ್ತೂರಿ'ಗೇ ಕೊಟ್ಟು ಬಂದಿದ್ದೇನೆ' ಅಂದರು. ಕೇಳಿ ಸಂತೋಷದಿಂದ ನನ್ನ ಕಣ್ಣುಗಳು ತೇವಾದವು. ಅಂದಿನಿಂದ ನಾನು ಹೊಸ ಹುರುಪಿನಿಂದ ಅನೇಕ ಉರ್ದು ಕಥೆಗಳನ್ನು ಅನುವಾದಿಸಿ 'ಪುಸ್ತಕಪ್ರಪಂಚ'ಕ್ಕೆಕೊಟ್ಟೆ. ಅವು ಪ್ರಕಟವಾದವು. ಇನ್ನುಳಿದವುಗಳನ್ನು 'ಸುಧಾ', 'ಕಸ್ತೂರಿ', 'ತರಂಗ', 'ನೂತನ'ಗಳಿಗೆ ಕಳುಹಿಸಿದೆ. 'ಪುಸ್ತಕ ಪ್ರಪಂಚ'ಕ್ಕೆ ಕಳುಹಿಸುವಾಗ ಮಾಡಿದ ಅನುವಾದದ ಕೃತಿಯ ಪಾಯ ಚೆನ್ನಾಗಿತ್ತು. ಎಲ್ಲ ಪತ್ರಿಕೆಗಳೂ ನನ್ನ ಅನುವಾದಿತ ಕಥೆಗಳನ್ನು ಸ್ವೀಕರಿಸಿ ಪ್ರಕಟಿಸಿದವು. ಹೀಗಾಗಿ ನಾನು 'ಪುಸ್ತಕ ಪ್ರಪಂಚ'ಕ್ಕೂ, ನನ್ನನ್ನು ಪ್ರೋತ್ಸಾಹಿಸಿದವರಿಗೂ ಚಿರಋಣಿಯಾಗಿರುವೆನು.

ಬರಬರುತ್ತ 'ಪುಸ್ತಕ ಪ್ರಪಂಚ'ದ ಬಗ್ಗೆ ನನ್ನ ಗೌರವ ಮತ್ತಿಷ್ಟು ಬೆಳೆಯಿತು. ಸಂಪಾದಕೀಯಗಳನ್ನು ಓದಿದಾಗಲಂತೂ, ಆ ಅಗಾಧ ಜ್ಞಾನ ಭಾಂಡಾರವನ್ನು ಕಂಡು, ನಾನೂ ಹೀಗೆ ಬರೆಯುವವ ಏಕೆ ಆಗಬಾರದೆಂದೆನಿಸಿತು. ಆದಕ್ಕೆ ಅಪಾರ ಪ್ರತಿಭೆ, ವ್ಯುತ್ಪನ್ನ ಮತಿ, ಅಭ್ಯಾಸ, ಸಾಧನೆ, ತಪಸ್ಸು ಬೇಕು ಎಂಬುದರ ಅರಿವಾಯಿತು.

ಒಂದು ಸಲ ಸಂಪಾದಕೀಯಗಳನ್ನು ನೆನೆದು, ಅವು ಒಟ್ಟಾರೆ ಒಂದು ಪುಸ್ತಕರೂಪದಲ್ಲಿ ಬಂದರೆ ಕನ್ನಡ ಸಾರಸ್ವತ ಲೋಕಕ್ಕೇ ಉಪಯೋಗವಾಗಬಲ್ಲುದೆಂದೆನಿಸಿ, 'ಪುಸ್ತಕ ಪ್ರಪಂಚ'ಕ್ಕೆ ಆ ಕುರಿತು ಕಾಗದ ಬರೆದೆ. ಆ ಕೆಲಸ ಕೈಗೆತ್ತಿಕೊಂಡು, ಸಂಪಾದಕೀಯಗಳು ಪುಸ್ತಕರೂಪ ಧರಿಸಿದೆ ಎಂದು ತಿಳಿದು ಮಹದಾನಂದವಾಯಿತು.

ಒಟ್ಟಿನಲ್ಲಿ ೧೯೪೬ರ ಆಗಸ್ಟ್ ತಿಂಗಳಲ್ಲಿ ಬೆಳೆದ 'ಪುಸ್ತಕ ಪ್ರಪಂಚ'ದ ಬಳ್ಳಿ, ಈಗ ಫಲಪುಷ್ಪ ಭರಿತವೃಕ್ಷವಾಗಿ, ಸಾಹಿತ್ಯಾಭಿರುಚಿ ಬೆಳೆಸಿಕೊಳ್ಳುವವರಿಗೆ ನೆರಳಾಗಿ, ಆಶ್ರಯದಾತವಾಗಿದೆ. ಧನದ ನೀರಿರದೆ ಆ ವೃಕ್ಷ ಒಂದು ಸಲ ಬಾಡಿದಂತಾಗಿ, ಫಲಕೊಡದೆ, ಮೌನತಾಳಿ ಸಿಟ್ಟಾಗಿ ನಿಂತ ಸಂದರ್ಭವೂ ಇತ್ತು. ಆಗ ಸಿಬ್ಬಂದಿ ವರ್ಗಕ್ಕೂ, ಆಡಳಿತವರ್ಗಕ್ಕೂ ತೊಂದರೆಯೂ ಆಗಿತ್ತು. ಹೇಗೋ ಪರಿಣತರ ಕಳಕಳಿಯುಳ್ಳವರ ಪ್ರಭಾವ ಪ್ರಯತ್ನದಿಂದ ಮತ್ತೆ ವೃಕ್ಷಕ್ಕೆ ನೀರಿನ ಸಿಂಚನೆಯಾಯಿತು. ಸದ್ಯ ವೃಕ್ಷ ಪೂರ್ತಿ ಬಾಡಿ ಹೋಗಲಿಲ್ಲ. ಮತ್ತೆ ಕೊನರಿ ಫಲಿಸಿತು. ಎಲ್ಲರಿಗೂ ತಂಪು ಬೀರಿತು. ಆ ದಿನಗಳನ್ನು ನೆನೆದಾಗ, ಈ ಧನದ ನೀರಿನ ತೊರೆ ಎಂದೂ ಬತ್ತದಂತೆ, ಒಂದು ಸ್ಥಾಯಿನಿಧಿಯಾಗಿ, ತೊರೆಗೆ ಹಿಂಗದ ಚಿಲುಮೆಯಾಗಿ ಪರಿಣಮಿಸಬಾರದೇ ಎನಿಸದಿರಲಿಲ್ಲ.

'ಪುಸ್ತಕ ಪ್ರಪಂಚ' ಓದಿದಾಗ, ಅದಕ್ಕೆ ಬರೆದಾಗ, ಅದರೊಡನೆ ಒಡನಾಟವಾಡಿದಾಗ, ಅದರ ಹುಟ್ಟು, ಬೆಳವಣಿಗೆ, ಅದಕ್ಕಿರುವ ಆಸರೆ, ಆತಂಕಗಳನ್ನು ಕಂಡುಕೊಳ್ಳಬೇಕೆಂಬ ಚಿಕಿತ್ಸಕಾ ಬುದ್ಧಿ ಬೆಳೆದು, ಆಸಕ್ತಿವಹಿಸಿ ಆ ಬಗ್ಗೆ ಮಾಹಿತಿ ಸಂಗ್ರಹಿಸಲು ಪ್ರಯತ್ನಿಸಿದಾಗ, ಈ ಪತ್ರಿಕೆಯ ಬಗ್ಗೆ ಸಂಪೂರ್ಣ ಅರಿವಿದ್ದ, ಸಿಬ್ಬಂದಿವರ್ಗವೂ ಬೇಕೆಂದೆನಿಸದಿರಲಿಲ್ಲ. ಆಗ ಕಂಡವರು ನನ್ನೊಬ್ಬ ಆತ್ಮೀಯ ಸ್ನೇಹಿತ. ಶ್ರೀ ಎ. ಡಿ. ನಂಜುಂಡಸ್ವಾಮಿಯವರು. ಅವರು ಮಾಹಿತಿ ಒದಗಿಸಿದಾಗಲ್ಲವೇ ಈ ಕಿರು ಲೇಖನವನ್ನು ನಾನು ಬರೆಯಲು ಸಾಧ್ಯವಾಯಿತು.

ಈ 'ಪುಸ್ತಕ ಪ್ರಪಂಚ'ವೃಕ್ಷ ಇನ್ನೂ ಸುಂದರವಾಗಿ ನಿಬಿಡವಾಗಿ ಬೆಳೆಯಲಿ. ಒಳ್ಳೊಳ್ಳೆಯ ಫಲವನ್ನು ಕೊಡುವಂತಾಗಲಿ ಎಂದು ಈ ಸುವರ್ಣ ಸಂಚಿಕೆಯ ಪ್ರಕಟನೆಯ ಸಂದರ್ಭದಲ್ಲಿ ಮನದ ಅಂತರಾಳದಿಂದ ದೇವರನ್ನು ಪ್ರಾರ್ಥಿಸುತ್ತೇನೆ. ಹಾಗೆಯೇ 'ಪುಸ್ತಕ ಪ್ರಪಂಚ'ವನ್ನು ಕೊಂಡು ಓದುವವರ ಸಂಖ್ಯೆ, ಅಸಂಖ್ಯಾತವಾಗಲೆಂದು ಹಾರೈಸುತ್ತೇನೆ.

‘ಪುಸ್ತಕ ಪ್ರಪಂಚ’ ದೊಡನೆ ನನ್ನ ಒಡನಾಟ

ಲಕ್ಷ್ಮೀನಾರಾಯಣ ಅರೋರಾ
ನಿರ್ದೇಶಕ, ಪ್ರಸಾರಾಂಗ,
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

‘ಪುಸ್ತಕ ಪ್ರಪಂಚ’ದೊಡನೆ ನನ್ನ ನಂಟು ಸುಮಾರು ಮೂವತ್ತು ವರ್ಷಗಳದ್ದು. ಆಗ ನಾನಿನ್ನೂ ಉದ್ಯೋಗಕ್ಕೆ ಸೇರಿದ ಮೊದಲ ದಿನಗಳು. ವಿದ್ಯಾರ್ಥಿದೆಸೆಯಿಂದಲೂ ಬರೆಯುವ ಹವ್ಯಾಸವನ್ನು ಜೊತೆಗೂಡಿಸಿಕೊಂಡಿದ್ದೆ. ಕೆಲವಾರು ಲೇಖನಗಳನ್ನು ವಿವಿಧ ಪತ್ರಿಕೆಗಳಲ್ಲಿ ಪ್ರಕಟಪಡಿಸಿದ್ದೆ. ಹಾಗಾಗಿ ಹೊಸ ಬರವಣಿಗೆಗೆ ಒಂದು ಸೂಕ್ತ ಮಾಧ್ಯಮ ಬೇಕಾಗಿತ್ತು. ಆ ದಿನಗಳಲ್ಲಿ ‘ಪುಸ್ತಕ ಪ್ರಪಂಚ’ ನನ್ನ ಪಾಲಿಗೆ ಆಕರ್ಷಣೀಯವಾಗಿ ಕಂಡುಬಂತು. ಈ ಪತ್ರಿಕೆಯನ್ನೇ ಹೆಚ್ಚು ಪ್ರೀತಿಯಿಂದ ಆರಿಸಿಕೊಂಡಿದ್ದಕ್ಕೆ ಇನ್ನೊಂದು ಕಾರಣವೂ ಇತ್ತು. ಬೇರೆ ಬೇರೆ ಭಾಷೆಗಳ ಬಗೆಗೆ ನನಗೆ ಮೊದಲಿನಿಂದಲೂ ಒಂದು ಬಗೆಯ ಸೆಳೆತ. ಇಂಗ್ಲಿಷ್, ಹಿಂದಿ, ಸಂಸ್ಕೃತ ಇಂಥ ಭಾಷೆಗಳಲ್ಲಿ ಆಗಾಗ್ಗೆ ಓದುತ್ತಿದ್ದ ಸಾಹಿತ್ಯವನ್ನು ಕನ್ನಡಕ್ಕೆ ತರಬೇಕೆಂಬ ಹಂಬಲ. ಈ ಬಯಕೆಯನ್ನು ಪೂರೈಸಲೊ ಏನೋ ಎಂಬಂತೆ ‘ಪುಸ್ತಕ ಪ್ರಪಂಚ’ ಕುತೂಹಲಕಾರಿಯಾಗಿ ಎದುರಾಯಿತು.

‘ಪುಸ್ತಕ ಪ್ರಪಂಚ’ದ ಪ್ರಕಾಶನ ಸಂಸ್ಥೆಯಾದ ವಯಸ್ಕರ ಶಿಕ್ಷಣ ಸಮಿತಿಯ ಬಗೆಗೆ ಎರಡು ಕೃತಜ್ಞತೆಯ ಮಾತುಗಳನ್ನು ಆಡಬೇಕು. ನಾನು ಪ್ರಾಥಮಿಕ ಶಾಲೆಯಲ್ಲಿ- ನಾಲ್ಕನೇ ತರಗತಿ ಇರಬೇಕು- ಓದುತ್ತಿರಬೇಕಾದರೆ ಒಮ್ಮೆ ನಮ್ಮ ತಂದೆಯವರ ಮಿತ್ರರೊಬ್ಬರು ಒಂದು ಪುಸ್ತಕವನ್ನು ಓದಿಕೊಡಲು ನನ್ನ ಕೈಗೆ ಕೊಟ್ಟರು. ಅದು ಕುವೆಂಪುರವರ ‘ಜನಪ್ರಿಯ ವಾಲ್ಮೀಕಿ ರಾಮಾಯಣ’. ಆ ಪುಸ್ತಕ ಓದುತ್ತಾ ಹೋದಂತೆ ಶಾಲೆಯ ಹುಡುಗನಾಗಿದ್ದ ನನ್ನ ಮೇಲೆ ಅದು ವಿಶೇಷವಾದ ಪ್ರಭಾವ ಬೀರಿತು. ಸರಳವಾದ ಸ್ಪಷ್ಟವಾದ ಭಾಷೆ, ಕುತೂಹಲಕಾರಿಯಾದ ವೃತ್ತಾಂತಗಳು, ಮಕ್ಕಳಿಗೆ ಮನಮುಟ್ಟುವಂತೆ ಬಣ್ಣಿಸಿ ಹೇಳುವ ಶೈಲಿ. ಪ್ರಾಯಶಃ ನಾನು ಓದಿದ ಮೊದಲ ದೊಡ್ಡ ಪುಸ್ತಕ ಇದು. ನನಗೆ ಅದು ಎಷ್ಟು ಪ್ರಿಯವಾಯಿತೆಂದರೆ ಸ್ವಲ್ಪ ದಿನಗಳಲ್ಲೇ ಅದರ ಪುಟಪುಟವನ್ನೂ ಉರುಹೊಡೆದೆ. ಪ್ರತಿಯೊಂದು ಚಿತ್ರದಕೆಳಗಿದ್ದ ಒಕ್ಕಣೆಯನ್ನೂ ಬಿಡದೆ ಗಟ್ಟು ಮಾಡಿದೆ. ಬಂದವರು ಯಾರು ಎಲ್ಲಿ ಕೇಳಿದರೂ ತಟಕ್ಕನೆ ಉತ್ತರ ಕೊಡುವಷ್ಟು ಪಳಗಿತು ನನ್ನ ಮತ್ತು ಆ ರಾಮಾಯಣದ ಸಂಬಂಧ. ಅನಂತರ ಒಮ್ಮೆ ತಾವು ಕೊಟ್ಟಿದ್ದ ಆ ಪುಸ್ತಕವನ್ನು ಹಿಂದಿರುಗಿ ಒಯ್ಯಲು ಬಂದ ನಮ್ಮ ತಂದೆಯವರ ಮಿತ್ರರು ಕುತೂಹಲಕ್ಕಾಗಿ ಆ ಪುಸ್ತಕದ ಕೆಲವು ವಾಕ್ಯಗಳನ್ನು ಮತ್ತು ಪ್ರಸಂಗಗಳನ್ನು ಕುರಿತಂತೆ ಪರೀಕ್ಷೆ ಮಾಡಿ ತುಂಬಾ ಸಂತೋಷದಿಂದ ಅದನ್ನು ನನಗೇ ಬಳುವಳಿಯಾಗಿ ನೀಡಿದರು. ಅದನ್ನು ಬಹಳ ಕಾಲ ಪ್ರೀತಿಯಿಂದ ಇಟ್ಟುಕೊಂಡಿದ್ದೆ. ಈಗ ನನ್ನ ಬಳಿ ಅದು ಇಲ್ಲ. ಆದರೆ ಅದು ಒದಗಿಸಿದ ಪೌರಾಣಿಕ ಪ್ರಜ್ಞೆ ಇನ್ನೂ ನನ್ನ ಪಾಲಿಗೆ ಒಂದು ಒಳ್ಳೆಯ ಆಸ್ತಿಯಾಗಿ ಉಳಿದುಕೊಂಡು ಬಂದಿದೆ. ಅಂದಿನಿಂದ ವಯಸ್ಕರ ಶಿಕ್ಷಣ ಸಮಿತಿಯ ಬಗ್ಗೆ ನನಗೆ ಒಂದು ರೀತಿಯ ಅತೀವವಾದ ಗೌರವಾದರಗಳು.

ಸಾಮಾನ್ಯವಾಗಿ ಭಾಷಾಂತರ ಮಾಡಬೇಕಾದರೆ ಹಲವಾರು ತಾಪತ್ರಯಗಳು ಎದುರಾಗತ್ತವೆ. ಅವುಗಳಲ್ಲಿ ಮುಖ್ಯವಾಗಿ ಯಾವ ಬಗೆಯ ಲೇಖನಗಳನ್ನು ಭಾಷಾಂತರಿಸುವುದು ಹಾಗೂ ಅವುಗಳನ್ನು ಎಲ್ಲಿ ಪ್ರಕಟಿಸುವುದು ಇವು ಮುಖ್ಯ ಸಮಸ್ಯೆಗಳು. ಅಲ್ಲದೆ ಮೂಲ ಲೇಖಕರಿಂದ ಅನುಮತಿ ಪಡೆದಿರಬೇಕಾದ್ದು ಕೂಡ ಅಷ್ಟೇ ಅಗತ್ಯ. ಎಷ್ಟೋ ವೇಳೆ ಮೂಲ ಲೇಖಕರ ವಿಳಾಸಗಳೆ ದುರ್ಲಭವಾಗಿರುತ್ತವೆ. ಅಕಸ್ಮಾತ್ತಾಗಿ ವಿಳಾಸ ದೊರೆತರೂ ಅವರನ್ನು ಸಂಪರ್ಕಿಸಿದಾಗ ಸಕಾಲದಲ್ಲಿ ಉತ್ತರ ಅಥವಾ ಅನುಮತಿ ಪತ್ರ ದೊರೆಯುವುದಿಲ್ಲ. ಅಲ್ಲದೆ ಲೇಖಕರು ಈ ರೀತಿ

ಅನುಮತಿ ನೀಡುವುದಕ್ಕಾಗಿ ಶುಲ್ಕ ನಿರೀಕ್ಷಿಸುವುದು ಸಹ ಉಂಟು. ಇಷ್ಟೆಲ್ಲ ಆದ ಮೇಲೆ ಯಾವ ಪತ್ರಿಕೆಯಲ್ಲಿ ಪ್ರಕಟಿಸುವುದು ಅಂತ ಹುಡುಕಬೇಕಾಗುತ್ತದೆ. ನನ್ನ ಪಾಲಿಗಂತೂ 'ಪುಸ್ತಕ ಪ್ರಪಂಚ' ಈ ಬವಣೆಯನ್ನು ತಪ್ಪಿಸಿತು. ಕೆಲವು ವಿಖ್ಯಾತ ಪತ್ರಿಕೆಗಳ ಪ್ರಕಾಶಕರಿಂದ ಪೂರ್ವಭಾವಿಯಾಗಿಯೆ ಈ ಪತ್ರಿಕೆ ಸಾರ್ವತ್ರಿಕ ಅನುಮತಿ ಪಡೆದಿದ್ದ ಕಾರಣ ಇದರಲ್ಲಿ ಲೇಖನ ಪ್ರಕಟಿಸುವುದು ತುಂಬ ಅನುಕೂಲಕರವಾಗಿ ಕಂಡುಬಂತು. ೧೯೭೦ರ ದಶಕದ ಮೊದಲ ವರ್ಷಗಳಿಂದಲೇ ಪ್ರಕಟನೆಗಾಗಿ ಲೇಖನಗಳನ್ನು ಕಳುಹಿಸಲು ಶುರುಮಾಡಿದೆ. ಬಗೆಬಗೆಯ ಅಭಿರುಚಿಯ ಲೇಖನಗಳು ಇಲ್ಲಿ ಪ್ರಕಟವಾಗುತ್ತಿದ್ದವು. ನನ್ನ ಮೊದಲ ಕೆಲವಾರು ಕುತೂಹಲಕಾರಿ ಅನುವಾದ ಲೇಖನಗಳನ್ನು ಪ್ರಕಟಿಸಿದ ಈ ಪತ್ರಿಕೆಗೆ ನಾನು ವಿಶೇಷವಾಗಿ ಆಭಾರಿ.

'ಪುಸ್ತಕ ಪ್ರಪಂಚ'ದ ಅಂದಿನ ಸಂಪಾದಕರು ಹಾಗೂ ಸಂಪಾದಕ ಮಂಡಳಿಯ ಸದಸ್ಯರು ವಿಶೇಷವಾದ ಪ್ರೀತಿಯಿಂದ ಲೇಖನಗಳನ್ನು ಪ್ರಕಟಿಸುವ ಕೃಪೆತೋರಿದರು. ಅವರಿಗೆಲ್ಲ ನಾನು ಕೃತಜ್ಞ. ಈ ಪೈಕಿ ಒಬ್ಬಿಬ್ಬರು ಸಂಪಾದಕ ಮಂಡಳಿಯ ಮಾನ್ಯ ಸದಸ್ಯರಂತೂ 'ಎಲ್ಲಿ ಲೇಖನ? ಈ ತಿಂಗಳ ಲೇಖನ ಇನ್ನೂ ಬಂದಿಲ್ಲವಲ್ಲ' ಅಂತ ಹುರಿದುಂಬಿಸಿ ಲೇಖನಗಳನ್ನು ಬರೆಯಲು ಉತ್ಸಾಹ ತುಂಬುತ್ತಿದ್ದರು. ಮಾನ್ಯ ಸಂಪಾದಕರಾಗಿದ್ದ ಶ್ರೀ ಬೋರಯ್ಯನವರು, ಶ್ರೀ ಚಂದ್ರಶೇಖರ ಆರಾಧ್ಯರವರು ನಾನು ಲೇಖನ ಕೊಡಲು ತಡಮಾಡಿದಾಗಲೆಲ್ಲ ಮತ್ತೆ ಮತ್ತೆ ಕೇಳಿ, ಫೋನ್ ಮಾಡಿ, ನನ್ನ ನಿಧಾನ ಸ್ವಭಾವವನ್ನು ಸಹಿಸಿಕೊಂಡು ಸಹಕರಿಸಿದರು. ಆರಾಧ್ಯರು ಇನ್ನೂ ಬಹಳ ವರ್ಷಗಳು ನಮ್ಮ ಜೊತೆಯಲ್ಲಿ ಇರಬೇಕಾಗಿತ್ತು. ಅವರ ಸೇವೆ ಈ ಪತ್ರಿಕೆಗೆ ಸಾಕಷ್ಟು ಉಪಯುಕ್ತವಾಗಿತ್ತು, ಚೇತೋಹಾರಿಯಾಗಿತ್ತು.

ಪೂಜ್ಯಗುರುಗಳಾದ ಪ್ರೊ. ದೇ. ಜವರೇಗೌಡರಂತಹ ಶಕ್ತಿಯ ಹಾಗೂ ಶಿಷ್ಟ ವಿದ್ವಾಂಸರ ನೇತೃತ್ವ ಸಿಕ್ಕಮೇಲಂತೂ ಈ ಪತ್ರಿಕೆ ತುಂಬ ಒಳ್ಳೆಯ ಚಾಲನೆ ಪಡೆಯಿತು. 'ಪುಸ್ತಕ ಪ್ರಪಂಚ'ದ ಕೆಲವಾರು ಲೇಖನಗಳನ್ನು ಓದುಗರು ಮೆಚ್ಚಿ ಪತ್ರ ಬರೆಯುತ್ತಿದ್ದುದೂ ಉಂಟು. ಕೆಲವು ಮಂದಿ ಓದುಗಮಿತ್ರರು ಉತ್ತಮವಾದ ಲೇಖನಗಳನ್ನು ಒಂದೆಡೆ ಸೇರಿಸಿ ಪುಸ್ತಕರೂಪದಲ್ಲಿ ತರಬೇಕೆಂಬ ಪ್ರೀತಿಪೂರ್ವಕವಾದ ಒತ್ತಾಯವನ್ನು ಕೂಡ ಮಾಡಿದರು. ಆ ಸಾಹಸಕ್ಕೆ ಕೂಡ ಕೈಹಾಕಿದೆ. ಸಂಪಾದಕ ಮಂಡಳಿಯವರು ಈ ಕೆಲಸ ನಾನು ಮಾಡಲು ಅನುವಾಗುವಂತೆ ಪುಸ್ತಕ ಅಚ್ಚುಮಾಡಿಸಲು ಅನುಮತಿ ನೀಡಿ ನೆರವಾದರು.

ಈ ಪತ್ರಿಕೆಯ ಸಾಮಾನ್ಯ ಲೇಖನಗಾರರಲ್ಲೊಬ್ಬನಾದರೂ ನನಗೆ 'ಪುಸ್ತಕ ಪ್ರಪಂಚ' ನಿಜವಾಗಿಯೂ ಹೊಸದಾಗಿ ಓದು ಬರಹ ಕಲಿತ ನಮ್ಮ ಹಳ್ಳಿಯ ಹಾಗೂ ಪಟ್ಟಣದ ಜನರ ಓದಿನ ಅಗತ್ಯವನ್ನು ಪೂರೈಸುತ್ತಿದೆಯೆ ಎಂಬ ಅನುಮಾನ ಕಾಡುತ್ತಿರುತ್ತದೆ. ಎಷ್ಟೋ ಲೇಖನಗಳು ನವಸಾಕ್ಷರ ಓದುಗರ ಸಾಮರ್ಥ್ಯಕ್ಕೆ ಮೀರಿದವೆನಿಸುತ್ತದೆ. ಇದರ ಲೇಖನಗಳ ಹರಹು ಇನ್ನೂ ನಮ್ಮ ವಯಸ್ಕ ಓದುಗರ ಬೌದ್ಧಿಕ ಅಗತ್ಯಗಳಿಗೆ ಅನುಗುಣವಾಗಿರಬೇಕೆನಿಸುತ್ತದೆ. ಈ ದಿಕ್ಕಿನಲ್ಲಿ 'ಪುಸ್ತಕ ಪ್ರಪಂಚ' ತುಸು ಮರುಆಲೋಚನೆ ಮಾಡುವುದು ಅಗತ್ಯವೆನಿಸುತ್ತದೆ. ಇದಕ್ಕಾಗಿ ಪತ್ರಿಕೆ ಯಾವ ಬಗೆಯ ಓದುಗರನ್ನು ಕುರಿತು ಪ್ರಕಟವಾಗುತ್ತಿದೆಯೊ ಅಂತಹ ಓದುಗರ ಪ್ರತಿಕ್ರಿಯೆ ಪಡೆದು ಅಗತ್ಯನುಗುಣವಾಗಿ ಬೆಳೆಯಬೇಕೆನಿಸುತ್ತದೆ.

ಒಟ್ಟಾರೆಯಾಗಿ 'ಪುಸ್ತಕ ಪ್ರಪಂಚ' ಅನೇಕ ಮಂದಿ ಲೇಖಕರನ್ನು ಹಾಗೂ ಓದುಗರನ್ನು ಹುಟ್ಟುಹಾಕುವಲ್ಲಿ ಯಶಸ್ವಿಯಾಗಿದೆ. ವಯಸ್ಕರ ಶಿಕ್ಷಣ ಕಾರ್ಯಕ್ರಮದ ಸಮರ್ಥ ಮಾಧ್ಯಮವಾಗಿ ಕೆಲಸಮಾಡುತ್ತಿದೆ. ಈ ಸ್ತುತ್ಯವಾದ ಪ್ರಯತ್ನ ಇನ್ನೂ ಉತ್ತಮವಾದ ರೀತಿಯಲ್ಲಿ ಮುನ್ನಡೆಯುತ್ತದೆ ಹಾಗೂ ಸಾಕ್ಷರತಾ ಚಳವಳಿಯಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತದೆ ಎಂಬ ದೃಢವಾದ ನಂಬಿಕೆ ನನಗಿದೆ.

‘ಪುಸ್ತಕ ಪ್ರಪಂಚ’-ಅಂದು, ಇಂದು

ಪ್ರೊ. ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್
೪೧೧ ಆರನೆಯ ಮುಖ್ಯ ರಸ್ತೆ, ಸರಸ್ವತೀಪುರ
ಮೈಸೂರು-೫೭೦ ೦೦೯

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ಪ್ರಕಟವಾಗುತ್ತಿರುವ ‘ಪುಸ್ತಕ ಪ್ರಪಂಚ’ ಮಾಸಪತ್ರಿಕೆಗೆ ಐವತ್ತು ವರ್ಷ ತುಂಬುತ್ತಿರುವ ಸಂಗತಿ ಯಾರಿಗಾದರೂ ಸಂತೋಷ ಉಂಟುಮಾಡದೆ ಇರದು. ಈ ಐವತ್ತು ವರ್ಷಗಳಲ್ಲಿ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯೇ ಅನೇಕ ಏಳುಬೀಳುಗಳನ್ನು ಕಂಡಿದೆ. ಆದರ್ಶಗಳನ್ನು ಬಿಡಲಾರದೆ ಹೆಣಗಾಡುತ್ತಿದೆ. ಜನಬಲ-ಧನಬಲಗಳ ಕೊರತೆಯ ಜೊತೆಗೆ ಜನತೆಯಲ್ಲಿಯ ಉತ್ಸಾಹಹೀನತೆಯೂ ವಿಶ್ವಾಸದ ಅಭಾವವೂ ಈ ಸಂಸ್ಥೆಯ ಅವ್ಯಾಹತ ಕಾರ್ಯಗಳಿಗೆ ಅಡಚಣೆ ಒಡ್ಡುತ್ತಿವೆ. ಆದರೂ ಸಂಕಲ್ಪಬಲದಿಂದ ಹಾಗೂ ಹಿರಿಯರ ಮಾರ್ಗದರ್ಶನದಲ್ಲಿ ಇದು ಮುನ್ನಡೆಯುತ್ತಿರುವುದು ಸಮಾಧಾನದ ವಿಚಾರ. ಈ ವಾತಾವರಣದಲ್ಲಿ ‘ಪುಸ್ತಕ ಪ್ರಪಂಚ’ ಐವತ್ತು ವರ್ಷ ನಡೆದುಕೊಂಡು ಬಂದಿರುವುದೇ ಒಂದು ದೊಡ್ಡ ಸಾಧನೆ ಎಂದು ನನ್ನ ಅನಿಸಿಕೆ.

ಪತ್ರಿಕೆಯ ಸುವರ್ಣ ಮಹೋತ್ಸವದ ಈ ಸಂದರ್ಭದಲ್ಲಿ ಯಾರ ಮನಸ್ಸಾದರೂ ಐವತ್ತು ವರ್ಷಗಳಿಗೂ ಹಿಂದಿನ ದಿನಗಳತ್ತ ಸರಿಯುವುದು ಸಹಜವೇ. ಹೊಸದಾಗಿ ಅಕ್ಷರ ಕಲಿತು, ಅದು ಜಾರಿ ಹೋಗದಂತೆ ಓದುವ ಅಭ್ಯಾಸವನ್ನು ಮುಂದುವರಿಸಿಕೊಂಡು ಬರುತ್ತಿರುವವರನ್ನೇ ಮುಖ್ಯವಾಗಿ ಗಮನದಲ್ಲಿಟ್ಟುಕೊಂಡು ಪ್ರಕಟವಾಗುತ್ತಿರುವ ‘ಪುಸ್ತಕ ಪ್ರಪಂಚದ’ದ ಹಿಂದೆ ಒಂದು ದೊಡ್ಡ ಪರಂಪರೆಯೇ ಉಂಟು. ವಯಸ್ಕರ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿ ಈ ಕಾರ್ಯಕ್ರಮವನ್ನು ಮೊತ್ತ ಮೊದಲು ಆರಂಭಿಸಿದ ಕೀರ್ತಿ ಕರ್ನಾಟಕಕ್ಕೇ (ಅಂದಿನ ಮೈಸೂರು ಸಂಸ್ಥಾನಕ್ಕೆ) ಸಲ್ಲಬೇಕು. ೧೯೧೨ರಷ್ಟು ಹಿಂದೆಯೇ, ಅಂದು ದಿವಾನರಾಗಿದ್ದ ಸರ್. ಎಂ. ವಿಶ್ವೇಶ್ವರಯ್ಯನವರ ನೇತೃತ್ವದಲ್ಲಿ, ವಯಸ್ಕರ ನಿರಕ್ಷರತಾ ನಿವಾರಣಾ ಯೋಜನೆ ಆರಂಭವಾಯಿತು. ಸಂಸ್ಥಾನದಲ್ಲಿ ಒಟ್ಟು ಏಳು ಸಾವಿರ ಅಕ್ಷರ ಪ್ರಚಾರ ತರಗತಿಗಳು ಆರಂಭವಾದುವು. ಗ್ರಾಮ ಪ್ರದೇಶಗಳ ಜನರಿಗಾಗಿ ಸಂಚಾರಿ ಪುಸ್ತಕ ಭಂಡಾರಗಳು ಜನ್ಮ ತಳೆದುವು. ಜನರಲ್ಲಿ ಮನೆಮಾಡಿಕೊಂಡಿದ್ದ ಮೂಢ ನಂಬಿಕೆಯನ್ನು ತೊಡೆದು ಹಾಕಿ ವೈಜ್ಞಾನಿಕ ಮನೋಧರ್ಮವನ್ನು ಬೆಳಸಬೇಕು ಎಂಬುದು ವಿಶ್ವೇಶ್ವರಯ್ಯನವರ ಕನಸಾಗಿತ್ತು. ಆದರೆ ಈ ಕನಸು ನನಸಾಗಲಿಲ್ಲ. ವಿಶ್ವೇಶ್ವರಯ್ಯನವರೊಂದಿಗೆ ಆ ಯೋಜನೆಯೂ ಕ್ರಮೇಣ ತಣ್ಣಗಾಯಿತು.

ಇಪ್ಪತ್ತೆಂಟು ವರ್ಷಗಳ ಅನಂತರ ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಸಂಘದ ಸದಸ್ಯರಿಗೆ-ಅಧ್ಯಾಪಕರಿಗೆ ಮತ್ತು ವಿದ್ಯಾರ್ಥಿಗಳಿಗೆ-ಒಮ್ಮೆಂದೊಮ್ಮೆಲೇ ಮತ್ತೆ ಸ್ಫೂರ್ತಿ ಬಂದಿತ್ತು. ಸಮಾಜಸೇವೆಗಾಗಿ ಉಪಸಮಿತಿಯೊಂದು ರೂಪುಗೊಂಡಿತು. ಸಂಘದ ಕಾರ್ಯಕಾರಿ ಸಮಿತಿ ನೀಡಿದ ಯತ್ಕಿಂಚಿತ್ ಧನಸಹಾಯದಿಂದಲೇ ಹುರುಪು ತಳೆದ ಉತ್ಸಾಹಿಗಳು ಅಕ್ಷರ ಪ್ರಚಾರದ ಕೈಂಕರ್ಯದಲ್ಲಿ ತೊಡಗಿದರು. ಮನೋವೈಜ್ಞಾನಿಕ ಬೋಧನಾಕ್ರಮ ಮತ್ತು ವಯಸ್ಕರ ಶಿಕ್ಷಣ ತರಗತಿ ನಡಸುವ ಬಗ್ಗೆ ತರಬೇತಿ ಪಡೆದ ಈ

ಉತ್ಸಾಹಿಗಳು ಹಳ್ಳಿಹಳ್ಳಿಗೂ ಹೋಗತೊಡಗಿದರು. ಅದೊಂದು ಜಾತ್ಯತೀತ ದೃಷ್ಟಿಯ ಜ್ಞಾನಯಜ್ಞ.

ಮೈಸೂರು ವಿಶ್ವವಿದ್ಯಾನಿಲಯಕ್ಕೂ ಉತ್ಸಾಹ ಹಬ್ಬಿತು. ಆಗಿನ ಕುಲಪತಿಗಳು ವಹಿಸಿದ ಆಸಕ್ತಿಯಿಂದಾಗಿ ಮೈಸೂರು ಅಕ್ಷರ ಪ್ರಚಾರ ಸಮಿತಿ ಆರಂಭವಾಯಿತು. ಮುಂದೆ ಈ ಸೋಂಕು ಸರ್ಕಾರಕ್ಕೂ ತಗುಲಿತು. ವಯಸ್ಕರ ಶಿಕ್ಷಣ ಕಾರ್ಯಕರ್ತರ ಹಾಗೂ ಅದರ ನೇತೃತ್ವ ವಹಿಸಿದ್ದವರ ಸಭೆ ಸೇರಿತು. ಬಿ.ಎಂ.ಶ್ರೀ. ಅವರ ಅಧ್ಯಕ್ಷತೆಯಲ್ಲಿ ಸಂಸ್ಥಾನ ಅಕ್ಷರ ಪ್ರಚಾರ ಸಮಿತಿ ಅಸ್ತಿತ್ವಕ್ಕೆ ಬಂತು. ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ನಿಸ್ವಾರ್ಥ ಸೇವೆ, ವಿಶ್ವವಿದ್ಯಾನಿಲಯದ ಹಾಗೂ ಸರ್ಕಾರದ ಬೆಂಬಲ, ಸ್ವಾತಂತ್ರ್ಯದ ಮುನ್ನಾ ದಿನಗಳಲ್ಲಿ ದೇಶದಲ್ಲಿ ಹಬ್ಬುತ್ತಿದ್ದ ಆಶಾವಾದ- ಈ ಎಲ್ಲ ಒಳ್ಳೆಯ ಅಂಶಗಳ ಸಂಗಮದಿಂದ ವಯಸ್ಕರ ಶಿಕ್ಷಣ ಸಮಿತಿ ನಾನಾ ನಿಟ್ಟುಗಳಲ್ಲಿ ತನ್ನ ಸೇವೆ ಬೆಳೆಸಿಕೊಂಡಿತು. ಅಕ್ಷರ ಪ್ರಚಾರ ತರಗತಿ, ಪುಸ್ತಕ ಭಂಡಾರ, ವಾಚನಾಲಯ, ವಿದ್ಯಾಪೀಠ, ಸಂಶೋಧನೆ, ವಯಸ್ಕರ ಸಾಹಿತ್ಯ ರಚನೆ- ಹೀಗೆ ಸಮಿತಿಯ ಕಾರ್ಯಕ್ರಮಗಳು ಹಲವಾರು ಆಯಾಮಗಳನ್ನು ಪಡೆದುಕೊಂಡವು. ಅದೇ ಬಿರುಸಿನಲ್ಲಿ ಕಾರ್ಯ ನಡೆದುಕೊಂಡು ಬಂದಿದ್ದರೆ ಈ ವೇಳೆಗೆ ನಮ್ಮ ರಾಜ್ಯದಲ್ಲಂತೂ ಅನಕ್ಷರಸ್ಥರನ್ನು ದುರ್ಬೀನು ಹಾಕಿಕೊಂಡು ಹುಡುಕಿದರೂ ಸಿಗದಂಥ ವಾತಾವರಣದ ಸೃಷ್ಟಿಯಾಗಬಹುದಿತ್ತು. ಆದರೆ ದೇಶದ ದುರ್ದೈವ. ಸ್ವತಂತ್ರ ಭಾರತದ ವ್ಯತ್ಯಸ್ತ ಪರಿಸ್ಥಿತಿಯಲ್ಲಿ 'ಸೇವೆ' ಎಂಬ ಪದ ಬೇರೆಯೇ ಅರ್ಥವನ್ನು ಪಡೆದುಕೊಂಡು ಬಿಟ್ಟಿತು. ಇದರ ಒಂದು ಬಲಿ ಎಂದರೆ 'ವಯಸ್ಕರ ಶಿಕ್ಷಣ'.

ಉತ್ಸಾಹ ಪರ್ವದ ಆ ಶುಭದಿನಗಳಲ್ಲಿ ಆರಂಭವಾದ(೧೯೪೬) ಮಾಸ ಪತ್ರಿಕೆ 'ಪುಸ್ತಕ ಪ್ರಪಂಚ'. ಸುವರ್ಣೋತ್ಸವದ ಆಚರಣೆಗಾಗಿ ಐವತ್ತು ವರ್ಷ ಕಾಯದೆ ಆರಂಭದಲ್ಲೇ ಚಿನ್ನದ ದಿನಗಳನ್ನು ಕಂಡಿದ್ದು ಈ ಪತ್ರಿಕೆಯ ಸಾಧನೆ. ಅಂತೆಯೇ ಇದು ಕೇವಲ 'ಮಾಸ' ಪತ್ರಿಕೆಯಲ್ಲ, 'ಮಾಸದ' ಪತ್ರಿಕೆ. ಆ ದಿನಗಳಲ್ಲಿ ಹೊರಬರುತ್ತಿದ್ದ 'ಪುಸ್ತಕ ಪ್ರಪಂಚ'ದ ಸಂಚಿಕೆಗಳು ನನ್ನಂಥವರ ನೆನಪಿನಲ್ಲಿ ಮಾಸದೆ ಉಳಿದಿವೆ.

ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ಪ್ರಕಟವಾಗುತ್ತ ಬಂದಿರುವ ಈ ಪತ್ರಿಕೆಯ ಪ್ರವರ್ತಕರು ತಮ್ಮ ಮುಂದೆ ಇಟ್ಟುಕೊಂಡ ಮುಖ್ಯವಾದ ಗುರಿಯೆಂದರೆ, ಹೊಸದಾಗಿ ವಿದ್ಯೆ ಕಲಿತವರಿಗೆ (ಹಳಬರಿಗೆ ಕೂಡ) ಉಪಯುಕ್ತವಾದ, ಸದಭಿರುಚಿಯ ಸಾಹಿತ್ಯವನ್ನು ಒದಗಿಸುವುದು. ಅವರು ಕಲಿತ ವಿದ್ಯೆ ಸಾರ್ಥಕವಾಗುವಂತೆ ಮಾಡುವುದು. ಈ ಪತ್ರಿಕೆಯ ಮೂಲ ಉದ್ದೇಶಗಳೇನೆಂಬುದೂ ಖಚಿತವಾಗಿ ನಿರ್ಧಾರವಾಗಿದೆ. ಈ ಐವತ್ತು ವರ್ಷಗಳಲ್ಲಿ ಈ ಉದ್ದೇಶಗಳು ಎಷ್ಟರಮಟ್ಟಿಗೆ ಸಫಲವಾಗಿವೆ ಎಂಬುದನ್ನು ಕುರಿತು ಚಿಂತಿಸುವುದಕ್ಕೆ ಇದು ಸರಿಯಾದ ಕಾಲವಾಗಿದೆ. ಕನ್ನಡವಲ್ಲದೆ ಇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ ಮತ್ತು ಲೇಖನಗಳ ಸಾರಾಂಶಗಳ ಪ್ರಕಟನೆ; ಆ ಮೂಲಕ ಸಾಮಾನ್ಯ ಓದುಗರಿಗೆ ಅವುಗಳ ಬಗ್ಗೆ ಪರಿಚಯ ನೀಡಿಕೆ; ಪ್ರತಿ ತಿಂಗಳೂ ಕನ್ನಡದಲ್ಲಿ ಪ್ರಕಟವಾದ ಮುಖ್ಯವಾದ ಪುಸ್ತಕಗಳ ಹಾಗೂ ಲೇಖನಗಳ ಪರಿಚಯ ಮಾಡಿಕೊಡುವುದು; ಕನ್ನಡದಲ್ಲಿ ಪ್ರಕಟವಾದ ಉತ್ತಮ ಪುಸ್ತಕಗಳ ವಿಮರ್ಶೆ; ಗ್ರಂಥಾಲಯ ಕುರಿತ ವಿವೇಚನೆ; ಆಗಾಗ್ಗೆ ಪ್ರಮುಖ ಲೇಖಕರೊಬ್ಬರ ಎಲ್ಲ ಕೃತಿಗಳ ಸಮಗ್ರ ಹಾಗೂ ವಿಮರ್ಶಾತ್ಮಕ ವಿವೇಚನೆ; ಒಂದೇ ವಿಷಯದ ವಿವಿಧ ಮುಖಗಳ ಪರಿಚಯ ನೀಡುವ ಲೇಖನಗಳ ಪ್ರಕಟನೆ;

ಗ್ರಾಮಸ್ಥರ ಬದುಕಿಗೆ ಸಂಬಂಧಿಸಿದ ಕಥೆ, ಕವಿತೆ, ಪ್ರಬಂಧ, ವ್ಯಕ್ತಿ ಚಿತ್ರಗಳನ್ನು ಪ್ರಕಟಿಸುವುದು; ಕಲಾಚಿತ್ರಗಳ ಮುದ್ರಣ; ಕನ್ನಡದಲ್ಲಿ ಪ್ರಕಟವಾದ ಮುಖ್ಯ ಲೇಖನಗಳ ಬಗ್ಗೆ ತಿಳಿವಳಿಕೆ ನೀಡಿಕೆ; ಗ್ರಾಮಸ್ಥರಿಗೆ ಬೇಕೆನಿಸುವ, ಅವರಿಗೆ ಪ್ರಿಯವಾಗುವ ವಿಷಯಗಳನ್ನು ಕುರಿತ ಲೇಖನಗಳ ಪ್ರಕಟನೆ; ಈ ಎಲ್ಲ ಉದ್ದೇಶಗಳನ್ನೂ ತನ್ನ ಮುಂದೆ ಇಟ್ಟುಕೊಂಡು ಪತ್ರಿಕೆ ಪ್ರಕಟವಾಗುತ್ತ ಬಂದಿದೆ. ಒಟ್ಟಿನಲ್ಲಿ ಇದು ಇಂಗ್ಲಿಷಿನ 'ರೀಡರ್ಸ್ ಡೈಜೆಸ್ಟ್' ಮಾದರಿಯಲ್ಲಿರಬೇಕೆಂಬುದು ಸಂಸ್ಥಾಪಕರ ಮುಖ್ಯ ಆಶಯ. ಜ್ಞಾನದ ನಾನಾ ಮುಖಗಳ ವಸ್ತುನಿಷ್ಠ ಪರಿಚಯ; ಸಾಮಾನ್ಯ ಜನರ ಬದುಕು ಸುಸಂಸ್ಕೃತವೂ ಮನಸ್ಸು ಸಂಪದ್ಭರಿತವೂ ಆಗುವಂತೆ ಮಾಡುವ ಕನಸು. 'ಆ ನೋ ಭದ್ರಾಃ ಕ್ರತವೋ ಯಂತು ವಿಶ್ವತಃ' -ಒಳ್ಳೆಯ ವಿಚಾರಗಳು ಪ್ರಪಂಚದ ಎಲ್ಲ ಎಡೆಗಳಿಂದಲೂ ಬರಲಿ-ಎಂಬುದೇ ಪ್ರವರ್ತಕರ ಧ್ಯೇಯವಾಕ್ಯವಿದ್ದಿರಬೇಕೆಂದು ನನ್ನ ಅನಿಸಿಕೆ.

ಆ ಕಾಲದ ಸಂಚಿಕೆಗಳ ಸೊಬಗು ಈಗಲೂ ನನ್ನ ಕಣ್ಣಿಗೆ ಕಟ್ಟಿದಂತಿದೆ. ಆಗ ಪತ್ರಿಕೆ ಇನ್ನೂ ಸಣ್ಣ ಆಕಾರದಲ್ಲಿ ಬರುತ್ತಿತ್ತೆಂದು (ಕಿರೀಟ ೧/೮) ನನ್ನ ನೆನಪು. ಆಡಂಬರವಿಲ್ಲದ, ನಿರಾಭರಣಸೌಂದರ್ಯದಿಂದ ಕೂಡಿದ ಹೊದಿಕೆ. ಒಳಗೆ ಬಿಳುಪಾದ ಕಾಗದ. ನಗರದ ಅತ್ಯಂತ ಶ್ರೇಷ್ಠ ಮುದ್ರಣಾಲಯದಲ್ಲಿ ಇದು ಅಚ್ಚಾಗುತ್ತಿತ್ತೆಂದು ನನಗೆ ಜ್ಞಾಪಕ. ಕಣ್ಣಿಗೆ ಒತ್ತಿಕೊಳ್ಳುವಂತೆ ಮುದ್ದಾದ, ಸ್ಪಷ್ಟವಾದ ಅಕ್ಷರಗಳು. ರಾಪು ಬಡಿಯದಿದ್ದರೂ ಆಕರ್ಷಕವಾದ ಪುಟವಿನ್ಯಾಸ. ಓದಬೇಕು, ಸಂಗ್ರಹಿಸಿಟ್ಟುಕೊಳ್ಳಬೇಕು-ಎಂದು ಹೇಗಾದರೂ ಅನಿಸುವಂಥ ಒಟ್ಟಂದ. ಪುಸ್ತಕವನ್ನಾಗಲಿ, ಪತ್ರಿಕೆಯನ್ನಾಗಲಿ ಎಲ್ಲರೂ ಕರ್ತವ್ಯದೃಷ್ಟಿಯಿಂದಲೇ ಓದುವುದಿಲ್ಲ. ಅನಾಸಕ್ತಿಯಿಂದಲೋ, ನಿರಾಸಕ್ತಿಯಿಂದಲೋ ಎಂಬಂತೆ ಅದನ್ನು ಕೈಗೆತ್ತಿಕೊಂಡ ಕೂಡಲೇ ಅದು ತನ್ನ ಭಾವೀ ಓದುಗನೊಂದಿಗೆ ಚತುರ ಸಂಭಾಷಣೆಯಲ್ಲಿ ತೊಡಗುವಂತಿರಬೇಕು. ಅಂತೆಯೇ ಪತ್ರಿಕಾ ಪ್ರಕಟನೆ ಒಂದು ಕಲೆ. ಇದನ್ನು ಆಗಿನ ಸಂಪಾದಕವರ್ಗದವರು ಸಾಧಿಸಿದ್ದರೆನ್ನಬೇಕು.

ನನಗೆ ತಿಳಿದಿರುವಂತೆ ಆಗಿನ 'ಪುಸ್ತಕ ಪ್ರಪಂಚ' ಹೆಚ್ಚು ವೈವಿಧ್ಯದಿಂದ ಕೂಡಿತ್ತು; 'ಭಿನ್ನ ರುಚಿಗಳ ಜನರ ಏಕೈಕ ಸಮಾರಾಧನೆ' ಎನಿಸುವಂತಿತ್ತು. ಆಯಾ ತಿಂಗಳ ಪ್ರಮುಖ ಕನ್ನಡ ಕೃತಿಗಳ ಸಹೃದಯ ವಿಮರ್ಶೆ, ಇತರ ವಿಚಾರಗಳ ಸಂಗ್ರಹ, ಟೀಕೆ ಟಿಪ್ಪಣಿ ಅನ್ಯಭಾಷಾ ಕೃತಿಗಳ ಲೇಖನಗಳ ಪರಿಚಯ, 'ರೀಡರ್ಸ್ ಡೈಜೆಸ್ಟ್'ನಂಥ ಪತ್ರಿಕೆಯ ಉಪಯುಕ್ತ ಲೇಖನಗಳ ಅನುವಾದ, ಹಳ್ಳಿಗರ ಬದುಕಿಗೆ ಸಂಬಂಧಿಸಿದ ವಿಚಾರಗಳ ವಿವೇಚನೆ, ಒಂದು ವಿಷಯದ ಮತ್ತು ಒಬ್ಬ ಲೇಖಕನ ಕೃತಿಗಳ ಸುತ್ತ ಹರಿದ ವಿಚಾರ ಲಹರಿ-ಇವೆಲ್ಲಾ ಸಮಪ್ರಮಾಣದಲ್ಲಿ ಪ್ರಕಟವಾಗುತ್ತಿದ್ದುವು. 'ಪುಸ್ತಕ ಪ್ರಪಂಚ'ವನ್ನೋದಿದರೆ ಸಾಕು, ಸಮಕಾಲೀನ ಜಗತ್ತಿನ ಎಲ್ಲ ಮುಖ್ಯ ಸಂಗತಿಗಳ ಪರಿಚಯವಾದಂತೆ-ಎನಿಸುವಂತಿತ್ತು, ಈ ಪತ್ರಿಕೆ. ಆಗಿನ ಕಾಲದಲ್ಲಿ ವಯಸ್ಕರ ಶಿಕ್ಷಣದಲ್ಲೂ, ಪ್ರಸಾರಾಂಗದ ಚಟುವಟಿಕೆಗಳಲ್ಲೂ ಆಸಕ್ತಿ ತಳೆದಿದ್ದ ಹಾಗೂ ಇತರ ಅಧ್ಯಾಪಕರನೇಕರು 'ಪುಸ್ತಕ ಪ್ರಪಂಚ'ಕ್ಕಾಗಿ ಬರೆಯುತ್ತಿದ್ದರು. ಆಗಿನ ಕೆಲವು ಉತ್ಕೃಷ್ಟ ಲೇಖನಗಳ ನೆನಪು ಈಗಲೂ ನನ್ನ ಮನಸ್ಸಿನ ಕಪಾಟುಗಳಲ್ಲಿ ಅಚ್ಚಳಿಯದೆ ಉಳಿದುಕೊಂಡಿವೆ. ನನ್ನ ಮನಸ್ಸನ್ನು ರೂಪಿಸುವುದರಲ್ಲಿ ಅದೂ ತನ್ನ ಭಾಗವಹಿಸಿದೆಯೆಂದು ಕೊಂಡಿದ್ದೇನೆ.

ಈ ಐವತ್ತು ವರ್ಷಗಳಲ್ಲಿ 'ಪುಸ್ತಕ ಪ್ರಪಂಚ' ವಿಕಾಸದ ಹಾದಿಯಲ್ಲಿ ನಡೆದು ಬಂದಿದೆ. ಆದರೆ ನನಗೆ ತುಂಬ ದುಃಖ ಉಂಟುಮಾಡುವ ಸಂಗತಿಯೆಂದರೆ, ಅದರ ಮೊದಲ ನಿರಾಭರಣ ಸೌಂದರ್ಯ ಮರೆಯಾಗಿದೆ. ಈ ಮಾಸಪತ್ರಿಕೆ ಈ ದೃಷ್ಟಿಯಿಂದ ಮಾಸಿದೆ. ಒಳ್ಳೆಯ ಕಾಗದ, ಆಕರ್ಷಕ ಮುದ್ರಣ ಪ್ರಥಮ ಅಗತ್ಯ. ನಾನು ಹಿಂದೆಯೇ ಹೇಳಿದ ಹಾಗೆ ಅನೇಕರು ಓದುವುದೊಂದು ಪವಿತ್ರ ಕರ್ತವ್ಯವೆಂದೇನೂ ಅದರಲ್ಲಿ ತೊಡಗುವುದಿಲ್ಲ. ಕಾವ್ಯ ಯಶಸ್ಸನ್ನು, ಸಂಪತ್ತನ್ನು, ವ್ಯವಹಾರ ಜ್ಞಾನವನ್ನು, ಅಶುಭದಿಂದ ರಕ್ಷೆಯನ್ನು ದೊರಕಿಸಿ ಕೊಡುತ್ತದೆ ಎಂಬ ಮಾತು ಪತ್ರಿಕೆಗೂ ಅನ್ವಯಿಸುತ್ತದೆ. ಕಾಂತಾಸಂಮಿತದಿಂದ ಅದು ಈ ಕಾರ್ಯ ಸಾಧಿಸಬೇಕು. 'ಪುಸ್ತಕ ಪ್ರಪಂಚ'ದಂಥ ಪತ್ರಿಕೆಗಂತೂ ಇದು ತುಂಬ ಅಗತ್ಯ. ನವಸಾಕ್ಷರ ವಯಸ್ಕರಿಗೆ ಒದಗಿಸುವ ಸಾಹಿತ್ಯ ಹಾಗೆ ನೋಡುವುದಾದರೆ ಉಪಯುಕ್ತತೆಯ ದೃಷ್ಟಿಯಿಂದ ಓದುವ ಎಲ್ಲರಿಗೂ ನೀಡುವಂಥ ಸಾಹಿತ್ಯ-'ಫಂಕ್ಷನಲ್' ಆಗಿರಬೇಕು, ಕ್ರಿಯಾ ಸಂಬಂಧಿಯಾಗಿರಬೇಕು, ಅವರ ನಿತ್ಯ ಜೀವನಕ್ಕೆ ಸಂಬಂಧಪಟ್ಟದ್ದಾಗಿರಬೇಕು, ಅದರೊಂದಿಗೇ ಅವರ ತಿಳಿವಿನ ಮಟ್ಟವನ್ನೂ ರುಚಿಯನ್ನೂ ಸಂಸ್ಕೃತಿಯನ್ನೂ ಜೀವನಕ್ರಮವನ್ನೂ ಗುಣಮಟ್ಟವನ್ನೂ ಹೆಚ್ಚಿಸುವಂತಿರಬೇಕು (ರೀಡರ್ಸ್ ಡೈಜೆಸ್ಟ್ ಒಳ್ಳೆಯ ಮಾದರಿ). ಹೀಗೆಂದರೆ ಶುದ್ಧ ಸಾಹಿತ್ಯವನ್ನು ಕೀಳುಗಳೆದಂತಲ್ಲ. ಅದು ಕಡಮೆಯಲ್ಲ, ಆದರೆ ಇದು ಹೆಚ್ಚು-ಎನ್ನಬಹುದು. ಇದಕ್ಕೆ ಅದೂ, ಅದಕ್ಕೆ ಇದೂ ಹಗಲೆಣೆಯಾಗಿರಬೇಕು. ಆದರೆ ನವಸಾಕ್ಷರರ ಅಗತ್ಯಗಳನ್ನೂ ನೆನಪಿನಲ್ಲಿಡಿ ಎಂದು ನಾನು ಹೇಳಿದರೆ ಇದು ಉಪದೇಶವೆನಿಸಬಾರದು. ಇದು ನನ್ನ ಕಾಳಜಿಯ ಅಭಿವ್ಯಕ್ತಿಯಷ್ಟೇ.

ಈಚೆಗೆ ಪ್ರಕಟವಾದ ಕೆಲವು ಸಂಚಿಕೆಗಳು ಶ್ರೇಷ್ಠತೆಯ ಮಟ್ಟ ಮುಟ್ಟಿವೆ, ನಿಜ. ಒಬ್ಬೊಬ್ಬ ಲೇಖಕರನ್ನು ಕುರಿತ ಲೇಖನಗಳು ಒಂದೊಂದು ಸಂಚಿಕೆಯಲ್ಲಿ ಪ್ರಕಟವಾಗಿವೆ. ಸಾಮಾನ್ಯ ಓದುಗರ ದೃಷ್ಟಿಯಿಂದ ಎಲ್ಲವೂ ಅಷ್ಟು ಮುಖ್ಯ ಎನಿಸದೆ ಹೋಗಬಹುದು-ಎಂಬುದು ನನ್ನ ಅಂಜಿಕೆ. ಅಂದಿನ ಪ್ರವರ್ತಕರು ತಮ್ಮ ಮುಂದೆ ಇರಿಸಿಕೊಂಡ ಹಲವು ಉದ್ದೇಶಗಳನ್ನು ಪೂರೈಸುವಂಥ ಲೇಖನಗಳು ಇಂದು ಪ್ರಕಟವಾಗುತ್ತಿಲ್ಲ. ಕೆಲವೇ ಲೇಖಕರಿಗೆ ಪತ್ರಿಕೆ ಮೀಸಲಾಗಿದೆಯೇನೋ ಎನಿಸುತ್ತದೆ. ಪತ್ರಿಕೆಯ ಪುಟಗಳನ್ನು ತುಂಬಿಸುವ ಉದ್ದೇಶದಿಂದ ಪರಿಚಿತರಿಂದ ಲೇಖನಗಳನ್ನು ಬರೆಯಿಸಿಯೋ, ಭಾಷಾಂತರಗಳನ್ನು ಮಾಡಿಸಿಯೋ ಪ್ರಕಟಿಸಿದ್ದಿರಬಹುದು ಎನಿಸುತ್ತದೆ. ಸಂಪಾದಕ ಮಂಡಲಿಯ ಸದಸ್ಯತ್ವದಲ್ಲಿ ಹೆಚ್ಚಿನ ವೈವಿಧ್ಯ ಇರಬೇಕೆನಿಸುತ್ತದೆ. ಹಲವು ಕ್ಷೇತ್ರಗಳಿಗೆ ಪ್ರಾತಿನಿಧ್ಯ ಇದ್ದರೆ ಚೆನ್ನ. ಆಗ ಬಹುಶಃ ಪತ್ರಿಕೆಯ ಆರಂಭದ ಎಲ್ಲ ಉದ್ದೇಶಗಳನ್ನೂ ಪೂರೈಸುವತ್ತ ಹೆಚ್ಚಿನ ಸಫಲತೆ ಸಾಧಿಸಬಹುದೆನಿಸುತ್ತದೆ. ಚಿನ್ನದ ಹಬ್ಬದ ಸಂದರ್ಭದಲ್ಲಿ ಈ ಪತ್ರಿಕೆ ನಡೆದುಬಂದ ದಾರಿಯತ್ತ ಒಮ್ಮೆ ಅವಲೋಕಿಸುವುದು, ಅರೆಕೊರೆಗಳನ್ನು ಸರಿಪಡಿಸಿಕೊಳ್ಳುವುದು ಅಗತ್ಯ ಎನಿಸುತ್ತದೆ. ನಾನು ಹಿಂದಿನಿಂದಲೂ ಈ ಪತ್ರಿಕೆಯನ್ನು ಅವಲೋಕಿಸುತ್ತ, ಕೋರಿಕೆ ಬಂದಾಗ ಮಾತ್ರವೇ ಕರ್ತವ್ಯ ದೃಷ್ಟಿಯಿಂದ ಲೇಖನ ಬರೆಯುತ್ತ ಬಂದಿರುವುದರಿಂದ ನನ್ನ ಈ ಅನಿಸಿಕೆಗಳು ಪೂರ್ವಾಗ್ರಹಪೀಡಿತವೆಂಬ ಆರೋಪಕ್ಕೆ ಗುರಿಯಾಗುವುದಿಲ್ಲವೆಂದು ನಂಬಿದ್ದೇನೆ. ಪತ್ರಿಕೆಗೆ ಎಲ್ಲ ಶುಭವಿರಲಿ ಎಂದು ಹಾರೈಸುತ್ತೇನೆ.

ಪುಸ್ತಕ ಪ್ರಪಂಚ ಮತ್ತು ನಾನು

ಡಾ॥ ಸ.ಜ. ನಾಗಲೋಟಿಮಠ
ವೈದ್ಯಕೀಯ ನಿರ್ದೇಶಕರು
ಬ.ವಿ.ವ. ಸಂಘ
ಬಾಗಲಕೋಟೆ-೫೮೭ ೧೦೧

ನಾನು ಮೈಸೂರಿಗೆ ಬಂದದ್ದು ೧೯೯೪ರಲ್ಲಿ. ಅಲ್ಲಿಯವರೆಗೆ ನನ್ನ ಪ್ರಪಂಚದಲ್ಲಿ 'ಪುಸ್ತಕ ಪ್ರಪಂಚ' ಸೇರಿರಲೇ ಇಲ್ಲ. ನಾನಾಯಿತು ನನ್ನ ವೈದ್ಯವಿಜ್ಞಾನವಾಯಿತು. ನನಗೆ ಬೇರೆ ಜಗತ್ತೇ ಕಾಣಿಸುತ್ತಿರಲಿಲ್ಲ. ಅಲ್ಲೊಮ್ಮೆ ಇಲ್ಲೊಮ್ಮೆ 'ಪುಸ್ತಕ ಪ್ರಪಂಚ'ದ ಹಿರಿಯರನ್ನು ಕಂಡು ಮಾತನಾಡಿಸುತ್ತಿದ್ದೆ. ನನ್ನಲ್ಲಿ ಅವರ ಬಗೆಗೆ ಇದ್ದ ಗೌರವವನ್ನು ಸಲ್ಲಿಸುತ್ತಿದ್ದೆ. ನಾನು ಬಿಜಾಪೂರ-ಬಾಗಲಕೋಟೆ ಪ್ರದೇಶದವನು. ನನ್ನ ಮಾತು, ನನ್ನ ಶಬ್ದಗಳು ಮೈಸೂರಿನ ಜನರಿಗೆ ಹಿಡಿಸುತ್ತಿದ್ದುವು. ಬೇಕಾದವರಿಗೆ ವಿಜಾಪೂರದ ಭಾಷೆ 'ಸೊಗಡು' ತುಂಬಿದ ಭಾಷೆ. ಬೇಡಾದವರಿಗೆ ಅದೇ ಭಾಷೆ 'ಒರಟು' ಭಾಷೆ. ಮೈಸೂರಿನ ಹಿರಿಯರು ಹಾಗೂ ಸಾಹಿತ್ಯ ಪ್ರೇಮಿಗಳಿಗೆ ನನ್ನ 'ಒರಟು' ಭಾಷೆ 'ಸೊಗಡು' ತುಂಬಿದ ಭಾಷೆ ಆಯಿತು. ನಾನೋ ಮಾತನಾಡುವದನ್ನು ಮಿತಿಗೊಳಿಸಲು ಪ್ರಯತ್ನಿಸುತ್ತಿದ್ದೆ. ಅವರೋ ನಾನು ಮಾತನಾಡುವಂತೆ ಪ್ರೋತ್ಸಾಹಿಸುತ್ತಿದ್ದರು. ಒಂದು ದಿನ ನಾನು ಹಾಗೂ ಕೆಲವು ಹಿರಿಯರು ಒಂದು ವಿಷಯದ ಬಗ್ಗೆ ಚರ್ಚಿಸುತ್ತಿದ್ದೆವು. ನನ್ನ ವಿವರಣೆ ಮುಗಿದ ತತ್‌ಕ್ಷಣ ಹಿರಿಯರೊಬ್ಬರು ಹೇಳಿದರು. 'ಡಾಕ್ಟರರೇ, ನೀವು ಹೇಳಿದ್ದನ್ನು ಬರೆದು ಕೊಡಿರಿ. ಇದು ಬಹು ಸ್ವಾರಸ್ಯಕರವಾಗಿದೆ. ನಾನು ಅದನ್ನು ಬರೆಯಲು ಅದೇ ಕ್ಷಣ ಒಪ್ಪಿಕೊಂಡು ಬಿಟ್ಟೆ. ಒಂದೆರಡು ದಿನಗಳಲ್ಲಿ ಬರೆದೂ ಕೊಟ್ಟೆ. ಅವರು ಓದಿದರು. ಬೆನ್ನು ಸವರಿದರು. 'ಚೆನ್ನಾಗಿದೆ' ಎಂದರು. ಮುಂದೆ ಅದನ್ನು ಮರೆತು ಬಿಟ್ಟೆ. ಎರಡು ತಿಂಗಳಾದುವು. ನನಗೆ 'ಪುಸ್ತಕ ಪ್ರಪಂಚ'ದ ಒಂದು ಪ್ರತಿ ಬಂದಿತು. ಅದರಲ್ಲಿ ನನ್ನ ಒಂದು ಲೇಖನ ಪ್ರಕಟವಾಗಿತ್ತು. ಅದು ವೈದ್ಯಕೀಯವಲ್ಲ. ಸಾದಾ ಲೇಖನ. ನನಗೋ ಖುಷಿಯೋ ಖುಷಿ.

ಅದೇ ವಾರ ನನಗೆ ಬೇರೆಯವರಿಂದ ಓಲೆಗಳು ಬಂದುವು. ಲೇಖನ ಚೆನ್ನಾಗಿದೆ ನೀವು ಬರೆಯುತ್ತ ಸಾಗಿರಿ, ಎಂಬುದು ಅವುಗಳ ಸಾರವಾಗಿತ್ತು. ಸಮಯ ಸಿಕ್ಕಾಗಲೆಲ್ಲ ಬರೆಯ ತೊಡಗಿದೆ. ಅವು ಆಗೊಮ್ಮೆ ಈಗೊಮ್ಮೆ 'ಪುಸ್ತಕ ಪ್ರಪಂಚ'ದಲ್ಲಿ ಪ್ರಕಟಗೊಳ್ಳತೊಡಗಿದುವು. ನಾನು ಬರೆದುದೆಲ್ಲ ಬರೆದಂತೆಯೇ ಪ್ರಕಟವಾಗುತ್ತಿರಲಿಲ್ಲ. ಅದು ಸಂಪಾದಕ ಮಂಡಳಿಯ ಕತ್ತರಿಗೆ ಸಿಗುತ್ತಿತ್ತು. ಆಗ ಲೇಖನ ಸೊಗಸಾದ ರೂಪ ಪಡೆಯುತ್ತಿತ್ತು. ನಾನೇ ಹಲವಾರು ಸಾರೆ ಚಕಿತಗೊಂಡಿದ್ದೇನೆ. ನಾನು ಇಷ್ಟು ಒಳ್ಳೆಯ ಬರಹಗಾರನೇ? ಎಂದು.

ಕಾಡು ಕಾಡಾಗಿ ಬೆಳೆದ ತಲೆಯ ಕೇಶ ರಾಶಿಯನ್ನು ಸರಿಯಾಗಿ ನಿರ್ಮಲಗೊಳಿಸಿ, ಯುಕ್ತವಾಗಿ ಹಿಕ್ಕಿ ಒಂದು ರೂಪ ಕೊಟ್ಟಂತಾಗುತ್ತಿತ್ತು. ಅದಲ್ಲದೆ ಅಲ್ಲೊಂದು ಇಲ್ಲೊಂದು ನುಡಿಯನ್ನು ಸೇರಿಸಿ ಅದನ್ನು ಅಲಂಕಾರ ಮಾಡುತ್ತಿದ್ದರು. ಹೀಗೆ ರೂಪಗೊಂಡ ತಲೆಯನ್ನು ಕನ್ನಡಿಯಲ್ಲಿ ನೋಡಿ ಹೆಮ್ಮೆ ಪಟ್ಟವರಂತೆ ಆಗುತ್ತಿತ್ತು ನನಗೆ. ಸಂಪಾದಕ ಮಂಡಳಿಯ ಹಿರಿಯರ ಉಳಿಯ ಪೊಡೆತಕ್ಕೆ ಸಿಕ್ಕ ಕಗ್ಗಲ್ಲು ಒಂದು ಮೂರ್ತಿಯಾದಂತೆ ನನ್ನ ಲೇಖನಗಳಿಗೆ ಒಂದು ರೂಪ ಬರುತ್ತಿತ್ತು. ಬರಬರುತ್ತ ನನಗೆ ಕೊರತೆಗಳ, ತಗ್ಗುಗಳ

ಪರಿಚಯವಾಗಿ ಅವುಗಳನ್ನು ತಿದ್ದುತ್ತ ನಡೆದೆ. ಕಾರಣ ಈಗ ನನಗೆ ಚಿಕ್ಕಪುಟ್ಟ ಲೇಖನಗಳನ್ನು ಬರೆಯುವ ಧೈರ್ಯಬಂದಿದೆ. 'ಪುಸ್ತಕ ಪ್ರಪಂಚ' ನನ್ನನ್ನು ಇಷ್ಟರ ಮಟ್ಟಿಗೆ ಸುಧಾರಿಸಿದೆ ಎಂದರೆ ಕಥೆ ಮುಗಿಯಲಿಲ್ಲ. ಸಂಪಾದಕ ಮಂಡಲಿಯ ಹಿರಿಯರು ಪ್ರೋತ್ಸಾಹ ಕೊಡುವದನ್ನು ನಿಲ್ಲಿಸಿಯೇ ಇಲ್ಲ. ಬರೆಯಬೇಕು, ಚೆನ್ನಾಗಿ ಬರೆಯಬೇಕು ಎಂದು ಪುಸಲಾಯಿಸುತ್ತಲೇ ಇದ್ದಾರೆ. ಸಂಪಾದಕ ಮಂಡಲಿಯವರು ಹೀಗಿರಬೇಕು. ಹೀಗಿದ್ದರೆ ನನ್ನಂಥ ಅಸಾಹಿತ್ಯಿಕ ವ್ಯಕ್ತಿಯೂ ಸಾಹಿತಿಯಾಗಬಲ್ಲ, ತನ್ನ ಶಕ್ತಿಗನುಸಾರ ಸಾಹಿತ್ಯ ರಚಿಸ ಬಲ್ಲ. ಕಾರಣ ಇಂದು ನಾನು ಬರೆಯುತ್ತಿರುವದೆಲ್ಲ 'ಪುಸ್ತಕ ಪ್ರಪಂಚ'ದ ಮಾರ್ಗದರ್ಶನದಿಂದ. ಅದರ ಸಂಪಾದಕ ಮಂಡಳಿಯ ಸದಸ್ಯರ ಪ್ರೋತ್ಸಾಹದಿಂದ. ಈ ಹಿರಿಯರು ನನ್ನಲ್ಲಿಯ ಒರಟುತನವನ್ನು ಕಡಿಮೆಗೊಳಿಸಿರುವರು ಎಂದೇನಲ್ಲ. ನನ್ನ ಭಾಷೆಯ ಒರಟುತನಕ್ಕೆ ಒಂದು ಆಕಾರ ಕೊಟ್ಟರು. ಆದ್ದರಿಂದಲೇ ನಾನು ಪುಸ್ತಕ ಪ್ರಪಂಚಕ್ಕೆ ಆದರ ಪೂರ್ವಕ ನಮನಗಳನ್ನು ಸಲ್ಲಿಸುವುದು.

ಒರಟೆಂದರೇ ಭಾಷೆಯಸು ? ಹೃದಯ ಮಿಡಿತವದು
ಧರಣಿಮಂಡಲದಲಿಹ ವೈವಿಧ್ಯ ಸೂಚಕವು
ಪರಮಾತ್ಮನವತಾರ ಒರಟಾಗಿ ತೊಡಗಿತಲ!
ನರಬಲದ ಕೊನೆ ಹಂತವೇರ್ದಾಗ ಅತ್ರಿಸೂನು



ಪ್ರಪಂಚಕ್ಕೆ ಹೊಸದಾಗಿ ಹೇಳಲು ನನ್ನಲ್ಲಿ ಏನೂ ಇಲ್ಲ. ಸತ್ಯ ಮತ್ತು ಅಹಿಂಸೆಗಳು ಪರ್ವತಗಳಷ್ಟೇ ಹಳೆಯವು

-ಮಹಾತ್ಮ ಗಾಂಧೀಜೀ

ಪುಸ್ತಕ ಪ್ರಪಂಚದೊಡನೆ ನಂಟು

ಉಮಾ ಸರಸ್ವತಿ
ಅನುಪಮ, ೧೧೩೭, ಜಿ ಅಂಡ್
ಎಚ್ ಬ್ಲಾಕ್, ಕುವೆಂಪು ನಗರ,
ಮೈಸೂರು-೫೭೦ ೦೨೩.

ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಅಂದರೆ ನಾನಿನ್ನೂ ವಿದ್ಯಾರ್ಥಿದೆಸೆಯಲ್ಲಿದ್ದಾಗ ನನಗೆ ಪುಸ್ತಕಪ್ರಪಂಚದ ಪರಿಚಯವಾಯಿತು. ವಿದ್ಯಾರ್ಥಿ ಸಹಜ ಹುರುಪು, ಸ್ಫೂರ್ತಿ, ಅಪರಿಮಿತ ಉತ್ಸಾಹ ಎಲ್ಲವೂ ಕೂಡಿರುವ ಸಮಯವದು. ಏನಾದರೂ ಹೊಸದೊಂದನ್ನು ಸಾಧಿಸಬೇಕೆಂಬ ಛಲ. ಈ ಸಂದರ್ಭದಲ್ಲಿ ಕಂಡ ಆಶಾಕಿಂಡಿ ಎಂದರೆ ಲೇಖನಗಳ ಬರವಣಿಗೆ ಮತ್ತು ಅದರ ಮೂಲಕ ಸಾರ್ವಜನಿಕ ಜಗತ್ತಿನ ಕದ ತಟ್ಟುವುದು. ಬರವಣಿಗೆಯೇನೋ ಮಾಡಬಹುದು. ಆದರೆ ಬರೆದುದನ್ನು ಪ್ರಕಟ ಪಡಿಸುವುದು ಹೇಗೆ ಎಂಬುದು ಮರುಪ್ರಶ್ನೆ. ಕಳುಹಿಸಿದ ಲೇಖನ ಹಿಂದಿರುಗಿ ಬರಬಾರದೆಂಬ ಸಂಕಲ್ಪ ಬೇರೆ.

ಅನುವಾದ ಕ್ಷೇತ್ರದೆಡೆಗಿನ ಒಲವು ಹಾಗೂ ಗಳಿಸಿದ ಅರಿವಿನ ಫಲವಾಗಿ ಹಿಂದಿಯಿಂದ ಕನ್ನಡಕ್ಕೆ ಕೆಲವು ಲೇಖನಗಳನ್ನು ನಾನು ಅನುವಾದಿಸಿದೆ. ಮುಂದಿನ ಹಂತ ಪ್ರಕಾಶನಕ್ಕೆ ಮೂಲಲೇಖಕರ ಅಪ್ಪಣೆ ಬೇಕು ಎಂಬುದು. ಆದರೆ ಅವರ ವಿಳಾಸಕ್ಕೆ ತಡಕಾಡಿ ಅದನ್ನೆಲ್ಲಿಂದ ತರುವುದು. ಈ ಯೋಚನೆಯಲ್ಲಿದ್ದಾಗ ನೆರವಿಗೆ ಬಂದಿದ್ದು ಪುಸ್ತಕ ಪ್ರಪಂಚ. ಇದರ ಜೊತೆ ನಿಕಟ ಸಂಪರ್ಕ ಕಲ್ಪಿಸುವಲ್ಲಿ ನನ್ನ ಪತಿ ಶ್ರೀ ಲಕ್ಷ್ಮಿ ನಾರಾಯಣ ಅರೋರಾ ಅವರ ಯತ್ನ ಉಲ್ಲೇಖನೀಯ.

ಬರೆದ ಲೇಖನಗಳನ್ನು ಅಚ್ಚುಕಟ್ಟು ರೂಪದಲ್ಲಿ ಪತ್ರಿಕೆಯ ಚೌಕಟ್ಟಿನಲ್ಲಿ ಅಳವಡಿಸುವುದು ಎರಡನೆಯ ಹಂತ. ಈ ನಿಟ್ಟಿನಲ್ಲಿ ಮಂಡಳಿಯ ಸದಸ್ಯರು, ಹಿರಿಯರೂ ಆದ ಶ್ರೀ ರಾ. ವೆಂ. ಶ್ರೀನಿವಾಸಮೂರ್ತಿ, ಶ್ರೀ ಜಿ. ಟಿ. ನಾರಾಯಣರಾವ್ ಹಾಗೂ ಪೂಜ್ಯ ಗುರು ಗಳಾದ ಡಾ. ಪ್ರಧಾನ್ ಗುರುದತ್ತ ಇವರುಗಳಿಂದ ದೊರೆತ ಉತ್ತೇಜನ ಮತ್ತು ಪ್ರೋತ್ಸಾಹ ಸ್ಮರಣೀಯ. ೧೯೯೪ರಲ್ಲಿ ನಾನು ಕೆಲವು ದಿನಗಳು ಶಿಮ್ಲಾನಲ್ಲಿ ಇದ್ದಾಗ ಲೇಖನವೊಂದನ್ನು ಅನುವಾದಿಸಿ ಪುಸ್ತಕ ಪ್ರಪಂಚಕ್ಕೆ ಕಳುಹಿಸಿದ್ದೆ. ಅದನ್ನು ನೋಡಿದ ಶ್ರೀ ಜಿ. ಟಿ. ನಾರಾಯಣ ರಾಯರು ತಕ್ಷಣ ಲೇಖನ ಮುಟ್ಟಿದ ಬಗ್ಗೆ ಮೆಚ್ಚುಗೆ ಪತ್ರವೊಂದನ್ನು ಬರೆದರು. ಲೇಖಕರ ಬಗೆಗೆ ಸಂಪಾದಕ ಮಂಡಳಿಯ ಕಾಳಜಿ ಮತ್ತು ಸಹಕಾರಗಳನ್ನು ನೆನೆದಾಗ ನನ್ನಲ್ಲಿ ಈ ಪತ್ರಿಕೆಯ ಬಗೆಗೆ ವಿಶೇಷವಾದ ಗೌರವಾದರಗಳು ಮೂಡುತ್ತವೆ.

ಕೆಲವೊಮ್ಮೆ ಕೆಲಸದ ಒತ್ತಡಗಳಿಂದಾಗಿ ಲೇಖನ ಕೊಡುವುದು ತಡವಾಗಿರುವುದೂ ಉಂಟು. ಹಾಗಾದಾಗಲೆಲ್ಲ ಸಂಪಾದಕರಾಗಿದ್ದ ಶ್ರೀ ಚಂದ್ರಶೇಖರ ಆರಾಧ್ಯ ಅವರು ಸ್ವತಃ ತಾವೇ ಆಸಕ್ತಿ ವಹಿಸಿ, ಲೇಖನವನ್ನು ಪಡೆದು ಅಚ್ಚು ಹಾಕಿಸಿದ್ದೂ ಉಂಟು. ಇಂದಿಗೂ ಆ ಪರಿಪಾಟಿಯನ್ನು ಮುಂದುವರಿಸುತ್ತಾ ಪತ್ರಿಕೆ ಚೆನ್ನಾಗಿ ಬರಲೆಂಬ ಹಂಬಲ ಹೊಂದಿರುವ ಶ್ರೀ ನಂಜುಂಡಸ್ವಾಮಿ ಮತ್ತಿತರ ಸಹೋದ್ಯೋಗಿ ಮಿತ್ರರು ಲೇಖನಕ್ಕಾಗಿ ವಿಶ್ವಾಸಪೂರ್ವಕವಾಗಿ ಒತ್ತಾಯ ಮಾಡುತ್ತಿರುತ್ತಾರೆ.

ಲೇಖನಗಳ ಸಂಗ್ರಹಣೆ, ಆಯ್ಕೆ, [illegible]ಣ, ಅಚ್ಚುಕಟ್ಟು ಮುದ್ರಣ ಹೊತ್ತು ಕನ್ನಡ ವಯಸ್ಕರ ಓದುಗರ ಅರಿವು ಹೆಚ್ಚಿಸುವಲ್ಲಿ ಪುಸ್ತಕ ಪ್ರಪಂಚ ಪ್ರಕಾಶನ ಮಾಡುತ್ತಿರುವ ಸೇವೆ ಎಂದಿಗೂ ಸ್ಮರಣೀಯ. ಇದು ಇನ್ನೂ ಹೆಚ್ಚಿನ ವ್ಯಾಪ್ತಿಯಲ್ಲಿ ತನ್ನ ಸೇವೆಯನ್ನು ಮುಂದುವರಿಸಲೆಂದು ಹಾರೈಸುತ್ತೇನೆ.

ಸುವರ್ಣ ಸಂಬಂಧ

ಡಾ. ಲತಾ ರಾಜಶೇಖರ್
ರಾಜಶೇಖರ ಮೆಡಿಕಲ್
ಫೌಂಡೇಶನ್ ಮತ್ತು ಆಸ್ಪತ್ರೆ
ಟಿ.ನರಸೀಪುರ ರಸ್ತೆ
ಮೈಸೂರು

ಸುಮಾರು ಐದು ದಶಕಗಳನ್ನು ಮೀರಿ ಕನ್ನಡ ಸಾರಸ್ವತ ಲೋಕಕ್ಕೆ ಅಪೂರ್ವ ಕೊಡುಗೆ ನೀಡಿದ 'ಪುಸ್ತಕ ಪ್ರಪಂಚ' ಮಾಸಪತ್ರಿಕೆಯ ನಡುವಿನ ಸಂಬಂಧವನ್ನು ಹೇಳುವಾಗ, ನನ್ನ ಬಾಲ್ಯದ ನೆನಪಿನ ಸುರುಳಿ ಬಿಚ್ಚಿಕೊಳ್ಳುತ್ತದೆ. ಕಿಶೋರಿ ಯಾದ ನನಗೆ ಆಗ ಸಿಕ್ಕಿದ್ದನ್ನು ಓದುವ ಗೀಳು. 'ಪುಸ್ತಕ ಪ್ರಪಂಚ'ದ ಸೋದರ ಸಂಬಂಧಿಯಾದ 'ಬೆಳಕು' ಪ್ರಥಮವಾಗಿ ನನ್ನನ್ನು ಆಕರ್ಷಿಸಿತು. ಸರಳವಾದ ಭಾಷೆ, ಸಂಕೀರ್ಣವಲ್ಲದ ವಿಷಯ, ಉತ್ತಮ ವಿನ್ಯಾಸದ ದೊಡ್ಡ ಅಕ್ಷರಗಳ ಜೋಡಣೆಯ 'ಬೆಳಕು' ವಾರಪತ್ರಿಕೆ ನನ್ನಂಥೆ ಹಲವರನ್ನು ಆಕರ್ಷಿಸಿರುವುದರಲ್ಲಿ ವಿಸ್ಮಯ ಪಡಬೇಕಾಗಿಲ್ಲ.

ಮುಂದೊಂದು ದಿನ, ಮದ್ದೂರಿನ ಸಮೀಪದ ಬೆಸಗರಳ್ಳಿಯ ನನ್ನ ಬಂಧುಗಳ ಮನೆಗೆ ಹೋಗಿದ್ದೆ, ಅಪರೂಪವಾಗಿ ಹೋಗಿದ್ದ, ನನ್ನನ್ನು ಕೂಡಿಕೊಂಡು ನೆರೆಯಲ್ಲಿದ್ದ ಶಿವಾರಗುಡ್ಡ ವಿದ್ಯಾಪೀಠಕ್ಕೆ ವನಭೋಜನಕ್ಕೆ ಧಾವಿಸಿದೆವು. ಪ್ರಶಾಂತ ವಾತಾವರಣ, ಹಚ್ಚಹಸಿರಿನ ಫಲಭರಿತ ಆ ಪರಿಸರದಲ್ಲಿ ನಾವು ಮೆದ್ದ ರಸಕವಳ, ದೇಹ ಮನಸ್ಸನ್ನು ಉಲ್ಲಾಸಗೊಳಿಸಿತು. ಈ ಎಲ್ಲಾ ಬಾದರಾಯಣ ಸಂಬಂಧಗಳನ್ನು ಹೇಳುವ ಉದ್ದೇಶವಿಷ್ಟೆ,; 'ಪುಸ್ತಕ ಪ್ರಪಂಚ'ದ ಸಂಪರ್ಕಕ್ಕೆ ಬರುವ ಪೂರ್ವದ ದಿನಗಳಲ್ಲಿ ಈ ಪತ್ರಿಕೆಗೆ ಕೃಪಾಛತ್ರವಾಗಿರುವ ವಯಸ್ಕರ ಶಿಕ್ಷಣ ಸಮಿತಿಯ, ನನ್ನೊಡನ ಸಂಬಂಧ, ನನ್ನ ಸಾಹಿತ್ಯ ಸೃಷ್ಟಿಗೆ ಪ್ರತ್ಯೇಕ್ಷ, ಪರೋಕ್ಷವಾಗಿ ಎರಡು ದಶಕಗಳ ಹಿಂದಿನ ಪ್ರೇರಣೆಯನ್ನು ತಿಳಿಸುವುದಾಗಿದೆ.

ವಿಶ್ರಾಂತ ಕುಲಪತಿಗಳೂ, ಮೇರು ಸಾಹಿತಿಯೂ, ಹಿರಿಯ ಶಿಕ್ಷಣ ತಜ್ಞರು ಆದ ಪ್ರೊ. ದೇಜಗೌರವರ ಟ್ರಸ್ಟ್‌ನಲ್ಲಿ ಖಜಾಂಚಿಯಾಗಿದ್ದೆ. ಹಿರಿಯರಾದ ದೇಜಗೌ ದಂಪತಿಗಳು ಒಂದು ದಿನ, ನನ್ನನ್ನು 'ಪುಸ್ತಕ ಪ್ರಪಂಚ' ಮಾಸಿಕ ಸಂಪಾದಕೀಯ ಮಂಡಲಿಯ ಸದಸ್ಯಳಾಗಿ ಆಯ್ಕೆ ಮಾಡಿರುವ ವಿಷಯವನ್ನು ಪ್ರಸ್ತಾಪಿಸಿದರು. ನನಗೆ ಭಯಮಿಶ್ರಿತ ಸಂತೋಷವಾಯ್ತು. 'ಪುಸ್ತಕ ಪ್ರಪಂಚ' ದಂತಹ ಹಿರಿಯ ಪತ್ರಿಕೆಗೆ ಕನ್ನಡ ಸಾಹಿತ್ಯ ಸಂಸ್ಕೃತಿ, ಆಡಳಿತ, ವಿಜ್ಞಾನ ಇತ್ಯಾದಿ ಕ್ಷೇತ್ರಗಳಲ್ಲಿ ದುಡಿದ ಗಣ್ಯಾತಿಗಣ್ಯರ ಬಳಗವಿರುವುದನ್ನು ನೋಡಿ-ಕೇಳಿ-ಓದಿ ತಿಳಿದಿದ್ದೆ. ಅಳುಕಿನಿಂದಲೆ ನನ್ನ ಒಪ್ಪಿಗೆಯನ್ನು ತಿಳಿಸಿದೆ. ನನ್ನ ಮನೆಯ ಹತ್ತಿರದಲ್ಲೇ ವಯಸ್ಕರ ಶಿಕ್ಷಣ ಸಮಿತಿಯ ಕೇಂದ್ರ ಕಛೇರಿಯಿದ್ದು 'ಪುಸ್ತಕ ಪ್ರಪಂಚ'ದ ಮಾಸಿಕ ಸಭೆಯಲ್ಲಿ ಉತ್ಸುಕಳಾಗಿ ಭಾಗವಹಿಸುತ್ತಿದ್ದೆ.

'ಪುಸ್ತಕ ಪ್ರಪಂಚ'ದ ಮಾಸಿಕ ಸಭೆಯಲ್ಲಿ ಭಾಗವಹಿಸುವುದೆಂದರೆ ಅದೊಂದು ಅಪೂರ್ವ ಸುಯೋಗ. ಪ್ರೊ॥ದೇಜಗೌರವರ ಅಧ್ಯಕ್ಷತೆಯಲ್ಲಿ ನಡೆಯುತ್ತಿದ್ದ ಸಂಪಾದಕೀಯ ಮಂಡಲಿಯಲ್ಲಿ ಡಾ. ಪ್ರಧಾನ್ ಗುರುದತ್ತ, ಜಿ.ಟಿ.ನಾ., ಪ್ರೊ. ಸಿ. ನಾಗಣ್ಣ, ಡಾ. ಹಾತಿಕ್ರ, ಪರಮಶಿವ ನಡುಬೆಟ್ಟರಂಥ ಲೇಖಕರುಗಳೊಡನೆ ನಡೆಯುತ್ತಿದ್ದ ವಿಚಾರವಿನಿಮಯ ಬೋಧಪ್ರದವಾಗಿ ನಾನು ಪುಲಕಗೊಳ್ಳುತ್ತಿದ್ದೆ. ಈ ಸಂಬಂಧ ಮುಂದುವರಿದಂತೆ ಅಂದಿನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಆರ್. ಶಾಂತರಾಜ್

ರವರ ನೇತೃತ್ವದಲ್ಲಿ ಶಿವಾರಗುಡ್ಡ ವಿದ್ಯಾಪೀಠಕ್ಕೆ ನಾನು ಮತ್ತೊಮ್ಮೆ ಹೋಗಿ ಹಳೆಯದನ್ನು ಮೆಲಕು ಹಾಕುವಂತಾಯ್ತು.

ಲೇಖಕಿಯಾಗಿ 'ಪುಸ್ತಕ ಪ್ರಪಂಚ'ಕ್ಕೆ ನಾನು ಪ್ರವೇಶಿಸಿದ್ದು ಸಂತಸ ತರುವ ವಿಷಯ. ಕುವೆಂಪು, ಚದುರಂಗ ಇವರನ್ನು ಕುರಿತ ನನ್ನ ಲೇಖನಗಳು ಈ ಮಾಸಿಕದಲ್ಲಿ ಪ್ರಕಟವಾದವು. ಬೇಂದ್ರೆ ಯವರ ಕುರಿತ ವಿಶೇಷ ಸಂಚಿಕೆಯ 'ಪುಸ್ತಕ ಪ್ರಪಂಚ'ದಲ್ಲಿ ನನ್ನ ಕವಿತೆಯೊಂದು ಅನಾವರಣಗೊಂಡಿದೆ. ಕೆಲವು ಪುಸ್ತಕಗಳ ವಿಮರ್ಶೆಯನ್ನು ಈ ಪತ್ರಿಕೆಯಲ್ಲಿ ಮಾಡಿದ್ದೇನೆ. ನನ್ನ ಕೃತಿಗಳಾದ 'ಬೆಳಕಿನ ಎದೆಹಾಲು' 'ಕಾವೇರಿ ಸೆ ಗಂಗಾ ಕಿವ್ರೋರ್'ಮತ್ತು 'ಶೇಫಲಿಕಾ'ಗಳಿಗೆ ಶ್ರೀ ಹಾಲತಿ ಸೋಮಶೇಖರ್ ಮತ್ತು ಮಂಜುಳಾ ಹುಲ್ಲಹಳ್ಳಿ ಯವರು. 'ಪುಸ್ತಕ ಪ್ರಪಂಚ' ಓದುಗರ ಬಳಗಕ್ಕೆ ಸಹೃದಯತೆಯಿಂದ ಪರಿಚಯಿಸಿಕೊಟ್ಟಿದ್ದಾರೆ. ಶ್ರೀ ಚಂದ್ರಶೇಖರಾರಾಧ್ಯ, ರಾ. ಬೋರಯ್ಯನವರಂಥ ಸಮಿತಿಯ ಸಂಪಾದಕರುಗಳು ಸಜ್ಜನಿಕೆಯಿಂದ ಸಹಕರಿಸಿದ್ದಾರೆ. ವಯಸ್ಕರ ಶಿಕ್ಷಣ ಸಮಿತಿಯ ಕೇಂದ್ರ ಕಛೇರಿಯ ಆವರಣ ದಲ್ಲಿ ಡಾ. ಎಚ್. ಎಂ. ನಾಗರಾಜು ನವರು ಪ್ರಧಾನ ಕಾರ್ಯದರ್ಶಿಯಾಗಿದ್ದಾಗ 'ಪುಸ್ತಕ ಪ್ರಪಂಚ' ಸಂಪಾದಕೀಯ ಮಂಡಲಿ ಸದಸ್ಯ ರಿಂದ ತೆಂಗಿನ ಗಿಡ ಹಾಕಿಸಿದರು. ಅವುಗಳು ಈಗ ಪ್ರವೇಶದ ಇಕ್ಕೆಲಗಳಲ್ಲಿ ಕೈಬೀಸಿ ಕರೆಯುತ್ತಿವೆ. ಈ ನಡುವೆ ನಾನು ಬರೆಯಲಾದ 'ಪ್ರೌಢ ಪ್ರಬಂಧ' ಸಿದ್ಧತೆ ಹಾಗೂ ದೂರವಾದ ನನ್ನ ಮನೆಯ ಸಂಬಂಧ 'ಪುಸ್ತಕ ಪ್ರಪಂಚ' ಪತ್ರಿಕೆಯ ಒಡನಾಟ ಮೊದಲಿನಂತೆ ಹತ್ತಿರವಾಗಿಲ್ಲ. ಆದರೆ, ಓದುಗಳಾಗಿ, ಲೇಖಕಿಯಾಗಿ ನಾನು ಅದರಿಂದ ದೂರವಾಗುವಂತಿಲ್ಲ.

ತಿದ್ದುಪಡಿ

ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರು : ಒಂದು ಸಿಂಹಾವಲೋಕನ ಲೇಖನದಲ್ಲಿ ನ. ಭದ್ರಯ್ಯನವರ ಜೀವಿತಾವಧಿಯು ೧೯೮೨-೮೮ ಎಂದು ತಪ್ಪಾಗಿ ಮುದ್ರಿತವಾಗಿದೆ. ಇದನ್ನು ೧೯೧೨ -೮೮ ಎಂದು ಓದಿಕೊಳ್ಳಲು ಕೋರಿದೆ (ಪುಟ ೬೭). -ಸಂ

ಸುಧಾರಣೆಯು ಜೀವನದ ಮಾರ್ಗವನ್ನು ಸುಗಮಗೊಳಿಸುತ್ತದೆ.

-ವಿಲಿಯಮ್ ಬ್ಲ್ಯಾಕ್

'ಪುಸ್ತಕ ಪ್ರಪಂಚ' ಮತ್ತು ನಾನು

ಡಾ. ತಿಪ್ಪೇಸ್ವಾಮಿ
ಪ್ರಾಧ್ಯಾಪಕ ಮತ್ತು ಅಧ್ಯಕ್ಷ
ಹಿಂದೀ ಅಧ್ಯಯನ ವಿಭಾಗ
ಮಾನಸ ಗಂಗೋತ್ರಿ
ಮೈಸೂರು-೬

'ಪುಸ್ತಕ ಪ್ರಪಂಚ' ಕನ್ನಡ ಪತ್ರಿಕಾಲೋಕದ ವಿಶಿಷ್ಟ ಮಾಸಿಕ. ಪ್ರತಿಷ್ಠಿತ ಮಾಸಿಕಗಳಾದ 'ರೀಡರ್ಸ್ ಡೈಜೆಸ್ಟ್' (ಇಂಗ್ಲಿಷ್) ಹಾಗೂ 'ನವನೀತ್'(ಹಿಂದಿ)ಗಳಿಂದ ಅನುವಾದಿಸಲಾದ ಹಾಗೂ ಕನ್ನಡದಲ್ಲಿನ ಮೌಲಿಕ ಬರಹಗಳನ್ನು ಪ್ರಕಟಿಸುತ್ತ ಬಂದಿರುವ ನಿಯತಕಾಲಿಕ ಮಾಸಪತ್ರಿಕೆ. ಇದರಲ್ಲಿ ಪ್ರಕಟವಾಗುವ ಲೇಖನಗಳು ಮುಖ್ಯವಾಗಿ ಗ್ರಾಮೀಣ ಪ್ರದೇಶಗಳ ಜನರಿಗೆ ಹಾಗೂ ಶಾಲಾ-ಕಾಲೇಜುಗಳಲ್ಲಿ ಓದುತ್ತಿರುವ ಜ್ಞಾನದಾಹಿ ಮನಸ್ಸುಗಳಿಗೆ ಜ್ಞಾನ- ವಿಜ್ಞಾನದ ವಿವಿಧ ಕ್ಷೇತ್ರಗಳ ಮಾಹಿತಿಗಳನ್ನು, ವಿಚಾರ ವಿಶ್ಲೇಷಣೆಗಳನ್ನು ತನ್ನ ಹುಟ್ಟಿನ ದಿನ ಗಳಿಂದ ಇಂದಿನವರೆಗೂ ನಿರಂತರವಾಗಿ ಪ್ರಕಟಿ ಸುತ್ತ ಬಂದಿರುವ ಬಹುಜನೋಪಯೋಗಿ ಪತ್ರಿಕೆ 'ಪುಸ್ತಕ ಪ್ರಪಂಚ'. ಕನ್ನಡದ ಈ ವಿಶಿಷ್ಟ ಪತ್ರಿಕೆ ಯಾವ ಸದ್ದುಗದ್ದಲ ಮಾಡದೆ ಹಾಗೂ ಯಾವುದೇ ಪತ್ರಿಕೆಗೆ ಪೈಪೋಟಿಯಾಗಿ ನಿಲ್ಲದೆ ತನ್ನ ಪಾಡಿಗೆ ತಾನು ವಿಚಾರಗಳನ್ನು ಜನರ ಬಳಿಗೆ ಕೊಂಡೊಯ್ಯುತ್ತಿರುವ 'ಪುಸ್ತಕ ಪ್ರಪಂಚ' ಈಚಿನ ವರ್ಷಗಳಲ್ಲಿ ಹೊಸರೂಪ, ವಿನ್ಯಾಸ ಗಳೊಂದಿಗೆ ಆಧುನಿಕ ಜಗತ್ತಿನ ಬದಲಾವಣೆಗೂ ಸ್ಪಂದಿಸುತ್ತ ನಾಗಿರುವುದು ಇದರ ಜೀವಂತಿಕೆಗೆ ಸಾಕ್ಷಿ.

'ಪುಸ್ತಕ ಪ್ರಪಂಚ' ದಂಥ ಪತ್ರಿಕೆಗಳು ಭಾರತದ ಬೇರೆ-ಬೇರ ಭಾಷೆಗಳಲ್ಲಿ ಪ್ರಕಟವಾಗುತ್ತಿರುವುದರ ಬಗ್ಗೆ ಮಾಹಿತಿ ಇಲ್ಲ. ನನಗೆ ತಿಳಿದ ಮಟ್ಟಿಗೆ ಈ ಸ್ವರೂಪದ ಪತ್ರಿಕೆ ಇಲ್ಲ. ಕರ್ನಾಟಕದಲ್ಲಿರುವಂತೆ ಬೇರೆ ರಾಜ್ಯಗಳಲ್ಲೂ ವಯಸ್ಕರ ಶಿಕ್ಷಣ ಸಂಸ್ಥೆಗಳು ಇದ್ದರೂ ಅವು 'ಪುಸ್ತಕ ಪ್ರಪಂಚ'ದಂಥ ಪತ್ರಿಕೆಗಳನ್ನು ಪ್ರಕಟಿಸುತ್ತಿವೆ ಎಂದೇನೂ ಅನ್ನಿಸುತ್ತಿಲ್ಲ. ಈ ದೃಷ್ಟಿಯಿಂದ ಕರ್ನಾಟಕದ ವಯಸ್ಕರ ಶಿಕ್ಷಣ ಸಂಸ್ಥೆಯ ಈ ಪತ್ರಿಕೆಗೆ ತನ್ನದೇ ಆದ ಮಹತ್ವವಿದೆ.

'ಪುಸ್ತಕ ಪ್ರಪಂಚ'ವನ್ನು ಕುರಿತಂತೆ ಬರೆಯುತ್ತಿರುವಾಗ ನನ್ನ ನೆನಪು ನನ್ನ ಪ್ರೌಢ ಶಾಲೆಯ ದಿನಗಳತ್ತ ಹೋಗುತ್ತಿದೆ. ನನ್ನ ಊರು ಕೊರಟಗೆರೆ. ಅಲ್ಲಿದ್ದ ವಯಸ್ಕರ ಶಿಕ್ಷಣ ಕೇಂದ್ರಕ್ಕೆ 'ಬೆಳಕು' ಮತ್ತು 'ಪುಸ್ತಕ ಪ್ರಪಂಚ' ಗಳು ಪ್ರತಿ ತಿಂಗಳೂ ಬರುತ್ತಿದ್ದುವು. ಆಗ ಆ ಕಛೇರಿಯಲ್ಲಿ ಅಧಿಕಾರಿಯಾಗಿದ್ದ ವ್ಯಕ್ತಿ ನನ್ನ ಮನೆಯ ಪಕ್ಕದ ಮನೆಯಲ್ಲಿ ವಾಸಿಸುತ್ತಿದ್ದುದ ರಿಂದಾಗಿ ಅವರು ಈ ಪತ್ರಿಕೆಗಳನ್ನು ಓದಲು ಮನೆಗೆ ತರುತ್ತಿದ್ದರು. ಅವರ ಒಡನಾಟ ದಿಂದಾಗಿ ಈ ಪತ್ರಿಕೆಗಳನ್ನು ಓದುವ ಅವಕಾಶ ನನಗೂ ದೊರೆಯುತ್ತಿತ್ತು. 'ಪುಸ್ತಕಪ್ರಪಂಚ' ದಲ್ಲಿ ಪ್ರಕಟವಾಗುತ್ತಿದ್ದ ವಿವಿಧ ವಿಷಯ ಗಳನ್ನು ಕುರಿತ ಲೇಖನಗಳು, ಅವುಗಳ ಭಾಷೆ, ಶೈಲಿ ಆಗಿನ ದಿನಗಳಲ್ಲಿ ನನ್ನ ಎಳೆಯ ಮನಸ್ಸನ್ನು ಹಿಡಿದಿಟ್ಟು ಬಿಟ್ಟಿದ್ದುವು. ಆಗ ಈಗಿನಷ್ಟು ಸಂಖ್ಯೆಯ ಪತ್ರಿಕೆಗಳಿರಲಿಲ್ಲ. ಇದ್ದ ಒಂದೆರಡು ಪತ್ರಿಕೆಗಳಲ್ಲಿ 'ಪುಸ್ತಕ ಪ್ರಪಂಚ'ನನ್ನ ಮತ್ತು ನನ್ನಂಥ ಎಳೆಯರ ಮನಸ್ಸನ್ನು ತನ್ನೆಡೆಗೆ ಸೆಳೆದು ಕೊಂಡ ಪತ್ರಿಕೆಯಾಗಿತ್ತು. ಆಗ ನಾನೂ ಒಂದಲ್ಲ ಒಂದು ದಿನ ಈ ಪತ್ರಿಕೆಗೆ ಬರೆಯು ತ್ತೇನೆ ಎಂಬ ಕಲ್ಪನೆಯೂ ಇರಲಿಲ್ಲ. ಮುಂದೊಂದು ದಿನ ನನ್ನ ಮೊದಲ ಲೇಖನ

'ಪುಸ್ತಕಪ್ರಪಂಚ'ದಲ್ಲಿ ಪ್ರಕಟವಾದಾಗ ಅತೀವ ಸಂತೋಷ ಹಾಗೂ ಧನ್ಯತೆಯನ್ನು ಅನುಭವಿಸಿದೆ.

'ಪುಸ್ತಕಪ್ರಪಂಚ'ದೊಂದಿಗೆ ನನ್ನ ಸಂಬಂಧ ಇಪ್ಪತ್ತೈದು ವರ್ಷಗಳಷ್ಟು ಹಳೆಯದು . ಈ ಇಪ್ಪತ್ತೈದು ವರ್ಷಗಳಲ್ಲಿ ನನ್ನ ಹಲವಾರು ಮೌಲಿಕ ಹಾಗೂ ಅನುವಾದಿತ ಬರಹಗಳು ಇದರಲ್ಲಿ ಪ್ರಕಟವಾಗಿವೆ. ಹಿಂದಿಯ 'ನವನೀತ್' ಮಾಸಿಕದಿಂದ ಹಲವಾರು ಮಂದಿ ವ್ಯಕ್ತಿ ವಿಶಿಷ್ಟರನ್ನು ಕುರಿತ ಲೇಖನಗಳನ್ನು ನಾನು ಈ ಪತ್ರಿಕೆಗಾಗಿ ಅನುವಾದಿಸಿದ್ದೇನೆ. ಈ ವ್ಯಕ್ತಿಗಳು ರಾಷ್ಟ್ರ ಜೀವನದಲ್ಲಿ ಹಾಗೂ ಸಾಂಸ್ಕೃತಿಕ ವಲಯದಲ್ಲಿ ಚರ್ಚಿತರೂ ಪ್ರಸಿದ್ಧರೂ ಆಗಿರುತ್ತಿದ್ದುದ್ದರಿಂದ ಇವನ್ನು 'ಪುಸ್ತಕ ಪ್ರಪಂಚ' ಪ್ರೀತಿಯಿಂದ ಪ್ರಕಟಿಸಿದೆ. ಸಂಭಾವನೆ ನೀಡಿದೆ. ಅಂತೆಯೇ ಅಪಾರ ಓದುಗರನ್ನೂ ನನಗೆ ದೊರಕಿಸಿಕೊಟ್ಟಿದೆ. 'ಪುಸ್ತಕ ಪ್ರಪಂಚ' ದಲ್ಲಿ ಪ್ರಕಟವಾದ ವ್ಯಕ್ತಿಚಿತ್ರಗಳನ್ನು ಈಚೆಗೆ ನಾನು 'ಮನೀಷಿ' ಎಂಬ ಹೆಸರಿನಲ್ಲಿ ಸಂಗ್ರಹಿಸಿ ಪ್ರಕಟಿಸಿದ್ದು ,ಇದು ವಿಮರ್ಶಕರ ಗಮನ ಸೆಳೆದಿದೆ.

'ಪುಸ್ತಕ ಪ್ರಪಂಚ'ದ ಪ್ರಧಾನ ಸಂಪಾದಕ ರಾದ ಮಾನ್ಯ ಪ್ರೊ. ದೇಜಗೌ ಅವರ ಅಭಿಮಾನ, ಪ್ರೀತಿ ನನ್ನ ಬಗೆಗೆ ಮೊದಲಿಂದಲೂ ಇರುವುದು ನನ್ನ ಭಾಗ್ಯವೆಂದೇ ನಂಬಿದ್ದೇನೆ. ಏಕೆಂದರೆ ಇಲ್ಲಿನ ಹಲವು ಲೇಖನಗಳಿಗೆ ಅವರೇ ಪ್ರೇರಣಾ ಶಕ್ತಿಯಾಗಿದ್ದಾರೆ. 'ಪುಸ್ತಕ ಪ್ರಪಂಚ' ಹಲವು ವಿಶೇಷಾಂಕಗಳನ್ನೂ ಪ್ರಕಟಿಸಿದೆ. ಆ ಮೂಲಕ ಭಾರತ ಹಾಗೂ ಜಗತ್ತಿನ ವಿಶಿಷ್ಟರನ್ನು ಕನ್ನಡ ಓದುಗರಿಗೆ ಪರಿಚಯಿಸಿದೆ. ಅಂಥ ಸಂಧರ್ಭ ದಲ್ಲೆಲ್ಲ ದೇಜಗೌ ನನ್ನನ್ನೂ ನೆನಪು ಮಾಡಿ ಕೊಂಡು ಲೇಖನಗಳನ್ನು ಬರೆಸಿದ್ದಾರೆ, ಕತೆಗಳನ್ನು ಅನುವಾದಿಸಿ ಕೊಡುವಂತೆ ಹೇಳಿದ್ದಾರೆ. ಕುವೆಂಪು ಸಾಹಿತ್ಯವನ್ನು ಕುರಿತಂತೆ 'ಪುಸ್ತಕ ಪ್ರಪಂಚ'ದ ವಿಶೇಷಾಂಕ ಪ್ರಕಟವಾದಾಗ ದೇಜಗೌ ಕುವೆಂಪು ಅವರ ಕತೆಗಳನ್ನು ಕುರಿತಂತೆ ಬರೆಯಲು ಹೇಳಿದರು. ಕವಿ ಕುವೆಂಪು ಅವರ ಸಮಗ್ರ ಕತೆಗಳನ್ನು ಕುರಿತಂತೆ ಬರೆದೆ. ಆ ದೀರ್ಘ ಲೇಖನವನ್ನು ಪುಸ್ತಕ ಪ್ರಪಂಚದಲ್ಲಿ ಪ್ರಕಟಿಸಿದರು. ಓದುಗರೂ ಮೆಚ್ಚಿದರು. ಹೀಗೆ ಮೆಚ್ಚಿದ ಮಂಡ್ಯದ ರಾಜಕಾರಣಿ-ಕಂ-ಸಾಹಿತಿಯೊಬ್ಬರು ನನ್ನ ಆಲೇಖನದ ಮೊದಲ ಭಾಗ ಹಾಗೂ 'ಧನ್ವಂತರಿ ಚಿಕಿತ್ಸೆ'ಯನ್ನು ಕುರಿತಂತೆ ನನ್ನ ವಿಮರ್ಶೆಯನ್ನು ಅಪಹರಿಸಿ (ಕೃತಿಚೌರ್ಯ ಮಾಡಿ)ತಮ್ಮ ಹೆಸರಿನಲ್ಲಿ 'ಆದಿಚುಂಚನಗಿರಿ' ಪತ್ರಿಕೆಯಲ್ಲಿ ಪ್ರಕಟಿಸಿದರು. ಒಮ್ಮೆ ಆಕಸ್ಮಿಕ ವಾಗಿ ಆ ಲೇಖನ ನನ್ನ ಕಣ್ಣಿಗೆ ಬಿದ್ದಾಗ, ಈ ಕೃತಿಚೌರ್ಯದ ಸಂಗತಿಯನ್ನು ಸ್ವಾಮೀಜಿ ಹಾಗೂ ಪತ್ರಿಕೆಯ ಸಂಪಾದಕರ ಗಮನಕ್ಕೆ ತಂದೆ. ಅವರು ಈ ಕೃತಿಚೌರ್ಯಕ್ಕೆ ವಿಷಾದಿಸಿದರ ಲ್ಲದೆ, ಈ ಲೇಖನಕ್ಕೆ ಸಲ್ಲಬೇಕಾದ ಸಂಭಾವನೆ ಯನ್ನು ನನಗೆ ಕಳಿಸಿ ಔದಾರ್ಯವನ್ನು ಮೆರೆದರು. ಈ ಪ್ರಸಂಗವನ್ನು ಯಾಕಾಗಿ ಹೇಳುತ್ತಿದ್ದೇನೆಂದರೆ ಪ್ರೊ. ದೇಜಗೌ 'ಪುಸ್ತಕ ಪ್ರಪಂಚ'ದಲ್ಲಿ ಪ್ರಕಟಿಸುತ್ತಿದ್ದ ಲೇಖನಗಳು ಅಪಹರಣಕ್ಕೆ ಯೋಗ್ಯವಾಗಿರುತ್ತಿದ್ದುವು. ನನ್ನ ಲೇಖನವನ್ನು ಅಪಹರಿಸಿದಂತೆ ಇನ್ನೆಷ್ಟು ಉತ್ತಮ ಲೇಖನಗಳು ಅಪಹರಣವಾಗಿ ವೆಯೋ ಏನೋ!

'ಪುಸ್ತಕ ಪ್ರಪಂಚ'ಕ್ಕೆ ಲೇಖನಗಳನ್ನು ಆಯ್ದುಕೊಳುವಾಗ ಪ್ರೊ. ದೇಜಗೌ ವಸ್ತು ನಿಷ್ಠತೆಗೆ ಆದ್ಯತೆ ಕೊಡುತ್ತ ಬಂದಿರುವುದನ್ನು ಉದ್ದಕ್ಕೂ ಗಮನಿಸುತ್ತ ಬಂದಿದ್ದೇವೆ. ಈ ಕುರಿತಂತೆ ಒಮ್ಮೆ ದೇಜಗೌ ಹೇಳಿದರು. 'ನೋಡಿ ತಿಪ್ಪೇಸ್ವಾಮಿ—ಎಂಬ ವ್ಯಕ್ತಿಯಿಂದ ಒಂದು ಲೇಖನ ಬಂತು ಇದರಲ್ಲಿ

ಪ್ರೊ___ ಅವರನ್ನು ಮನಸ್ಸಿನಲ್ಲಿಟ್ಟುಕೊಂಡು ಆ ವ್ಯಕ್ತಿ ಟೀಕಿಸಿದ್ದ. ಇದು ನನಗೆ ಗೊತ್ತಾಗು ವುದಿಲ್ಲವೆ? ಯಾರನ್ನು ಕುರಿತ ಟೀಕೆ ಎಂಬುದು ನಿಮಗೂ ಗೊತ್ತಾಗುತ್ತದೆ. ಇಂಥ ಟೀಕೆ, ವೈಯಕ್ತಿಕವಾದ ದ್ವೇಷಗಳನ್ನು ಕಾರಿಕೊಳ್ಳಲು 'ಪುಸ್ತಕಪ್ರಪಂಚ'ದಲ್ಲಿ ಅವಕಾಶವಿಲ್ಲ. ಹೀಗಾಗಿ ಆ ಲೇಖನವನ್ನು ಪ್ರಕಟಿಸಲಿಲ್ಲ. ದೇಜಗೌರ ವಿದ್ವತ್ತು ಅನುಭವ ಮತ್ತು ಪ್ರೀತಿಯಿಂದಾ ಗಿಯೇ 'ಪುಸ್ತಕ ಪ್ರಪಂಚ' ಜನಪ್ರಿಯವಾಗಿದೆ ಎಂದು ನಾನು ಭಾವಿಸಿದ್ದೇನೆ.

'ಪುಸ್ತಕ ಪ್ರಪಂಚ'ದ ಸಂಪಾದಕೀಯ ವಿಭಾಗದವರ ಕಾರ್ಯತತ್ಪರತೆಯನ್ನೂ ನಾನು ಇಲ್ಲಿ ಅವಶ್ಯ ಸ್ಮರಿಸಬೇಕಾಗಿದೆ. ಪ್ರಿಯ ಮಿತ್ರರಾದ ಶ್ರೀ ಬೋರಯ್ಯನವರು ಹಾಗೂ ಹಿಂದೆ ಸಂಪಾದಕರಾಗಿದ್ದ ಶ್ರೀಚಂದ್ರಶೇಖರ ಆರಾಧ್ಯರು 'ಪುಸ್ತಕ ಪ್ರಪಂಚ'ವನ್ನು ಪ್ರತಿ ತಿಂಗಳೂ ಸರ್ವಾಂಗ ಸುಂದರವಾಗಿ ತರಲು ವಹಿಸುವ ಶ್ರಮ, ತೋರುವ ಕಾಳಜಿ ಪ್ರಶಂಸ ನೀಯವಾದುದು. ಒಮ್ಮೆ ಲೇಖನ ಬರೆಯಲು ಲೇಖಕರಿಗೆ ಪ್ರಧಾನ ಸಂಪಾದಕರು ವಹಿಸಿದರೆ ಸಾಕು ಇವರು ಅವರ ಸಂಪರ್ಕದಲ್ಲಿ ನಿರಂತರ ವಾಗಿದ್ದು ಲೇಖನವನ್ನು ಸಂಪಾದಿಸಿಕೊಳ್ಳದೇ ಬಿಡರು. ಅಷ್ಟೇ ಅಲ್ಲ, ಲೇಖನಗಳಲ್ಲಿ ಅಚ್ಚಿನ ತಪ್ಪುಗಳು ಉಳಿಯದಂತೆ ನೋಡಿಕೊಳ್ಳ ಬೇಕೆಂಬ ಉದ್ದೇಶದಿಂದ ಕರಡುಗಳನ್ನು ಯಾವುದೇ ಬೇಸರವಿಲ್ಲದೆ ತಂದು ಕೊಡುವುದ ರಲ್ಲಿಯೂ ಈ ಮಿತ್ರರು ತೋರುವ ಪ್ರೀತಿ ನನಗೆ ಅತ್ಯಂತ ಮೆಚ್ಚುಗೆಯಾಗಿದೆ.

ಮೇಲಿನ ಎಲ್ಲ ಗುಣಗಳಿಂದಾಗಿಯೇ 'ಪುಸ್ತಕಪ್ರಪಂಚ' ಓದುಗರ ಪ್ರಿಯ ಪತ್ರಿಕೆ ಯಾಗಿ ಅರಳಿದೆ. ಜನಮನವನ್ನು ಗೆದ್ದಿದೆ. ಕನ್ನಡ ಪತ್ರಿಕಾಲೋಕದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದೆ.



ನಟನೆಯಿಂದ ಅಥವಾ ತಿರಸ್ಕಾರದಿಂದ ಯಾರಿಗೂ ದಾನ ಮಾಡಬಾರದು. ಹೀಗೆ ಮಾಡಿದ ದಾನವು ದಾನಿಯನ್ನೇ ನಾಶಪಡಿಸುತ್ತದೆ.

-ವಾಲ್ಮೀಕಿ

ಪುಸ್ತಕ ಪ್ರಪಂಚ ಮತ್ತು ನಾನು

ಡಾ॥ ವೈ.ಸಿ. ಭಾನುಮತಿ
ಸಂಶೋಧಕಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-೬

ವ್ಯಕ್ತಿಗಾಗಲಿ,ಸಂಸ್ಥೆಗಾಗಲಿ ಪತ್ರಿಕೆಗಾಗಲಿ ಸುವರ್ಣಮಹೋತ್ಸವವೆಂಬುದು ಒಂದು ಮಹತ್ವದ ಘಟ್ಟ. ಸಾಧನೆಯ ಪರ್ವವನ್ನು ದಾಟಿ ಸಿದ್ಧಿಯ ಉತ್ಕರ್ಷಕಾಲ.ಇಂಥ ಸಂತಸ ಸಂತೃಪ್ತಿ ಈಗ ಪುಸ್ತಕ ಪ್ರಪಂಚದ ಪಾಲಿಗೆ ಒದಗಿ ಬಂದಿದೆ. ಈ ಪತ್ರಿಕೆ ಈಗ ಐವತ್ತರ ಗಡಿ ದಾಟಿದೆ ಎಂದು ತಿಳಿದಾಗ ಒಂದು ಕ್ಷಣ ಅವಾಕ್ಕಾದೆ. ಕಾಲ ಅದೆಷ್ಟು ವೇಗವಾಗಿ ಸರಿಯುತ್ತಿದೆ ಎನಿಸಿತು; ನನ್ನ ಮನಸ್ಸು ದಶಕಗಳ ಹಿಂದಕ್ಕೆ ಓಡತೊಡಗಿತು.

ವಯಸ್ಕರ ಶಿಕ್ಷಣ ಸಮಿತಿ ಹೊರತರುತ್ತಿದ್ದ ಪತ್ರಿಕೆಗಳಲ್ಲಿ ನನಗೆ ಮೊದಲು ಪರಿಚಯವಾದದ್ದು 'ಬೆಳಕು' ಪತ್ರಿಕೆ. ಈಗ ಪತ್ರಿಕೆಯ ಮಸುಕು ಮಸುಕು ನೆನಪು ಮಾತ್ರ ಉಳಿದಿದೆ. ನನ್ನ ತಂದೆ ಶಾಲಾಮಾಸ್ತರರಾಗಿದ್ದುದರಿಂದ ಬೆಳಕು ಪತ್ರಿಕೆಯನ್ನು ಆಗಾಗ ಮನೆಗೆ ತರುತ್ತಿದ್ದರು. ಕನ್ನಡವನ್ನು ಆಗಷ್ಟೆ ಓದಲು, ಬರೆಯಲು ಕಲಿತಿದ್ದ ನಾನು ಆ ಪತ್ರಿಕೆ ತಂದಾಗ ಒಂದು ಸಲ ತಿರುವಿಹಾಕುವ ಅಭ್ಯಾಸವನ್ನಿಟ್ಟುಕೊಂಡಿದ್ದೆ. ಅದು ಗಾತ್ರ, ವಸ್ತುವಿನ್ಯಾಸ ಮತ್ತು ವಸ್ತು ವಿಷಯಗಳಲ್ಲಿ ಪುಸ್ತಕ ಪ್ರಪಂಚಕ್ಕಿಂತ ಭಿನ್ನವಾಗಿತ್ತು. ಪುಸ್ತಕ ಪ್ರಪಂಚ ಹೆಸರಿಗೆ ಅನ್ವರ್ಥವಾಗುವಂತಿದ್ದರೆ, ಬೆಳಕು ತನ್ನ ಸ್ವರೂಪದಲ್ಲಿ ದಿನಪತ್ರಿಕೆಯನ್ನು ಹೋಲುವಂತಿತ್ತು. ಹೊಸದಾಗಿ ಅಕ್ಷರ ಕಲಿತ ವಯಸ್ಕರಿಗೆ ಮತ್ತು ಎಳೆಯರಿಗೆ ಓದಲು ಸುಕರವಾಗುವಂತೆ ಇತರ ಪತ್ರಿಕೆಗಳಿಗಿಂತ ದಪ್ಪ ಅಕ್ಷರಗಳಲ್ಲಿ ಅಚ್ಚಾಗುತ್ತಿದ್ದುದು ಅದರ ಆಕರ್ಷಣೆಯಾಗಿತ್ತು. ಅನಂತರದ ವರ್ಷಗಳಲ್ಲಿ ವಿದ್ಯಾಭ್ಯಾಸಕ್ಕಾಗಿ ಪರಊರಿಗೆ ಹೋಗಬೇಕಾಗಿ ಬಂದದ್ದರಿಂದ ಪತ್ರಿಕೆಯ ಸಂಪರ್ಕ ವಿರಳವಾಯಿತು.

ಪುಸ್ತಕ ಪ್ರಪಂಚದ ಸಂಪರ್ಕ ಬಂದಿದ್ದು ಮೈಸೂರಿನಲ್ಲಿ; ಎಪ್ಪತ್ತರ ದಶಕದಲ್ಲಿ. ಇದರಲ್ಲಿ ವೈಜ್ಞಾನಿಕ ಬರಹಗಳು, ಕೃಷಿಗೆ ಸಂಬಂಧಿಸಿದ ಲೇಖನಗಳು, ಸಾಹಿತ್ಯಿಕ, ರಾಜಕೀಯ ವಿಚಾರಗಳು ಎಡೆಪಡೆದಿದ್ದು ವಿವಿಧ ಅಭಿರುಚಿಯ ಓದುಗರಿಗೆ ಮೆಚ್ಚಾಗುವಂತೆ ರೂಪಿತವಾಗಿರುತ್ತಿತ್ತು. ಮುಂದೊಂದು ದಿನ ನಾವೂ ಸಹ ಇದರ ಲೇಖಕರಾಗಬಹುದೆಂಬ ಕಲ್ಪನೆಯೂ ಆಗ ಇರಲಿಲ್ಲ. ಇದು ವಯಸ್ಕರ ಶಿಕ್ಷಣ ಸಮಿತಿಯ ಕೂಸಾದರೂ ಸಂಪಾದಕವರ್ಗದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿದ್ವಾಂಸರೇ ಹೆಚ್ಚಾಗಿದ್ದುದರಿಂದ ಪುಸ್ತಕ ಪ್ರಪಂಚಕ್ಕೆ ಅಕೆಡೆಮಿಕ್ ಶಿಸ್ತು ಲಭ್ಯವಾಯಿತೆನ್ನಬಹುದು.

ಪುಸ್ತಕಪ್ರಪಂಚಕ್ಕೆ ಬರಹಗಾರಳಾಗಿ ಪದಾರ್ಪಣೆ ಮಾಡಿ ಎರಡು ದಶಕಗಳೇ ಆಗಿ ಹೋಗಿವೆ. ಚಂದ್ರಶೇಖರ ಆರಾಧ್ಯ ಎಂಬವರ ಮಹದೇಶ್ವರ ನಾಟಕಕ್ಕೆ ಬರೆದ ಪುಸ್ತಕ ವಿಮರ್ಶೆಯೇ ಇದರಲ್ಲಿ ಅಚ್ಚಾದ ನನ್ನ ಪ್ರಥಮ ಬರಹ. ಹಿಂದಿನಿಂದಲೂ ಈ ಪತ್ರಿಕೆ ಅನೇಕ ಹೊಸ ಬರಹಗಾರರಿಗೆ ಪ್ರೋತ್ಸಾಹವನ್ನಿತ್ತಿದೆ; ಲೇಖಕರನ್ನಾಗಿ ಮಾಡಿದೆ. ಪುಸ್ತಕಪ್ರಪಂಚದಲ್ಲಿ ನನ್ನ ಮೊದಲ ಬರಹ ಪ್ರಕಟವಾದಾಗ ಸಹಜವಾಗಿಯೇ ಸಂತಸವಾಗಿತ್ತು. ಸ್ನಾತಕೋತ್ತರ ಪದವಿ ಮುಗಿದ ತಾರುಣ್ಯ, ನಮಗೆ ಏನಾದರೂ ಬರೆಯಬೇಕೆಂಬ ಉಮೇದು. ಉತ್ತಮ ಪುಸ್ತಕಗಳನ್ನು ಓದಿದಾಗ ಹಾಗೆ ಬರೆಯಲೆತ್ನಿಸಬೇಕೆಂಬ ಕನಸು. ಆಗೆಲ್ಲ ಪುಸ್ತಕ ಪ್ರಪಂಚದಲ್ಲಿ ಅನುವಾದಿತ ಲೇಖನಗಳೇ ಅಧಿಕವಾಗಿರುತ್ತಿದ್ದವು. ಇಂಗ್ಲಿಷ್‌ನ ರೀಡರ್ಸ್ ಡೈಜೆಸ್ಟ್ ಮತ್ತು ಹಿಂದಿಯ ನವನೀತ ಪತ್ರಿಕೆಯ

ಉತ್ತಮ ಕಥೆಗಳು, ಲೇಖನಗಳು ಪುಸ್ತಕ ಪ್ರಪಂಚದಲ್ಲಿ ಭಾಷಾಂತರಗೊಂಡು ಪ್ರಕಟಗೊಳ್ಳುತ್ತಿದ್ದವು. ಇವನ್ನು ಓದುತ್ತಿದ್ದ ನನಗೆ ಈ ಪತ್ರಿಕೆಗಳಿಂದ ನಾನೂ ಭಾಷಾಂತರಿಸಿ ಪುಸ್ತಕ ಪ್ರಪಂಚಕ್ಕೆ ಕೊಡಬೇಕೆಂಬ ಅಭಿಲಾಷೆ ಉಂಟಾಯಿತು. ಹೀಗಿರುವಾಗ ಒಂದುದಿನ ಸ್ವಾನ್ ಪತ್ರಿಕೆಯಲ್ಲಿ ಭಾರತದ ಪ್ರಥಮ ವೈದ್ಯೆ ಆನಂದಿಬಾಯಿಯವರ ಬಗ್ಗೆ ಪ್ರಕಟವಾದ ಲೇಖನವೊಂದು ನನ್ನ ಗಮನ ಸೆಳೆಯಿತು. ಆಕೆಯ ಬದುಕು ನಮ್ಮ ಹೆಣ್ಣುಮಕ್ಕಳಿಗೆ ಸ್ಫೂರ್ತಿದಾಯಕವಾದುದು. ವಿವಾಹ ಆಕೆಯ ವಿದ್ಯಾಭ್ಯಾಸಕ್ಕೆ ಅಡ್ಡಿಯಾಗಿ ಬರಲಿಲ್ಲ. ಕೈಯಲ್ಲಿ ಕಾಸಿಲ್ಲದಿದ್ದರೂ ವಿದೇಶದಲ್ಲಿ ವೈದ್ಯಕೀಯ ಶಿಕ್ಷಣ ಪಡೆಯಲೇಬೇಕೆಂಬ ಸಂಕಲ್ಪ. ಪತಿ ಆ ಕಾಲದ ಪುರುಷರಲ್ಲಿ ವಿಶಿಷ್ಟ ವ್ಯಕ್ತಿತ್ವ ಉಳ್ಳವರಾಗಿದ್ದುದರಿಂದ ಪತ್ನಿಯ ಶಿಕ್ಷಣಕ್ಕೆ ಒತ್ತಾಸೆಯಾಗಿ ನಿಂತರು. ಆನಂದಿಬಾಯಿ ಗುರಿ ಸಾಧಿಸಿದರು. ಆದರೆ ವಿಧಿಯ ಸಂಚು ಬೇರೆಯೇ ಆಗಿತ್ತು. ಭಾರತಕ್ಕೆ ಹಿಂದಿರುಗಿದ ಬಳಿಕ ಅನಾರೋಗ್ಯಕ್ಕೆ ತುತ್ತಾದ ಆನಂದಿಬಾಯಿಯವರ ವೈದ್ಯಕೀಯ ಬದುಕು ಅರಳುವ ಮೊದಲೇ ಮೃತ್ಯುವಶವಾಗಿದ್ದು ನನ್ನ ಮನಸ್ಸನ್ನು ನಾಟಿದ್ದರಿಂದ ಕೂಡಲೇ ಆ ಲೇಖನವನ್ನು ಅನುವಾದಿಸಿದ್ದೆ. ''ಕಟ್ಟಿಯು ಮೇನೊ ಪೊಸಬಾಸಿ ಗಮಂ ಮುಡಿವ ಭೋಗಿಗಳಿಲ್ಲದೆ'' ಎಂದು ಮಧುರ ಕವಿ ನುಡಿದಂತೆ ನನ್ನ ಅನುವಾದಿನ ಲೇಖನಕ್ಕೆ ಪ್ರಕಾಶಕರನ್ನು ಹುಡುಕುತ್ತಿದ್ದೆ. ಆಕಸ್ಮಿಕ ವೆಂಬಂತೆ ಅದೇ ಸಮಯದಲ್ಲಿ ಹಿರಿಯ ಲೇಖಕರಾದ ಜಿ.ಟಿ. ನಾರಾಯಣರಾಯರು ಪುಸ್ತಕ ಪ್ರಪಂಚಕ್ಕೆ ಏನಾದರೂ ಬರೆದು ಕೊಡಿ ಎಂದು ಕೇಳಿದರು. ನಾನು ಮೇಲಿನ ಲೇಖನದ ವಿಚಾರ ಪ್ರಸ್ತಾಪಿಸಿದೆ. ಮೂಲಲೇಖಕರ ಅನುಮತಿ ಪತ್ರವಿದ್ದರೆ ಪ್ರಕಟಣೆಗೆ ನನ್ನ ಅಭ್ಯಂತರವೇನಿಲ್ಲ ಎಂದರು. 'ಆನಂದಿಬಾಯಿ ಜೋಷಿ ವಿಜಯ ಹಾಗೂ ದುರಂತ' ಎಂಬ ಶೀರ್ಷಿಕೆ ಹೊತ್ತ ಆ ಅನುವಾದಿತ ಲೇಖನವು ೧೯೯೬ನೇ ನವೆಂಬರ್ ಸಂಚಿಕೆಯಲ್ಲಿ ಪ್ರಕಟಣೆ ಗೊಂಡಿತು. ತರುವಾಯದಲ್ಲಿ ಜಿ.ಟಿ.ಎನ್. ಎದುರಾದಾಗಲೆಲ್ಲ ಏನು ಬರೆದಿರಿ ಎಂದು ಕೇಳುತ್ತಿದ್ದರು. ಪುಸ್ತಕಪ್ರಪಂಚದ ಮೂಲಕ ದೊರೆತ ಪ್ರೇರಣೆಯು ನವನೀತದಿಂದ ಕೆಲವು ಕಥೆಗಳನ್ನು ಹಾಗೂ ಬಿಡಿಲೇಖನಗಳನ್ನು ಕನ್ನಡಕ್ಕೆ ಭಾಷಾಂತರಿಸುವಂತೆ ಮಾಡಿತು. ಈ ಪೈಕಿ 'ಶಾಂತಿ' ಎಂಬ ಕಥೆ ಪುಸ್ತಕ ಪ್ರಪಂಚದಲ್ಲಿ ಬೆಳಕು ಕಂಡಿತು. ಕಪ್ಪು ಹೆಂಡತಿ ಎಂದು ತಿರಸ್ಕರಿಸಿ ಹೋಗುವ ಓರ್ವ ಪತಿ, ಶಾಂತಿಯನ್ನರಸುತ್ತ ಊರೂರು ಅಲೆದು ಕಡೆಯಲ್ಲಿ ತನ್ನ ತಪ್ಪಿನ ಅರಿವಾಗಿ ಕಳೆದುಹೋಗಿದ್ದ ಶಾಂತಿಯನ್ನು ಪತ್ನಿಯಲ್ಲಿ ಕಾಣುವುದು ಈ ಕಥೆಯ ವಸ್ತು. ನನ್ನ ಪರಿಚಿತವಲಯದಲ್ಲಿಯೇ ಇಂಥ ಘಟನೆಯನ್ನು ಕಂಡಿದ್ದೆ. ಹಾಗಾಗಿ ಈ ಕಥೆಯ ಮೂಲಕ ಇಂಥ ಮನೋಧರ್ಮ ವ್ಯಕ್ತಿಗಳು ಪರಿವರ್ತನೆ ಹೊಂದಲೆಂಬ ಉದ್ದೇಶದಿಂದ ಪುಸ್ತಕ ಪ್ರಪಂಚದಲ್ಲಿ ಪ್ರಕಟಿಸಿದೆ.

ಪುಸ್ತಕ ಪ್ರಪಂಚದಲ್ಲಿ ಹಿರಿಯ ಸಾಹಿತಿಗಳ ಕೆಲವು ಕೃತಿಗಳು ಧಾರಾವಾಹಿಯಾಗಿ ಪ್ರಕಟವಾದದ್ದುಂಟು. ಈ ನಿಟ್ಟಿನಲ್ಲಿ ಮೂರ್ತಿರಾಯರ ಸಂಜೆಗಣ್ಣಿನ ಹಿನ್ನೋಟ, ದೇಜಗೌ ಅವರ 'ಯುದ್ಧ ಮತ್ತು ಶಾಂತಿ' ಓದುಗರ ಮೆಚ್ಚುಗೆಗೆ ಪಾತ್ರವಾದಂಥವು. ಹಾಗೆಯೇ ಜಾಗತಿಕ ಮಟ್ಟದ ಸಾಹಿತಿಗಳನ್ನೊಳಗೊಂಡ ವಿಶೇಷ ಸಂಚಿಕೆಗಳು ಸ್ಮರಣಾರ್ಹವಾಗಿವೆ. ವೈಕಂ, ಪ್ರೇಂಚಂದ್ ಅವರಂಥ ನೆರೆರಾಜ್ಯದ ಲೇಖಕರು, ದಾಸ್ತೋವಸ್ಕಿ, ಜಾರ್ಜ್ ಎಲಿಯಟ್, ಏಟ್ಸ್, ಪೌಂಡ್ ಮುಂತಾದ ಪರಭಾಷಾ ಸಾಹಿತಿಗಳ ಬದುಕು ಮತ್ತು ಸಾಹಿತ್ಯವನ್ನು ಅಭಿವ್ಯಕ್ತಿಸುವ ಸಂಚಿಕೆಗಳಂತು ಸಾಂದರ್ಭಿಕವಾಗದೆ ಸಾರ್ವಕಾಲಿಕವಾಗುತ್ತ ಸಂಗ್ರಹಯೋಗ್ಯವಾಗಿವೆ. ಪತ್ರಿಕೆಯ ಹಿರಿಮೆ ಇನ್ನಷ್ಟು ಎತ್ತರಕ್ಕೇರಲಿ ಎಂಬುದೇ ಈ ಹೊತ್ತಿನ ಆಶಯವಾಗಿದೆ.

ಪುಸ್ತಕ ಪ್ರಪಂಚ ಮತ್ತು ನಾನು

ಜಿ.ವೈದೇಹಿ
೩.೫೮ ಪುನರ್ವಸು, ನವಿಲು
ಮುಖ್ಯ ರಸ್ತೆ, ಕುವೆಂಪು ನಗರ,
ಮೈಸೂರು-೫೭೦ ೦೨೩.

'ಪುಸ್ತಕ ಪ್ರಪಂಚ' ಮಾಸಿಕ ಪತ್ರಿಕೆಯನ್ನು ಮೊದಲು ಕಂಡಿದ್ದು ನಮ್ಮ ಶಾಲೆಯ ಗ್ರಂಥಾಲಯದಲ್ಲಿ. ಅಂದಿನಿಂದಲೂ ಅದರ ಲೇಖನಗಳನ್ನು ಓದುತ್ತಿದ್ದೆ. ವ್ಯಕ್ತಿ ವಿಕಾಸಕ್ಕೆ ಪೂರಕವಾಗುವ ಸಂಪಾದಕೀಯ, ವೈಜ್ಞಾನಿಕ ಲೇಖನಗಳು ಆದರ್ಶ ವ್ಯಕ್ತಿಗಳ ಜೀವನ ಚರಿತ್ರೆಗಳು, ವೈಚಾರಿಕ ಲೇಖನಗಳು, ಕುತೂಹಲಕಾರಿ ಕಥೆಗಳ ಅನುವಾದಗಳು ಮತ್ತು ನೂತನ ಪುಸ್ತಕಗಳ ಪರಿಚಯಗಳನ್ನು ಒಳಗೊಂಡಂತೆ ವಿದ್ವತ್ಪೂರ್ಣ ಹೊತ್ತಿಗೆ ಪುಸ್ತಕ ಪ್ರಪಂಚ. ಇದುವರೆಗೆ ಇದರ ಓದುಗರಲ್ಲಿ ಒಬ್ಬಳಾಗಿದ್ದೆನೇ ವಿನಹ ಬರೆಯುವ ಸಾಹಸ ಮಾಡಿರಲಿಲ್ಲ.

ಲೇಖನಗಳನ್ನು ಬರೆಯುವ ಹಂಬಲ ವೇನೋ ಮೊದಲಿನಿಂದಲೂ ಇತ್ತು. ಆದರೆ ವೃತ್ತಿ ಜೀವನ ಮತ್ತು ಸಂಸಾರದ ಕೆಲಸ ಕಾರ್ಯಗಳ ಒತ್ತಡದಿಂದಾಗಿ ಅದು ಸಾಧ್ಯವಾಗಿರಲಿಲ್ಲ.

ನಿವೃತ್ತಿಯ ನಂತರ ಮನಸ್ಸಿನಲ್ಲಿಯೇ ಒತ್ತಿಕ್ಕಿದ್ದ ಆ ಕನಸನ್ನು ನನಸು ಮಾಡುವ ಮನಸ್ಸಾಯಿತು. ಅಂತೆಯೇ ಮೊತ್ತ ಮೊದಲು ಬರೆದ ಲೇಖನ ನನ್ನ ಸ್ವಂತ ಅನುಭವದ ವಿಷಯವಾಗಿತ್ತು. ಬಹಳ ಅಪರೂಪಕ್ಕೆ ಬರುವ 'ಮ್ಯೂಕೊಸೀಲ್ ಆಫ್ ದಿ ಅಪೆಂಡಿಕ್ಸ್' ಶಸ್ತ್ರಕ್ರಿಯೆಯ ಬಗ್ಗೆ ಬರೆದು ಪುಸ್ತಕ ಪ್ರಪಂಚಕ್ಕೆ ಕಳುಹಿಸಿಕೊಟ್ಟೆ. ಮುಂದಿನ ಸಂಚಿಕೆಯಲ್ಲಿ ಅದು ಪ್ರಕಟವಾಗಿ ಅದರ ಒಂದು ಪ್ರತಿ ಅಂಚೆಯ ಮೂಲಕ ನನಗೆ ತಲುಪಿತು. ಪುಟಗಳನ್ನು ತಿರುವಿದಂತೆ ನನ್ನ ಲೇಖನ ಪ್ರಕಟವಾಗಿದ್ದು ಕಂಡು ಅತ್ಯಂತ ಸಂತೋಷವಾಯಿತು. ಹಿರಿಯ ಲೇಖಕರ ಲೇಖನಗಳ ನಡುವೆ ನನ್ನ ಲೇಖನವೂ ಮುದ್ರಣವಾಗಿದ್ದು ನೋಡಿ ಮೈಮನ ಪುಲಕಗೊಂಡಿತು.

ಸಂಗೀತವಾಗಲೀ, ನೃತ್ಯ, ಚಿತ್ರಕಲೆ ಅಥವಾ ಶಿಲ್ಪ ಕಲೆಯಂತಹ ಯಾವುದೇ ಕಲೆಯಾಗಲಿ ಅವುಗಳನ್ನು ಮತ್ತೊಬ್ಬರು ಅನುಭವಿಸಿ ಮೆಚ್ಚುವುದರಲ್ಲಿ ಅದರ ಸಾರ್ಥಕ್ಯವಿದೆ. ಆದರೆ ಅವುಗಳಿಗೆ ಯಾವುದಾದರೊಂದು ಮಾಧ್ಯಮ ವಿದ್ದಾಗ ಮಾತ್ರ ಸುಗಮವಾಗಿ ಗುರಿಮುಟ್ಟಲು ಸಾಧ್ಯ. ಬರಹವನ್ನು ಒಂದು ಕಲೆಯನ್ನಾಗಿ ಪರಿಗಣಿಸಿದಾಗ ಅದಕ್ಕೆ ಬೇಕಾಗುವ ಮಾಧ್ಯಮ ನಾಲ್ಕಾರು ಜನರು ಓದುವ ಪುಸ್ತಕ ಅಥವಾ ಪತ್ರಿಕೆಗಳು.

ಮನಸ್ಸಿನಲ್ಲಿ ಬರೆಯುವ ಅಭಿಲಾಷೆ, ಉತ್ಸಾಹ ಇದ್ದರೂ ಮಾಧ್ಯಮಗಳ ಸಹಕಾರ ವಿಲ್ಲ ದಿದ್ದರೆ ಬೆಳಕಿಗೇ ಬರುವುದಿಲ್ಲ. ಬರೆದ ಲೇಖನ ಪ್ರಕಟವಾಗಿ ಅದನ್ನು ಓದಿದ ಜನ ವಿಮರ್ಶೆ ಮಾಡಿದರೆ ಲೇಖನ ಶೈಲಿಯನ್ನು ಉತ್ತಮಗೊಳಿಸಿ ಕೊಳ್ಳುವ ಪ್ರಯತ್ನ ಮಾಡಬಹುದು ಅಥವಾ ಮೆಚ್ಚಿದರೆ ನಾವು ಹೋಗುವ ದಾರಿಯು ಸರಿಯೆಂದು ತೃಪ್ತಿಪಟ್ಟುಕೊಳ್ಳಬಹುದು ಮತ್ತು ಅದರಿಂದ ಸಿಗುವ

ಆನಂದವನ್ನು ಅನುಭವಿಸಿಯೇ ತಿಳಿಯಬೇಕು. ಈ ನಿಟ್ಟಿನಲ್ಲಿ ನನಗೆ ಪೂರ್ಣ ಸಹಕಾರ ಸಿಕ್ಕಿದ್ದು ಪುಸ್ತಕ ಪ್ರಪಂಚ ಮತ್ತು ಅದರ ಸಂಪಾದಕ ಮಂಡಳಿಯವರಿಂದ. ನನ್ನಲ್ಲಿದ್ದ ಬರೆಯುವ ಹವ್ಯಾಸಕ್ಕೆ ಇಂಬುಕೊಟ್ಟು ಮುನ್ನಡೆಸಿದ್ದು 'ಪುಸ್ತಕ ಪ್ರಪಂಚ '.ಇದರ ಸಂಪಾದಕ ಮಂಡಳಿಯವರಿಗೆ ನಾನು ಎಂದೆಂದೂ ಆಭಾರಿ.

ದೃಢಸಂಕಲ್ಪ ಮತ್ತು ಆತ್ಮವಿಶ್ವಾಸವಿದ್ದು ದುಡಿಮೆ ಮಾಡಿದರೆ ಯಾವುದನ್ನು ಬೇಕಾದರೂ ಸಾಧಿಸಬಹುದೆಂದು ಹಿರಿಯರನೇಕರು ತೋರಿಸಿಕೊಟ್ಟಿದ್ದಾರೆ. ಆದರೆ ಬರಹಗಾರ ಅಥವಾ ಬರಹಗಾರ್ತಿ ಎಷ್ಟೇ ದೃಢ ಸಂಕಲ್ಪ ಮತ್ತು ಆತ್ಮವಿಶ್ವಾಸದಿಂದ ಬರೆದರೂ ಅದು ಮುದ್ರಣವನ್ನೇ ಕಾಣದಿದ್ದರೆ ಆತ್ಮವಿಶ್ವಾಸಕ್ಕೆ ಧಕ್ಕೆಯುಂಟಾಗುತ್ತದೆ. ಪುಸ್ತಕ ಪ್ರಪಂಚ ನನ್ನ ಆತ್ಮವಿಶ್ವಾಸಕ್ಕೆ ಒತ್ತು ಕೊಟ್ಟು ಮುದ್ರಣಮಾಡಿ ಉತ್ತೇಜಿಸಿದೆ.

ಹೀಗೆ ಪುಸ್ತಕಪ್ರಪಂಚದ ೧೯೯೫ರ ಮಾರ್ಚ್ ಸಂಚಿಕೆಯಲ್ಲಿ ಪ್ರಕಟವಾದ ನನ್ನ ಲೇಖನ ಮುಂದಿನ ಬರವಣಿಗೆಗೆ ನಾಂದಿಯಾಯಿತು. ನನ್ನನ್ನು ಮತ್ತೆ ಮತ್ತೆ ಬರೆಯಲು ಪ್ರೋತ್ಸಾಹಿಸುತ್ತಿರುವ ಪುಸ್ತಕಪ್ರಪಂಚ ನನಗೊಂದು ಹೊಸ ಪ್ರಪಂಚವನ್ನೇ ತೆರೆದು ಕೊಟ್ಟಿದೆ. ನನ್ನ ಕೆಲವು ಲೇಖನಗಳನ್ನು ಮೆಚ್ಚಿ ಓದುಗರಿಂದ ದೂರವಾಣಿ ಮತ್ತು ಪತ್ರಗಳು ಬಂದಾಗಲಂತೂ ದೊಡ್ಡ ಪ್ರಶಸ್ತಿ ಬಂದಷ್ಟೇ ಸಂತೋಷವಾಯಿತು. ನನ್ನ ಅನಿಸಿಕೆಗಳು, ಅನುಭವಗಳು ಮತ್ತು ಅನುವಾದಗಳನ್ನು ಇತರರೊಡನೆ ಹಂಚಿಕೊಳ್ಳುವ ಅವಕಾಶ ಒದಗಿಸಿಕೊಟ್ಟ ಪುಸ್ತಕ ಪ್ರಪಂಚಕ್ಕೆ ನಾನು ಅತ್ಯಂತ ಕೃತಜ್ಞಳು.



ದೋಷಗಳನ್ನು ಕಾಣುವದು ಸುಲಭವಾದರೂ, ಅದನ್ನು ಸಾಧಿಸುವದು ಕಷ್ಟ. ಗುಣಗಳನ್ನು ಕಾಣುವದು ಕಷ್ಟವಾದರೂ ಸಾಧಿಸುವದು ಸುಲಭ. ಆದುದರಿಂದ ಗುಣವನ್ನೇ ಆರಸಿ ಅದನ್ನು ಪ್ರಶಂಸಿಸುವದು ಉಪಯುಕ್ತವೂ ಸುಲಭವೂ ಆಗಿದೆ.

-ಪರಮಹಂಸ

ಕಾರ್ಯಕಾರಿ ಸಮಿತಿ ಸದಸ್ಯರುಗಳು :

ಶ್ರೀಗಳಾದ :

ಎ.ಕೆ. ಲೋಕರೆ, ಅಧ್ಯಕ್ಷರು ಮತ್ತು ಮೈಸೂರು ವಿಭಾಗಾಧಿಕಾರಿಗಳು

ವೈ.ಎನ್.ಶಂಕರೇಗೌಡ, ಖಜಾಂಚಿ

ಎಸ್.ಮಾದೇಗೌಡ

ವೈ.ಎಂ.ಚಂದ್ರು

ಕೆ.ಎಂ.ಚನ್ನೇಗೌಡ

ಮಹದೇವಯ್ಯ

ಆರ್.ಜಯರಾಮು

ಎಚ್.ಎಸ್.ನಂಜಪ್ಪ

ಎಸ್.ಮಂಚಯ್ಯ

ಕೆ.ಜಿ.ಚನ್ನಕೇಶವ

ಶ್ರೀಮತಿ ಕಮಲ ಸಿ. ಹೆಗಡೆ

ನಿರ್ದೇಶಕರು, ಲೋಕ ಶಿಕ್ಷಣ ನಿರ್ದೇಶನಾಲಯ

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ

ಅಭಿವೃದ್ಧಿ ಕಮೀಷನರ್

ಶ್ರೀರಂಗರಾಜು, ಪ್ರಧಾನ ಕಾರ್ಯದರ್ಶಿ

ಮುದ್ರಣ ಮತ್ತು ಪ್ರಕಟಣೆ : ಕ.ರಾ.ವ.ಶಿ.ಸಮಿತಿ, ಮೈಸೂರು-೫೭೦ ೦೦೬

ಸಮಿತಿಯ ಪ್ರಕಟಣೆ

ಪುಸ್ತಕ ಪ್ರಪಂಚದಲ್ಲಿ ಪ್ರಕಟಗೊಂಡ ಡಾ॥ ದೇಜಗೌ ಅವರ
ಸಂಪಾದಕೀಯ ಲೇಖನಗಳ ಸಂಗ್ರಹ

ಸಂಪಾದಕೀಯ ಸಂಕಲನ

(ಬೆಲೆ: ರೂ. ೫೦-೦೦)

ನಾಡಿನ ಖ್ಯಾತ ಕಲಾವಿದರಾದ ದಿ॥ ಪಿ.ಆರ್.ತಿಪ್ಪೇಸ್ವಾಮಿ ಅವರ ಆಕರ್ಷಕ ಮುಖಚಿತ್ರದೊಂದಿಗೆ, ಡೆಮಿ ೧/೮, ೧೪೪ ಪುಟಗಳ ಆಫ್‌ಸೆಟ್ ಮುದ್ರಣ ವೈವಿಧ್ಯಮಯ ವಿಚಾರಪೂರಿತ ಚಿಂತನಾರ್ಹ ವಿಷಯಗಳ ಸಾರಸಂಗ್ರಹ.

ಪ್ರತಿಗಳಿಗಾಗಿ ಸಂಪರ್ಕಿಸಿ :

ಪ್ರಧಾನ ಸಂಪಾದಕ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ನಂ.೫/೧, ವಿನೋಬಾ ರಸ್ತೆ, ಮಾನಸಗಂಗೋತ್ರಿ ಆವರಣ, ಮೈಸೂರು-೫೭೦ ೦೦೬

Licence No. 21.Reg.No. KA/SK/Mys-56
Licenced to Post with payment at Mysore, R.M.S/II

If undelivered please return to :
KARNATAKA STATE ADULT EDUCATION COUNCIL
5/1,Vinoba Road, P.B.No.15
Manasagangothri Campus, Mysore-570 006